ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಭಾನುವಾರ, 14 ಜೂನ್ 2026

ಸಂಪುಟ 16, ಸಂಚಿಕೆ 81, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/ 2011/64413

hosadigantha.com

epaper.hosadigantha.com

Hosadigantha Digital



ಆಫ್ಘನ್ ವಿರುದ್ಧ ಮೊದಲ ಏಕದಿನ: ಭಾರತಕ್ಕೆ 7 ವಿಕೆಟ್ ಜಯ

|೧೦

ಎಲಾನ್ ಮಸ್ಕ್ ವಿಶ್ವದ ಮೊದಲ ಟ್ರಿಲಿಯನೇರ್

|೦೭



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ : ಚತುರ್ದಶಿ, ನಕ್ಷತ್ರ: ರೋಹಿಣಿ

ದಿನದ ಮಾತು

ಎತ್ತರವಾದ ಸ್ಥಳವನ್ನು ಸುತ್ತಿಕೊಂಡು ಹೋಗು. ತಗ್ಗಿನ ಸ್ಥಳವನ್ನು ದಾಟಿಕೊಂಡು ಹೋಗು.

▲ ನಾಣ್ನುಡಿ

ತೊರೆದು ಜೀವಿಸಬಹುದೆ ಹರಿ ವರಿಯ ಕರಿಗಳನು

ವಕ್ರದೃಷ್ಟಿ

• ಎನ್. ರಾಮನಾಥ್

• ಪುಟ ೬

ಕಿರುಸುದ್ದಿ

ಲೆ.ಜನರಲ್ ಧೀರಜ್ ಸೇಠ್ ಮುಂದಿನ ಸೇನಾ ಮುಖ್ಯಸ್ಥ



• **ಹೊಸದಿಲ್ಲಿ:** ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರನ್ನು ಮುಂದಿನ ಸೇನಾ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ. ಪ್ರಸ್ತುತ ಸೇನೆಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಲೆಫ್ಟಿನೆಂಟ್ ಜನರಲ್ ಸೇಠ್ ಅವರು ಹಾಲಿ ಜನರಲ್ ಉಪೇಂದ್ರ ದ್ವಿವೇದಿ ಅವರ ಹುದ್ದೆಗೆ ಉತ್ತರಾಧಿಕಾರಿಯಾಗಲಿದ್ದಾರೆ. ➡ಪುಟ ೪

ಕಾಲೇಜು ಶುಲ್ಕ ಭರಿಸಲು ಹಣ ಸಿಗದೆ ವಿದ್ಯಾರ್ಥಿನಿ ಆತ್ಮಹತ್ಯೆ




• **ಭಟ್ಕಳ:** ತಾಲೂಕಿನ ಬೆಳಕೆಯಲ್ಲಿ ಕಾಲೇಜಿನ ಶುಲ್ಕ ಪಾವತಿಸಲು ಅಗತ್ಯವಿದ್ದ ಹಣ ಸಮಯಕ್ಕೆ ವಾಪಸ್ ಸಿಗದ ಹಿನ್ನೆಲೆಯಲ್ಲಿ ಮನನೊಂದ ವಿದ್ಯಾರ್ಥಿನಿಯೊಬ್ಬಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಬೆಳಕೆ ಗ್ರಾಮದ ಕಂಚಿಕೇರಿ ನಿವಾಸಿ ಗಾಯತ್ರಿ ನಾಗರಾಜ ನಾಯ್ಕ ಆತ್ಮಹತ್ಯೆಗೆ ಶರಣಾದವಳು. ಈಕೆ ಕಾಲೇಜಿನ ಶುಲ್ಕ ಪಾವತಿಗಾಗಿ ಸಂಗ್ರಹಿಸಿದ್ದ ಹಣವನ್ನು ಪರಿಚಯಸ್ಥ ವ್ಯಕ್ತಿಯೊಬ್ಬರಿಗೆ ನೀಡಿದ್ದು, ಕಾಲೇಜಿನ ಶುಲ್ಕ ತುಂಬಲು ಕೊಡಬೇಕೆಂದು ಹೇಳಿದ್ದಳು ಎನ್ನಲಾಗಿದೆ. ಈತನ ಬಳಿ ಹಲವು ಬಾರಿ ಹಣ ವಾಪಸ್ ಕೇಳಿದರೂ ಕೊಟ್ಟಿರಲಿಲ್ಲ. ➡ಪುಟ ೪

ಕಬಿನಿಯಲ್ಲಿ 25 ಅಡಿ ನೀರಿನ ಮಟ್ಟ ಕುಸಿತ

• ಪುಟ ೫

ಸರ್ಕಾರದಿಂದ ಖಾಸಗಿ ಉದ್ಯೋಗ ವಿನಿಮಯ ಕೇಂದ್ರ: ಶಿವಕುಮಾರ್

• ಪುಟ ೫



ಗೋ ಉತ್ಪನ್ನಗಳಲ್ಲಿ ಪೌಷ್ಟಿಕತೆಯ ಸಾರ

• ಪುಟ ೭

ಸುದ್ದಿ ಸಮಗ್ರ

ಯೋಜನೆ ಪರಿಷ್ಕರಣೆ | ಎಲ್ಲರಿಗೂ ಅನ್ವಯ: ಸಿಎಂ ಡಿಕೆಶಿ

ಗೃಹಲಕ್ಷ್ಮಿಗೆ ಮರು ಅರ್ಜಿ



ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯುತ್ತಿರುವವರು ಮನೆಯ ನಿಜವಾದ ಯಜಮಾನಿಯೇ ಎಂದು ತಿಳಿದುಕೊಳ್ಳಬೇಕಲ್ಲವೇ? ಒಂದು ಮನೆಗೆ ಒಬ್ಬರು ಮನೆ ಯಜಮಾನಿಯರನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದೇ ಮನೆಯಲ್ಲಿ ಇಬ್ಬರು ಮೂವರು ಯಜಮಾನಿಯರಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

■ ಡಿ.ಕೆ. ಶಿವಕುಮಾರ್, ಸಿಎಂ

• **ಬೆಂಗಳೂರು:** ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ ಕೆಲವರು ನಿಧನರಾಗಿದ್ದು, ಅವರ ಹೆಸರಲ್ಲಿ ಬೇರೆಯವರು 100 ಕೋಟಿಗೂ ಹೆಚ್ಚು ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿದೆಯೇ ಇಲ್ಲವೇ ಎಂದು ಪರಿಷ್ಕರಣೆ ಮಾಡಲು ಸರ್ಕಾರ ಮುಂದಾಗಿದೆ. ಹೀಗಾಗಿ ಎಲ್ಲಾ ಫಲಾನುಭವಿಗಳು ಪುನಃ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಗೃಹಲಕ್ಷ್ಮಿ ಪ್ರತಿ ಯಜಮಾನಿಗೆ ಪ್ರತಿ ತಿಂಗಳು **₹2,000**

ವಿಧಾನಸೌಧಲ್ಲಿ ಪ್ರಗತಿ ಪರಿಶೀಲನೆ ಸಭೆಯ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಯಾರನ್ನೂ ತೆಗೆದುಹಾಕುವ ಉದ್ದೇಶ ಸರ್ಕಾರಕ್ಕಿಲ್ಲ. ಗೃಹಲಕ್ಷ್ಮಿ ಯೋಜನೆಯಲ್ಲಿ 1.64 ಲಕ್ಷ ಫಲಾನುಭವಿಗಳಿದ್ದು, ಅವರು ಮತ್ತೆ ಅರ್ಜಿ ಹಾಕಬೇಕಿದೆ ಎಂದು ಹೇಳಿದರು.

ಸರಿಯಾದ ಮಾಹಿತಿ ನೀಡುವ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಬೇಕು ಎಂಬುದು ಸರ್ಕಾರದ ಉದ್ದೇಶ. ಒಬ್ಬರ ಹೆಸರಿನಲ್ಲಿ ಐದಾರು ಮೀಟರ್‌ಗಳಿದ್ದು, ಆ ಮನೆಯಲ್ಲಿ ಅವರೇ ವಾಸವಿದ್ದಾರಾ? ಬೇರೆಯವರು ಇದ್ದಾರ? ಈ ಯೋಜನೆ ನಮ್ಮ ರಾಜ್ಯದವರಿಗೆ ಸಿಗುತ್ತಿದೆಯೇ, ಬೇರೆ ರಾಜ್ಯದವರಿಗೆ ಸಿಗುತ್ತಿದೆಯೇ ಎಂದು ಪರಿಶೀಲನೆ ಮಾಡಬೇಕಿದೆ. ಫಲಾನುಭವಿಗಳಿಗೆ ನಾವು ಗುರುತಿನ ಚೀಟಿ ನೀಡಬೇಕಾಗಿದೆ. ಕೆಲವೇ ದಿನಗಳಲ್ಲಿ ಅರ್ಜಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ತಪ್ಪಾಗದಂತೆ ನೋಡಿಕೊಳ್ಳಿ: ನಾನು ಸೇರಿದಂತೆ ತಪ್ಪು ಮಾಹಿತಿ ನೀಡಿದರೆ ಅಥವಾ ತಪ್ಪಾಗಿ ಕೆಲಸ ಮಾಡಿ ಎಂದು ಹೇಳಿದರೂ ಅಧಿಕಾರಿಗಳು ನನ್ನ ಮಾತು ಕೇಳಬಾರದು. ➡ಪುಟ ೪

ಲಂಚ ಕೇಳಿದರೆ ದೂರು ನೀಡಲು ದೂರವಾಣಿ

ಯಾವುದೇ ಅಧಿಕಾರಿಗಳು ಲಂಚ ಕೇಳಿದರೆ, ದೂರು ನೀಡಲು ಫೋನ್ ನಂಬರ್ ಇರುವ ಫಲಕಗಳನ್ನು ಪ್ರತಿ ತಾಲೂಕು, ಜಿಲ್ಲಾ ಕಚೇರಿಗಳಲ್ಲಿ ಅಳವಡಿಸಲಾಗುವುದು. ಯಾರೇ ಆಗಲಿ ಲಂಚ ಕೇಳಿದರೆ ಅವರಿಗೆ ಫೋನ್ ಮಾಡಬೇಕು. ಮಧ್ಯವರ್ತಿಗಳು, ಸುಳ್ಳು ಕೇಸ್ ಹಾಕುವವರು, ಸುಳ್ಳು ದೂರು ನೀಡುವವರು ಇರುತ್ತಾರೆ. ಅಂತಹವರ ಬಗ್ಗೆ ಪರಿಶೀಲನೆ ಮಾಡಲಾಗುವುದು. ಅದಕ್ಕೆ ನಾನು ಅಧಿಕಾರಿಗಳಿಗೆ ಒಂದು ವಿಶೇಷವಾದ ಮಾರ್ಗದರ್ಶನ ಕೊಟ್ಟಿದ್ದೇನೆ ಎಂದರು.

ಕೇಂದ್ರ ಕಚೇರಿಯಲ್ಲಿ ಕಡ್ಡಾಯವಾಗಿರಬೇಕು

ಎಲ್ಲಾ ಅಧಿಕಾರಿಗಳು 10 ಗಂಟೆಗೆ ಕಚೇರಿಗೆ ಹಾಜರಾಗಬೇಕು. ಜಿಲ್ಲಾ ಕಚೇರಿಗಳಲ್ಲಿ ಅಧಿಕಾರಿಗಳು ಹಾಜರಾದ ಕೂಡಲೇ ಅವರ ಹೆಬ್ಬೆರಳು ಗುರುತು ಮುಖ್ಯ ಕಾರ್ಯದರ್ಶಿಗಳಿಗೆ ಸಂದೇಶ ರವಾನೆಯಾಗಬೇಕು ಎಂದು ಮಾರ್ಗದರ್ಶನ ನೀಡಲಾಗಿದೆ. ಗ್ರಾಮ ಲೆಕ್ಕಿಗ, ಕಂದಾಯ ಅಧಿಕಾರಿ, ಪಿಡಿಒಗಳಿಂದ ಯಾವುದೇ ಇಲಾಖೆ ಅಧಿಕಾರಿಗಳು, ಜಿಲ್ಲಾಧಿಕಾರಿಗಳವರೆಗೂ ಎಲ್ಲರೂ ತಮ್ಮ ಕೇಂದ್ರ ಕಚೇರಿಯಲ್ಲಿ ಕಡ್ಡಾಯವಾಗಿ ಇರಬೇಕು. ಅವರ ವಿಳಾಸ, ದೂರವಾಣಿ ಸಂಖ್ಯೆ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗಿರಬೇಕು ಎಂದು ಸೂಚಿಸಿರುವುದಾಗಿ ತಿಳಿಸಿದರು.

ಮಳೆ ಕೊರತೆ: ಮುಂಜಾಗೆತಾ ಕ್ರಮಕ್ಕೆ ಸೂಚನೆ

ಮಳೆ ಕೊರತೆ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಶೇ.30ರಷ್ಟು ಮಳೆ ಕೊರತೆ ಇದ್ದು, ಮೇವಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಪ್ರತಿ ಹಾಸ್ಟೆಲ್‌ಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭೇಟಿ ನೀಡಿ ಅಲ್ಲಿನ ಆಹಾರ ಗುಣಮಟ್ಟ ಪರಿಶೀಲಿಸಲು ಸೂಚಿಸಲಾಗಿದೆ ಎಂದು ಹೇಳಿದರು.

ಫ್ರಾನ್ಸ್, ಸ್ಲೋವಾಕಿಯಾ ಭೇಟಿ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

ಶೃಂಗದಲ್ಲಿ ಗ್ಲೋಬಲ್ ಸೌತ್ ಧ್ವನಿ ಭಾರತ

• **ಹೊಸದಿಲ್ಲಿ:** ಮುಂಬರುವ ಜಿ-7ಶೃಂಗಸಭೆಯಲ್ಲಿ ಭಾರತವು ಕೇವಲ ತನ್ನ ಬಗ್ಗೆ ಮಾತ್ರ ಮಾತನಾಡದೆ ಗ್ಲೋಬಲ್ ಸೌತ್‌ನ ಆಕಾಂಕ್ಷೆಗಳಿಗೆ ಧ್ವನಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಫ್ರಾನ್ಸ್ ಮತ್ತು ಸ್ಲೋವಾಕಿಯಾಕ್ಕೆ ತಮ್ಮ ಒಂದು ವಾರದ ಭೇಟಿಯ ಹಿನ್ನೆಲೆಯಲ್ಲಿ ನೀಡಿದ ಹೇಳಿಕೆಯಲ್ಲಿ, ಈ ಅವಧಿಯಲ್ಲಿ ಜಿ-7 ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದೇನೆ. ಈ ಸಭೆಯಲ್ಲಿ ಭಾರತದ ಉಪಸ್ಥಿತಿಯು, ತನ್ನ ಪಾಲುದಾರರು ಭಾರತದ ಮೇಲಿಟ್ಟಿರುವ ವಿಶ್ವಾಸ ಮತ್ತು ಜಾಗತಿಕವಾಗಿ ಹೆಚ್ಚುತ್ತಿರುವ ಭಾರತದ ಮಹತ್ವವನ್ನು ಪ್ರತಿಬಿಂಬಿಸುತ್ತದೆ ಎಂದವರು ತಿಳಿಸಿದ್ದಾರೆ. ಜೂ.17 ಮತ್ತು 17ರಂದು ಫ್ರಾನ್ಸ್‌ನ ಎವಿಯನ್‌ನಲ್ಲಿ ನಡೆಯಲಿರುವ ಜಿ-7 ಶೃಂಗಸಭೆಗೆ ಇದು ಸತತವಾಗಿ 8ನೇ ಬಾರಿಗೆ ಭಾರತವನ್ನು ಆಹ್ವಾನಿಸಲಾಗಿರುವುದು ಗಮನಾರ್ಹವಾಗಿದೆ. ಫ್ರಾನ್ಸ್ ಮತ್ತು ಸ್ಲೋವಾಕ್ ಗಣರಾಜ್ಯಕ್ಕೆ ತಮ್ಮ ಭೇಟಿಯು ಯುರೋಪ್ ಮತ್ತು ಜಿ-7ರೆರಡರ ಜೊತೆಗೂ ಭಾರತದ ಬಾಂಧವ್ಯ ಗಾಢವಾಗುತ್ತಿರುವುದನ್ನು ಎತ್ತಿತೋರಿಸುತ್ತಿದೆ. ಹಾಗೆಯೇ ನಮ್ಮ ಪಾಲುದಾರಿಕೆಗಳು ಖಂಡ ಮತ್ತು ಅದರಾಚೆಗಿನ ವಲಯಕ್ಕೂ ವಿಸ್ತರಿಸುವುದಕ್ಕೆ ಹೊಂದಿರುವ ದೃಢಬದ್ಧತೆಯನ್ನು ಪ್ರದರ್ಶಿಸುತ್ತದೆ ಎಂಬ ವಿಶ್ವಾಸ ನನಗಿದೆ ಎಂದರು.

G7 FRANCE ÉVIAN 2026

ನಾವಿನ್ಯತಾ ಉದ್ಯಮ ರಂಗಕ್ಕೆ ಅವಕಾಶ: ಭಾರತದ ವ್ಯೂಹಾತ್ಮಕ ದೃಷ್ಟಿಕೋನದಲ್ಲಿ ಫ್ರಾನ್ಸ್‌ಗೆ ವಿಶೇಷ ಸ್ಥಾನವಿದೆ. ವಿಶೇಷವಾಗಿ ಜೂ.14ರಂದು ನೈಸ್‌ನಲ್ಲಿ ಫ್ರಾನ್ಸ್‌ನ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರಾನ್ ಜೊತೆಗೆ 'ಭಾರತ್ ಇನ್ನೋವೇಟ್ಸ್' ಉದ್ಘಾಟಿಸುವ ಕ್ಷಣಗಳನ್ನು ಎದುರು ನೋಡುತ್ತಿದ್ದೇನೆ ಎಂದು ಮೋದಿ ಹೇಳಿದ್ದಾರೆ.

ಭಾರತ-ಫ್ರಾನ್ಸ್ ನಾವೀನ್ಯತಾ ವರ್ಷದ ಹಿನ್ನೆಲೆಯಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮವು, ಭಾರತದ ಅತ್ಯಂತ ಭರವಸೆಯ ನವೋದ್ಯಮಗಳನ್ನು ಜಾಗತಿಕ ಹೂಡಿಕೆಯೊಂದಿಗೆ ಸಂಪರ್ಕಿಸುತ್ತದೆ. ➡ಪುಟ ೪



ಸ್ಲೋವಾಕಿಯಾಗೆ ಪ್ರಥಮ ಭೇಟಿ

ಹಾಗೆಯೇ ಸ್ಲೋವಾಕಿಯಾ 1993ರಲ್ಲಿ ಸ್ವತಂತ್ರಗೊಂಡ ಬಳಿಕ ಆ ದೇಶಕ್ಕೆ ಭಾರತದ ಪ್ರಧಾನಿಯೊಬ್ಬರು ಪ್ರಥಮ ಬಾರಿಗೆ ಭೇಟಿ ನೀಡುತ್ತಿರುವುದಾಗಿದೆ. ಇದು ಉಭಯ ದೇಶಗಳ ದ್ವಿಪಕ್ಷೀಯ ಬಾಂಧವ್ಯದಲ್ಲಿ ಐತಿಹಾಸಿಕ ಮೈಲುಗಲ್ಲಾಗಲಿದ್ದು, ನಂಟು ವೇಗವಾಗಿ ಬಲಗೊಳ್ಳುತ್ತಿರುವುದನ್ನೂ ಸೂಚಿಸುತ್ತಿದೆ ಎಂದರು. ಮೋದಿಯವರು ಜೂ.14-15ರಂದು ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ, ಪ್ರಧಾನಿ ರಾಬರ್ಟ್ ಫಿಕೊರನ್ನು ಬ್ರಾಟಿಸ್ಲಾವಾದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ➡ಪುಟ ೪

ಜನರಿಗೆ ಆರ್ಥಿಕತೆಯ ವಾಸ್ತವ ತಿಳಿಸಿ: ವಿತ್ತ ಸಚಿವೆ ನಿರ್ಮಲಾ

ತಳಮಟ್ಟದಲ್ಲೇ ಸುಳ್ಳು ಸುದ್ದಿ ಮೆಟ್ಟಿ ನಿಲ್ಲಿ

• **ಉಡುಪಿ:** ದೇಶದ ಪ್ರಗತಿಯನ್ನು ಸಹಿಸದ ಶಕ್ತಿಗಳು ಹರಡುತ್ತಿರುವ ಸುಳ್ಳು ಸುದ್ದಿಗಳನ್ನು ತಳಮಟ್ಟದಲ್ಲಿ ಮೆಟ್ಟಿ ನಿಲ್ಲಬೇಕು. ಭಾರತದ ಬಲಿಷ್ಠ ಆರ್ಥಿಕತೆಯ ವಾಸ್ತವವನ್ನು ಜನರಿಗೆ ತಲುಪಿಸುವುದು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವನ್ನು ಸಂಪೂರ್ಣ ವಿಕಸಿತ ಭಾರತವನ್ನಾಗಿ ಪರಿವರ್ತಿಸಲು ಶ್ರಮಿಸುವಂತೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕಾರ್ಯಕರ್ತರಿಗೆ ಕರೆನೀಡಿದರು.



ಉಚ್ಚಿಲದ ಶ್ರೀ ಮಹಾಲಕ್ಷ್ಮೀ ದೇವಾಲಯದ ಸಭಾಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಎರಡು ದಿನಗಳ ಬಿಜೆಪಿ ಜಿಲ್ಲಾ ಪ್ರಶಿಕ್ಷಣ ವರ್ಗವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಅವರು, ಈ ಮೂರು ಮಹತ್ತರ ಕಾರ್ಯಭಾರಗಳನ್ನು ಕಾರ್ಯಕರ್ತರ ಹೆಗಲಿಗೇರಿಸಿದರು. ➡ಪುಟ ೪

ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಆರ್ಥಿಕ ಮುನ್ನಡೆ

ಮಧ್ಯಪ್ರಾಚ್ಯದ ಪ್ರಸ್ತುತ ಸಂಕೀರ್ಣ ಪರಿಸ್ಥಿತಿಯ ನಡುವೆಯೂ ಭಾರತದ ಜಿಡಿಪಿ ಶೇಕಡಾ 7.7 ರ ಭರ್ಜರಿ ದರದಲ್ಲಿ ಮುನ್ನಡೆಯುತ್ತಿದ್ದು, ದೇಶದ ಆರ್ಥಿಕ ಸ್ಥಿತಿ ಅತ್ಯಂತ ಸದೃಢವಾಗಿದೆ ಎಂದು ಸ್ವತಃ ವಿಶ್ವ ಬ್ಯಾಂಕ್ ಶ್ಲಾಘಿಸಿರುವುದನ್ನು ಸಚಿವರು ನೆನಪಿಸಿದರು. ಜಾಗತಿಕ ಮಾರುಕಟ್ಟೆಯ ಏರಿಳಿತಗಳ ನಡುವೆಯೂ ಭಾರತದಲ್ಲಿ ಕೈಗಾರಿಕಾ ಹೂಡಿಕೆಯು ಶೇಕಡಾ 60 ರಷ್ಟು ಅಭಿವೃದ್ಧಿ ಕಂಡಿದೆ. ಜಿಡಿಪಿ ದರ ಹೆಚ್ಚುತ್ತಿದೆ ಎಂದರೆ ದೇಶದ ಬೆನ್ನೆಲುಬಾದ ಕೃಷಿ, ಕೈಗಾರಿಕೆ, ಬ್ಯಾಂಕಿಂಗ್ ಹಾಗೂ ಸೇವಾ ವಲಯಗಳು ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ ಎಂದೇ ಅರ್ಥ. ➡ಪುಟ ೪

ಗಡಿ ಜಿಲ್ಲೆಗಳಲ್ಲಿ ಪರಿಶೀಲನೆಗೆ ಕೇಂದ್ರ ಗೃಹ ಸಚಿವ ಶಾ ಸೂಚನೆ

ಜನಸಂಖ್ಯೆ ಬದಲು ಅಧ್ಯಯನಕ್ಕೆ ಸಮಿತಿ

• **ಹೊಸದಿಲ್ಲಿ:** ದೇಶದ ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯಾ ರಚನೆಯ ಬದಲಾವಣೆಗಳನ್ನು ಅಧ್ಯಯನ ಮಾಡುವಂತೆ ಉನ್ನತ ಮಟ್ಟದ ಜನಸಂಖ್ಯಾ ಬದಲಾವಣೆ ಸಮಿತಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ನಿರ್ದೇಶನ ನೀಡಿದ್ದಾರೆ. ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅಮಿತ್ ಶಾ, ಗಡಿ ಪ್ರದೇಶಗಳು, ಮೆಟ್ರೋ ನಗರಗಳು ಮತ್ತು ಕೈಗಾರಿಕಾ ಪಟ್ಟಣಗಳಿಗೆ ಭೇಟಿ ನೀಡಲು ಸೂಚಿಸಿದ್ದಾರೆ. ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದಾಗಿ ಉಂಟಾದ ಬದಲಾವಣೆಗಳನ್ನು ಮೌಲ್ಯಮಾಪನ ಮಾಡುವುದು ಈ ಭೇಟಿಯ ಉದ್ದೇಶವಾಗಿದೆ.



ಸಮಿತಿ ರಚನೆ: ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ಪ್ರಕಾಶ್ ಪ್ರಭಾಕರ್ ನಾವೋಲ್ಕರ್ ಈ ಸಮಿತಿ ನೇತೃತ್ವ ವಹಿಸಿದ್ದಾರೆ. ಜನಗಣತಿ ಆಯುಕ್ತರು, ನಿವೃತ್ತ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ, ಡಾ.ಶಾಮಿಕಾ ರವಿ ಸದಸ್ಯರಾಗಿದ್ದಾರೆ. ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ (ವಿದೇಶಿಯರು-1) ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ➡ಪುಟ ೪

ಅಕ್ರಮ ವಲಸೆಗೆ ಹೊಸ ನೀತಿ

ಈ ಸವಾಲುಗಳನ್ನು ಎದುರಿಸಲು ನೀತಿ, ಶಾಸನಬದ್ಧ ಮತ್ತು ಆಡಳಿತಾತ್ಮಕ ಮಧ್ಯಸ್ಥಿಕೆಗಳನ್ನು ಸೂಚಿಸುವಂತೆ ಸಮಿತಿಗೆ ಸೂಚಿಸಲಾಗಿದೆ. ದೇಶದಲ್ಲಿ ನೆಲೆಸಿರುವ ಅಕ್ರಮ ವಲಸಿಗರನ್ನು ಕಾನೂನುಬದ್ಧವಾಗಿ ಮತ್ತು ನ್ಯಾಯಯುತವಾಗಿ ಗುರುತಿಸಲು, ಬಂಧಿಸಲು ಮತ್ತು ಗಡೀಪಾರು ಮಾಡಲು ಶಾಶ್ವತ ಕಾರ್ಯವಿಧಾನವನ್ನು ಶಿಫಾರಸು ಮಾಡಲಾಗುವುದು ಎನ್ನಲಾಗಿದೆ.

ಐಎಎಫ್‌ನ ಐವರು ಸಜೀವ ದಹನ

ಎಎನ್-32 ಸಾರಿಗೆ ವಿಮಾನ ಪತನ, ಕೊ-ಪೈಲಟ್‌ಗೆ ಗಾಯ




• **ಜೋರ್ಹಾತ್:** ಅಸ್ಸಾಂನ ಜೋರ್ಹಾತ್ ವಾಯುನೆಲೆಯಲ್ಲಿ ರಷ್ಯಾ ಮೂಲದ ಆಂಟೊನೊವ್ ಎಎನ್-32 ಸಾರಿಗೆ ವಿಮಾನ ಪತನಗೊಂಡು ಇಬ್ಬರು ಅಧಿಕಾರಿಗಳು ಸೇರಿದಂತೆ ಐವರು ಭಾರತೀಯ ವಾಯುಪಡೆಯ ಸಿಬ್ಬಂದಿ ಸಜೀವ ದಹನಗೊಂಡಿದ್ದಾರೆ. ವಿಮಾನದ ಕೊ-ಪೈಲಟ್‌ಗೆ ಗಾಯಗಳಾಗಿದ್ದು, ಜೋರ್ಹಟ್‌ನ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ವೇಳೆ ವಿಮಾನದಲ್ಲಿ ಆರು ಸಿಬ್ಬಂದಿ ಇದ್ದರು. ಶನಿವಾರ ಬೆಳಗ್ಗೆ ಅಸ್ಸಾಂನ ಜೋರ್ಹಾತ್‌ನಲ್ಲಿ ವಾಡಿಕೆಯ ಹಾರಾಟದ ವೇಳೆ ಐಎಎಫ್ ಈ ಅಪಘಾತ ಸಂಭವಿಸಿದೆ ಎಂದು ಐಎಎಫ್ ದೃಢಪಡಿಸಿದೆ. ➡ಪುಟ ೪

ರಾಯಚೂರು ಜಿಲ್ಲೆಯ 318 ಶಾಲೆಗಳಲ್ಲಿ ಶಿಕ್ಷಕರಿಲ್ಲ

ಶಾಲೆಗಳಿವೆ, ಆದರೆ ಶಿಕ್ಷಕರಿಲ್ಲ!

▸ ವಾಗೀಶ ವೀ. ಪಾಟೀಲ

260 ಶಾಲೆಗಳಲ್ಲಿ ಒಬ್ಬನೇ ಶಿಕ್ಷಕ



• **ರಾಯಚೂರು:** ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಸೇರಿ 318 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. 260 ಶಾಲೆಗಳಲ್ಲಿ ಕೇವಲ ಓರ್ವ ಶಿಕ್ಷಕ ಕಾರ್ಯನಿರ್ವಹಿಸುತ್ತಿದ್ದಾರೆ!

– ಇದು ಜಿಲ್ಲೆಯ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕನ್ನಡಿ. ಶಿಕ್ಷಕರೇ ಇಲ್ಲದಿರುವುದರಿಂದ ಈ ಶಾಲೆಗಳ ಸ್ಥಿತಿ ತೀರಾ ಅತಂತ್ರವಾಗಿದೆ. ಜಿಲ್ಲೆಯಲ್ಲಿ 1456 ಪ್ರಾಥಮಿಕ, 2039 ಪ್ರೌಢಶಾಲೆಗಳಿದ್ದರೂ, ಪ್ರತಿ ವರ್ಷ ರಾಜ್ಯದ ಪರೀಕ್ಷಾ ಫಲಿತಾಂಶದಲ್ಲಿ ರಾಯಚೂರು ಜಿಲ್ಲೆ ಹಿಂದಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಶಿಕ್ಷಕರಿಲ್ಲದ ಶಾಲೆಗಳು ಎನ್ನುವುದು ಸಾರ್ವಜನಿಕರ ಆರೋಪ. ಶಿಕ್ಷಕರ ಕೊರತೆ ಕಲ್ಯಾಣ ಕರ್ನಾಟಕಕ್ಕೆ ವಿಶೇಷವಾಗಿ ರಾಯಚೂರು ಜಿಲ್ಲೆಗೆ ಶಾಪವಾಗಿದೆ ಎಂದರೆ ತಪ್ಪಾಗಲಾರದು. ಶಿಕ್ಷಕರಿಲ್ಲದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಉತ್ತಮ ಫಲಿತಾಂಶ ನಿರೀಕ್ಷಿಸುವುದಾದರೂ ಹೇಗೆ ಎಂದು ಪಾಲಕರು ಪ್ರಶ್ನೆ ಮಾಡುತ್ತಿದ್ದಾರೆ.

ದಿಗಂತ ವಿಶೇಷ

ಶಿಕ್ಷಕರ ಕೊರತೆ: ಜಿಲ್ಲೆಯಲ್ಲಿ 294 ಪ್ರಾಥಮಿಕ ಹಾಗೂ 24 ಪ್ರೌಢಶಾಲೆಗಳು ಸೇರಿ ಒಟ್ಟು 318 ಶಾಲೆಗಳು ಶೂನ್ಯ ಶಿಕ್ಷಕ ಶಾಲೆಗಳಾಗಿವೆ. ➡ಪುಟ ೪

- ಶೇ.70ರಷ್ಟು ಮಕ್ಕಳಿಗಿಲ್ಲ ಅಕ್ಷರ ಜ್ಞಾನ!
- 4417 ಪ್ರಾಥಮಿಕ, 1067 ಪ್ರೌಢಶಾಲಾ ಶಿಕ್ಷಕರ ಕೊರತೆ

ಸರ್ಕಾರದ ಉದ್ದೇಶಿತ ಶಿಕ್ಷಕರ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಹಾಗೂ ರಾಯಚೂರಿಗೆ ಎಷ್ಟು ಶಿಕ್ಷಕರು ಸಿಗಲಿದ್ದಾರೆ ಎನ್ನುವುದು ಸದ್ಯದ ಪ್ರಶ್ನೆ. ಹೆಚ್ಚಿನ ಶಿಕ್ಷಕರು ಸಿಗಬಹುದೆಂಬ ನಿರೀಕ್ಷೆಯಲ್ಲಿ ನಾವಿದ್ದೇವೆ.

■ ಮಲ್ಲಿಕಾರ್ಜುನ, ಡಿಡಿಪಿಐ

ಪಿಒಕೆ ಜನರಿಂದ ಮೋದಿ ಹೆಸರಲ್ಲಿ ವಿಶೇಷ ಹೋಮ

• **ಪಿಒಕೆ:** ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪ್ರಧಾನಿಯಾಗಿ 12 ವರ್ಷಗಳ ಆಡಳಿತ ಪೂರ್ಣಗೊಳಿಸಿದ ಹಿನ್ನೆಲೆ, ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಗಡಿಭಾಗದ ಕೆಲವು ಗ್ರಾಮಗಳ ನಿವಾಸಿಗಳು ವಿಶೇಷ ಹೋಮ-ಹವನ ನಡೆಸಿ ಅವರಿಗೆ ಆರೋಗ್ಯ, ದೀರ್ಘಾಯುಷ್ಯ ಹಾಗೂ ಉತ್ತಮ ಆಡಳಿತಕ್ಕಾಗಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಗಡಿ ಬೇಲಿಯ ಸಮೀಪದ ತೆರೆದ ಪ್ರದೇಶದಲ್ಲಿ ಗ್ರಾಮಸ್ಥರು ಸಾಮೂಹಿಕವಾಗಿ ಸೇರಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ಒಂದು ಕಾಲದಲ್ಲಿ ಗುಂಡಿನ ದಾಳಿ ಮತ್ತು ಶೆಲ್‌ಗಳ ಸದ್ದುಗಳಿಂದ ಪ್ರತಿಧ್ವನಿಸುತ್ತಿದ್ದ ಪ್ರದೇಶದಲ್ಲಿ ಇಂದು ಶಾಂತಿಯ ಸಂಕೇತವಾಗಿ ಹೋಮದ ಹೊಗೆ ಆಕಾಶಕ್ಕೆ ಏರಿದ ದೃಶ್ಯ ಕಂಡುಬಂತು. ➡ಪುಟ ೪

12 ವರ್ಷ ಆಡಳಿತ ಪೂರ್ಣ ಹಿನ್ನೆಲೆ ವಿಶೇಷ ಪೂಜೆ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,60,000 (2,60,000) ಅಪರಂಜಿ ಚಿನ್ನ: 1,49,080 (1,48,680) ಆಭರಣ ಚಿನ್ನ: 1,36,650 (1,36,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.12

ಕಿರುಸುದ್ದಿ



ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ.ವೀರಣ್ಣ ರಾಜೂರ ದತ್ತಿ ನಿಮಿತ್ತ ನಡೆದ 'ರಾಜಮಾರ್ಗ ಪ್ರಶಸ್ತಿ' ಪ್ರದಾನ, ರಂಗಗೌರವ ಹಾಗೂ ಗ್ರಂಥ ಬಿಡುಗಡೆ ಸಮಾರಂಭ.

ಜೂ.16ಕ್ಕೆ ವಿದ್ಯುತ್ ವ್ಯತ್ಯಯ

ಧಾರವಾಡ: ತಡಸಿನಕೊಪ್ಪದ 110ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಇದೇ ಜೂ.16ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ 1ನೇ ತ್ರೈಮಾಸಿಕ ತುರ್ತುಪಾಲನಾ ಕಾಮಗಾರಿ ಹಿನ್ನಲೆ ವಿದ್ಯುತ್ ಕೇಂದ್ರದ ಮಾರ್ಗಗಳಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ತಡಸಿನಕೊಪ್ಪ, ಜೋಗೆಲ್ಲಾಪುರ, ಇಟ್ಟಿಗಟ್ಟಿ, ಕೆ.ಹೆಚ್.ಬಿ, ಉದಯಗಿರಿ, ವನಸಿರಿ ನಗರ, ರಾಜಾಜಿ ನಗರ, ಸತ್ತೂರ ವಿಲೇಜ್, ಸತ್ತೂರ, ಆಶ್ರಯ ಕಾಲೋನಿ, ಎನ್.ಜಿ.ಇ.ಎಫ್, ಎಸ್.ಡಿ.ಎಮ್ ಮೆಡಿಕಲ್ ಕಾಲೇಜ್, ಎಸ್.ಡಿ.ಎಮ್ ಡೆಂಟಲ್ ಕಾಲೇಜ್, 2ಟಿಜ ಕೆ.ಹೆಚ್.ಬಿ ಹಂತ, ಖಿಖಿಖಿ, ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯಾ ಸತ್ತೂರ, ರಾಶಿಫಾರ್ಮ, IIIT, ನವಲೂರ ರೇಲ್ವೆ ಸ್ಟೇಶನ್, ಸಂಜೀವಿನಿ ಪಾರ್ಕ್, ಹುಬ್ಬಳ್ಳಿ-ಧಾರವಾಡ ಡ್ಯೂರೆಬಲ್ ಗೂಡ್ಸ(ಏಕಸ್), KMF Rayapur, IOCL Rayapur ಮತ್ತು ವ್ಯಾಪ್ತಿಯಲ್ಲಿ ಗ್ರಾಹಕರು ಸಹಕರಿಸಲು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಹುಬ್ಬಳ್ಳಿ: ವಿದ್ಯಾನಗರದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕನಲ್ಲಿ 2026-27 ಸಾಲಿಗೆ 2 ವರ್ಷಗಳ ಐಟಿಐ, ದ್ವಿತೀಯ ಪಿಯುಸಿ (ವಿಜ್ಞಾನ, ತಾಂತ್ರಿಕ ವಿಷಯಗಳಲ್ಲಿ) ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಮೆರಿಟ್ ಆಧಾರಿತ 2ನೇ ಮತ್ತು 3ನೇ ಸೆಮಿಸ್ಟರ್ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜೂನ್ 20 ರೊಳಗೆ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಬಹುದು. ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಜೂನ್ 23 ರಂದು ಪ್ರಕಟಿಸಲಾಗುವುದು. ಮೆರಿಟ್ ಪಟ್ಟಿಯ ಆಕ್ಷೇಪಣೆ, ತಿದ್ದುಪಡಿಗೆ ಜೂನ್ 25 ರಂದು ಅವಕಾಶ ನೀಡಲಾಗಿದೆ. ಅಂತಿಮ ಮೆರಿಟ್ ಪಟ್ಟಿಯನ್ನು ಜೂನ್ 30ರಂದು ಪ್ರಕಟಿಸಲಾಗುತ್ತದೆ. ಜುಲೈ 1 ರಿಂದ 4 ರವರೆಗೆ ಪ್ರವೇಶ ಶುಲ್ಕ ಪಾವತಿಸಬಹುದು. ಭರ್ತಿಯಾಗದೆ ಉಳಿದ ಸೀಟುಗಳಿಗೆ ಜುಲೈ 6 ರಿಂದ 10 ರೊಳಗೆ ಹಂಚಿಕೆ ಮಾಡಲಾಗುತ್ತದೆ ಎಂದು ಸರ್ಕಾರಿ ಮಹಿಳಾ ಪಾಲಿಟೆಕ್ನಿಕನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹುಬ್ಬಳ್ಳಿ: ನಗರದ ಜಂಗಮ ಅಭಿವೃದ್ಧಿ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳ ಆಹ್ವಾನಿಸಲಾಗಿದೆ. ಈ ಕುರಿತು ಪ್ರಕಟಣೆಗೆ ತಿಳಿದ ಸಂಘವು ಶೈಕ್ಷಣಿಕ ವರ್ಷ 2026ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ.90ರಷ್ಟು ಅಂಕಗಳಿಸಿ ಉತೀರ್ಣರಾಗಿರಬೇಕು. ಹುಬ್ಬಳ್ಳಿ ನಗರ ಹಾಗೂ ತಾಲೂಕಿನ ಜಂಗಮ ಸಮುದಾಯದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿಯರಿಗೆ ಮಾತ್ರ ಅರ್ಹರಾಗಿದ್ದಾರೆ. ಅಂಕಪಟ್ಟಿ ನಕಲು ಪ್ರತಿ, ಇತ್ತೀಚಿನ 2 ಭಾವಚಿತ್ರ, ಆಧಾರ್ ಕಾರ್ಡ್ ನಕಲು ಪ್ರತಿ ಹಾಗೂ ಮೊಬೈಲ್ ಸಂಖ್ಯೆ ಮೂಲಕ ನಗರದ ಬಸವ ವನದ ಭವಾನಿ ಆರ್ಕೇಡ್‌ನಲ್ಲಿರುವ ಜಂಗಮ ಅಭಿವೃದ್ಧಿ ಸಂಘ ಕಚೇರಿಗೆ ಭೇಟಿ ನೀಡಿ ಸಲ್ಲಿಸಿಸಬೇಕು ಎಂದು ತಿಳಿಸಿದ್ದಾರೆ.

ಜೂ.22ಕ್ಕೆ ಪಿಂಚಣಿ ಅದಾಲತ್

ಧಾರವಾಡ: ಹುಬ್ಬಳ್ಳಿ ರೈಲ್ವೆ ಅಂಚೆ ವಿಭಾಗದ ಅಂಚೆ ಇಲಾಖೆ ಪಿಂಚಣಿದಾರಿಗಾಗಿ ಪಿಂಚಣಿ ಅದಾಲತ್‌ನ್ನು ಜೂ.22ರಂದು ಬೆಳಗ್ಗ 11ಕ್ಕೆ ಹುಬ್ಬಳ್ಳಿಯ ಕಾರವಾರ ರಸ್ತೆಯ ಗಿರಿಣಿ ಚಾಳ ಎದುರಿನ ರೈಲ್ವೆ ಅಂಚೆ ವಿಭಾಗದ ಅಧೀಕ್ಷಕರ ಕಚೇರಿಯಲ್ಲಿ ಜರುಗಲಿದೆ. ಸೇವೆಯಿಂದ ನಿವೃತ್ತರಾದ ನೌಕರರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳ ಹಾಗೂ ಕುಟುಂಬ ಪಿಂಚಣಿದಾರರ ಅಹವಾಲು ಅದಾಲತ್‌ನಲ್ಲಿ ಆಲಿಸಲಾಗುತ್ತದೆ. ಗ್ರಾಮೀಣ ಅಂಚೆ ಸೇವಕರು ಮತ್ತಿತರಿಗೆ ಅದಾಲತ್‌ನಲ್ಲಿ ಅವಕಾಶ ಇಲ್ಲ. ಅದಾಲತ್‌ನಲ್ಲಿ ತೀರ್ಮಾನಿಸುವ ಅಹವಾಲುಗಳಿದ್ದಲ್ಲಿ ಅಧೀಕ್ಷಕರು, ರೈಲ್ವೆ ಅಂಚೆ ವಿಭಾಗ, ಹುಬ್ಬಳ್ಳಿ 580029 ಈ ವಿಳಾಸಕ್ಕೆ ಜೂ.18ರೊಳಗಾಗಿ ಲಿಖಿತ ರೂಪದಲ್ಲಿ ಅಥವಾ rmsdoHB.ka@indiapost.gov.in ಇಮೇಲ್ ಮೂಲಕ ಕಳಿಸಬಹುದು ಎಂದು ಹುಬ್ಬಳ್ಳಿ ರೈಲ್ವೆ ಅಂಚೆ ವಿಭಾಗದ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಧಾರವಾಡ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಹುಬ್ಬಳ್ಳಿ ಅಂಚಟಗೇರಿಯ ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಧಾರವಾಡ ಜಯನಗರದ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಖಾಲಿ ಉಳಿದ ಸೀಟುಗಳಿಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ವಿದ್ಯಾರ್ಥಿಗಳು ಆಫ್‌ಲೈನ್ ಮೂಲಕ ಜೂ.22ರೊಳಗಾಗಿ ಅರ್ಜಿ ಸಲ್ಲಿಸಬಹುದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಧಾರವಾಡ: ಕಾಗ್ನಿಜಂಟ್ ಟೆಕ್ನೋಲಜಿ ಸೋಲುಶನ್ಸ್ ಇಂಡಿಯಾ ಕಂಪನಿ ಅನಾಲಿಸ್ಟ್ ಟ್ರೈನಿ ಉದ್ಯೋಗಕ್ಕೆ ಆಯ್ಕೆಯಾದ ಧಾರವಾಡ ಜನತಾ ಶಿಕ್ಷಣ ಸಮಿತಿ ವಿದ್ಯಾರ್ಥಿನಿ ತೈಯಬಾ ಸಿಂಗೋಟಿ ಅವಳಿಗೆ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಎಂಸಿಎ ನಿರ್ದೇಶಕ ಡಾ.ಸೂರಜ್ ಜೈನ್, ಬಾಹುಬಲಿ ಚಿವಟೆ ಹಾಗೂ ಸಿಬ್ಬಂದಿ ತನಿರ ಸನ್ಮಾನಿಸಿದರು.

ರಂಗಭೂಮಿಗೆ ಕೊಟ್ರೇಶ್ ಕೊಡುಗೆ ಅಪಾರ

ಧಾರವಾಡ: ಕಲಾವಿದ ಎಂ.ಎಸ್.ಕೊಟ್ರೇಶ್ ಅವರಿಗೆ ಜೀವನವೇ ರಂಗಭೂಮಿ ಆಗಿತ್ತು. ಸುಮಾರು 64 ವರ್ಷಕ್ಕೂ ಹೆಚ್ಚುಕಾಲ ರಂಗಭೂಮಿಗೆ ಸೇವೆ ಸಲ್ಲಿಸಿದ್ದಾರೆ ಎಂದು ಸಾಹಿತಿ ಡಾ.ಬಾಳಣ್ಣ ಶೀಗಿಹಳ್ಳಿ ಹೇಳಿದರು. ನಗರದ ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ.ವೀರಣ್ಣ ರಾಜೂರ ದತ್ತಿ ನಿಮಿತ್ತ ನಡೆದ 'ರಾಜಮಾರ್ಗ ಪ್ರಶಸ್ತಿ' ಪ್ರದಾನ, ರಂಗಗೌರವ ಹಾಗೂ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅಭಿನಂದನಾ ಪರ ನುಡಿಗಳಾಡಿದರು. ರಾಜಮಾರ್ಗ ಪ್ರಶಸ್ತಿ ಸ್ವೀಕರಿಸಿದ ಎಂ.ಎಸ್. ಕೊಟ್ರೇಶ ಮಾತನಾಡಿ, ಡಾ.ವೀರಣ್ಣ ರಾಜೂರ ಅವರ ಹೆಸರಿಂದ ಅವರ ಶಿಷ್ಯರು ಕವಿಸಂನಲ್ಲಿ ದತ್ತಿ ಇರಿಸಿ ನಮ್ಮಂತಹ ಕಲಾವಿದರನ್ನು ಗೌರವಿಸುವುದು ಅಭಿನಂದನೀಯ ಎಂದರು. ರಂಗಗೌರವ ಸ್ವೀಕರಿಸಿದ ಕಲಾವಿದ ಪ್ರಭು ಹಂಚಿನಾಳ, ರೇವಣಸಿದ್ದಪ್ಪ ನೂಲ್ವಿ, ರಂಗಗೌರವ ಖುಷಿ ತಂದಿದೆ. ರಂಗಭೂಮಿ ಜಾತಿಗೆ ಸೀಮಿತವಾದುದಲ್ಲ, ಅದು ಒಲಿಯುವುದು ಒಂದು ಅದೃಷ್ಟ ಎಂದರು. ಡಾ.ವೀರಣ್ಣ ರಾಜೂರ ಮಾತನಾಡಿ, ಎಂ.ಎಸ್.ಕೊಟ್ರೇಶ ರಂಗಭೂಮಿ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ಗುಬ್ಬಿ ವೀರಣ್ಣ ಪ್ರಶಸ್ತಿ ಸಿಗಬೇಕು. ಈ ಪ್ರಶಸ್ತಿ ನೀಡುವುದರ ಮೂಲಕ ತನ್ನ ಗೌರವ ಹೆಚ್ಚಿಸಿಕೊಂಡಿದೆ ಎಂದರು. ಡಾ.ವೀರಣ್ಣ ರಾಜೂರ ಅವರ 'ಬಸವಣ್ಣ', 'ಅಕ್ಕಮಹಾದೇವಿಯ ವಚನಗಳು' ಎರಡು ಕೃತಿಗಳು ಲೋಕಾರ್ಪಣೆಗೊಂಡವು. ಕವಿಸಂ ಉಪಾಧ್ಯಕ್ಷ ಡಾ.ಪಾಂಡುರಂಗ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಬೆಂಗೇರಿ, ಡಾ.ರಾಮೂ ಮೂಲಗಿ, ಪ್ರೊ.ಮಲ್ಲಿಕಾರ್ಜುನ ಕುಂಬಾರ, ಡಾ.ಕಲ್ಮೇಶ ಹಾವೇರಿಪೇಟ, ಡಾ. ವೈ.ಎಂ.ಯಾಕೊಳ್ಳಿ, ಡಾ.ಚಂದ್ರಶೇಖರ ರೊಟ್ಟಿಗವಾಡ ಇದ್ದರು. ಸತೀಶ ತುರಮರಿ ಸ್ವಾಗತಿಸಿದರು. ಡಾ.ಧನವಂತ ಹಾಜವಗೋಳ ಪ್ರಾಸ್ತಾವಿಸಿದರು. ಡಾ. ಶೈಲಜಾ ಅಮರಶೆಟ್ಟಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.



ಹುಬ್ಬಳ್ಳಿ: ನಗರದ ಕಾಮಾಕ್ಷಿ ಮಹಿಳಾ ಮಂಡಳಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಾಲಿಕೆ ಸದಸ್ಯೆ ಮೀನಾಕ್ಷಿ ವಂಟಮುರಿ, ಮಂಡಳಿಯ ಅಧ್ಯಕ್ಷೆ ವಿಜಯಾ ಕರಿಂಡಿ, ಸಿದ್ದಮ್ಮ ಅಡಿವೇಣ್ಣವರ, ಅಪರ್ಣ ಹೆಬಸೂರ, ಮಂಗಳಾ ನಾಡಕರ್ಣಿ ಸೇರಿದಂತೆ ಅನೇಕರಿದ್ದರು.

ವಸತಿ ಶಾಲೆ ಪ್ರಾಚಾರ್ಯರಿಗೆ ಕಾರ್ಯಾಗಾರ | ನ್ಯಾ. ಎಚ್.ಪಿ.ಸಂದೇಶ ಅಭಿಮತ

ಶಿಕ್ಷಣ, ಆರೋಗ್ಯ ವ್ಯಾಪಾರೀಕರಣ ಸಲ್ಲ

ಧಾರವಾಡ: ಶಿಕ್ಷಣ-ಆರೋಗ್ಯ ವ್ಯಾಪಾರೀಕರಣ ಸಲ್ಲ. ಶಿಕ್ಷಕರ ಹುದ್ದೆಗಳ ಭರ್ತಿ ಮಾಡುವ ಯೋಗ್ಯತೆ ರಾಜಕಾರಣಿಗಳಿಗಿಲ್ಲ, ಹೀಗಾಗಿ ಪ್ರತಿವರ್ಷವೂ ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ ಎಂದು ಹೈಕೋರ್ಟ್ ನ್ಯಾಯಾಧೀಶ ಎಚ್.ಪಿ.ಸಂದೇಶ ವಿಷಾದಿಸಿದರು.

ಯುವ ಸ್ಫೂರ್ತಿ ಅಕ್ಯಾಡೆಮಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಗರದ ವಿದ್ಯಾವರ್ಧಕ ಸಂಘದಲ್ಲಿ ಬೆಳಗಾವಿ-ಕಲಬುರ್ಗಿ ವಿಭಾಗದ ವಸತಿ ಶಾಲೆ ಮತ್ತು ಕಾಲೇಜುಗಳ ಪ್ರಾಚಾರ್ಯರಿಗೆ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಶಿಕ್ಷಕರ ಹುದ್ದೆಗಳು ಭರ್ತಿ ಮಾಡದೆ ಸರ್ಕಾರಿ ಶಾಲೆಗಳು ಮುಚ್ಚುವ ಜತೆ ಖಾಸಗಿ ಶಾಲೆಗೆ ಅನುಮತಿ ನೀಡುವುದು ಖೇದಕರ. ನಮ್ಮನ್ನು ಆಳುವವರಿಗೆ ಸರ್ಕಾರ ನಡೆಸುವ ಯೋಗ್ಯತೆಯೂ ಸಹ ಇಲ್ಲ, ಇದು ನಮ್ಮ ನಾಡಿನ ದೌರ್ಭಾಗ್ಯ ಎಂದು ಬೇಸರಿಸಿದರು.

ಎಸ್ಸೆಸ್ಸೆಲ್ಸಿ ಉತ್ತೀರ್ಣನಾದ ಸಿಪಾಯಿ ರೂ.25 ಸಾವಿರ ಸಂಬಳ ಪಡೆದರೆ ಡಬಲ್ ಡಿಗ್ರಿ ಮಾಡಿದ ಅತಿಥಿ ಶಿಕ್ಷಕ ರೂ.14 ಸಾವಿರ ಸಂಬಳ ಪಡೆಯುವುದು ವಿಷಾದ. ಸ್ವಾತಂತ್ರ್ಯ ಬಂದು 75 ವರ್ಷ ಗತಿಸಿದರೂ ದೇಶ ಸುಧಾರಣೆ ಕಂಡಿಲ್ಲ, ವಿದ್ಯಾರ್ಥಿಗಳನ್ನು ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು.

ಪತ್ರಕರ್ತ ಬಂಡು ಕುಲಕರ್ಣಿ, ಅಕಾಡೆಮಿ ಅಧ್ಯಕ್ಷ ಸಿ.ಬಿ.ರಂಗರಾಜೇಶ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಉಪನಿರ್ದೇಶಕ ಲಕ್ಷ್ಮಣ ಬಾಹುಬಲಿ, ಜಿಲ್ಲಾ ನ್ಯಾಯಾಧೀಶ ವಿಜಕುಮಾರ, ರಾಷ್ಟ್ರೀಯ ತರಬೇತುದಾರ ಜೇಸಿ ವಿಜಯಕುಮಾರ ಇದ್ದರು.



ಇದೇ ವೇಳೆ ಸವಿತಾ ಬೋರಟ್ಟಿ, ಎಸ್.ಪಿ.ಪ್ರವೀಣ, ಅನಸೂಯಾ, ರವಿಚಂದ್ರ, ಲಕ್ಷ್ಮೀ ಶೆಟ್ಟಿ, ಸುರೇಶ ಗುಂಡಣ್ಣವರ, ಮಹ್ಮದ ಇಲ್ಯಾಯಿಲ್, ಹನುಮ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಯುವ ಸ್ಫೂರ್ತಿ ಸೇವಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಶಾಂತಿ, ಸುವ್ಯವಸ್ಥೆ ಕಾಪಾಡಿ

ವಸತಿ ಶಾಲೆಗಳಲ್ಲಿನ ನಿಲಯ ಪಾಲಕರು, ಶಿಕ್ಷಕರು, ಪ್ರಾಂಶುಪಾಲರೇ ಮಕ್ಕಳಿಗೆ ಅಪಾರ ತಂದೆ-ತಾಯಿ. ಅವರಲ್ಲಿ ಆತ್ಮವಿಶ್ವಾಸ, ದೇಶಭಕ್ತಿ, ಸ್ಫೂರ್ತಿ ತುಂಬಬೇಕು. ದೇಶ ಸದೃಢತೆಗೆ ಶಿಕ್ಷಣ ಮತ್ತು ಆರೋಗ್ಯ ಅವಶ್ಯ. ಯುವಕರು ದೇಶದ ಆಸ್ತಿ. ಅವರನ್ನು ಶಿಕ್ಷಕರು ಸನ್ಮಾರ್ಗದಲ್ಲಿ ನಡೆಸಬೇಕು. ಸಮಾಜದ ಶಾಂತಿ-ಸುವ್ಯವಸ್ಥೆ ಕಾಪಾಡುವ ಮೂಲಕ ದೇಶ ಕಟ್ಟುವ ಕಾಯಕಕ್ಕೆ ಅಣಿಯಾಗಲು ಶಿಕ್ಷಕರಿಗೆ ಹೈಕೋರ್ಟ್ ನ್ಯಾಯಾಧೀಶ ಎಚ್.ಪಿ.ಸಂದೇಶ ಹೇಳಿದರು.

ದಿವ್ಯಾಂಗರ ಹಕ್ಕುಗಳಿಗೆ ಕಾನೂನು ಸಮರ

ಧಾರವಾಡ: ನಗರದ ಮಣಕಿಲ್ಲಾದ ಶ್ರೀ ಲಕ್ಷ್ಮಿ-ನಾರಾಯಣ ದೇವಸ್ಥಾನದಲ್ಲಿ ಸಕ್ಷಮ್ ಸಂಘಟನೆಯ ಧಾರವಾಡ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಸೌಹಾರ್ದ ಕೂಟ ಯಶಸ್ವಿಯಾಗಿ ಜರುಗಿತು.

ಸಕ್ಷಮ್ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಕೇಶವ ತೆಲಗು ಅಧ್ಯಕ್ಷತೆಯಲ್ಲಿ ನಡೆದ ಮಹತ್ವದ ಸಭೆಯಲ್ಲಿ ದಿವ್ಯಾಂಗರ ವಿವಿಧ ಸಮಸ್ಯೆಗಳು ಹಾಗೂ ಹಕ್ಕುಗಳ ರಕ್ಷಣೆಯ ಕುರಿತು ಗಂಭೀರ ಚರ್ಚೆ ನಡೆಸಲಾಯಿತು. ನಗರದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಕಟ್ಟಡಗಳಲ್ಲಿ ದಿವ್ಯಾಂಗರ ಸುಲಭ ಓಡಾಟಕ್ಕಾಗಿ ಕಡ್ಡಾಯವಾಗಿ ರ್‍ಯಾಂಪ್ ನಿರ್ಮಿಸಬೇಕು, 2016ರ ದಿವ್ಯಾಂಗರ ಹಕ್ಕುಗಳ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಮತ್ತು ದಿವ್ಯಾಂಗರಿಗೆ ಸಿಗಬೇಕಾದ ಸೂಕ್ತ ಚಿಕಿತ್ಸಾ ಸೌಲಭ್ಯಗಳ ಕುರಿತು ಸುದೀರ್ಘ ಆಲೋಚನೆ ನಡೆಸಲಾಯಿತು. ಬರುವ ದಿನಗಳಲ್ಲಿ ವಿವಿಧ ದಿನಾಚರಣೆ ಅರ್ಥಪೂರ್ಣ ಆಚರಿಸುವುದು ಹಾಗೂ ಸಕ್ಷಮ್ ಸಂಘಟನೆ ಜಿಲ್ಲಾದ್ಯಂತ ಮತ್ತಷ್ಟು ಬಲಪಡಿಸುವ ಕುರಿತು ನಿರ್ಣಯಿಸಲಾಯಿತು.

ದಿವ್ಯಾಂಗರು ಸಲ್ಲಿಸುವ ಮನವಿ, ಅಹವಾಲುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸದ, ನಿರ್ಲಕ್ಷ್ಯ ವಹಿಸುವ ಸರ್ಕಾರಿ ಇಲಾಖೆ ಅಧಿಕಾರಿಗಳ ವಿರುದ್ಧ ಕಾನೂನು ಸಮರ ಸಾರಲು ಪ್ರಮುಖರು ಒಕ್ಕೊರಲಿನಿಂದ ಸಲಹೆ ನೀಡಿದರು. ಈ ಸೌಹಾರ್ದ ಕೂಟದಲ್ಲಿ ಜಿಲ್ಲೆಯ ಅನೇಕ ದಿವ್ಯಾಂಗರು, ಸಂಘಟನೆಯ ಪದಾಧಿಕಾರಿಗಳು ಹಾಗೂ ಪ್ರಮುಖ ಮುಖಂಡರು ಉಪಸ್ಥಿತರಿದ್ದು, ದಿವ್ಯಾಂಗರ ಸಬಲೀಕರಣಕ್ಕಾಗಿ ಕೈಜೋಡಿಸಲು ಸಂಕಲ್ಪ ಮಾಡಿದರು. ಸಕ್ಷಮ್ ರಾಷ್ಟ್ರೀಯ ಸಹ ಕಾರ್ಯದರ್ಶಿ ಸುರೇಶ ಪಾಟೀಲ, ಸಕ್ಷಮ ಉತ್ತರ ಪ್ರಾಂತ ಅಧ್ಯಕ್ಷ ಸುನೀಲ ಗೋಖಲೆ, ಉತ್ತರ ಪ್ರಾಂತ ಸಹ ಕಾರ್ಯದರ್ಶಿ ಡಾ. ನಾಗಲಿಂಗ ಮುರಗಿ ಅವರಿಗೆ ಸನ್ಮಾನಿಸಲಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಶ್ರೀಧರ ನಾಡಗೇರ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಮಠಪತಿ, ಖಜಾಂಚಿ ಎಚ್.ಕೆ. ಮಂಜುನಾಥ, ಶಿವರಾಮ ಸುಲಾಖೆ, ಜಿಲ್ಲಾಧ್ಯಕ್ಷ ಕೇಶವ ತೆಲಗು, ಪ್ರಭಾಕರ ತೆಲಗು, ಬಸವರಾಜ ಉಪ್ಪಾರ, ವಿಠ್ಠಲ ಲಾಡರ್, ಮಹೇಶ ಗೂಳಪ್ಪನವರ ಇದ್ದರು.

ನಾವೇ ಧ್ವನಿ ಆಗಬೇಕು

ನಮ್ಮ ಸಮಸ್ಯೆಗಳಿಗೆ ನಾವೇ ಧ್ವನಿ ಆಗಬೇಕು. ಸಕ್ಷಮ್ ಬರೀ ವೇದಿಕೆ ಅಲ್ಲ, ದಿವ್ಯಾಂಗರ ಶಕ್ತಿ. ಸಕ್ಷಮ್‌ದ ಬಲವರ್ಧನೆ ಮತ್ತು ದಿವ್ಯಾಂಗರ ಅಭ್ಯುದಯಕ್ಕೆ ಸಲಹೆ ನೀಡಿದ ಸಕ್ಷಮ್ ರಾಷ್ಟ್ರೀಯ ಸಹ ಕಾರ್ಯದರ್ಶಿ ಸುರೇಶ ಪಾಟೀಲ ಅವರಿಗೆ ಕೃತಜ್ಞತೆಗಳು ಎಂದು ಸಕ್ಷಮ್ ಧಾರವಾಡ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ಕೇಶವ ತೆಲಗು ಹೇಳಿದರು.



ಸಂತೋಷ ಲಾಡ್, ಸಲೀಂ ಅಹ್ಮದ್ ಸಚಿವರಾಗಲಿ

ಕುಂದಗೋಳ: ರಾಜ್ಯ ಸಚಿವ ಸಂಪುಟ ಮಾಜಿ ಸಚಿವ ಸಂತೋಷ ಲಾಡ್ ಹಾಗೂ ವಿಧಾನ ಪರಿಷತ್ ಸದಸ್ಯ ಸಲಿಮ್ ಅಹ್ಮದ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೆಂಬಲಿಗರು ಶನಿವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಕೆಪಿಸಿಸಿ ಸದಸ್ಯ ಅರವಿಂದ ಕಟಗಿ ಅವರಿಗೆ ಮನವಿ ಸಲ್ಲಿಸಿದರು. ಧಾರವಾಡ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್ ಅವರ ನೇತೃತ್ವದಲ್ಲಿ ಪಟ್ಟಣದ ಗಾಳಿ ಮಾರೆಮ್ಮ ದೇವಸ್ಥಾನ ಬಳಿ ಜಮಾಯಿಸಿದ ಕಾರ್ಯಕರ್ತರು, ನಂತರ ಗಾಳಿ ಮಾರೆಮ್ಮ ದೇವಸ್ಥಾನದಿಂದ ಕಾಳಿದಾಸ ನಗರ ಕನಕದಾಸರ ಪುತ್ಥಳಿಗೆ ಬ್ರಹ್ಮದೇವರ ಗುಡಿ ಬಳಿ ಇರುವ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಪ್ರಚಾರ ಸಮಿತಿ ಗ್ರಾಮೀಣ ಜಿಲ್ಲಾಧ್ಯಕ್ಷ ಚಂದ್ರಶೇಖರ ಜುಟ್ಟಲ್ ಮಾತನಾಡಿ, ಸಚಿವ ಸಂಪುಟದಲ್ಲಿ ಎಲ್ಲಾ ಪ್ರದೇಶ ಹಾಗೂ ಸಮುದಾಯಗಳಿಗೆ ಸಮರ್ಪಕ ಪ್ರಾತಿನಿಧ್ಯ ದೊರಕಬೇಕು. ಸಂತೋಷ ಲಾಡ್ ಅವರು ಕಾರ್ಮಿಕ ಸಚಿವರಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಬಡವರ ಆಶಾಕಿರಣವಾಗಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಲಾಡ್ ಫೌಂಡೇಶನ್ ವತಿಯಿಂದ ಸರ್ವ ಧರ್ಮದ ಜನಾಂಗಕ್ಕೆ ನೊಂದ ಕುಟುಂಬಗಳಿಗೆ ಸಹಾಯ ಮಾಡಿದ್ದಾರೆ. ಸಲೀಂ ಅಹ್ಮದ್ ಅವರು ಸರ್ವ ಸಮಾಜದ ಹಿತಚಿಂತಕರಾಗಿದ್ದು, ಬಡವರು ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅಪಾರ ಕಾಳಜಿ ಹೊಂದಿದ್ದಾರೆ. ಇಂತಹ ಇಬ್ಬರು ನಾಯಕರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದೆ ಎಂದರು. ಕೆಪಿಸಿಸಿ ಸದಸ್ಯ ಅರವಿಂದ ಕಟಗಿ ಮನವಿ ಸ್ವೀಕರಿಸಿದರು. ಜಿಲ್ಲಾ ಕಿಸಾನ್ ಕಾಂಗ್ರೆಸ್ ಕಿಸಾನ್ ಘಟಕದ ಜಿಲ್ಲಾಧ್ಯಕ್ಷ ರಮೇಶ ಕೊಪ್ಪದ ಮಾತನಾಡಿ, ಉತ್ತರ ಕರ್ನಾಟಕ ಭಾಗದ ಜನರ ನಿರೀಕ್ಷೆಗಳಿಗೆ ತಕ್ಕಂತೆ ಸಚಿವ ಸಂಪುಟ ರಚನೆ ಆಗಬೇಕು. ಅನುಭವಿ ಶಾಸಕ ಮಾಜಿ ಕಾರ್ಮಿಕ ಸಚಿವ ಸಂತೋಷ ಲಾಡ್ ಸಲಿಮ್ ಅಹ್ಮದ್ ಅವರಿಗೆ ಅವಕಾಶ ನೀಡುವುದರಿಂದ ಆಡಳಿತ ವ್ಯವಸ್ಥೆಗೆ ಬಲ ಸಿಗಲಿದೆ ಎಂದರು. ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ನೆಹರು ಪಾಟೀಲ, ಕಾಂಗ್ರೆಸ್ ಮುಖಂಡ ಶಿವಾನಂದ ಮುತ್ತಣ್ಣವರ, ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಸಲೀಂ ಕ್ಯಾಲಕೊಂಡ, ಪಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಿರೇಸೂರ, ಮುಖಂಡರಾದ ಯಲ್ಲಪ್ಪಗೌಡ ಪಾಟೀಲ, ಸಿದ್ದಲಿಂಗಪ್ಪ ಕರೆಮ್ಮನವರ, ಕಾಯಿಮ ನಾಲಬಂದ, ರಾಯಸಾಬ ಕಳ್ಳಿಮನಿ, ಬಸವರಾಜ ಶಿರಸಂಗಿ, ಬಾಬಾಜಾನ್ ಮಿಶ್ರಿಕೋಟಿ, ಕಾಂತೇಶ ದೊಡ್ಡಮನಿ, ಶಾಂಭಯ್ಯ ನಿರಲಗಿ, ರಾಜು ದೊಡ್ಡಶಂಕರ, ಅಬ್ದುಲ್ ಖಾದರ ಜಿಲಾನಿ, ಅಡಿವೇಪ್ಪ ಹೆಬಸೂರ, ಶರಣಪ್ಪ ಕುರಿ, ಚಂದ್ರು ಕುರುಬರ ಇತರರಿದ್ದರು.



ಪಕ್ಷದ ಬಲವರ್ಧನೆಗೆ ಕಾರ್ಯಕರ್ತರೇ ಜೀವಾಳ



ಧಾರವಾಡ: ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ ಅಧ್ಯಕ್ಷತೆಯಲ್ಲಿ ಜೆಡಿಎಸ್ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಪ್ರಮುಖ ಸಭೆ ಶನಿವಾರ ಜರುಗಿತು.

ಸಭೆಯಲ್ಲಿ ಮುಂಬರುವ ದಿನಗಳಲ್ಲಿ ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವ ಮತ್ತು ಜನಪರ ಹೋರಾಟಗಳನ್ನು ಹಮ್ಮಿಕೊಳ್ಳುವ ಕುರಿತು ಪಕ್ಷದ ಮುಖಂಡರು ಹಾಗೂ ಪದಾಧಿಕಾರಿಗಳು ಸುದೀರ್ಘವಾಗಿ ಚರ್ಚೆ ನಡೆಸಿದರು.

ಮುಂಬರುವ ಚುನಾವಣೆ ಹಿನ್ನೆಲೆ ಮತಪಟ್ಟಿಯಿಂದ ಯಾವುದೇ ಮತದಾರರ ಹೆಸರು ಕೈಬಿಟ್ಟು ಹೋಗದಂತೆ ಎಚ್ಚರ ವಹಿಸಬೇಕು. ಈ ಪ್ರಕ್ರಿಯೆಯಲ್ಲಿ ಜನರಿಗೆ ಸೂಕ್ತವಾಗಿ ಸಹಕರಿಸಲು ಕಾರ್ಯಕರ್ತರಿಗೆ ಸೂಚಿಸಲಾಯಿತು. ಪಕ್ಷ ಸಂಘಟನೆ ಮತ್ತಷ್ಟು ಚುರುಕುಗೊಳಿಸಲು ಪ್ರತಿಯೊಂದು ವಾರ್ಡ್ ಮಟ್ಟದಲ್ಲಿ ಎಸ್ಸಿ-ಎಸ್ಟಿ, ಮಹಿಳಾ, ಯುವ ಹಾಗೂ ಅಲ್ಪಸಂಖ್ಯಾತ ಘಟಕ ಕಡ್ಡಾಯ ಸ್ಥಾಪಿಸಿ, ಪಕ್ಷದ ಬಲವರ್ಧನೆಗೆ ಶ್ರಮಿಸಲು ಹೇಳಿದರು. ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯ ಅವ್ಯವಸ್ಥೆ, ಮಹಾನಗರ ಪಾಲಿಕೆಯ ನಿಷ್ಕ್ರಿಯತೆ ಸೇರಿ ಅವಳಿನಗರದ ಪ್ರಮುಖ ಜ್ವಲಂತ ಸಮಸ್ಯೆಗಳ ಕುರಿತು ಸರ್ಕಾರದ ವಿರುದ್ಧ ಹೋರಾಟ ರೂಪಿಸಲು ಚರ್ಚಿಸಲಾಯಿತು.

ಪದಗ್ರಹಣ ಸಮಾರಂಭ ಮುಂಬರುವ ಜುಲೈ 15ರ ಒಳಗಾಗಿ ಪಕ್ಷದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಯಶಸ್ವಿಯಾಗಿ ಆಯೋಜಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಪಕ್ಷದ ಪ್ರಮುಖ ಮುಖಂಡರಾದ ಮಂಜುನಾಥ ಹಗೇದಾರ, ಸಿದ್ದು ಮಹಾಂತಒಡೆಯರ, ಸುಧೀರ ಕ್ಷತ್ರಿಯ, ಬಸವರಾಜ ಕುರಟ್ಟಿಮಠ, ಪೂರ್ಣಿಮಾ ಸವದತ್ತಿ, ಶಾಹೀರ್ ನದಾಫ್, ಬೀಮರಾಯ್ ಗುಡೇನಕಟ್ಟಿ ಇದ್ದರು.

ಪಕ್ಷದ ಬಲವರ್ಧನೆಗೆ ಕಾರ್ಯಕರ್ತರೇ ಜೀವಾಳ. ಸರ್ವರೂ ವಾರ್ಡ್ ಮಟ್ಟದಲ್ಲಿ ಜನರ ಸಮಸ್ಯೆಗೆ ಸ್ಪಂದಿಸಿ, ತಳಮಟ್ಟದಲ್ಲಿ ಪಕ್ಷ ಗಟ್ಟಿಗೊಳಿಸಬೇಕು. ಸರ್ಕಾರದ ವೈಫಲ್ಯ ವಿರುದ್ಧ ಹೋರಾಡಬೇಕು.

■ ಗುರುರಾಜ ಹುಣಸಿಮರದ, ಜಿಲ್ಲಾಧ್ಯಕ್ಷ, ಹು-ಧಾ ಮಹಾನಗರ ಜಿಲ್ಲಾ ಘಟಕ

ಕಾಂಗ್ರೆಸ್‌ನಿಂದ ವಿಶೇಷ ಜಾಗೃತಿ ಕಾರ್ಯಕ್ರಮ

ಹುಬ್ಬಳ್ಳಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್' ಯೋಜನೆಯ ಕುರಿತು ಕನಕದಾಸ, ಕಾಡಸಿದ್ದೇಶ್ವರ, ಪಿಸಿ ಜಾಬಿನ್ ಕಾಲೇಜಿಗಳಲ್ಲಿ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಈ ಐತಿಹಾಸಿಕ ನಿರ್ಧಾರವು ರಾಜ್ಯದ ಕೋಟ್ಯಾಂತರ ವಿದ್ಯಾರ್ಥಿಗಳ ಆರ್ಥಿಕ ಹೊರೆ ತಗ್ಗಿಸಲಿದೆ. ಇದು ಕೇವಲ ಒಂದು ಯೋಜನೆಯಲ್ಲ, ಬದಲಾಗಿ ಯುವ ಕರ್ನಾಟಕ ನಿರ್ಮಾಣದ ಕಡೆಗೆ ಇಟ್ಟಿರುವ ಬಲವಾದ ಹೆಜ್ಜೆ ಎಂದರು. ಶಾಲಾ ಮಟ್ಟದಿಂದ ಸ್ನಾತಕೋತ್ತರ ಪದವಿಯವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಈ ಉಚಿತ ಬಸ್ ಪಾಸ್ ಸೌಲಭ್ಯ ಲಭ್ಯವಿರುತ್ತದೆ. ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅಥವಾ ಆಯಾ ಜಿಲ್ಲಾ ಕೇಂದ್ರಗಳಲ್ಲಿ ನಿಗದಿತ ಪ್ರಕ್ರಿಯೆಯಡಿ ಅರ್ಜಿ ಸಲ್ಲಿಸಬಹುದಾಗಿದೆ. ಈಗಾಗಲೇ ಶುಲ್ಕ ಪಾವತಿಸಿ ಪಾಸ್ ಪಡೆದ ವಿದ್ಯಾರ್ಥಿಗಳಿಗೆ ಹಣ ಮರುಪಾವತಿ ಮಾಡಲಾಗುವುದು ಎಂದರು. ವೀರೇಶ್ ಕಡಕೋಳಮಠ, ಸಂಗಮೇಶ್ ಗೌರಕ್ಕನವರ, ಸಾದಿಕ್ ಯಕ್ಕುಂಡಿ, ಷರೀಫ್ ಗರ್ಗದ ಬಾಳಮ್ಮ ಜಂಗನವರ್, ಸಂತೋಷ್ ನಾಯಕ್, ಸೈಫ್ ಯರ್ಗಟ್ಟಿ, ಉಮೇಶ್ ಕೊಟ್ಟರೆಣ್ಣವರ್, ಕಲಾವತಿ ದತ್ತವಾಡ, ಮದಾರ್ ಮಕಂದಾರ ಇದ್ದರು.





ಹುಬ್ಬಳ್ಳಿ: ನಗರದ ಕೆಎಲ್‌ಇ ಸಂಸ್ಥೆಯ ಬಿಸಿಎ ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ, ರೋಟರ್‍ಯಾಕ್ಟ್ ಕ್ಲಬ್ ಹುಬಳ್ಳಿ, ಪೂರ್ವ ಜಿಲ್ಲೆ 3170 ರೋಟರಿ ಕ್ಲಬ್ ಏರ್ಪಡಿಸಿದ್ದ ಪರಿಸರ ದಿನಾಚರಣೆ ಅಂಗವಾಗಿ ಸಸಿಗೆ ನೆಡುವ ಮೂಲಕ ಆಚರಿಸಿದರು.

ಜೂ.18ರಿಂದ ಶ್ರೀ ರಾಧಾ ಗೋವಿಂದ ಪ್ರತಿಷ್ಠಾಪನೆ

ಹುಬ್ಬಳ್ಳಿ: ರಾಯಾಪುರದ ನೂತನ ಇಸ್ಕಾನ್ ಮಂದಿರದಲ್ಲಿ ಜೂ.18 ರಿಂದ 22ರ ವರೆಗೆ ಶ್ರೀ ರಾಧಾ ಗೋವಿಂದ ದೇವರ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ ಎಂದು ಹು-ಧಾ ಇಸ್ಕಾನ್ ಅಧ್ಯಕ್ಷ ರಾಜೀವಲೋಚನ ದಾಸ್ ಹೇಳಿದರು.



ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿ ಮಾತನಾಡಿದ ಅವರು, ಒಟ್ಟು ಮೂರು ಹಂತದಲ್ಲಿ ಪ್ರತಿಷ್ಠಾಪನೆ ನಡೆಯಲಿದೆ. ಮೊದಲ ದಿನ ಆಧಾರ ಪೀಠ ಸ್ಥಾಪನೆ, ಪ್ರಾಣ ಪ್ರತಿಷ್ಠಾಪನೆ ನಡೆದ ನಂತರ 45 ದಿನಗಳ ಮಂಡಲ ಪೂಜೆ ನೆರವೇರಲಿದೆ. ಪ್ರಾಣ ಪ್ರತಿಷ್ಠಾಪನೆಯ ನಂತರ 108 ಖಾದ್ಯಗಳನ್ನು ದೇವರಿಗೆ ಅರ್ಪಣೆ ಮಾಡಲಾಗುವುದು. ಪ್ರಾಣ ಪ್ರತಿಷ್ಠಾಪನೆಯ 5 ದಿನ ಮಾತ್ರ ಭಕ್ತರ ದರ್ಶನಕ್ಕೆ ಅವಕಾಶ ಇರಲಿದ್ದು, ಅಲ್ಲಿಂದ ಮಂಡಲಪೂಜೆ ಮುಗಿದ ನಂತರ ಆಗಸ್ಟ್ 10 ರಿಂದ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು. ಐದು ಅಂತಸ್ತಿನ ನೂತನ ಕಟ್ಟಡದಲ್ಲಿ ಮೊದಲ ಮಹಡಿಯಲ್ಲಿ ಶ್ರೀ ರಾಧಾ ಗೋವಿಂದ ದೇವ ಜೀ ದೇವಸ್ಥಾನ, ಎರಡನೇ ಮಹಡಿಯಲ್ಲಿ ಕೃಷ್ಣ ಬಲರಾಮರ ದೇವಸ್ಥಾನ ಇರಲಿದ್ದು, 4 ಅಡಿಯ ವಿಗ್ರಹಗಳು ಮಾರ್ಬಲ್ ಕಲ್ಲಿನಿಂದ ಜಯಪುರದಲ್ಲಿ ತಯಾರಾಗಿವೆ ಎಂದರು.

ರಘೋತ್ತಮ ದಾಸ್ ಜೀ ಮಾತನಾಡಿ, ಬೆಂಗಳೂರಿನ ಇಸ್ಕಾನ್ ಸಂಸ್ಥೆ ಹಾಗೂ ಅಕ್ಷಯ ಪಾತ್ರೆಯ ಚೇರ್ಮನ್ ಮಧುಪಂಡಿತ್ ದಾಸ್ ಆಗಮಿಸಲಿದ್ದಾರೆ. ಒಟ್ಟು 14 ಜನ ವೈದಿಕರು ಈ ಐದು ದಿನದ ಪ್ರಾಣ ಪ್ರತಿಷ್ಠಾಪನೆ ಮಾಡಲಿದ್ದಾರೆ. ಇಸ್ಕಾನ್ ಭಕ್ತರಿಂದ 45 ದಿನಗಳ ಕಾಲ ಮಂಡಲ ಪೂಜೆ ನಡೆಸಿಕೊಡಲಿದ್ದಾರೆ. ಮುಂದಿನ ಮೂರು ವರ್ಷದೊಳಗೆ ಎಲ್ಲ ಮೂರು ಹಂತದ ದೇವಸ್ಥಾನ ಪೂರ್ಣಗೊಳ್ಳಲಿದೆ ಎಂದರು.

ವಿದ್ಯಾರ್ಥಿಗಳಿಗೆ ಕಾರ್ಯಾಗಾರ ಇಂದು

ಧಾರವಾಡ: ಫ್ರಾಮ್ ಕ್ಲಾಸ್ ರೂಮ್ ಟು ಕೋರ್ಟ ರೂಮ್ ವಿಷಯದ ಕುರಿತು ಕಾನೂನು ವಿದ್ಯಾರ್ಥಿಗಳಿಗೆ 4ನೇ ವಲಯ ಕಾರ್ಯಾಗಾರ ಜೂ.14ರ ಬೆಳಗ್ಗೆ 10ಕ್ಕೆ ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸೇವೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎನ್.ವಿ.ವಿಜಯ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಹುಬ್ಬಳ್ಳಿ ಕಾನೂನು ವಿವಿ ಮತ್ತು ಧಾರವಾಡ ಕೃಷಿ ವಿವಿಯ ಸಹಯೋಗದಲ್ಲಿ ಜರುಗಲಿದೆ ಎಂದರು.

ರಾಜ್ಯ ಹೈಕೋರ್ಟ್ ನ್ಯಾಯಾಧೀಶೆ ಅನು ಶಿವರಾಮ್ ಉದ್ಘಾಟಿಸಲಿದ್ದು, ನ್ಯಾಯಾಧೀಶರಾದ ಎಸ್.ಸುನೀಲದತ್ತ ಯಾದವ ಹಾಗೂ ಎಚ್.ಪಿ.ಸಂದೇಶ ಪಾಲ್ಗೊಳ್ಳಲಿದ್ದು, ಕೃವಿವಿ ಕುಲಪತಿ ಡಾ.ಪಿ.ಯು. ಕೃಷ್ಣರಾಜ ಅಧ್ಯಕ್ಷತೆ ವಹಿಸುವರು ಎಂದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ್ ಶೆಟ್ಟಿ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ.ಬಸವರಾಜು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಾನೂನು ಸೇವಾ ಪ್ರಾಧಿಕಾರ ಕಾಯ್ದೆ 1987, ಅದರ ಉದ್ದೇಶಗಳು, ಕಾನೂನು ಕಾಲೇಜುಗಳಲ್ಲಿ ಕಾನೂನು ಸೇವೆಗಳ ಚಿಕಿತ್ಸಾಲಯ, ಕಾನೂನು ಸೇವಾ ಶಿಬಿರ, ಜನಸಂಪರ್ಕ, ಕಾನೂನು ಶಿಕ್ಷಣ ಸಂಸ್ಥೆಗಳ ವಿಷಯದ ಗೋಷ್ಠಿ ನಡೆಯುವುದಾಗಿ ತಿಳಿಸಿದರು.

ಕಾನೂನು ಸೇವಾ ಪ್ರಾಧಿಕಾರದ ಜಿಲ್ಲಾ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ನಾಗರಾಜಪ್ಪ ಇದ್ದರು.



ಎನ್.ಎಚ್. ಕೋನರಡ್ಡಿಗೆ ಸಚಿವ ಸ್ಥಾನ ನೀಡಿ



ನವಲಗುಂದ: ಶಾಸಕ ಎನ್. ಎಚ್. ಕೋನರಡ್ಡಿ ಅವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡಬೇಕೆಂದು ಕೆಪಿಸಿಸಿ ಅಧ್ಯಕ್ಷ ಬಿ. ಕೆ. ಹರಿಪ್ರಸಾದ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಶಿವಕುಮಾರ ಅವರಿಗೆ ಕೋನರಡ್ಡಿ ಅಭಿಮಾನಿ ಬಳಗದವರು ಆಗ್ರಹಿಸಿದರು.

ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಆನಂದ ಹವಳಕೋಡ ಮಾತನಾಡಿ, ರೈತಪರ ಹೋರಾಟ, ಕೃಷಿಕರ ಬದುಕಿನ ಪರ ಚಿಂತನೆಯಲ್ಲಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡ ಶಾಸಕ ಎನ್.ಎಚ್. ಕೋನರಡ್ಡಿ ಅವರನ್ನು ಮುಂಬರುವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಕೃಷಿ ಸಚಿವ ಸ್ಥಾನ ನೀಡಬೇಕು ಎಂದರು.

ಎನ್. ಎಚ್. ಕೋನರಡ್ಡಿ ಅಭಿಮಾನಿಗಳ ಬಳಗದ ಅಧ್ಯಕ್ಷ ಪ್ರಭಾಕರ ಮೊಹಿತೆ ಮಾತನಾಡಿ, ಕೋನರಡ್ಡಿ ಚಕ್ಕಡಿ ರಸ್ತೆ ಸುಧಾರಣೆ ಮಾಡಿ ರಾಜ್ಯದ ಗಮನ ಸೆಳೆದಿದ್ದು ಅವರ ಕಾರ್ಯಕ್ಷಮತೆಗೆ ಪಕ್ಷಾತೀತವಾಗಿ ನಾನು ಬೆಂಬಲಿಸುತ್ತೇನೆ. ಅವರು ಸಚಿವರಾದರೆ ನವಲಗುಂದ ಮತಕ್ಷೇತ್ರ ಮಾದರಿಯಾಗಿದೆ ಎಂದರು.

ಉಸ್ಮಾನ್ ಬಬರ್ಚಿ, ಜೀವನ ಪವಾರ, ಡಿ.ಕೆ. ಹಳ್ಳದ, ಮೋದಿನ ಶಿರೂರು, ಪ್ರಕಾಶ ಶಿಗ್ಲಿ, ಶಿವಾನಂದ ಗುಡಸಲಮನಿ, ರಾಜಣ್ಣ ಹಳ್ಯಾಳ, ಶಿವಾಜಿ ಕಲಾಲ್, ಶೈಫುದ್ದೀನ್ ಅವರಾದಿ, ಯಲ್ಲಪ್ಪ ಭೋವಿ, ಕುಮಾರ ಲಕ್ಕಮ್ಮನವರ, ಎಂ.ಬಿ.ತೋಟಿ, ಹಟೇಲಸಾಬ್ ರಾಮದುರ್ಗ, ರಾಜು ದೊಡಮನಿ, ಮದರಸಾಬ್ ಉಗರಗೋಳ, ಸಂತೋಷ ಪಾಟೀಲ, ಬಸಣ್ಣ ಈಟಿ, ಚೆನ್ನಪ್ಪ ನಾಗರಳ್ಳಿ, ಶಂಭು ಕರಲಿಂಗಣ್ಣವರ ಇತರರಿದ್ದರು.

ಭಾರತೀಯ ಕೃಷಿಕ ಸಮಾಜದ ಪದಗ್ರಹಣ ಇಂದು

ಕಲಘಟಗಿ: ಪಟ್ಟಣದ ಹನ್ನೆರಡು ಮಠದಲ್ಲಿ ಜೂನ್ 14 ರಂದು ಬೆಳಗ್ಗೆ 10.30 ಕ್ಕೆ ಭಾರತೀಯ ಕೃಷಿಕ ಸಮಾಜ ನವದೆಹಲಿ ವತಿಯಿಂದ ತಾಲೂಕು ಘಟಕದ ಪದಗ್ರಹಣ, ರೈತ ಮುಖಂಡರಿಗೆ, ನಿವೃತ್ತ ಸೈನಿಕರಿಗೆ, ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿನಾಯಕ ಮ್ಯಾಗೇರಿ ತಿಳಿಸಿದರು.

ಅವರು ಪಟ್ಟಣದ ಹನ್ನೆರಡು ಮಠದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪದಗ್ರಹಣ ಸಮಾರಂಭದಲ್ಲಿ ಸಾನ್ನಿಧ್ಯವನ್ನು ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ಉದ್ಘಾಟನೆಯನ್ನು ರಾಜ್ಯಾಧ್ಯಕ್ಷ ಮಾಂತೇಶ ಕಮತ, ಉಪಾಧ್ಯಕ್ಷ ವಿ.ಎಸ್. ಕಂಟೆಪ್ಪಗೌಡ್ರ ಮಾಡಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಿನಾಯಕ ಮ್ಯಾಗೇರಿ, ಚೆನ್ನಬಸಪ್ಪ ಚಿಮಣಿ, ಜಂಬು ಮಾಳಗಿ, ಶಂಕರಗೌಡ ಪಾಟೀಲ, ಆಕಾಶ ಹುಲಿಕಟ್ಟಿ, ಭೀಮರಾಜ ಲಮಾಣಿ, ಕಲ್ಲಪ್ಪ ಮಾಚಾಪುರ, ಕರವೇ ಅಧ್ಯಕ್ಷ ಶಂಕರಗೌಡ ಬಾವಿಕಟ್ಟಿ, ಮಾಧ್ಯಮ ಪ್ರತಿನಿಧಿ ರಮೇಶ ಸೋಲಾರಗೊಪ್ಪ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಕಾಲೇಜಿನ ವಿದ್ಯಾರ್ಥಿಗಳು ಐಐಟಿಗೆ ಆಯ್ಕೆ

ಕೊಟ್ಟೂರು: 2026ರ ಮೇ ತಿಂಗಳಿನಲ್ಲಿ ನಡೆದ ಜೆ.ಇ.ಇ. ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಕೊಟ್ಟೂರಿನ ಪ್ರತಿಷ್ಠಿತ ಇಂದು ಕಾಲೇಜಿನ ವಿಜ್ಞಾನ ವಿಭಾಗದ ಇಬ್ಬರು ವಿದ್ಯಾರ್ಥಿಗಳಾದ ಸೋವೆನಹಳ್ಳಿ ತಾಂಡದ ಜಯವರ್ಧನ ಹಾಗೂ ಬದಿಯನಾಯನಕನ ತಾಂಡದ ದಿಗ್ವಿಜಯ್ ಉತ್ತಮ ಸಾಧನೆ ಮಾಡಿದ್ದಾರೆ.





ಜಯವರ್ಧನ ಧಾರವಾಡದ ಪ್ರತಿಷ್ಠಿತ ಐ.ಐ.ಐ.ಟಿ. ಸಂಸ್ಥೆಯಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಕಂಪ್ಯೂಟಿಂಗ್ ಹಾಗೂ ದಿಗ್ವಿಜಯ್ ರಾಜಸ್ಥಾನದ ಜೋಧಪುರ್ ಪ್ರತಿಷ್ಠಿತ ಐ.ಐ.ಟಿ.ಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಕೋರ್ಸ್‌ಗೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಇಂದು ಕಲಾ ಹಾಗೂ ವಾಣಿಜ್ಯ ವಿಭಾಗದ ಜೊತೆಗೆ ವಿಜ್ಞಾನ ವಿಭಾಗದಲ್ಲೂ ಇಂದು ಕಾಲೇಜು ತನ್ನ ಛಾಪು ಮೂಡಿಸಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಇಂದು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಮೀನುಗಾರ ಸಾವು

ಅಂಕೋಲಾ: ಸಾಂಪ್ರದಾಯಿಕ ಮೀನುಗಾರಿಕೆಗೆ ತೆರಳಿದ್ದ ಮೀನುಗಾರ ಸಮುದ್ರದಲ್ಲಿ ದೋಣಿ ಮುಳುಗಿ ಮೃತಪಟ್ಟ ಘಟನೆ ತಾಲೂಕಿನ ಹಾರವಾಡದ ಗಾಬಿತವಾಡದಲ್ಲಿ ನಡೆದಿದೆ. ಗಾಬಿತವಾಡದ ನಿವಾಸಿ ಸಹದೇವ ಮಿಥಾ(50) ಮೃತ ವ್ಯಕ್ತಿಯಾಗಿದ್ದು, ಪ್ರತಿದಿನದಂತೆ ಜೀವನೋಪಾಯಕ್ಕೆ ಸಮೀಪದ ಸಮುದ್ರ ಪ್ರದೇಶದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಗೆ ತೆರಳಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ದೋಣಿ ಮುಳುಗಿದ್ದು, ದೋಣಿಯಲ್ಲಿದ್ದ ಸಹದೇವ ಅವರು ಸಮುದ್ರಕ್ಕೆ ಬಿದ್ದು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ನೀರಿನಲ್ಲಿ ಮುಳುಗಿದ ಅವರನ್ನು ಇತರ ಮೀನುಗಾರರು ದಡಕ್ಕೆ ಎಳೆದು ತಂದರಾದರೂ ಅದಾಗಲೇ ಅವರು ಮೃತಪಟ್ಟಿದ್ದರು ಎಂದು ತಿಳಿದು ಬಂದಿದೆ. ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.

ಶಾಂತಿ ಧರ್ಮಭೂಷಣ ಮಹಾರಾಜರು ಸಮಾಧಿ ಮರಣ



ರಬಕವಿ-ಬನಹಟ್ಟಿ: ತಾಲೂಕಿನ ಹಳಿಂಗಳಿ ಭದ್ರಗಿರಿ ಬೆಟ್ಟದಲ್ಲಿ ಜೈನ ಮುನಿಗಳಾದ 105 ಶಾಂತಿಧರ್ಮ ಭೂಷಣ ಮಹಾರಾಜರು ಸಲ್ಲೇಖನ ಸ್ವೀಕರಿಸಿ ಶನಿವಾರ ಬೆಳಗಿನ ಜಾವ ಸಮಾಧಿ ಮರಣ ಹೊಂದಿದರು. ಕಳೆದ ತಿಂಗಳ ಇವರು ಭದ್ರಗಿರಿ ಬೆಟ್ಟದ 108 ಆಚಾರ್ಯ ಶ್ರೀ ಕುಲರತ್ನಭೂಷಣ ಮಹಾರಾಜರಿಂದ ಜೀವದ ಅಂತಿಮ ಘಟ್ಟ ಸಮೀಪಿಸುತ್ತಿದ್ದಂತೆ ಶುಕ್ರವಾರ ನಿಯಮ ಸಲ್ಲೇಖನ ಸ್ವೀಕರಿಸಿದ್ದರು. ಆಚಾರ್ಯಶ್ರೀ ಕುಲರತ್ನಭೂಷಣ ಮಹಾರಾಜರ ಆಶೀರ್ವಾದದೊಂದಿಗೆ, ಅವರ ಜೀವನದ ಅಂತಿಮ ಕ್ಷಣಗಳನ್ನು ಧರ್ಮಮಯವಾಗಿ ಕಳೆಯುವ ಪವಿತ್ರ ಮಾರ್ಗವೇ ಸಲ್ಲೇಖನ ವ್ರತವಾದದ್ದು, ಹಂತ ಹಂತವಾಗಿ ಆಹಾರ ಮತ್ತು ನೀರನ್ನು ಕಡಿಮೆಗೊಳಿಸುತ್ತಾ, ಅಂತಿಮವಾಗಿ ಸಂಪೂರ್ಣವಾಗಿ ಆಹಾರವನ್ನು ಶಾಂತಿ ಧರ್ಮ ಭೂಷಣರು ತ್ಯಜಿಸಿದ್ದರು. ಇದರಿಂದಲೇ ದಿನೇ ದಿನೆ ಅವರ ಆರೋಗ್ಯದಲ್ಲಿ ಕ್ಷೀಣಿಸುತ್ತಾ ಹೋಗಿ ಕೊನೆಗೆ ಶನಿವಾರ ಬೆಳಗಿನ 5-26ಕ್ಕೆ ಅಂತಿಮ ಘಟ್ಟ ತಲುಪಿದರು ಎಂದು ಅವರು ತಿಳಿಸಿದರು. ಶನಿವಾರ ಜೈನ ಧರ್ಮದ ವಿಧಿ ವಿಧಾನಗಳ ಪ್ರಕಾರ ಬದ್ರಗಿರಿ ಬೆಟ್ಟದಲ್ಲಿಯೇ ಅಗ್ನಿಸ್ಪರ್ಶ ಮಾಡಲಾಯಿತು. ಮಹಾರಾಷ್ಟ್ರ ಗೋವಾ ಹಾಗೂ ಕರ್ನಾಟಕದ ಮೂಲೆ ಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಶ್ರಾವಕ ಸ್ರಾವತಿಯರು ಆಗಮಿಸಿ ಅಂತಿಮ ದರ್ಶನ ಪಡೆದರು.

ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ: ಸಿದ್ದು ತೇಜಿ

ಹುಬ್ಬಳ್ಳಿ: ರಾಷ್ಟ್ರೀಯ ಈಡಿಗ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಕುರುಬ ಸಮಾಜದ ವಿರುದ್ಧ ನಿಂದನೆಯ ಶಬ್ದಗಳ ಬಳಸಿರುವುದು ಖಂಡನೀಯ. ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಅವರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಹಿಂದ ಕರ್ನಾಟಕ ರಾಜ್ಯ ಒಕ್ಕೂಟ ರಾಜ್ಯಾಧ್ಯಕ್ಷ ಹಾಗೂ ಕುರುಬ ಸಮಾಜ ಮುಖಂಡ ಸಿದ್ದು ತೇಜಿ ಆಗ್ರಹಿಸಿದರು. ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರಿಗೆ ನಿಂದಿಸಿರುವುದಕ್ಕೆ ಅವರು ಉತ್ತರ ನೀಡಲಿದ್ದಾರೆ. ಆದರೆ ಕುರುಬ ಸಮಾಜಕ್ಕೆ ಹೆಚ್ಚು ಅನುದಾನ ನೀಡಿದ್ದಾರೆ ಎಂದು ಹೇಳಿರುವುದು ಬೇಸರ ಸಂಗತಿ ಎಂದು ಕಿಡಿಕಾರಿದರು. ಕುರುಬ ಸಮಾಜದ ಮುಖಂಡರಾದ ಉಳವಪ್ಪ ದಾಯಗೋಡಿ, ಎಚ್. ಎಫ್. ಇಬ್ರಾಹಿಂಪುರ, ಸುಜಾತ ಸನದಿ, ರೇಣುಕಾ ಹೊಂಗಲ, ಸಂತೋಷ ಡೊಳ್ಳಿಣ್ಣ ಇದ್ದರು.

ಪ್ರಣವಾನಂದ ಸ್ವಾಮೀಜಿ ವಿರುದ್ಧ

ವಿಶ್ವಾಸ, ಜನಕಲ್ಯಾಣ, ಅಭಿವೃದ್ಧಿಯ ಪಯಣ: ಸದಾನಂದಗೌಡ

ಮೋದಿ ಸರ್ಕಾರದ 12 ವರ್ಷ ಸಾರ್ಥಕ ಆಡಳಿತ

ಕಲಬುರಗಿ: ಕಳೆದ 12 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪಾರದರ್ಶಕ ಆಡಳಿತ, ಜನಕಲ್ಯಾಣ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಯೋಜನೆಗಳ ಮೂಲಕ ದೇಶದ ಜನರ ವಿಶ್ವಾಸ ಗಳಿಸಿದ್ದು, ಕರ್ನಾಟಕವೂ ಇದರ ಪ್ರಮುಖ ಫಲಾನುಭವಿ ರಾಜ್ಯವಾಗಿ ಹೊರಹೊಮ್ಮಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.



ನಗರದ ಐವನ್ ಇ ಶಾಹಿ ಅತಿಥಿ ಗೃಹದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2014ರಿಂದ 2024ರವರೆಗೆ ನಡೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ಕರ್ನಾಟಕದ ಜನತೆ ಪ್ರಧಾನಿ ಮೋದಿ ಅವರ ನಾಯಕತ್ವಕ್ಕೆ ನಿರಂತರ ಬೆಂಬಲ ವ್ಯಕ್ತಪಡಿಸಿದ್ದಾರೆ. 2014ರಲ್ಲಿ 17 ಲೋಕಸಭಾ ಸ್ಥಾನಗಳು, 2019ರಲ್ಲಿ ಐತಿಹಾಸಿಕ 25 ಸ್ಥಾನಗಳು ಹಾಗೂ 2024ರಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ 19 ಸ್ಥಾನಗಳನ್ನು ನೀಡುವ ಮೂಲಕ ಜನರು ಮೋದಿ ಅವರ ಆಡಳಿತದ ಮೇಲಿನ ವಿಶ್ವಾಸ ಪುನರುಚ್ಚರಿಸಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಯೋಜನೆಗಳಿಂದ ಕರ್ನಾಟಕದಲ್ಲಿ 2.12 ಕೋಟಿಗೂ ಅಧಿಕ ಜನರು ಜನಧನ್ ಖಾತೆಗಳನ್ನು ಹೊಂದಿದ್ದು, ಬ್ಯಾಂಕಿಂಗ್ ಸೇವೆಗಳ ವ್ಯಾಪ್ತಿಗೆ ಬಂದಿದ್ದಾರೆ. ಪಿಎಂ ಜೀವನ್ ಜ್ಯೋತಿ ಬಿಮಾ ಹಾಗೂ ಪಿಎಂ ಸುರಕ್ಷಾ ಬಿಮಾ ಯೋಜನೆಗಳಡಿ 4.27 ಕೋಟಿಗೂ ಅಧಿಕ ಜನರಿಗೆ ಸಾಮಾಜಿಕ ಸುರಕ್ಷತೆ ಒದಗಿಸಲಾಗಿದೆ. ಅಲ್ಲದೆ 3.39 ಲಕ್ಷ ಕೋಟಿ ಮುದ್ರಾ ಸಾಲ ವಿತರಣೆ ಮೂಲಕ ಯುವಕರು, ಸಣ್ಣ ಉದ್ಯಮಿಗಳಿಗೆ ಸ್ವಾವಲಂಬನೆಯ ದಾರಿ ಕಲ್ಪಿಸಿದೆ ಎಂದರು.

ರೈತರ ಕಲ್ಯಾಣಕ್ಕಾಗಿ ಪಿಎಂ ಕಿಸಾನ್ ಯೋಜನೆಯಡಿ ರಾಜ್ಯದ 43.2 ಲಕ್ಷಕ್ಕೂ ಅಧಿಕ ರೈತರು ನೇರ ನಗದು ನೆರವು ಪಡೆಯುತ್ತಿದ್ದಾರೆ. ಜಲ ಜೀವನ್ ಮಿಷನ್ ಮೂಲಕ 87.7 ಲಕ್ಷ ಗ್ರಾಮೀಣ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಸಂಪರ್ಕ,ಡಿಬಿಟಿ ವ್ಯವಸ್ಥೆಯಿಂದ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ ಪಾರದರ್ಶಕ ಆಡಳಿತ ಜಾರಿಗೊಳಿಸಲಾಗಿದೆ. 1.67 ಕೋಟಿ ಜನರಿಗೆ ಪಿಎಂ ಜೀವನ್ ಜ್ಯೋತಿ ಬಿಮಾ ಯೋಜನೆ, 2.60 ಕೋಟಿ ಜನರಿಗೆ ಪಿಎಂ ಸುರಕ್ಷಾ ಬಿಮಾ ಯೋಜನೆ, 48.9 ಲಕ್ಷ ಜನರಿಗೆ ಅಟಲ್ ಪೆನ್ಷನ್ ಯೋಜನೆ ಹಾಗೂ 6.14 ಲಕ್ಷ ಬೀದಿಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆಯಡಿ ನೆರವು ನೀಡಲಾಗಿದೆ ಎಂದರು.

> **ನಾನು ಯಾವುದೇ ಲಾಭ ಇಲ್ಲಿಯವರೆಗೆ ಮಾಡಿಲ್ಲ, ಪಕ್ಷ ನನಗೆ ಎಲ್ಲವೂ ನೀಡಿದೆ. ಕಲ್ಯಾಣ ಕರ್ನಾಟಕದಲ್ಲಿ ಪಕ್ಷಕ್ಕೆ ಒಂದಿಷ್ಟು ಹಿನ್ನಡೆಯಾಗಿದೆ. ಹಿನ್ನಡೆಯಾದಲ್ಲಿ ಮತ್ತಷ್ಟು ವಿಶ್ವಾಸ ಸಂಪಾದಿಸುವ ಮೂಲಕ ಮುಂದಿನ ದಿನಗಳಲ್ಲಿ ಭಾರೀ ಜನಾಶೀರ್ವಾದ ಪಡೆದು ರಾಜ್ಯದಲ್ಲಿ ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ.**
> ■ ಡಿ.ವಿ.ಸದಾನಂದಗೌಡ, ಮಾಜಿ ಸಿಎಂ

ಮೂಲಸೌಕರ್ಯ ಅಭಿವೃದ್ಧಿ, ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ಕೈಗಾರಿಕಾ ಹೂಡಿಕೆ, ಡಿಜಿಟಲ್ ಆಡಳಿತ ಹಾಗೂ ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಸಬಕಾ ಸಾಥ್, ಸಬಕಾ ವಿಕಾಸ್, ಸಬಕಾ ವಿಶ್ವಾಸ್ ತತ್ವದಡಿ ಮೋದಿ ಸರ್ಕಾರ ಅಭಿವೃದ್ಧಿ ಮತ್ತು ಜನಕಲ್ಯಾಣವನ್ನು ಸಮಾನವಾಗಿ ಮುನ್ನಡೆಸಿದೆ ಎಂದು ಸದಾನಂದಗೌಡ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ,ಮಾಜಿ ಎಂಪಿ ಡಾ ಉಮೇಶ್ ಜಾಧವ್, ಎಂಎಲ್ಸಿ ಶಶೀಲ್ ನಮೋಶಿ,ಬಿಜಿ ಪಾಟೀಲ್ ಹಲವು ಮುಖಂಡರು ಉಪಸ್ಥಿತರಿದ್ದರು.

ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲು

ಹೊರಟ್ಟಿಯಲ್ಲಿ 40 ವಿದ್ಯಾರ್ಥಿಗಳಲ್ಲಿ ಜ್ವರ

ಯಾದಗಿರಿ: ತಾಲೂಕಿನ ಹೊರಟ್ಟಿ ಗ್ರಾಮದ ಶಾಲೆಯಲ್ಲಿ 40 ಮಕ್ಕಳಲ್ಲಿ ಜ್ವರದ ಲಕ್ಷಣಗಳು ಕಾಣಿಸಿಕೊಂಡ ಘಟನೆ ಶನಿವಾರ ನಡೆದಿದೆ.

ಗ್ರಾಮದ ಶಾಲೆಯಲ್ಲಿ ಶುಕ್ರವಾರ ಮಧ್ಯಾಹ್ನವೇ ಕೆಲ ವಿದ್ಯಾರ್ಥಿಗಳಲ್ಲಿ ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದು ಪರಿಸ್ಥಿತಿಯನ್ನು ಗಮನಿಸಿದ ಮುಖ್ಯಗುರು ಮಲ್ಲಿಕಾರ್ಜುನ ಅವರು ಮುಂಜಾಗ್ರತಾ ಕ್ರಮವಾಗಿ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಿದ್ದರು.

ಬಳಿಕ ಶನಿವಾರ ಹಲವಾರು ಮಕ್ಕಳಲ್ಲಿ ಜ್ವರ ತೀವ್ರಗೊಂಡ ಹಿನ್ನೆಲೆಯಲ್ಲಿ ಅವರನ್ನು ಕೊಡೇಕಲ್ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಿಸಲಾಗಿದೆ.

20 ಮಕ್ಕಳಿಗೆ ಹೊರರೋಗಿ ವಿಭಾಗದಲ್ಲಿ (ಒಪಿಡಿ) ಚಿಕಿತ್ಸೆ ನೀಡಲಾಗುತ್ತಿದ್ದು, ನಾಲ್ವರು ಮಕ್ಕಳನ್ನು ಆಸ್ಪತ್ರೆಯ ಹಾಸಿಗೆಗಳಲ್ಲಿ ದಾಖಲಿಸಿ ಚಿಕಿತ್ಸೆ ಮುಂದುವರಿಸಲಾಗಿದೆ. ಉಳಿದ ಮಕ್ಕಳ ಮನೆಗೆ ಕಳುಹಿಸಿದ್ದು, ಆರೋಗ್ಯ ಸ್ಥಿತಿಯ ಮೇಲೂ ವೈದ್ಯರು ನಿಗಾ ವಹಿಸಿದ್ದಾರೆ. ಸುರಪುರ ತಾಲೂಕು ಆರೋಗ್ಯಾಧಿಕಾರಿ ಡಾ.ವೆಂಕಟಪ್ಪನಾಯಕ ಭೇಟಿ ನೀಡಿ, ಜ್ವರ ಕಾಣಿಸಿಕೊಂಡ 18 ಮಕ್ಕಳ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಜ್ವರದ ನಿಖರ ಕಾರಣ ತಿಳಿಯಲಿದೆ.

ಮಕ್ಕಳಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದ್ದು, ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ. ಘಟನೆಯ ಮಾಹಿತಿ ತಿಳಿದು ಕ್ಷೇತ್ರ ಶಿಕ್ಷಣಾಧಿಕಾರಿ ಲಿಂಗರಾಜ ಮೂಲಿಮನಿ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ವಿಚಾರಿಸಿದರು.

ಅಗತ್ಯ ಔಷಧ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಜ್ವರದ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಗ್ರಾಮಕ್ಕೆ ಭೇಟಿ ನೀಡಿ ಸ್ವಚ್ಛತೆ, ಕುಡಿಯುವ ನೀರಿನ ಗುಣಮಟ್ಟ ಹಾಗೂ ಸಾಂಕ್ರಾಮಿಕ ರೋಗಗಳ ಕುರಿತು ಪರಿಶೀಲನೆ ನಡೆಸಲು ತಿಳಿಸಲಾಗಿದೆ ಎಂದು ವೈದ್ಯರು ಹೇಳಿದ್ದಾರೆ.



ಬೆಳಗಾವಿ ಅಭಿವೃದ್ಧಿಗೆ ಸೌಹಾರ್ದತೆ ಅಗತ್ಯ

ಬೆಳಗಾವಿಯ ಮರಾಠಿಗರು ಪಾಕಿಸ್ತಾನದಲ್ಲಿಲ್ಲ: ಶೆಟ್ಟರ

ಬೆಳಗಾವಿ: ಮರಾಠಿ ಭಾಷಿಕರು ಪಾಕಿಸ್ತಾನದಲ್ಲಿಲ್ಲ, ಭಾರತದಲ್ಲೇ ಇದ್ದಾರೆ. ಬೆಳಗಾವಿಯಲ್ಲಿ ಕನ್ನಡ ಮತ್ತು ಮರಾಠಿ ಭಾಷಿಕರು ಪರಸ್ಪರ ಸೌಹಾರ್ದತೆಯಿಂದ ಬದುಕುತ್ತಿದ್ದು, ನಗರದ ಅಭಿವೃದ್ಧಿಯ ಹಿತದೃಷ್ಟಿಯಿಂದ ಎಲ್ಲರೂ ಒಗ್ಗಟ್ಟಿನಿಂದ ಚಿಂತನೆ ನಡೆಸಬೇಕಿದೆ ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.



ಶನಿವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಗಡಿ ವಿವಾದದ ಕುರಿತಾಗಿ ಮಹಾಜನ್ ವರದಿ ಅಂತಿಮ ಎಂಬ ಗೊತ್ತುವಳಿಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೆಳಗಾವಿಯಲ್ಲಿ ಕನ್ನಡ ಮತ್ತು ಮರಾಠಿ ಬಾಂಧವರು ಪರಸ್ಪರ ಅಣ್ಣ-ತಮ್ಮಂದಿರಂತೆ ಬದುಕುತ್ತಿದ್ದಾರೆ. ಈ ಸೌಹಾರ್ದತೆಯ ವಾತಾವರಣದಿಂದಲೇ ಬೆಳಗಾವಿಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಚಿಂತನೆ ಮಾಡಬೇಕಿದೆ. ಬೆಳಗಾವಿ ಕರ್ನಾಟಕದ್ದು ಎಂಬ ವಿಚಾರದಲ್ಲಿ ಯಾವುದೇ ಪ್ರಶ್ನೆಯೇ ಇಲ್ಲ. ರಾಜ್ಯ ಸರ್ಕಾರದ ವಿಧಾನಮಂಡಲ ಅಧಿವೇಶನವೇ ಬೆಳಗಾವಿಯಲ್ಲಿ ನಡೆಯುತ್ತದೆ ಎಂದು ಹೇಳಿದರು.

ಮರಾಠಿ ಭಾಷಿಕರು ಭಾರತ ದೇಶದ ಪ್ರಜೆಗಳಾಗಿದ್ದು, ಅವರನ್ನು ಬೇರ್ಪಡಿಸುವ ಮನೋಭಾವ ಸಲ್ಲದು. ಮರಾಠಿ ಭಾಷಿಕರು ಭಾರತದಲ್ಲಿಯೇ ಇದ್ದಾರೆ. ಪಾಕಿಸ್ತಾನದಲ್ಲಿಲ್ಲ. ಭಾಷೆಯ ಆಧಾರದ ಮೇಲೆ ಭಿನ್ನಾಭಿಪ್ರಾಯ ಬೆಳೆಸುವ ಬದಲು ಅಭಿವೃದ್ಧಿಯತ್ತ ಗಮನ ಹರಿಸಬೇಕು ಎಂದು ಅಭಿಪ್ರಾಯಪಟ್ಟರು.

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರ ಠರಾವು ಅಂಗೀಕಾರಕ್ಕೆ ಸಂಬಂಧಿಸಿದಂತೆ ಮಹಾಪೌರರೊಂದಿಗೆ ಚರ್ಚೆ ನಡೆಸಲಾಗುವುದು. ಬೆಳಗಾವಿ ಮಹಾನಗರಪಾಲಿಕೆಯನ್ನು ಸೂಪರ್‌ಸೀಡ್ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬೆಳಗಾವಿಯ ಸಮಗ್ರ ಅಭಿವೃದ್ಧಿ ಹಾಗೂ ಭಾಷಾ ಸೌಹಾರ್ದತೆಯೇ ನಗರದ ಪ್ರಗತಿಗೆ ಮುಖ್ಯ ಅಡಿಪಾಯವಾಗಿದ್ದು, ಎಲ್ಲ ಸಮುದಾಯದವರು ಸಹಕಾರದಿಂದ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಆಲದಹಳ್ಳಿ ಗ್ರಾಮದ 3.28 ಎಕರೆ ಸರ್ಕಾರಿ ಜಮೀನು ವಶ

ಬಳ್ಳಾರಿ: ತಾಲೂಕು ವ್ಯಾಪ್ತಿಯ ಆಲದಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಕೋಟ್ಯಂತರ ರೂ.ಮೌಲ್ಯದ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆ ಅಧಿಕಾರಿಗಳು ಶನಿವಾರ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಆಲದಹಳ್ಳಿ ಗ್ರಾಮದ ಸರ್ವೆ ನಂಬರ್ 38/ಎರಲ್ಲಿ ಬರುವ ಒಟ್ಟು 3.28 ಎಕರೆ ವಿಸ್ತೀರ್ಣದ ಜಮೀನು ಸರ್ಕಾರಿ ಈಚಲವನ ಜಮೀನಾಗಿದೆ. ಈ ಜಾಗವನ್ನು ಕೆಲವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದರು. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರ ಆದೇಶದನ್ವಯ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಮತ್ತು ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಬಳ್ಳಾರಿ ತಾಲೂಕು ತಹಶೀಲ್ದಾರ್ ಟಿ.ರೇಖಾ ಅವರ ನೇತೃತ್ವದ ತಂಡ ಸ್ಥಳಕ್ಕೆ ತೆರಳಿ ಜಮೀನನ್ನು ಸರ್ಕಾರದ ಸುಪರ್ದಿಗೆ ಪಡೆದಿದೆ.

ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಾಂಪೌಂಡ್ ಗೋಡೆಗಳು, ಬೇಲಿ ಹಾಗೂ ಇತರೆ ತಾತ್ಕಾಲಿಕ ರಚನೆಗಳನ್ನು ಜೆಸಿಬಿ ಯಂತ್ರಗಳ ಸಹಾಯದಿಂದ ಸಂಪೂರ್ಣವಾಗಿ ಧ್ವಂಸಗೊಳಿಸಲಾಗಿದೆ. ಅಲ್ಲದೆ, ಸಾರ್ವಜನಿಕರ ಮಾಹಿತಿಗಾಗಿ ಅಲ್ಲಿ ಜಾಗೃತಿಫಲಕವನ್ನು ಅಳವಡಿಸಲಾಗಿದೆ. ಸ್ಥಳದಲ್ಲಿದ್ದ ಅಧಿಕಾರಿಗಳು ಒತ್ತುವರಿ ತೆರವು ಪ್ರಕ್ರಿಯೆಯನ್ನು ಹತ್ತಿರದಿಂದ ಪರಿಶೀಲಿಸಿ, ಇಡೀ ಜಾಗವನ್ನು ಮತ್ತೆ ಸರ್ಕಾರದ ಸುಪರ್ದಿಗೆ ಪಡೆದುಕೊಂಡಿದ್ದಾರೆ.

ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಿದ್ದರು. ಸಾರ್ವಜನಿಕ ಆಸ್ತಿ ಮತ್ತು ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಈ ಸಂದರ್ಭದಲ್ಲಿ ಎಚ್ಚರಿಸಿದರು.



ಕೃಷ್ಣಾ ನದಿಯ ತೀರದಲ್ಲಿ ಏಕಾಏಕಿ ಭೂಕುಸಿತ



ಕುಡಚಿ: ರಾಯಬಾಗ ತಾಲೂಕಿನ ಪರಮಾನಂದವಾಡಿ ಹಾಗೂ ಶಿರಗೂರ ಗ್ರಾಮದ ಸಮೀಪ ಕೃಷ್ಣಾ ನದಿಯ ತೀರದಲ್ಲಿ ಶನಿವಾರ ಏಕಾಏಕಿ ಭೂಕುಸಿತ ಸಂಭವಿಸಿ ರೈತರಲ್ಲಿ ಆತಂಕ ಮೂಡಿಸಿದೆ.

ಕುಡಚಿ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ಈ ಘಟನೆ ಕೃಷ್ಣಾ ನದಿಯ ಒಡಲು ಕುಸಿತಕ್ಕೆ ಕಾರಣವಾಗಿದೆ. ಭೂಕುಸಿತದ ಪರಿಣಾಮ ನದಿ ತೀರದ ಕೃಷಿ ಜಮೀನುಗಳಿಗೆ ಅಳವಡಿಸಿದ್ದ ನೂರಾರು ಪಂಪ್‌ಸೆಟ್‌ಗಳು, ವಿದ್ಯುತ್ ಕೇಬಲ್‌ಗಳು ಹಾಗೂ ನೀರಿನ ಪೈಪ್‌ಗಳಿಗೆ ಭಾರೀ ಪ್ರಮಾಣದಲ್ಲಿ ಹಾನಿಯಾಗಿದೆ.

ಈ ಘಟನೆಯಿಂದ ಕೆಲವು ರೈತರು ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ತಮ್ಮ ಅಳಲನ್ನು ವ್ಯಕ್ತಪಡಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣನವರ ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದರು. ನಂತರ ರೈತರೊಂದಿಗೆ ಮಾತುಕತೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ವರದಿ ಸಲ್ಲಿಸುವಂತೆ ಸೂಚಿಸಿದರು.

ಭೂಕುಸಿತದಿಂದ ಉಂಟಾದ ನಷ್ಟವನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಹಾಗೂ ರೈತರಿಗೆ ಸೂಕ್ತ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಮಹೇಂದ್ರ ತಮ್ಮಣ್ಣನವರ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಡಾ.ಸಿದ್ದಾರೋಢ ಕೌಲಗುಡ್ಡ, ವರ್ಧಮಾನ ಶಿರಹಟ್ಟಿ ಸೇರಿದಂತೆ ಸ್ಥಳೀಯ ರೈತರು ಉಪಸ್ಥಿತರಿದ್ದರು.

ಮಾಹಿತಿ ನೀಡಲು ನಿರ್ಲಕ್ಷ್ಯ: ಅಧಿಕಾರಿಗಳಿಬ್ಬರಿಗೆ ದಂಡ

ಕಲಬುರಗಿ: ಸಕಾಲಕ್ಕೆ ಮಾಹಿತಿ ನೀಡದೆ ನಿರ್ಲಕ್ಷ್ಯ ವಹಿಸಿ ಆಯೋಗದ ಆದೇಶ ಪಾಲನೆ ಮಾಡದ ಸಮಾಜ ಕಲ್ಯಾಣ ಇಲಾಖೆಯ ಇಬ್ಬರು ಉಪ ನಿರ್ದೇಶಕರಿಗೆ ಮಾಹಿತಿ ಆಯೋಗ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟಸಿಂಗ್ ದಂಡ ವಿಧಿಸಿದ್ದಾರೆ.

ರಾಯಚೂರಿನ ರಂಗಲಿಂಗನಗೌಡ ಎನ್ನುವವರು ಮಾಹಿತಿ ಹಕ್ಕು ಅಧಿನಿಯಮದಡಿ ಕೇಳಿದ ಮಾಹಿತಿಯನ್ನು ಎರಡು ವರ್ಷವಾದರು ನೀಡದ ಕಾರಣ ಅವರು ಆಯೋಗಕ್ಕೆ ಸಲ್ಲಿಸಿದ ಮೇಲ್ಮನವಿ ವಿಚಾರಣೆ ನಡೆಸಿದ ಆಯೋಗ ರಾಯಚೂರಿನಲ್ಲಿ ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ವಿಜಯ ಲಕ್ಷ್ಮೀ ಅವರಿಗೆ 10 ಸಾವಿರ ಹಾಗೂ ರಾಯಚೂರಿನ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶಿವಪ್ಪ ಅವರಿಗೆ 5 ಸಾವಿರ ರೂ. ದಂಡ ವಿಧಿಸಿದೆ.

ಮೇಲ್ಮನವಿದಾರರು ಕೋರಿದ ಮಾಹಿತಿ ನೀಡುವಂತೆ ಆಯೋಗ ಮಾಡಿದ ಆದೇಶ ಪಾಲನೆ ಮಾಡದೆ ಹಾಗೂ ವಿಚಾರಣೆಗೂ ಹಾಜರಾಗದ ಕಾರಣ ಹಾಲಿ ಶಹಾಪುರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ವಿಜಯಲಕ್ಷ್ಮೀ ಅವರಿಗೆ ಈ ಹಿಂದೆ 5 ಸಾವಿರ ರೂ. ದಂಡ ವಿಧಿಸಿ ಸದ್ರಿ ದಂಡ ಪಾವತಿ ಮಾಡಿ ಮುಂದಿನ ವಿಚಾರಣೆಗೆ ಹಾಜರಾಗಿ ಮಾಹಿತಿ ನೀಡುವಂತೆ ಆಯೋಗ ಮಾಡಿದ ಆದೇಶ ಪಾಲನೆ ಮಾಡದೆ ನಿರ್ಲಕ್ಷ್ಯ ತೋರಿದ ಕಾರಣ ದಂಡದ ಪ್ರಮಾಣವನ್ನು 10 ಸಾವಿರಕ್ಕೆ ಹೆಚ್ಚಿಸಿ ಆಯೋಗ ಆದೇಶ ಮಾಡಿದೆ.

ಅದೇ ರೀತಿ ರಾಯಚೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶಿವಪ್ಪ ಅವರಿಗೆ ಮೇಲ್ಮನವಿದಾರರು ಕೋರಿದ ಮಾಹಿತಿ ನೀಡಿ, ಮುಂದಿನ ವಿಚಾರಣೆಗೆ ಹಾಜರಾಗುವಂತೆ ಈ ಹಿಂದೆ ಆಯೋಗ ಆದೇಶ ಮಾಡಿತ್ತು. ಆದರೆ ಆಯೋಗದ ಆದೇಶ ಪಾಲನೆ ಮಾಡದೆ ನಿರ್ಲಕ್ಷ್ಯ ತೋರಿದ ಕಾರಣ ಅವರಿಗೂ ಸಹ 5 ಸಾವಿರ ರೂ. ದಂಡ ವಿಧಿಸಲಾಗಿದೆ.

ಕನ್ನೇರಿ ಶ್ರೀಗಳಿಂದ ನ್ಯಾಯಾಂಗ ನಿಂದನೆ: ಹರನಾಳ

ವಿಜಯಪುರ: ಸುಪ್ರೀಂಕೋರ್ಟ್ ಛೀಮಾರಿ ಹಾಕಿದರೂ ಸಹ ಕನ್ನೇರಿ ಶ್ರೀಗಳು ಬಸವಾದಿ ಶರಣರನ್ನು ನಿಂದಿಸುವ, ವಚನಗಳ ಸಾರವನ್ನು ಅಪಾರ್ಥ ಮಾಡುವ ಹಾಗೂ ಬಸವಾದಿ ಅನುಯಾಯಿಗಳನ್ನು ಬಸವ ತಾಲಿಬಾನಿ ಎಂದು ಹೇಳುವ ಮೂಲಕ ನ್ಯಾಯಾಂಗ ನಿಂದನೆ ಮಾಡುತ್ತಿದ್ದಾರೆ ಎಂದು ಬಸವಾದಿ ಚಿಂತಕ ಬಸನಗೌಡ ಹರನಾಳ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮೀಜಿಯಾಗಿ ಬಸವಾದಿ ಚಿಂತಕರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವುದು ಸರಿಯಲ್ಲ, ಬಸವಾದಿ ಶರಣರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಬಗ್ಗೆ ಕೋರ್ಟ್ ಸಹ ಸ್ವಾಮೀಜಿಗಳಿಗೆ ಛೀಮಾರಿ ಹಾಕಿದೆ. ಆದರೂ ಸಹ ಶರಣರ ವಚನ ತಿರುಚುವುದು, ಬಸವಾದಿ ಶರಣರನ್ನು ಬೈಯುತ್ತಿದ್ದಾರೆ. ಬಸವ ತಾಲಿಬಾನಿ ಎಂದು ಹೇಳುವ ಮೂಲಕ ನ್ಯಾಯಾಂಗ ನಿಂದನೆ ಮಾಡುತ್ತಲೇ ಇದ್ದಾರೆ. ನಿಂದನೆ ಮಾಡುವುದು ಸಲ್ಲದ ಕೆಲಸ, ಮಾಡುತ್ತಿರುವ ಉದ್ದೇಶ ಸರಿಯಿಲ್ಲ, ಬಸವಾದಿ ಶರಣರ ಹಿಂದೂ ಸಮಾವೇಶ ಮಾಡುತ್ತಿರುವುದು ಬಸವಣ್ಣನಿಗೆ ವಿರೋಧಿ ನಡೆಯಾಗಿದೆ ಎಂದರು.

ವೈದ್ಯ ಡಾ.ರವಿಕುಮಾರ್ ಬಿರಾದಾರ ಮಾತನಾಡಿ, ಜೂ.28ರಂದು ಬಸವ ಕಲ್ಯಾಣದಲ್ಲಿ ಸಮಾವೇಶಕ್ಕೆ ಮುಂದಾಗಿದ್ದಾರೆ. ಹಿಂದೂ ಶಿವಶರಣರ ಸಮಾವೇಶ ಎಂದು ಕಲಬೆರಕೆ ಸಮಾವೇಶ ಮಾಡಬೇಡಿ. ಪ್ರತ್ಯೇಕ ಹಿಂದೂ ಸಮಾವೇಶ ಮಾಡಿ, ಇಲ್ಲವೇ ಶಿವಶರಣರ ಸಮಾವೇಶವನ್ನಾದರೂ ಮಾಡಿ ಎಂದರು. ಬಸವಣ್ಣನ ಚಿಂತನೆಯು ಜಾಗತಿಕವಾಗಿ ಬೆಳೆಯುತ್ತಿದೆ. ಇದನ್ನು ದುರ್ಬಳಕೆ ಮಾಡಿಕೊಳ್ಳಲು ಬಸವಣ್ಣನ ಹೆಸರು ಹೇಳುತ್ತಿದ್ದಾರೆ. ಇದಕ್ಕಾಗಿ ಶರಣರ ವಚನಗಳನ್ನು ತಿರುಚಿ ಹೇಳುವ ಕೆಲಸ ಮಾಡುತ್ತಿದ್ದಾರೆ. ಬಸವಣ್ಣ ಹಿಂದೂ ಧರ್ಮವನ್ನು ತಿರಸ್ಕರಿಸಿದರು. ಆಗಲೇ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು ಎಂದರು. ಮುಖಂಡರಾದ ಪ್ರಭುಗೌಡ ಬಿರಾದಾರ, ಚನ್ನು ಕಟ್ಟಿಮನಿ, ಅಡಿವೆಪ್ಪ ಸಾಲಗಲ್ಲ, ನಾಗರಾಜ ಲಂಬು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಶಾಲಾ ತರಗತಿ ಕೊಠಡಿಯಲ್ಲಿ ನಾಗರ ಹಾವು ಪ್ರತ್ಯಕ್ಷ

ಮುಂಡಗೋಡ: ತಾಲೂಕಿನ ಚಿಗಳ್ಳಿ ಪ್ರೌಢಶಾಲೆಯ ತರಗತಿಯ ಕೊಠಡಿಯಲ್ಲಿ ನಾಗರಹಾವೊಂದು ಬಂದು ಆತಂಕಗೊಳಿಸಿದ್ದ ಹಾವನ್ನು ಗಸ್ತುಪಾಲಕ ಮುತ್ತುರಾಜ ಹಳ್ಳಿ ಅವರು ನಾಗರಹಾವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯಕ್ಕೆ ಬಿಟ್ಟರು.

ಚಿಗಳ್ಳಿ ಪ್ರೌಢ ಶಾಲೆಯ ತರಗತಿ ಕೊಠಡಿಯಲ್ಲಿ ನಾಗರ ಹಾವು ಪ್ರತ್ಯಕ್ಷವಾಗಿ ಕೆಲ ಹೊತ್ತು ವಿದ್ಯಾರ್ಥಿಗಳನ್ನು ಆತಂಕಗೊಳಿಸಿತ್ತು. ನಾಗರ ಹಾವನ್ನು ನೋಡಿ ವಿದ್ಯಾರ್ಥಿಗಳು ತರಗತಿಯಿಂದ ಹೊರಗಡೆ ಬಂದಿದ್ದರು. ನಂತರ ಶಾಲೆಯ ಮುಖ್ಯಸ್ಥರು ಗಸ್ತಪಾಲಕ ಮುತ್ತುರಾಜ ಹಳ್ಳಿ ಅವರಿಗೆ ಫೋನ್ ಕರೆ ಮಾಡಿ ಮಾಹಿತಿ ಹೇಳಿದ್ದಾರೆ. ವಿಷಯ ತಿಳಿದು ತಕ್ಷಣವೇ ಗಸ್ತು ಪಾಲಕ ಶಾಲೆಗೆ ಬಂದು ಹಾವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯಕ್ಕೆ ಬಿಟ್ಟರು.



ಬೆಳಗಾವಿಯಲ್ಲಿ ಶೀಘ್ರ ದೇಶಿ ಕ್ರಿಕೆಟ್ ಪಂದ್ಯ: ವೆಂಕಟೇಶ ಪ್ರಸಾದ

ಬೆಳಗಾವಿ: ಬೆಳಗಾವಿಯಲ್ಲಿ ಕ್ರಿಕೆಟ್ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್ಸಿಎ) ಮುಂದಾಗಿದ್ದು, ಮುಂದಿನ ದಿನಗಳಲ್ಲಿ ನಗರಕ್ಕೆ ದೇಶೀಯ ಹಾಗೂ ಅಭ್ಯಾಸ ಪಂದ್ಯಗಳನ್ನು ತರಲು ಪ್ರಯತ್ನಿಸಲಾಗುವುದು ಎಂದು ಕೆಎಸ್ಸಿಎ ಅಧ್ಯಕ್ಷ ವೆಂಕಟೇಶ ಪ್ರಸಾದ್ ಭರವಸೆ ನೀಡಿದರು.

ಶನಿವಾರ ಬೆಳಗಾವಿ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಹಾರಾಜ ಟ್ರೋಫಿ ಟೂರ್ನಿಯ ಉದ್ಘಾಟನೆ ಯಶಸ್ವಿಯಾಗಿ ನಡೆದಿದ್ದು, ಕಾರ್ಯಕ್ರಮದಲ್ಲಿ ಭಾರತದ ಮಾಜಿ ಕ್ರಿಕೆಟಿಗರಾದ ರಾಹುಲ್ ದ್ರಾವಿಡ್ ಹಾಗೂ ಅನಿಲ್ ಕುಂಬ್ಳೆ ಭಾಗವಹಿಸಿದ್ದರೆಂದು ತಿಳಿಸಿದರು. ಅಲ್ಲದೆ, ಹುಬ್ಬಳ್ಳಿಯ ಯುವಕ ಅವಿನಾಶ ವೈದ್ಯ ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯಲ್ಲಿ ಮ್ಯಾನೇಜರ್ ಆಗಿ ಆಯ್ಕೆಯಾಗಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿ ಎಂದು ಅಭಿನಂದಿಸಿದರು.

ಮಹಾರಾಜ ಟ್ರೋಫಿಯನ್ನು ಮುಂದಿನ ವರ್ಷಗಳಲ್ಲಿ ಇನ್ನಷ್ಟು ವಿಸ್ತರಿಸುವ ಕುರಿತು ಚಿಂತನೆ ನಡೆಯುತ್ತಿದ್ದು, ಹೆಚ್ಚಿನ ತಂಡಗಳನ್ನು ಸೇರ್ಪಡೆಗೊಳಿಸುವ ಸಾಧ್ಯತೆಯೂ ಇದೆ ಎಂದು ಹೇಳಿದರು.

ಬೆಳಗಾವಿಯಲ್ಲಿ ತಕ್ಷಣವೇ ಅಂತರರಾಷ್ಟ್ರೀಯ ಪಂದ್ಯಗಳನ್ನು ಆ ಯೆ ೂ ೀ ಜಿ ಸ ್ ಎ ವ ್ ು ದ ್ ಎ ಸಾಧ್ಯವಿಲ್ಲದಿದ್ದರೂ, ಬಿಸಿಸಿಐ ದೇಶೀಯ ಟೂರ್ನಿಗಳ ಪಂದ್ಯಗಳು ಹಾಗೂ ಅಭ್ಯಾಸ ಪಂದ್ಯಗಳಿಗೆ ಅವಕಾಶ ಕಲ್ಪಿಸಲು ಕೆಎಸ್ಸಿಎ ಪ್ರಯತ್ನಿಸಲಿದೆ ಎಂದು ತಿಳಿಸಿದರು. ಬೆಳಗಾವಿಗೆ ಹೆಚ್ಚಿನ ಕ್ರಿಕೆಟ್ ಚಟುವಟಿಕೆಗಳನ್ನು ತರಲು ಸಂಸ್ಥೆ ಬದ್ಧವಾಗಿದೆ ಎಂದು ಹೇಳಿದರು.

ಈ ವೇಳೆ ಅವಿನಾಶ್ ಪೋತದಾರ್, ವಿಲಾಸ್ ಜೋಶಿ, ಬಿಕೆ ಮಾಡಲ್ ಮಾದರಿ ಶಾಲೆಯ ಶಿಕ್ಷಕ ವರ್ಗದವರು ಸೇರಿದಂತೆ ಇತರರು ಇದ್ದರು.

ಬೆಂಗಳೂರಿನಲ್ಲಿ ಐಪಿಎಲ್ ಫೈನಲ್ ಬಿಸಿಸಿಐ ನಿರ್ಧಾರ

ಹುಬ್ಬಳ್ಳಿ: ಮುಂದಿನ ಇಂಡಿಯನ್ ಪ್ರೀಮಿಯರ್(ಐಪಿಎಲ್) ಫೈನಲ್ ಪಂದ್ಯ ಬೆಂಗಳೂರಿನಲ್ಲಿ ನಡೆಸುವ ಬಗ್ಗೆ ನಿರ್ಧಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹಾಗೂ ಫ್ರಾಂಚೈಸಿಗಳ ಮಾಲೀಕರು ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಪ್ರಸಾದ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ದೇಶದಲ್ಲಿಯೇ ಅತಿ ದೊಡ್ಡ ಹಾಗೂ ಅತ್ಯುತ್ತಮ ಕ್ರಿಕೆಟ್ ಸ್ಟೇಡಿಯಂ ಆಗಿದೆ. ಹೆಚ್ಚು ಜನರು ಕ್ರಿಕೆಟ್ ವೀಕ್ಷಿಸಲಿ ಎಂಬ ಕಾರಣಕ್ಕೆ ಅಲ್ಲಿ ಐಪಿಎಲ್ ಫೈನಲ್ ಪಂದ್ಯ ನಡೆಸಲಾಗಿದೆ ಎಂದರು. ಆರ್‌ಸಿಬಿ ಹಾಲಿ ಚಾಂಪಿಯನ್ ಆಗಿದ್ದರಿಂದ ಬೆಂಗಳೂರಿನಲ್ಲಿಯೇ ಫೈನಲ್ ನಡೆಯಬೇಕಿತ್ತು. 85 ಸಾವಿರ ಆಸನ ಸಾಮರ್ಥ್ಯದ ರಾಜ್ಯದ ಜನಪ್ರತಿನಿಧಿಗಳು ಉಚಿತ ಟಿಕೆಟ್ ಕೇಳಿದ್ದಕ್ಕೆ ಐಪಿಎಲ್ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಅಹಮದಾಬಾದ್‌ಗೆ ಸ್ಥಳಾಂತರಿಸಲಾಯಿತೇ ಎಂಬ ಪ್ರಶ್ನೆಗೆ ವೆಂಕಟೇಶ ಪ್ರಸಾದ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ರಾಜ್ಯ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡುವಲ್ಲಿ ಭೇದ-ಭಾವ ಮಾಡಿಲ್ಲ. ಉತ್ತರ ಕರ್ನಾಟಕ-ದಕ್ಷಿಣ ಕರ್ನಾಟಕ ಎಂಬ ತಾರತಮ್ಯ ನೀವು (ಮಾಧ್ಯಮ) ಮಾಡಬೇಡಿ. ಹುಬ್ಬಳ್ಳಿ-ಧಾರವಾಡ, ಬೆಳಗಾವಿಯವರನ್ನು ಆಡಿಸಲೇಬೇಕೆಂಬ ಕಾರಣಕ್ಕೆ ಆಯ್ಕೆ ಮಾಡಲು ಆಗುವುದಿಲ್ಲ. ರಣಜಿ ತಂಡಕ್ಕೆ ಆಯ್ಕೆ ಮಾಡುವಾಗ ಪ್ರದರ್ಶನ ಮತ್ತು ಪ್ರತಿಭೆ ಕೌಂಟ್ ಆಗುತ್ತದೆ. ಕೆಲ ರಾಜ್ಯಗಳಲ್ಲಿ 2-3 ರಣಜಿ ತಂಡಗಳು 40-50 ವರ್ಷಗಳ ಹಿಂದಿನಿಂದಲೇ ಇವೆ. ಇತ್ತೀಚಿನ ವರ್ಷಗಳಲ್ಲಿ ಅಂಥ ನಿರ್ಧಾರಗಳು ಆಗಿಲ್ಲ. ಕರ್ನಾಟಕದಲ್ಲಿ 2ನೇ ರಣಜಿ ತಂಡ ರಚನೆ ಬಗ್ಗೆ ಬಿಸಿಸಿಐ ನಿರ್ಣಯ ಕೈಗೊಳ್ಳಬೇಕು, ನಾವಲ್ಲ ಎಂದು ಉತ್ತರಿಸಿದರು.

ಬಸ್-ಲಾರಿ ನಡುವೆ ಭೀಕರ ಅಪಘಾತ: ಇಬ್ಬರ ಸಾವು

ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಬಳಿ ಶನಿವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಲಾರಿ ನಡುವೆ ಭೀಕರ ಅಪಘಾತ ಸಂಭವಿಸಿದ್ದು, ಈ ಭೀಕರ ರಸ್ತೆ ದುರಂತದಲ್ಲಿ ಬಸ್‌ನಲ್ಲಿದ್ದ ಇಬ್ಬರು ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದು, ಐವರು ತೀವ್ರವಾಗಿ ಗಾಯಗೊಂಡಿದ್ದಾರೆ. ದೇಹದಿಂದ ಕೈ ಬೇರ್ಪಟ್ಟು ಬೇರೆಡೆ ಬಿದ್ದದ್ದು ಅಪಘಾತದ ಭೀಕರತೆಗೆ ಸಾಕ್ಷಿಯಾಗಿತ್ತು.



ಹುಬ್ಬಳ್ಳಿ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ-218ರಲ್ಲಿ ಅನಗವಾಡಿ ಕೆಇಬಿ ಹತ್ತಿರ ಈ ಅಪಘಾತ ಸಂಭವಿಸಿದೆ. ಲಾರಿ ಚಾಲಕನ ನಿಯಂತ್ರಣ ತಪ್ಪಿ ಬಸ್‌ಗೆ ಜೋರಾಗಿ ಡಿಕ್ಕಿ ಹೊಡೆದ ಪರಿಣಾಮ, ಬಸ್‌ನ ಹಿಂಬದಿ ಸೀಟ್‌ನಲ್ಲಿ ಕುಳಿತಿದ್ದ ಇಬ್ಬರು ಪ್ರಯಾಣಿಕರು ಮೃತಪಟ್ಟಿದ್ದಾರೆ.

ವಿಜಯಪುರ ಕಡೆಯಿಂದ ಗದ್ದನಕೇರಿ ಕ್ರಾಸ್ ಕಡೆಗೆ ಅತಿ ವೇಗವಾಗಿ ಬರುತ್ತಿದ್ದ ಲಾರಿಯ ಚಾಲಕ ಎದುರಿನಿಂದ ವಿಜಯಪುರ ಕಡೆಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಬಲಗಡೆಯ ಹಿಂಭಾಗಕ್ಕೆ ಲಾರಿ ಭೀಕರವಾಗಿ ಡಿಕ್ಕಿ ಹೊಡೆದ ಪರಿಣಾಮ ಬಾಗಲಕೋಟೆ ತಾಲೂಕಿನ ಸಿಮೀಕೇರಿ ಗ್ರಾಮದ ನಿವಾಸಿ ವಾಣಿ ದೇಸಾಯಿ (29), ಗದಗ ಜಿಲ್ಲೆಯ ನರಗುಂದ ತಾಲೂಕಿನ ಬನ್ನಟ್ಟಿಯ ಶಿವಾನಂದ ಕೊಡ್ಲಿವಾಡ (28) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಬಸ್ಸನಲ್ಲಿದ್ದ ಐವರು ಪ್ರಯಾಣಿಕರಿಗೆ ತೀವ್ರ ಗಾಯಗಳಾಗಿದ್ದು, ತಕ್ಷಣವೇ ಪೊಲೀಸರು ಗಾಯಾಳುಗಳನ್ನು ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ರವಾನಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಬಾಗಲಕೋಟೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಜಗದೀಶ ಹಾಗೂ ಬೀಳಗಿ ಸಿಪಿಐ ಹನಮಂತ ಸಣಮನಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಭೀಕರ ಅಪಘಾತದ ಕುರಿತು ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿತನನ್ನು ವಶಕ್ಕೆ ಪಡೆಯಲಾಗಿದೆ. ಲಾರಿ ಚಾಲಕ ಸಾಂಗ್ಲಿ ಜಿಲ್ಲೆಯ ಜತ್‌ನ ವಿಶಾಲ ಬಜಬಳಕರ ಆಗಿದ್ದಾರೆ.

ಶಾಸಕ ಜೆಟಿಪಾ ಸಾಂತ್ವನ

ಬಸ್ ಮತ್ತು ಲಾರಿ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಶಾಸಕ ಜೆ.ಟಿ.ಪಾಟೀಲ ಅವರು ಸಿಪಿಐ ಅವರಿಗೆ ದೂರವಾಣಿ ಕರೆ ಮಾಡಿ ಅಪಘಾತದಲ್ಲಿ ಗಾಯಗೊಂಡಿರುವವರ ಕುರಿತು ಕಾಳಜಿ ವಹಿಸಬೇಕು ಎಂದು ಸೂಚಿಸಿದರು. ಅಪಘಾತದಲ್ಲಿ ಮಡಿದ ಇಬ್ಬರ ಆತ್ಮಕ್ಕೆ ಸಂತಾಪ ಸೂಚಿಸಿ, ಬೆಂಗಳೂರಿನಿಂದ ಬಾಗಲಕೋಟೆಗೆ ಬಂದ ಬಳಿಕ ಸೀಮೀಕೇರಿಗೆ ತೆರಳಿ ಮೃತಳ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳುವುದರ ಜೊತೆಗೆ ಸರ್ಕಾರದಿಂದ ಪರಿಹಾರ ಕೊಡಿಸಲಾಗುವುದು ಎಂದು ಹೇಳಿದರು.

ರೈಸ್ ಕಾನ್‌ಕ್ಲೇವ್‌ನಲ್ಲಿ ಪೋಷಕರಿಗೆ ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಕಿವಿಮಾತು

ನವೋದ್ಯಮಕ್ಕೆ ಪ್ರೋತ್ಸಾಹ ನೀಡಲಿ: ಸಚಿವ

ಬೆಂಗಳೂರು: ಪೋಷಕರು ತಮ್ಮ ಮಕ್ಕಳಿಗೆ ನವೋದ್ಯಮ ಮಾಡಲು ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಕೇಂದ್ರ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ ಸಚಿವ ಡಾ.ಜಿತೇಂದ್ರ ಸಿಂಗ್ ಕರೆ ನೀಡಿದರು.

ಸಿಎಸ್‌ಐಆರ್-ರಾಷ್ಟ್ರೀಯ ಪ್ರಾದೇಶಿಕ ವಿಜ್ಞಾನ ಪ್ರಯೋಗಾಲಯಗಳು, ಸಿಎಸ್‌ಐಆರ್-ಫೋರ್ತ್ ಪ್ಯಾರಾ ಡೈಮ್ ಇನ್‌ಸ್ಟಿಟ್ಯೂಟ್ ಮತ್ತು ಸಿಎಸ್‌ಐಆರ್-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಸಂಯುಕ್ತ ಆಶ್ರಯದಲ್ಲಿ ಶನಿವಾರ ವಿಎ ಫಾಟಗೆ ಕನ್ವೆಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡ ರೈಸ್ ಕಾನ್‌ಕ್ಲೇವ್ 2026 ಉದ್ಘಾಟಿಸಿ ಅವರು ಮಾತನಾಡಿದರು. ನವೋದ್ಯಮದ ಬಗ್ಗೆ ಪೋಷಕರಿಗೆ ಅರಿವು ಹೊಂದಿರುವುದಿಲ್ಲ, ಹಾಗಾಗಿ ಯುವಕರಿಗೆ ನವೋದ್ಯಮ ಆರಂಭಿಸಲು ಪೋಷಕರಿಂದರಿಂದಲೇ ತೊಂದರೆ ಆಗುತ್ತದೆ. ಹಾಗಾಗಿ ಪೋಷಕರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ ಎಂದರು.


2014ರಲ್ಲಿ ದೇಶದಲ್ಲಿ ಕೇವಲ 350-400 ನವೋದ್ಯಮಗಳಿದ್ದವು. ಪ್ರಧಾನಿ ನರೇಂದ್ರ ಮೋದಿ ಅವರು ಸ್ಟಾರ್ಟ್‌ಅಪ್ ಇಂಡಿಯಾ, ಸ್ಟ್ಯಾಂಡ್‌ಅಪ್ ಇಂಡಿಯಾ ಎಂದು ಹೇಳಿದಾಗ ಹಲವರು ಅಪಹಾಸ್ಯ ಮಾಡಿದ್ದರು. ಇದಕ್ಕೆಲ್ಲ ಏನು ಅರ್ಥ ಇದೆ? ಎಂದಿದ್ದರು. ಆದರೆ ಒಂದು ದಶಕದ ನಂತರ ದೇಶದೆಲ್ಲೆಡೆ ನಿರಂತರ ಪ್ರಯತ್ನದ ಫಲವಾಗಿ 2.30 ಲಕ್ಷ ನವೋದ್ಯಮಗಳಿವೆ, ಇದರಿಂದ ಸುಮಾರು 25 ಲಕ್ಷ ಮಂದಿಗೆ ಉದ್ಯೋಗ ದೊರೆತಿದೆ. ನವೋದ್ಯಮ ಅಂದರೆ ಬೆಂಗಳೂರಿನಂತಹ ಕೆಲವು ನಗರಗಳು ಹಾಗೂ ಐಟಿ ಕ್ಷೇತ್ರಕ್ಕೆ ಎನ್ನುವಂತಿತ್ತು. ಆದರೆ ಈಗ ದೇಶದ ಶೇ.50 ನವೋದ್ಯಮವು ಮೂರನೇ ಹಂತದ ನಗರಗಳು ಹಾಗೂ ಐಟಿಯೇತರ ಕ್ಷೇತ್ರಗಳಿಂದಲೇ ಇವೆ ಎಂದರು.



2040ರಲ್ಲಿ ಭಾರತೀಯರೊಬ್ಬರು ಭಾರತದ ಧ್ವಜದೊಂದಿಗೆ ಚಂದ್ರನ ಮೇಲೆ ಇಳಿಯಲಿದ್ದಾನೆ ಮತ್ತು ಇನ್ನು ಕೆಲವೇ ವರ್ಷಗಳಲ್ಲಿ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಲಿದೆ.
■ ಡಾ. ವಿ. ನಾರಾಯಣನ್, ಇಸ್ರೋ ಅಧ್ಯಕ್ಷ

ಇಸ್ರೋದ ಅಧ್ಯಕ್ಷ ಡಾ.ವಿ.ನಾರಾಯಣನ್ ಮಾತನಾಡಿ, ನಮ್ಮ ಯೋಜನೆಗಳಲ್ಲಿ ಎನ್‌ಎಎಲ್ ಸೇರಿ ಅನೇಕ ಸಂಸ್ಥೆಗಳ ಸಹಭಾಗಿತ್ವ ಇರುತ್ತದೆ. ಈ ಸಹಭಾಗಿತ್ವ ಹೆಚ್ಚಿಸಲು ಸಿಎಸ್‌ಐಆರ್ ಜೊತೆಗೆ ಇತ್ತೀಚೆಗೆ ಕಾರ್ಯಾಗಾರ ನಡೆಸಿ, 40 ತಂತ್ರಜ್ಞಾನಗಳನ್ನು ಗುರುತಿಸಿದ್ದೇವೆ. ಅದರಲ್ಲಿ 17 ತಂತ್ರಜ್ಞಾನದಲ್ಲಿ ಕೆಲಸ ಆರಂಭವಾಗಿದೆ. ಚಂದ್ರಯಾನದಲ್ಲಿ ಲ್ಯಾಂಡರ್ ಕೇವಲ 14 ದಿನ ಜೀವಂತವಾಗಿತ್ತು. ಇದೀಗ ಅಣು ಶಕ್ತಿ ಇಲಾಖೆ ಜೊತೆಗೆ ಸಹಭಾಗಿತ್ವದಿಂದ, ಈ ಅವಧಿಯನ್ನು 100-140 ದಿನಕ್ಕೆ ಹೆಚ್ಚಿಸುವ ಕೆಲಸ ಆಗುತ್ತಿದೆ ಎಂದರು. ಎಲ್ಲಾ ವಿಜ್ಞಾನ ಇಲಾಖೆಗಳು ಹಾಗೂ ಇತರ ಇಲಾಖೆಗಳು ಸೇರಿಕೊಂಡು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತದತ್ತ ಕೆಲಸ ಮಾಡಬೇಕು. ನಮಗೆ ಬಾಹ್ಯಾಕಾಶ ಕಾರ್ಯಕ್ರಮದ ದಿಕ್ಕು ಮತ್ತು ದೃಷ್ಟಿಯನ್ನೂ ನೀಡಿದ್ದಾರೆ. ನಾವು ನಮ್ಮದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸಲಿದ್ದೇವೆ ಮತ್ತು ಚಂದ್ರನ ಮೇಲೆ ಮನುಷ್ಯನನ್ನು ಇಳಿಸಲಿದ್ದೇವೆ ಎಂದು ತಿಳಿಸಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಪ್ರಧಾನಿಯಾಗಿ ಹನ್ನೆರಡು ವರ್ಷ ಪೂರೈಸಿದ ಮೋದಿಯದ್ದು ಮೈಲಿಗಲ್ಲು ಅಲ್ಲ, ದೇಶದ ಕುತ್ತಿಗೆಗೆ ಬಿಗಿದ ಕಲ್ಲು -**ರಾಹುಲ್ ಗಾಂಧಿ**
-ಈ ದೇಶದ ಅಧಿಕಾರ ತನ್ನ ಕುಟುಂಬದ ಗುತ್ತಿಗೆ ಅಂತ ಭಾವಿಸಿರುವ ಕಾಂಗ್ರೆಸ್ಸಿನ ಕುತ್ತಿಗೆಗೆ ಬಿಗಿದ ಹಗ್ಗವೆಂತಲೂ ಹೇಳಬಹುದು!

ದಿನ ಭವಿಷ್ಯ

ಮೇಷ ಒಳ್ಳೆ ಅವಕಾಶ ಸಿಕ್ಕಿದಾಗ ಕೂಡಲೇ ಬಾಚಿಕೊಳ್ಳಿ. ಆರ್ಥಿಕ ಸ್ಥಿತಿ ಉತ್ತಮವಿದ್ದರೂ ಖರ್ಚು ನಿಯಂತ್ರಣ ಅವಶ್ಯ. ಸಂಗಾತಿ ಜತೆ ವಾಗ್ವಾದ.

ವೃಷಭ ಸಂಬಂಧದಲ್ಲಿ ತಿರುವು ಉಂಟಾದೀತು. ಬೇಸರದ ಬೆಳವಣಿಗೆ. ದೈಹಿಕ ನೋವು ಸಂಭವ. ಅನಿವಾರ್ಯ ಖರ್ಚು ಒದಗಿಬರಲಿದೆ.

ಮಿಥುನ ಸರಿಯಾದ ದಿಕ್ಕಿನಲ್ಲಿ ನಿಮ್ಮ ವ್ಯವಹಾರ ಸಾಗುವುದು. ಕೌಟುಂಬಿಕ ಬಂಧ ಬಿಗಿಪಡಿಸಿ. ಅವರೆಡೆಗೆ ಕಾಳಜಿ ತೋರಿ. ಧನವ್ಯಯ ಅಧಿಕ.

ಕಟಕ ವೃತ್ತಿ ಸಂಬಂಧಿತ ಸಮಸ್ಯೆ ಒಮ್ಮೆಗೆ ಪರಿಹಾರ ಕಾಣಲಿದೆ. ಲಘು ಅನಾರೋಗ್ಯ ಸಂಭವ. ಖರೀದಿ ಹುಮ್ಮಸ್ಸು. ಆಪ್ತ ಬಂಧು ಭೇಟಿ.

ಸಿಂಹ ನಿರೀಕ್ಷೆ ಈಡೇರದೆ ನಿರಾಶೆ. ನಿಮ್ಮ ಖಾಸಗಿ ವಿಷಯ ಇತರರ ಜತೆ ಹಂಚಿಕೊಳ್ಳದಿರಿ. ಕೆಟ್ಟ ಆಹಾರ ಸೇವನೆಯಿಂದ ಅಜೀರ್ಣ ಸಮಸ್ಯೆ.

ಕನ್ಯಾ ಹರ್ಷದ ದಿನ. ನಿರೀಕ್ಷೆ ಈಡೇರಿಕೆ. ದೈಹಿಕ ನೋವಿದ್ದರೆ ನಿವಾರಣೆ. ದೂರದ ಬಂಧು ಭೇಟಿಯಿಂದ ಸಂತೋಷ. ಆರ್ಥಿಕ ಪ್ರಗತಿ.

ತುಲಾ ಅಡ್ಡಿಗಳನ್ನು ನಿವಾರಿಸುವುದು ನಿಮಗೆ ಗೊತ್ತು. ಅದರಲ್ಲಿ ಸಫಲತೆ ಕಾಣುವಿರಿ. ಸಂಗಾತಿಯ ನಿಲುವು ಒಪ್ಪಿಕೊಳ್ಳುವ ಸಮಯವಿದು.

ವೃಶ್ಚಿಕ ಮುಖ್ಯ ವಿಚಾರದಲ್ಲಿ ಆಯ್ಕೆಯ ಗೊಂದಲ ನಿಮ್ಮನ್ನು ಕಾಡುವುದು. ವಿವೇಚಿಸಿ ನಿರ್ಧರಿಸಿ. ಕಾಡುತ್ತಿದ್ದ ನೋವು ಪರಿಹಾರ.

ಧನು ಎಲ್ಲವನ್ನು ಹಗುರವಾಗಿ ಪರಿಗಣಿಸುವ ಧೋರಣೆ ಬಿಡಿ. ಗಂಭೀರ ವರ್ತನೆ ಈಗಿನ ಅಗತ್ಯ. ಮನೆಯಲ್ಲಿ ಶಾಂತಿ ಕಲಕುವ ವಿದ್ಯಮಾನ.

ಮಕರ ಅಗತ್ಯ ಬಿದ್ದಾಗ ವಿರೋಧಿಗಳ ಸ್ನೇಹ ಮಾಡಲು ಹಿಂಜರಿಕೆ ಬೇಡ. ಇದು ನಿಮ್ಮ ಈಗಿನ ಪರಿಸ್ಥಿತಿಗೆ ಅನ್ವಯ. ಆರ್ಥಿಕ ಒತ್ತಡ ಅಧಿಕ.

ಕುಂಭ ಕೆಲವರ ಜತೆ ಹೆಚ್ಚು ಸಂವೇದನೆಯಿಂದ ವರ್ತಿಸಿ. ಅವರ ಮನಸ್ಸಿಗೆ ನೋವು ತರಬೇಡಿ. ಕಾಯುತ್ತಿದ್ದ ಶುಭ ಸುದ್ದಿ ಇಂದು ಸಿಗಬಹುದು.

ಮೀನ ಸಂಬಂಧ ಉಳಿಸಲು ಆದ್ಯತೆ ಕೊಡಿ. ಇತರರ ಭಾವನೆಗೆ ಬೆಲೆ ಕೊಡಿ. ನಿಮ್ಮದೇ ನಿಲುವು ಹೇರಬೇಡಿ. ಆರ್ಥಿಕ ಒತ್ತಡ ನಿವಾರಣೆ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ :2,7,3,1

ದಕ್ಷತೆ, ಪ್ರಾಮಾಣಿಕತೆಯಿಂದ ಜವಾಬ್ದಾರಿ ನಿಭಾಯಿಸುವುದಷ್ಟೇ ಬದ್ಧತೆ

ಖಾತೆ ಭೇದವಿಲ್ಲ: ಖಂಡ್ರೆ

ಬೆಂಗಳೂರು: ನೂತನ ಸರ್ಕಾರ ರಚನೆಯಾಗಿ 10 ದಿನ ಕಳೆದರೂ ಇನ್ನೂ ಖಾತೆ ಹಂಚಿಕೆ ಸಂಬಂಧ ಸಚಿವರಲ್ಲಿನ ಅಸಮಾಧಾನ ಮುಂದುವರೆದಿದೆ. ತಮಗೆ ನೀಡಿರುವ ಖಾತೆಯ ಬಗ್ಗೆ ತೃಪ್ತಿ ಹಾಗೂ ಅತೃಪ್ತಿ ಮುಂದುವರೆದಿದೆ.

ಖಾತೆ ಹಂಚಿಕೆ ಬಗ್ಗೆ ಸಚಿವರಲ್ಲಿ ಅಸಮಾಧಾನ ಮುಂದುವರೆದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ, ನಾವೆಲ್ಲರೂ ಜನಸೇವೆ ಮಾಡಲು ಬಂದವರಾಗಿದ್ದು, ಆ ಖಾತೆ, ಈ ಖಾತೆ ಎಂಬ ಭೇದಭಾವ ನಮ್ಮಲ್ಲಿಲ್ಲ. ನೀಡಲಾದ ಜವಾಬ್ದಾರಿಯನ್ನು ದಕ್ಷತೆ ಮತ್ತು ಪ್ರಾಮಾಣಿಕತೆ ಯಿಂದ ನಿಭಾಯಿಸುವುದಷ್ಟೇ ನಮ್ಮ ಬದ್ಧತೆ ಎಂದು ಸ್ಪಷ್ಟಪಡಿಸಿದ್ದಾರೆ. ವಿಧಾನಸೌಧದಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟದಲ್ಲಿ ಖಾತೆ ಹಂಚಿಕೆ ಕುರಿತು ಎದ್ದಿರುವ ಕೆಲವರ ಅಸಮಾಧಾನದ ವದಂತಿಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದರು.



ಈಗಾಗಲೇ ಹಿರಿಯ ನಾಯಕ ರಾಮಲಿಂಗಾರೆಡ್ಡಿಯವರು ತಮ್ಮ ಇಲಾಖೆಯ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ ಕೆಲಸವನ್ನೂ ಆರಂಭಿಸಿದ್ದಾರೆ. ಸಂಪುಟದ ಎಲ್ಲಾ ಸಚಿವರು ತಮಗೆ ವಹಿಸಲಾದ ಖಾತೆಗಳ ಜವಾಬ್ದಾರಿಯನ್ನು ಅತ್ಯಂತ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದರು.

ಮೌನಮುರಿದ ಕೃಷ್ಣಬೈರೇಗೌಡ: ತಮಗೆ ನೀಡಿರುವ ಖಾತೆಯ ಬಗ್ಗೆ ಅಸಮಾಧಾನವಿದ್ದರೂ ಇಲ್ಲಿಯವರೆಗೆ ಎಲ್ಲಿಯೂ ಬಹಿರಂಗ ಹೇಳಿಕೆ ನೀಡಿರದಿದ್ದ ಸಚಿವ ಕೃಷ್ಣ ಬೈರೇಗೌಡ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ. ರಾಜಧಾನಿಯ ಅಭಿವೃದ್ಧಿಗೆ ಸಂಬಂಧಿಸಿದ ಖಾತೆ ಹಂಚಿಕೆ ವಿಚಾರದಲ್ಲಿ ತಮಗಿರುವ ಕೆಲವು ಆಕ್ಷೇಪ ಹಾಗೂ ನಿರೀಕ್ಷೆಗಳನ್ನು ಬಹಿರಂಗಪಡಿಸಿದ್ದಾರೆ. ಯಾವುದೇ ವೈಯಕ್ತಿಕ ಅಸಮಾಧಾನವಿಲ್ಲ, ಆದರೆ, ಬೆಂಗಳೂರಿನ ಜನರ ಹಾಗೂ ಪಕ್ಷದ ನಿರೀಕ್ಷೆಗಳು ಗಗನಚುಂಬಿಯಾಗಿವೆ. ಇಂತಹ ಸಂದರ್ಭದಲ್ಲಿ ಜವಾಬ್ದಾರಿ ತೆಗೆದುಕೊಳ್ಳುವಾಗ ನಮಗೆ ಸಂಪೂರ್ಣ ಸ್ಪಷ್ಟತೆ ಇರಬೇಕು. ಕೇವಲ ಖಾತೆ ಪಡೆದರೆ ಸಾಲದು, ಅದರಲ್ಲಿ ಹೊಣೆಗಾರಿಕೆ ಇರಬೇಕು ಎಂದರು.



ಈ ಎಲ್ಲ ಗೊಂದಲಗಳ ಕುರಿತು ಸಿಎಂ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ನನ್ನ ನಿಲುವನ್ನು ಸಿಎಂ ಅವರಿಗೆ ವಿವರಿಸಿದ್ದೇನೆ. ಅವರು ಇನ್ನೆರಡು ದಿನಗಳಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸುವುದಾಗಿ ಹೇಳಿದ್ದಾರೆ.
■ ಕೃಷ್ಣ ಬೈರೇಗೌಡ, ಸಚಿವ

- ನಾವೆಲ್ಲರೂ ಜನಸೇವೆ ಮಾಡಲು ಬಂದವರಾಗಿದ್ದು, ಆ ಖಾತೆ, ಈ ಖಾತೆ ಎಂಬ ಭೇದಭಾವ ನಮ್ಮಲ್ಲಿಲ್ಲ
- ಸಂಪುಟದ ಎಲ್ಲಾ ಸಚಿವರು ತಮಗೆ ವಹಿಸಲಾದ ಖಾತೆಗಳ ಜವಾಬ್ದಾರಿ ಅತ್ಯಂತ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಪಕ್ಷ ಅತ್ಯಂತ ಕಠಿಣವಾದ ಮತ್ತು ಜವಾಬ್ದಾರಿಯುತವಾದ ಕೆಲಸವನ್ನು ವಹಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಎಂಬುದು ಇವತ್ತಿನ ದಿನಗಳಲ್ಲಿ ದೊಡ್ಡ ಸವಾಲು. ನಾವು ನೀಡುವ ಕೆಲಸ ಫಲಿತಾಂಶದ ರೂಪದಲ್ಲಿ ಕಾಣಿಸಬೇಕು ಎಂದರೆ ಅಧಿಕಾರ ಮತ್ತು ಜವಾಬ್ದಾರಿಯ ಹಂಚಿಕೆ ಸ್ಪಷ್ಟವಾಗಿರಬೇಕು ಎಂದು ಮಾರ್ಮಿಕವಾಗಿ ನುಡಿದರು.

ಜಿಬಿಎ ಖಾತೆಯ ವ್ಯಾಪ್ತಿಯಿಂದ ಬಿಡಿಎ ಮತ್ತು ಬಿಎಂಆರ್‌ಡಿಎ ಸಂಸ್ಥೆಗಳನ್ನು ಹೊರಗಿಟ್ಟಿರುವ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮಿಂದ ಜನರು ಮತ್ತು ಹೈಕಮಾಂಡ್ ಫಲಿತಾಂಶವನ್ನು ನಿರೀಕ್ಷಿಸುತ್ತಾರೆ. ಸಂಪೂರ್ಣ ಜವಾಬ್ದಾರಿ ಮತ್ತು ಮುಕ್ತ ಅಧಿಕಾರ ಇದ್ದರೆ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಅರ್ಧಂಬರ್ಧ ಜವಾಬ್ದಾರಿಯಿಂದ ಉತ್ತಮ ಫಲಿತಾಂಶ ಬರಲು ಸಾಧ್ಯವಿಲ್ಲ ಎಂದು ನೇರವಾಗಿ ಅಸಮಾಧಾನ ಹೊರಹಾಕಿದರು.

ನಮ್ಮ ಸಮುದಾಯಕ್ಕೆ ಇನ್ನೆರಡು ಸಚಿವ ಕೊಡಿ: ಜಾರಕಿಹೊಳಿ: ಸ್ಥಾನ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ನಮ್ಮ ಸಮುದಾಯಕ್ಕೆ ಇನ್ನೆರಡು ಸಚಿವ ಸ್ಥಾನಗಳನ್ನು ನೀಡಬೇಕು ಎನ್ನುವುದು ನಮ್ಮ ಬೇಡಿಕೆಯಾಗಿದೆ. ಹಿಂದೆ ಎಸ್ಟಿ ಸಮುದಾಯದ ಮೂವರು ಸಚಿವರಿದ್ದರು. ಅದೇ ರೀತಿ ಈಗಲೂ ಮೂರು ಸಚಿವ ಸ್ಥಾನಗಳನ್ನು ನೀಡಬೇಕು. ಇದೇನೂ ನಮ್ಮ ಹೆಚ್ಚುವರಿ ಬೇಡಿಕೆಯಲ್ಲ, ಹಳೆಯ ಪ್ರಾತಿನಿಧ್ಯದ ಮುಂದುವರಿಕೆಯಷ್ಟೇ ಎಂದರು.

ಕೇಂದ್ರದಿಂದ ರಸಗೊಬ್ಬರ ಹೆಚ್ಚೇ ಪೂರೈಸಿದೆ: ಜೋಶಿ

- ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿರುಗೇಟು
- ರೈತರ ಹಿತಕ್ಕಾಗಿ ಮುಂಗಾರಿಗೆ ಮುನ್ನವೇ ಅಗತ್ಯ ರಸಗೊಬ್ಬರ ಪೂರೈಕೆ
- ಆದ್ರೂ, ರಾಜ್ಯ ಸರ್ಕಾರದಿಂದ ಕೇಂದ್ರದ ಮೇಲೆ ಗೂಬೆ ಕೂರಿಸಲು ಯತ್ನ

ಹೊಸದಿಲ್ಲಿ: ರೈತರ ಹಿತಕ್ಕೆ ಬದ್ಧವಾಗಿ ಕೇಂದ್ರವು ಕರ್ನಾಟಕಕ್ಕೆ ಅಗತ್ಯಕ್ಕಿಂತ ಹೆಚ್ಚೇ ರಸಗೊಬ್ಬರ ಪೂರೈಸಿದೆ. ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ರಸಗೊಬ್ಬರ ಅಭಾವ ಬಿಂಬಿಸಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದ್ದಾರೆ.

ಕರ್ನಾಟಕದಲ್ಲಿ ಮುಂಗಾರು ಕೃಷಿ ಚಟುವಟಿಕೆ ಆರಂಭವಾಗುತ್ತಿದ್ದಂತೆಯೇ ರಾಜ್ಯ ಕಾಂಗ್ರೆಸ್ ಸರ್ಕಾರ ರಸಗೊಬ್ಬರ ಕೊರತೆಯೆಂದು ಬಿಂಬಿಸಿ, ಅನಾವಶ್ಯಕವಾಗಿ ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದೆ ಎಂದು ರಸಗೊಬ್ಬರ ಪೂರೈಕೆ ಬಗ್ಗೆ ಪ್ರಸ್ತುತ ಅಂಕಿ ಅಂಶ ತೆರೆದಿಟ್ಟು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ವಾಸ್ತವವಾಗಿ ರಾಜ್ಯದಲ್ಲಿ ಸಮರ್ಪಕ ರಸಗೊಬ್ಬರ ಲಭ್ಯತೆಯಿದೆ. ಇದೊಂದು ಸಮಸ್ಯೆಯೇ ಅಲ್ಲ, ಆದರೆ ರಾಜ್ಯ ಸರ್ಕಾರ ಅಗತ್ಯವಿರುವಲ್ಲಿ ರೈತರಿಗೆ ರಸಗೊಬ್ಬರ ತಲುಪಿಸದೆ ತೀರಾ ಬೇಜವಾಬ್ದಾರಿಯಾಗಿ ವರ್ತಿಸುತ್ತಿದೆ. ಇದು ಆಡಳಿತ ವೈಫಲ್ಯಕ್ಕೆ ಕೈಗನ್ನಡಿ ಎಂದು ಜೋಶಿ ವಾಗ್ದಾಳಿ ನಡೆಸಿದ್ದಾರೆ.



ಜಾಗತಿಕ ಬಿಕ್ಕಟ್ಟಿದ್ದರೂ ಸಮರ್ಪಕ ಪೂರೈಕೆ: ಜಾಗತಿಕ ಬಿಕ್ಕಟ್ಟಿದ್ದರೂ ಕೇಂದ್ರ ಸರ್ಕಾರ, ರಾಜ್ಯದ ರೈತರಿಗಾಗಿ 2026ರ ಮುಂಗಾರು ಹಂಗಾಮಿಗೆ ಸಾಕಷ್ಟು ಪ್ರಮಾಣದ ರಸಗೊಬ್ಬರ ಲಭ್ಯತೆಯನ್ನು ಖಚಿತಪಡಿಸಿದೆ. ಇರಾನ್-ಇಸ್ರೇಲ್ ಸಂಘರ್ಷ ಮತ್ತು ರಫ್ತು ಸವಾಲುಗಳ ಮಧ್ಯೆಯೂ ಕೇಂದ್ರ ಸರ್ಕಾರ ಮುಂಜಾಗ್ರತೆ ವಹಿಸಿದ್ದು, ದೇಶೀಯವಾಗಿ ಯೂರಿಯಾ ಉತ್ಪಾದನೆ ಹೆಚ್ಚಿಸಿದ್ದಲ್ಲದೆ, ಆಮದನ್ನು ಸಹ ಸರಿಯಾಗಿ ನಿಭಾಯಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಮುಂಗಾರು ಮುನ್ನವೇ ಹೆಚ್ಚು ಪೂರೈಕೆ: ಮುಂಗಾರು ಹಂಗಾಮಿಗೂ ಮುನ್ನವೇ ಕರ್ನಾಟಕಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ರಸಗೊಬ್ಬರವನ್ನು ಪೂರೈಸಲಾಗಿದೆ. ಮುಂಗಡ ದಾಸ್ತಾನಿಗೆ ಅನುವಾಗುವಂತೆ ಜನವರಿ-ಮಾರ್ಚ್ ಅವಧಿಯಲ್ಲೇ ಅಗತ್ಯಕ್ಕಿಂತ ಹೆಚ್ಚುವರಿ 0.33 ಲಕ್ಷ ಮೆಟ್ರಿಕ್ ಟನ್ ಯೂರಿಯಾ, 1.29 ಲಕ್ಷ ಮೆಟ್ರಿಕ್ ಟನ್ ಡಿಎಪಿ ಮತ್ತು 1.58 ಲಕ್ಷ ಮೆಟ್ರಿಕ್ ಟನ್ ಎನ್‌ಪಿಕೆಎಸ್ ಅನ್ನು ನೀಡಲಾಗಿದೆ ಎಂದಿದ್ದಾರೆ.

ತಳಮಟ್ಟದಲ್ಲೇ ಸುಳ್ಳು ಸುದ್ದಿ ಮೆಟ್ಟಿ ನಿಲ್ಲಿ

ಪುಟ ೧➜ **ಅಂತಾರಾಷ್ಟ್ರೀಯ ಪಿತೂರಿ, ಸುಳ್ಳು ಸುದ್ದಿಗಳ ಹಾವಳಿ:** ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲು ದೇಶದ ಹೊರಗಿನಿಂದ ಹಣ ಪೂರೈಕೆಯಾಗುತ್ತಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಅತ್ಯಂತ ವ್ಯವಸ್ಥಿತವಾಗಿ ಸುಳ್ಳು ಸುದ್ದಿಗಳನ್ನು ಹರಡಲಾಗುತ್ತಿದೆ ಎಂದು ವಿತ್ತಸಚಿವೆ ಕಳವಳ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ಇಂತಹ ಅಪಪ್ರಚಾರಗಳು ಮುಖ್ಯವಾಹಿನಿಯ ಮಾಧ್ಯಮಗಳಲ್ಲೂ ಜಾಗ ಪಡೆಯುತ್ತಿರುವುದು ದುರದೃಷ್ಟಕರ ಎಂದ ಅವರು, ಕಾರ್ಯಕರ್ತರು ಯಾವುದೇ ಸುದ್ದಿಯ ಸತ್ಯಾಸತ್ಯತೆ ಪರೀಕ್ಷಿಸದೆ ನಂಬಬಾರದು ಎಂದು ಎಚ್ಚರಿಸಿದರು. ಇಂಟರ್ನೆಟ್‌ನಲ್ಲಿ ಸುಳ್ಳುಗಳು ಕಣ್ಣಿಗೆ ಬಿದ್ದಾಗ ಕಾರ್ಯಕರ್ತರು ಮೌನವಾಗಿರಬಾರದು. ಆದರೆ ಯಾರೊಂದಿಗೂ ಅನಗತ್ಯ ಜಗಳಕ್ಕೆ ಇಳಿಯದೆ ಶಾಂತಚಿತ್ತದಿಂದ ಸರ್ಕಾರದ ನೈಜ ಜನಪರ ಸಾಧನೆಗಳನ್ನು ಜನರ ಮುಂದಿಟ್ಟು ಸತ್ಯ ಸಾರಬೇಕು ಎಂದು ಕಿವಿಮಾತು ಹೇಳಿದರು. ಪಕ್ಷದವರ ನೈತಿಕ ಶಕ್ತಿಯನ್ನು ನಾಶ ಮಾಡಲು ಕಾಂಗ್ರೆಸ್ ಹತಾಶೆಯ ರಾಜಕಾರಣ ಮಾಡುತ್ತಿದ್ದು, ಇದನ್ನು ಎದುರಿಸಲು ಸದಾ ಸನ್ನದ್ಧರಾಗಿರಬೇಕು ಎಂದರು.

ಜಾಗತಿಕ ಬಿಕಟ್ಟಿನ ನಡುವೆಯೂ ಭಾರತದ ಆರ್ಥಿಕ ಮುನ್ನಡೆ

ಪುಟ ೧➜ ಆದರೆ ವಿರೋಧ ಪಕ್ಷವಾದ ಕಾಂಗ್ರೆಸ್ ಈ ಸತ್ಯವನ್ನು ಒಪ್ಪಿಕೊಳ್ಳಲು ಸದಾ ಸಿದ್ಧವಿಲ್ಲದ ಕಾರಣ, ಕಾರ್ಯಕರ್ತರೇ ಖುದ್ದಾಗಿ ಪ್ರತಿ ನಾಗರಿಕನಿಗೂ ದೇಶದ ಆರ್ಥಿಕ ಸಬಲತೆಯ ನೈಜ ಚಿತ್ರಣವನ್ನು ಮನವರಿಕೆ ಮಾಡಿಕೊಡಬೇಕು ಎಂದು ನಿರ್ಮಲಾ ಸೀತಾರಾಮನ್ ಅವರು ಸ್ಪಷ್ಟಪಡಿಸಿದರು.

ಶಾಲೆಗಳಿವೆ, ಆದರೆ ಶಿಕ್ಷಕರಿಲ್ಲ!

ಪುಟ ೧➜ 248 ಪ್ರಾಥಮಿಕ ಹಾಗೂ 12 ಪ್ರೌಢಶಾಲೆ ಸೇರಿ ಒಟ್ಟು 260 ಶಾಲೆಗಳು ಏಕೋಪಾಧ್ಯಾಯ ಶಾಲೆಗಳಿವೆ. ಜಿಲ್ಲೆಯ ದೇವದುರ್ಗ ತಾಲೂಕಿನಲ್ಲೇ 115 ಪ್ರಾಥಮಿಕ ಹಾಗೂ 6 ಪ್ರೌಢಶಾಲೆ ಸೇರಿ ಒಟ್ಟು 212 ಶಾಲೆಗಳು ಶೂನ್ಯ ಶಿಕ್ಷಕರ ಸಮಸ್ಯೆ ಎದುರಿಸುತ್ತಿವೆ. ರಾಯಚೂರು ತಾಲೂಕಿನಲ್ಲಿ 28 ಪ್ರಾಥಮಿಕ ಹಾಗೂ ಒಂದು ಪ್ರೌಢಶಾಲೆ ಸೇರಿ ಒಟ್ಟು 29 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ, ಲಿಂಗಸುಗೂರು ತಾಲೂಕಿನಲ್ಲಿನ 46 ಪ್ರಾಥಮಿಕ ಹಾಗೂ 4 ಪ್ರೌಢ ಶಾಲೆಗಳಲ್ಲಿ, ಮಾನ್ವಿಯ 60 ಪ್ರಾಥಮಿಕ ಹಾಗೂ 3 ಪ್ರೌಢ ಹಾಗೂ ಸಿಂಧನೂರ ತಾಲೂಕಿನ 45 ಪ್ರಾಥಮಿಕ ಹಾಗೂ 10 ಪ್ರೌಢಶಾಲೆಗಳಲ್ಲಿ ಶಿಕ್ಷಕರಿಲ್ಲದೆ ಅತಂತ್ರ ಸ್ಥಿತಿಯಲ್ಲಿವೆ. 248 ಪ್ರಾಥಮಿಕ, 12 ಪ್ರೌಢಶಾಲೆ ಸೇರಿ ಒಟ್ಟು 260 ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ. ದೇವದುರ್ಗ ತಾಲೂಕಿನ 59 ಪ್ರಾಥಮಿಕ ಹಾಗೂ 2 ಪ್ರೌಢಶಾಲೆ ಸೇರಿ ಒಟ್ಟು 61 ಶಾಲೆಗಳಲ್ಲಿ, ಲಿಂಗಸುಗೂರು ತಾಲೂಕಿನ 48 ಪ್ರಾಥಮಿಕ, 3 ಪ್ರೌಢಶಾಲೆ ಸೇರಿ 51 ಶಾಲೆಗಳಲ್ಲಿ, ಮಾನ್ವಿ ತಾಲೂಕಿನ 59 ಪ್ರಾಥಮಿಕ ಹಾಗೂ 1 ಪ್ರೌಢಶಾಲೆ ಸೇರಿ 60 ಶಾಲೆಗಳಲ್ಲಿ, ರಾಯಚೂರು ತಾಲೂಕಿನ 30 ಪ್ರಾಥಮಿಕ ಮತ್ತು 5 ಪ್ರೌಢಶಾಲೆ ಸೇರಿ 35 ಶಾಲೆಗಳಲ್ಲಿ ಹಾಗೂ ಸಿಂಧನೂರು ತಾಲೂಕಿನ 52 ಪ್ರಾಥಮಿಕ, 1 ಪ್ರೌಢಶಾಲೆ ಸೇರಿ ಒಟ್ಟು 53 ಶಾಲೆಗಳು ಕೂಡ ಏಕೋಪಾಧ್ಯಾಯ ಶಾಲೆಗಳೇ ಆಗಿವೆ.



ಶೇ.70 ಮಕ್ಕಳಿಗೆ ಓದಲು, ಬರೆಯಲು ಬರಲ್ಲ!

ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಅಕ್ಷರ ಕಲಿಸಬೇಕಾದ ಶಿಕ್ಷಕರೇ ಇಲ್ಲದಿರುವುದನ್ನು ಗಮನಿಸಿದರೆ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುವುದಿರಲಿ, ಕನಿಷ್ಠ ಅಕ್ಷರ ಜ್ಞಾನವೂ ದೊರೆಯುವುದು ಕಷ್ಟವಾಗಿರುವುದು ಕಂಡುಬರುತ್ತಿದೆ. ಎಎಸ್‌ಇಆರ್ 2024ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ಶೇ.70 ಮಕ್ಕಳಿಗೆ ಓದಲು, ಬರೆಯಲು ಬರುತ್ತಿಲ್ಲ ಎನ್ನುವುದು ಆತಂಕ ಹುಟ್ಟಿಸಿದೆ.

ಖಾಲಿ ಖಾಲಿ !

ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ 8380 ಶಿಕ್ಷಕರ ಸಂಖ್ಯೆಯಲ್ಲಿ 3963 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, 4417 ಹುದ್ದೆಗಳು ಖಾಲಿ ಇವೆ. ಪ್ರೌಢಶಾಲೆಗಳಿಗೆ 2275 ಮಂಜೂರಾದ ಹುದ್ದೆಗಳಲ್ಲಿ 1208 ಭರ್ತಿಯಾಗಿದ್ದು, 1067 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಕಾಲೇಜು ಶುಲ್ಕ ಭರಿಸಲು ಹಣ ಸಿಗದೆ ವಿದ್ಯಾರ್ಥಿನಿ ಆತ್ಮಹತ್ಯೆ

ಪುಟ ೧➜ ಸಮಯಕ್ಕೆ ಸರಿಯಾಗಿ ಹಣ ಸಿಗದ ಪರಿಣಾಮ ಕಾಲೇಜಿನ ಶುಲ್ಕ ಪಾವತಿಸಲಾರದ್ದರಿಂದ ಗಾಯತ್ರಿಗೆ ಹಾಲ್ ಟಿಕೆಟ್ ಸಿಕ್ಕಿರಲಿಲ್ಲ. ಇದರಿಂದ ಮನ ನೊಂದಿದ್ದಳು. ಈಕೆ ಮನೆಯಿಂದ ನಾಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹಾಗೂ ಸ್ಥಳೀಯರು ವಿವಿಧೆಡೆ ಹುಡುಕಾಟ ನಡೆಸಿದ್ದು, ಬಳಿಕ ಮನೆಯ ಸಮೀಪದ ಬಾವಿಯಲ್ಲಿ ಆಕೆಯ ಮೃತದೇಹ ಪತ್ತೆಯಾಗಿದೆ. ಈ ಕುರಿತು ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಜನಸಂಖ್ಯೆ ಬದಲು ಅಧ್ಯಯನಕ್ಕೆ ಸಮಿತಿ

ಪುಟ ೧➜ **ಕಾರ್ಯವ್ಯಾಪ್ತಿ:** ರಾಷ್ಟ್ರೀಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ, ಸಾಮಾಜಿಕ ರಚನೆ ಮತ್ತು ಬುಡಕಟ್ಟು ಸಮಾಜದ ಸಂರಕ್ಷಣೆಗೆ ಸಂಬಂಧಿಸಿದ ಜನಸಂಖ್ಯಾ ಬದಲಾವಣೆಗಳನ್ನು ಮೌಲ್ಯಮಾಪನ ಮಾಡಲು ಗೃಹ ಸಚಿವಾಲಯ ಕಳೆದ ತಿಂಗಳು ಈ ಸಮಿತಿ ರಚಿಸಿತ್ತು. ಅಸ್ವಾಭಾವಿಕ ಅಂಶಗಳು, ಗಡಿಯಲ್ಲಿನ ಚಟುವಟಿಕೆಗಳು, ಆರ್ಥಿಕ ಅವಕಾಶಗಳು ಮತ್ತು ಸಾಮಾಜಿಕ-ಪರಿಸರ ಅಂಶಗಳ ವೈಜ್ಞಾನಿಕ ಮೌಲ್ಯಮಾಪನವನ್ನು ಸಮಿತಿ ನಡೆಸಲಿದೆ, ಎಂದು ಹೇಳಿಕೆ ತಿಳಿಸಿದೆ.

ಅಸಹಜ ಬದಲಾವಣೆಗಳು: ಅಸಹಜ ವಸತಿ ಮಾದರಿಗಳು ಮತ್ತು ವ್ಯವಸ್ಥಿತ ವಲಸೆಯಂತಹ ಬದಲಾವಣೆಗಳ ಹಿಂದಿನ ಕಾರಣಗಳನ್ನು ಸಮಿತಿ ಗುರುತಿಸಲಿದೆ. ಅಲ್ಲದೆ, ಧಾರ್ಮಿಕ ಅಥವಾ ಸಾಮಾಜಿಕ ಸಮುದಾಯಗಳ ಮಟ್ಟದಲ್ಲಿ ಕಂಡುಬರುವ ಜನಸಂಖ್ಯೆಯ ರಚನಾತ್ಮಕ ಬದಲಾವಣೆಗಳನ್ನು ಇದು ವಿಶ್ಲೇಷಿಸಲಿದೆ.

ಲೆ.ಜನರಲ್ ಧೀರಜ್ ಸೇಠ್ ಮುಂದಿನ ಸೇನಾ ಮುಖ್ಯಸ್ಥ

ಪುಟ ೧➜ **ಆಪರೇಷನ್ ಸಿಂದೂರದಲ್ಲಿ ಪ್ರಮುಖ ಪಾತ್ರ:** ಆಪರೇಷನ್ ಸಿಂದೂರ ವೇಳೆ ಪ್ರಮುಖ ಪಾತ್ರ ವಹಿಸಿದ್ದ ಸೇಠ್ ಅವರು, ಭಾರತದ ಪಶ್ಚಿಮ ಗಡಿಯಲ್ಲಿ ನಡೆದ ಪ್ರಮುಖ ತ್ರಿ-ಸೇವಾ (ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆ ಜಂಟಿ) ಮಿಲಿಟರಿ ಸಮರಾಭ್ಯಾಸಗಳ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ಹಿರಿಯ ಮಿಲಿಟರಿ ಅಧಿಕಾರಿಯು ಖಡಕ್ವಾಸ್ಲಾದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಳೆಯ ವಿದ್ಯಾರ್ಥಿಯಾಗಿದ್ದು, ಅವರನ್ನು ಡಿಸೆಂಬರ್ 1986ರಲ್ಲಿ ಆರ್ಮ್ಡ್ ಕಾಪ್ಸ್‌ಗೆ ನಿಯೋಜಿಸಲಾಯಿತು. ಸುಮಾರು ನಾಲ್ಕು ದಶಕಗಳ ಮಿಲಿಟರಿ ವೃತ್ತಿಜೀವನದಲ್ಲಿ, ಅವರು ಕಾರ್ಯಾಚರಣೆ, ಕಾರ್ಯತಂತ್ರ, ಸಾಮರ್ಥ್ಯ ಅಭಿವೃದ್ಧಿ ಮತ್ತು ಸಾಂಸ್ಥಿಕ ಕ್ಷೇತ್ರಗಳಲ್ಲಿ ವ್ಯಾಪಕ ಅನುಭವವನ್ನು ಹೊಂದಿದ್ದಾರೆ. ಲೆಫ್ಟಿನೆಂಟ್ ಜನರಲ್ ಸೇಠ್ ಅವರು ಹಲವು ಕಾರ್ಯಾಚರಣೆ ವೇಳೆ ಪ್ರತಿ ಹಂತದಲ್ಲೂ ಕಮಾಂಡ್ ಮಾಡಿದ್ದಾರೆ. ಅವರ ಕಮಾಂಡ್ ಕಾರ್ಯಗಳಲ್ಲಿ ಮರುಭೂಮಿ ವಲಯದಲ್ಲಿ ಆರ್ಮರ್ಡ್ ರೆಜಿಮೆಂಟ್, ವೆಸ್ಟರ್ನ್ ಥಿಯೇಟರ್‌ನಲ್ಲಿ ಆರ್ಮರ್ಡ್ ಬ್ರಿಗೇಡ್ ಮತ್ತು ಜಮ್ಮು-ಕಾಶ್ಮೀರದಲ್ಲಿ ಪ್ರತಿ-ಬಂಡಾಯ ಪಡೆ ಸೇರಿವೆ. ಲೆಫ್ಟಿನೆಂಟ್ ಜನರಲ್ ಆಗಿ, ಅವರು ಭಾರತೀಯ ಸೇನೆಯ ಪ್ರಮುಖ ಸ್ಟ್ರೈಕ್ ರಚನೆಗಳಲ್ಲಿ ಒಂದಾದ ಸುದರ್ಶನ್ ಚಕ್ರ ಕಾಪ್ಸ್‌ಗೆ ನೇತೃತ್ವ ವಹಿಸಿದರು. ತರುವಾಯ ಅವರು ದಿಲ್ಲಿ ಪ್ರದೇಶದ ಜನರಲ್ ಆಫೀಸರ್ ಕಮಾಂಡಿಂಗ್ ಆಗಿ ಸೇವೆ ಸಲ್ಲಿಸಿದ್ದಾರೆ.

ಶೃಂಗದಲ್ಲಿ ಗ್ಲೋಬಲ್‌ಸೌತ್ ಧ್ವನಿ ಭಾರತ

ಪುಟ ೧➜ ಮತ್ತು ಭಾರತದ ಉನ್ನತ ಶಿಕ್ಷಣ ಪರಿಸರ ವ್ಯವಸ್ಥೆಯಿಂದ ಹೊರಹೊಮ್ಮುವ ಆವಿಷ್ಕಾರಗಳಿಗೆ ಪ್ರಮುಖ ವೇಗವರ್ಧಕವಾಗಿ ಕಾರ್ಯನಿರ್ವಹಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಜೂ.18ರಂದು ತಮ್ಮ ಫ್ರಾನ್ಸ್ ಭೇಟಿಯ ಸಮಾಪನಕ್ಕೂ ಮುನ್ನ ಅವರು ಜಿ-7 ಸಭೆಯಲ್ಲಿ ಪಾಲ್ಗೊಳ್ಳುವ ಜತೆಗೆ ವಿವಾ ಟೆಕ್ -2026ರಲ್ಲೂ ಫ್ರಾನ್ಸ್ ಅಧ್ಯಕ್ಷರ ಜತೆಗೆ ಪಾಲ್ಗೊಳ್ಳಲಿದ್ದಾರೆ. ವಿವಾ ಟೆಕ್ ಯುರೋಪಿನ ಅತ್ಯಂತ ಮಹತ್ವದ ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಪ್ರಮುಖರು ಸೇರುವ ಕಾರ್ಯಕ್ರಮವಾಗಿದ್ದು, ಈ ಬಾರಿ ಭಾರತದ ಬಹುದೊಡ್ಡ ಉಪಸ್ಥಿತಿ ಈ ಕಾರ್ಯಕ್ರಮದಲ್ಲಿರುವುದು ಗಮನಾರ್ಹವೆನಿಸಿದೆ. ಪ್ಯಾರಿಸ್‌ನಲ್ಲಿರುವ ಭಾರತೀಯ ಸಮುದಾಯದ ಸದಸ್ಯರನ್ನು ಭೇಟಿ ಮಾಡಲೂ ಎದುರು ನೋಡುತ್ತಿರುವುದಾಗಿ ಮೋದಿ ತಿಳಿಸಿದ್ದಾರೆ.

ಸ್ಲೋವಾಕಿಯಾಗೆ ಪ್ರಥಮ ಭೇಟಿ

ಪುಟ ೧➜ ಅಲ್ಲದೆ ಅಲ್ಲಿನ ಉದ್ಯಮಪತಿಗಳ ಜತೆಗೂ ಮಹತ್ವದ ಸಂವಾದ ನಡೆಸಲಿದ್ದಾರೆ. ಯುರೋಪಿಯನ್ ಯೂನಿಯನ್ ಜತೆಗಿನ ವ್ಯೂಹಾತ್ಮಕ ಪಾಲುದಾರಿಕೆಯಲ್ಲಿ ಸ್ಲೋವಾಕಿಯಾ ಒಂದು ಮಹತ್ವದ ಹಾಗೂ ಮೌಲ್ಯಯುತ ಸದಸ್ಯನಾಗಿದೆ ಎಂದು ಮೋದಿ ಹೇಳಿದ್ದಾರೆ.

ಗೃಹಲಕ್ಷ್ಮಿಗೆ ಮರು ಅರ್ಜಿ

ಪುಟ ೧➜ ನಮ್ಮ ಸಚಿವರಿಂದಲೂ ಯಾವ ತಪ್ಪು ಮಾಡಿಸಲು ಬಿಡಬಾರದು. ಶಾಸಕರು ಕೂಡ ಯಾವುದಾದರೂ ಒತ್ತಡ ತಂದಲ್ಲಿ ನನ್ನ ಗಮನಕ್ಕೆ ತರಲು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಯಾವುದೇ ಸಚಿವರು ಕಾನೂನು ವಿರುದ್ಧವಾಗಿ ಯಾವುದೇ ಒತ್ತಡ ತಂದರೂ ಅಧಿಕಾರಿಗಳು ಅಂತಹ ಕೆಲಸಗಳನ್ನು ಮಾಡಬಾರದು. ಅಧಿಕಾರಿಗಳು ಕಾವಲಾಗಿ ನಮ್ಮ ಸರ್ಕಾರವನ್ನು ಕಾಯಬೇಕು ಎಂದು ಸಭೆಯಲ್ಲಿ ತಿಳಿಸಿದ್ದೇನೆ ಎಂದರು.

ತಿಂಗಳೊಳಗೆ ಸಮವಸ್ತ್ರ, ಶೂ, ಪಠ್ಯಪುಸ್ತಕ ವಿತರಣೆ

ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಮಕ್ಕಳನ್ನು ಶಾಲೆಗೆ ಕರೆತರುವಂತೆ ಮಾಡಬೇಕು. ಎಷ್ಟು ಶಾಲೆಗಳಲ್ಲಿ ಶೂನ್ಯ ಹಾಜರಾತಿಗಳಿವೆ ಎಂಬ ಬಗ್ಗೆ ಮಾಹಿತಿ ಇದ್ದು, ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು. ವಿದ್ಯಾರ್ಥಿಗಳ ಸಮವಸ್ತ್ರ, ಶೂ, ಪಠ್ಯಪುಸ್ತಕ ಮುಂದಿನ ಒಂದು ತಿಂಗಳಲ್ಲಿ ವಿತರಣೆಯಾಗಬೇಕು.

ಐಎಎಫ್‌ನ ಐವರು ಸಜೀವ ದಹನ

ಪುಟ ೧➜ **ತನಿಖೆಗೆ ಆದೇಶ:** ಅಪಘಾತಕ್ಕೆ ನಿಖರ ಕಾರಣವೇನು ಎಂಬುದನ್ನು ತಿಳಿಯಲು ಐಎಎಫ್ ತನಿಖೆಗೆ ಆದೇಶಿಸಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಎಎನ್-32 ವಿಮಾನವು ಲ್ಯಾಂಡ್ ಆಗುತ್ತಿದ್ದ ವೇಳೆ ವಾಯುಪಡೆ ನಿಲ್ದಾಣದ ಆವರಣದೊಳಗೆ ಪತನಗೊಂಡಿದ್ದರಿಂದ ಬೆಂಕಿಗೆ ಆಹುತಿಯಾಗಿದೆ. ಅಪಘಾತದ ಸ್ಥಳದಲ್ಲಿ ತನಿಖೆ ಮುಂದುವರಿದಿದ್ದು, ಅಪಘಾತಕ್ಕೆ ನಿಖರ ಕಾರಣ ತಿಳಿಯಲು ತನಿಖಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಎಂದು ವಾಯುಪಡೆ ತಿಳಿಸಿದೆ.

ಪ್ರಾಥಮಿಕ ವರದಿ ಬರುವವರೆಗೆ ಊಹಾಪೋಹಗಳಿಂದ ದೂರವಿರಲು ವಾಯಪಡೆ ವಿನಂತಿಸಿದೆ. ಸದ್ಯ ಅಪಘಾತದ ಕಾರಣ ತಿಳಿಯಲು ತನಿಖಾ ಸಮಿತಿ ರಚಿಸಲಾಗಿದೆ. ವಿಮಾನವು ಜೋರ್ಹಾತ್ ವಾಯುಪಡೆ ನಿಲ್ದಾಣದಿಂದ ಚಬುವಾ ಮಿಲಿಟರಿ ನೆಲೆಗೆ ತೆರಳಲು ಟೇಕ್ ಆಫ್ ಆದ ಕೂಡಲೇ ತಾಂತ್ರಿಕ ದೋಷದಿಂದ ಲ್ಯಾಂಡ್ ಆಗಿದ್ದು, ನಿಯಂತ್ರಣ ಕಳೆದುಕೊಂಡು ರನ್‌ವೇಯಿಂದ ಜಾರಿದೆ ಎಂದು ಮೂಲಗಳು ತಿಳಿಸಿವೆ.

ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಸಿಬ್ಬಂದಿಯನ್ನು ಸ್ಕ್ವಾಡ್ರನ್ ಲೆಫ್ಟಿನೆಂಟ್ ಪ್ರಶಾಂತ್ ಸಿಂಗ್, ಫ್ಲೈಟ್ ಲೆಫ್ಟಿನೆಂಟ್ ಶುಭಂ ಕುಮಾರ್, ಸಾರ್ಜೆಂಟ್ ಜಿತೇಂದ್ರ ಶರ್ಮಾ, ಅಗ್ನಿವೀರ್ ವಾಯು ಖೇಮರಾಮ್ ಕುಮಾವತ್ ಮತ್ತು ಅಗ್ನಿವೀರ್ ವಾಯು ಡ್ಯಾನಿಶ್ ಆಲಂ ಎಂದು ಗುರುತಿಸಲಾಗಿದೆ.

ಅವಳಿ-ಎಂಜಿನ್ ಮಿಲಿಟರಿ ಸಾರಿಗೆ ವಿಮಾನ

ಎಎನ್-32 ಒಂದು ಅವಳಿ-ಎಂಜಿನ್ ಮಿಲಿಟರಿ ಸಾರಿಗೆ ವಿಮಾನವಾಗಿದ್ದು, ಇದನ್ನು ಭಾರತೀಯ ವಾಯುಪಡೆಯು ಎತ್ತರದ ಮತ್ತು ದೂರದ ಪ್ರದೇಶಗಳು ಸೇರಿದಂತೆ ವೈವಿಧ್ಯಮಯ ಭೂಪ್ರದೇಶಗಳಲ್ಲಿ ಲಾಜಿಸ್ಟಿಕ್ಸ್, ಸರಕು ಸಾಗಣೆ ಮತ್ತು ಕಾರ್ಯಾಚರಣೆಗೆ ವ್ಯಾಪಕವಾಗಿ ಬಳಸಲಾಗುತ್ತದೆ.

ಪಿಓಕೆ ಜನರಿಂದ ಮೋದಿ ಹೆಸರಲ್ಲಿ ವಿಶೇಷ ಹೋಮ

ಪುಟ ೧➜ ಈ ಸಂದರ್ಭದಲ್ಲಿ ಮಾತನಾಡಿದ ಅರ್ನಿಯಾ ಗ್ರಾಮದ ಸರಪಂಚ್ ಬಲ್ಬೀರ್ ಕೌರ್, ಇಂದು ನಾವು ನಿರ್ಭಯವಾಗಿ ಬಯಲಿನಲ್ಲಿ ಕುಳಿತು ಪ್ರಾರ್ಥನೆ ಸಲ್ಲಿಸಲು ಸಾಧ್ಯವಾಗಿರುವುದು ಪ್ರಧಾನಿ ಮೋದಿ ಅವರ ದೃಢ ನಾಯಕತ್ವ ಮತ್ತು ನೀತಿಗಳ ಫಲ ಎಂದು ಹೇಳಿದರು. ಜತೆಗೆ, ಮೋದಿ ಅವರು ಇನ್ನೂ 24 ವರ್ಷ ದೇಶ ಮುನ್ನಡೆಸಲಿ ಎಂಬುದು ತಮ್ಮ ಆಶಯ ಎಂದು ತಿಳಿಸಿದರು. ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಹಲವರು, ತಮ್ಮ ಪೂರ್ವಜರ ನೆಲೆಯಾದ ಪಿಓಕೆ ಪ್ರದೇಶವು ಭವಿಷ್ಯದಲ್ಲಿ ಭಾರತದೊಂದಿಗೆ ಸೇರ್ಪಡೆಯಾಗಲಿ ಎಂಬ ನಿರೀಕ್ಷೆಯನ್ನೂ ವ್ಯಕ್ತಪಡಿಸಿದರು. ವಿಭಜನೆಯ ವೇಳೆ ಗಡಿಯಾಚೆಯಿಂದ ವಲಸೆ ಬಂದ ಕುಟುಂಬಗಳೇ ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ ಎನ್ನಲಾಗಿದೆ.

ಸರ್ಕಾರದಿಂದ ಖಾಸಗಿ ಉದ್ಯೋಗ ವಿನಿಮಯ ಕೇಂದ್ರ: ಶಿವಕುಮಾರ್



ಬೆಂಗಳೂರು: ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಖಾಸಗಿ ಉದ್ಯೋಗ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಸ್ಥಳೀಯ ಯುವಕರಿಗೆ ಉದ್ಯೋಗ ಕಲ್ಪಿಸಲು ಸೇತುವೆ ನಿರ್ಮಿಸಲಾಗುವುದು. ಆಮೂಲಕ ಯುವ ಯುಗವನ್ನು ಆರಂಭಿಸುತ್ತಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಖಾಸಗಿ ವಲಯದಲ್ಲಿ ಉದ್ಯೋಗ ಬಯಸುವವರು ಇಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಉದ್ಯೋಗಿಗಳು ಅಗತ್ಯವಿರುವ ಕಂಪನಿಗಳು ಕೂಡ ತಮಗೆ ಬೇಕಾಗಿರುವ ಉದ್ಯೋಗಿಗಳ ಅರ್ಹತೆ ಮತ್ತು ಸಂಖ್ಯೆಯ ಮಾಹಿತಿ ನೀಡುತ್ತಾರೆ. ಕಂಪನಿಗಳಿಗೆ ಶೇ.100 ರಷ್ಟು ಸ್ಥಳೀಯರನ್ನೇ ತೆಗೆದುಕೊಳ್ಳಿ ಎಂದು ಹೇಳಲು ಆಗುವುದಿಲ್ಲ, ಇದಕ್ಕಾಗಿ ನಿರ್ದಿಷ್ಟ ಪ್ರಮಾಣ ನಿಗದಿ ಮಾಡಲಾಗುವುದು ಎಂದು ವಿವರಿಸಿದರು. ನಾವು ನೂತನ ಸಿಎಸ್‌ಆರ್ ನೀತಿ ತರುತ್ತಿದ್ದೇವೆ. ಕಂಪನಿಗಳು ತಮ್ಮ ವಾರ್ಷಿಕ ಆದಾಯದ ಶೇ.2 ರಷ್ಟು ಹಣವನ್ನು ಸಿಎಸ್‌ಆರ್ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಎಂಬ ನಿರ್ದೇಶನವಿದೆ. ಈ ನಿಧಿಯನ್ನು ಗ್ರಾಮೀಣ ಭಾಗದ ಶಾಲೆಗಳ ನಿರ್ಮಾಣಕ್ಕೆ ಬಳಸಲು ಹಳ್ಳಿಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಬೇಕಾದ ಮೂಲಸೌಕರ್ಯ ಒದಗಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಭಾರತ ಜೋಡೊ ನನ್ನ ಕನಸು: ಡಿಕೆಶಿ

ನನ್ನ ಕನಸಿನ ಕಾರ್ಯಕ್ರಮ ಭಾರತ ಜೋಡೊ ಯುವಕರ ಸಂಘ ನಿರ್ಮಿಸಲು ಮುಂದಾಗಿದ್ದೇವೆ. ರಾಜ್ಯದಲ್ಲಿ 6 ಸಾವಿರ ಗ್ರಾಮ ಪಂಚಾಯ್ತಿಗಳಿದ್ದು, 4 ಸಾವಿರ ನಗರ ಪ್ರದೇಶದ ವಾರ್ಡ್‌ಗಳಿವೆ. ಈ ಭಾಗದಲ್ಲಿ ಯುವಕರ ಸೌಹಾರ್ದತೆಗೆ ಹಾಗೂ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ.

ಆಶ್ರಮಕ್ಕೆ ಭೇಟಿ



ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಬೆಂಗಳೂರಿನ ಆರ್.ಟಿ.ನಗರದ ಸುಮಂಗಲಿ ಸೇವಾ ಆಶ್ರಮಕ್ಕೆ ಭೇಟಿ ನೀಡಿ ಪದ್ಮಶ್ರೀ ಪುರಸ್ಕೃತೆ ಸುಶೀಲಮ್ಮ ಅವರನ್ನು ಗೌರವಿಸಿದರು.

ಅಪ್ರಾಪ್ತರ ಮದ್ಯವ್ಯಸನಕ್ಕೆ ಕಠಿಣ ಕ್ರಮ: ಪ್ರಿಯಾಂಕ್



ಬೆಂಗಳೂರು: ಕರ್ನಾಟಕದಲ್ಲಿ ಮದ್ಯಪಾನ ಮಾಡಲು ಮತ್ತು ಖರೀದಿಸಲು ಕಾನೂನುಬದ್ಧ ವಯಸ್ಸು 21 ವರ್ಷ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯಪಾನ ಮಾಡುವುದು, ಮಾರಾಟ ಮಾಡುವುದು ಅಥವಾ ಅನುಮತಿಸುವುದು ಕಾನೂನುಬಾಹಿರವಾಗಿದ್ದು, ಪರವಾನಗಿ ಪಡೆದ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಅಪ್ರಾಪ್ತರಿಗೆ ಮದ್ಯಪಾನ ಮಾರಾಟ ಮಾಡದಂತೆ ಹಾಗೂ ಬಾರ್, ಪಬ್, ಬ್ರೆವರೀಸ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು ಎಂದು ತೀರ್ಮಾನ ಕೈಗೊಂಡು, ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಅಧಿಸೂಚನೆಯು ಅಪ್ರಾಪ್ತ ವಯಸ್ಕರ ಮದ್ಯಪಾನವನ್ನು ತಡೆಗಟ್ಟುವುದು, ಯುವಜನರನ್ನು ರಕ್ಷಿಸುವುದು ಮತ್ತು ರಾಜ್ಯಾದ್ಯಂತ ಜವಾಬ್ದಾರಿಯುತ ಮದ್ಯ ಮಾರಾಟ ಮತ್ತು ಸೇವನೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಆದರೆ ಇದನ್ನು ತಪ್ಪಾಗಿ ಅರ್ಥೈಸಿಕೊಂಡ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಮದ್ಯಪಾನ ಮಾಡುವ ಸಂಸ್ಥೆಗಳು ಪ್ರತಿಯೊಬ್ಬ ವ್ಯಕ್ತಿಯ ಗುರುತಿನ ಚೀಟಿಯನ್ನು ಪರಿಶೀಲಿಸುವ ಮತ್ತು ಸಂಗ್ರಹಿಸುವ ಅಗತ್ಯವಿಲ್ಲ. ಅವರು 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಗುರುತಿನ ಚೀಟಿಯನ್ನು ಪರಿಶೀಲಿಸಬೇಕು ಮತ್ತು ವಯಸ್ಕರು ಜೊತೆಗಿಲ್ಲದಿದ್ದರೆ ಪ್ರವೇಶವನ್ನು ನಿರಾಕರಿಸಬೇಕು ಎಂದು ಸೂಚಿಸಿದ್ದೇನೆ ಎಂದಿದ್ದಾರೆ. ಹದಿಹರೆಯದವರು ತಮ್ಮ ಆವರಣದಲ್ಲಿ ಮದ್ಯಪಾನ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕು ಎಂದರು.

ಕಿರುಸುದ್ದಿ

ನಾಳೆ 'ಅಗತ್ಯಾರ್-ದ ಯುನಿಫೀರ್' ಕೃತಿ ಬಿಡುಗಡೆ

ಮೈಸೂರು: ಚೆನ್ನೈಯ ಕಲೈಮಗಳ್ ಪಬ್ಲಿಕೇಷನ್ಸ್‌ನಿಂದ 'ಅಗತ್ಯಾರ್-ದ ಯುನಿಫೀರ್'ಎಂಬ ಕೃತಿಯ ಬಿಡುಗಡೆ ಸಮಾರಂಭವು ಜೂ.15ರಂದು ದಿಲ್ಲಿಯ ಉಪರಾಷ್ಟ್ರಪತಿ ಎನ್‌ಕ್ಲೇವ್‌ನಲ್ಲಿ ಸಂಜೆ 4ಗಂಟೆಗೆ ನಡೆಯಲಿದೆ. ಈ ಮಹತ್ವದ ಕೃತಿಯನ್ನು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಬಿಡುಗಡೆಗೊಳಿಸಲಿದ್ದಾರೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಆರ್‌ಎಸ್‌ಎಸ್ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಅವರು ಭಾಗವಹಿಸಲಿದ್ದಾರೆ. 12,000 ವರ್ಷಗಳ ಹಿಂದಿನ ಮಹರ್ಷಿ ಅಗಸ್ತ್ಯರು ಕರ್ನಾಟಕದೊಂದಿಗೆ ಹೊಂದಿದ್ದ ಐತಿಹಾಸಿಕ ಸಂಬಂಧಗಳು, ಕಾವೇರಿ, ಕೊಡಗಿನ ನಂಟು, ಸ್ಥಾಪಿಸಿದ ಪುಣ್ಯ ಸ್ಥಳಗಳು ಸೇರಿದಂತೆ ಇಲ್ಲಿನ ಹೃದಯಗಳನ್ನು ಬೆಸೆಯುವ , ಆತ್ಮೋನ್ನತಿ ಸಾಧಿಸುವ , ಧರ್ಮ, ಏಕತೆ ಮತ್ತು ಆಂತರಿಕ ಶಾಂತಿಯನ್ನು ಬೆಳಗಿಸುವ ಸಂದೇಶ ಹೊಂದಿರುವ ಈ ಕೃತಿ ಇದಾಗಿದೆ . ಖ್ಯಾತ ಯೋಗ ಮತ್ತು ಆಯುರ್ವೇದ ತಜ್ಞರೂ, ಸಂಶೋಧಕರೂ ಆಗಿರುವ ಡಾ.ಸುಧಾ ಎಂ.ಎನ್.ಮತ್ತು ಮೈಸೂರಿನ ಖ್ಯಾತ ನ್ಯಾಯವಾದಿಯಾಗಿರುವ ಓ.ಶ್ಯಾಮ್ ಭಟ್ ಅವರು ಈ ಕೃತಿಯ ಲೇಖಕರಾಗಿದ್ದಾರೆ.

ಎರಡು ಪ್ರತ್ಯೇಕ ಅಪಘಾತ: ಮೂವರ ಸಾವು

ಹೊಸಕೋಟೆ: ತಾಲೂಕಿನಲ್ಲಿ ಶನಿವಾರ ಸಂಭವಿಸಿದ ಎರಡು ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಮೂವರು ಮೃತಪಟ್ಟಿದ್ದು, ಓರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ಜಿಲ್ಲೆಯ ದಾಬಸ್‌ಪೇಟೆಯಿಂದ ಚೆನ್ನೈಗೆ ಸಂಪರ್ಕ ಕಲ್ಪಿಸುವ ಎಸ್‌ಟಿಆರ್‌ಆರ್ ಹೆದ್ದಾರಿಯ ದೊಡ್ಡಹುಲ್ಲೂರು ಸಮೀಪ ನಡೆದಿದೆ. ಮರ್ಸಿಡಿಸ್ ಬೆಂಜ್ ಕಾರು ನಿಯಂತ್ರಣ ತಪ್ಪಿ ರಸ್ತೆ ಬದಿಯ ಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಅಪಘಾತದ ತೀವ್ರತೆಗೆ ಕಾರಿನಲ್ಲಿದ್ದ ಶಾಜಿಯಾ ಖಾನ್ (28)ಹಾಗೂ ರಿಜ್ವಾನ್ (32)ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ರಭಸಕ್ಕೆ ರಿಜ್ವಾನ್ ಕಾರಿನಿಂದ ಹೊರಗೆ ಎಸೆಯಲ್ಪಟ್ಟಿದ್ದು, ಕೆಲ ದೂರದಲ್ಲಿ ಅವರ ಮೃತದೇಹ ಪತ್ತೆಯಾಗಿದೆ. ಇನ್ನೊಂದು ಅಪಘಾತವು ಹೊಸಕೋಟೆ ತಾಲೂಕಿನ ಹಲಸಹಳ್ಳಿ ಗೇಟ್ ಸಮೀಪ ನಡೆದಿದೆ. ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮೋನಿಷಾ (23)ಎಂಬ ಯುವತಿ ಸ್ಥಳದಲ್ಲೇ ಮೃತಪಟ್ಟಿದ್ದು, ಬೈಕ್ ಸವಾರ ಪ್ರೀತಮ್ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು:ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅರ್ಹ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಕೃಷಿ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಅ.15 ರಿಂದ 18 ರವರೆಗೆ ಜಿಕೆವಿಕೆ ಆವರಣದಲ್ಲಿ ವೈವಿಧ್ಯಮಯ ಕೃಷಿ: ಮುಂದಿನ ಪೀಳಿಗೆಗೆ ಎಂಬ ಘೋಷವಾಕ್ಯದೊಂದಿಗೆ ಹಮ್ಮಿಕೊಳ್ಳಲಾಗಿರುವ ಕೃಷಿ ಮೇಳ-2026ರ ಸಂದರ್ಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ/ ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ/ ರೈತ ಮಹಿಳೆ ಪ್ರಶಸ್ತಿ, ಕೆನರಾ ಬ್ಯಾಂಕ್ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗಳು, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ/ ರೈತ ಮಹಿಳೆ ಪ್ರಶಸ್ತಿ, ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗಳು (ಒಟ್ಟು 6), ತಾಲೂಕು ಮಟ್ಟದ ಯುವ ರೈತ ಮತ್ತು ಯುವ ರೈತ ಮಹಿಳೆ ಪ್ರಶಸ್ತಿಗಳ (ಒಟ್ಟು 35)ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಭಾರತ ಶಕ್ತಿಶಾಲಿ ರಾಷ್ಟ್ರವಾಗಿ ಬೆಳೆಯುತ್ತಿದೆ: ಡಾ.ಅಗರ್ವಾಲ್

ಆರ್ಥಿಕ ದರ ಶೇ.7.7 ಹೆಚ್ಚಳ



ಮಂಗಳೂರು: ಭಾರತ ಅತ್ಯಂತ ಶಕ್ತಿಶಾಲಿ ರಾಷ್ಟವಾಗಿ ಬೆಳೆಯುತ್ತಿದ್ದು, 2031ರ ವೇಳೆಗೆ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಶಾಲಿ ರಾಷ್ಟವಾಗಿ ಹೊರಹೊಮ್ಮಲಿದೆ ಎಂದು ರಾಜ್ಯಸಭಾ ಸದಸ್ಯ, ಬಿಜೆಪಿ ರಾಷ್ಟೀಯ ಪ್ರಧಾನ ಕಾರ್ಯದರ್ಶಿ ಡಾ.ರಾಧಾ ಮೋಹನ್ ದಾಸ್ ಅಗರ್ವಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ವತಿಯಿಂದ ನಗರದ ಮೋರ್ಗನ್ಸ್ ಗೇಟ್‌ನಲ್ಲಿರುವ ಪಾಲೆಮಾರ್ ಗಾರ್ಡನ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪ್ರಧಾನಿ ನರೇಂದ್ರ ಮೋದಿಯವರ 12 ವರ್ಷದ ಸಂಕಲ್ಪ ಸಮಾವೇಶದ ಕಾರ್ಯಕ್ರಮಕ್ಕೆ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. 2013-14ರಲ್ಲಿ ಭಾರತವು ಕೇವಲ 1.9 ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಿತ್ತು. ಅದು 4.1 ಟ್ರಿಲಿಯನ್ ಡಾಲರ್‌ಗೆ ಬೆಳೆದಿದೆ ಎಂದರು.

ಸಂದಿಗ್ಧ ಪರಿಸ್ಥಿತಿಯಲ್ಲೂ ಆರ್ಥಿಕ ಬೆಳವಣಿಗೆಯ ದರ ಹೆಚ್ಚಾಗಿರುವುದು ಮಹತ್ವದ ವಿಚಾರ. ಇದು ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಡಾ.ಅಗರ್ವಾಲ್ ಹೇಳಿದರು.

ಕೇಂದ್ರದ ಯೋಜನೆಗಳ ಸದುಪಯೋಗ: ಕರ್ನಾಟಕದಲ್ಲಿ ಜನ್-ಧನ್ ಯೋಜನೆಯಲ್ಲಿ 21.2 ಮಿಲಿಯನ್ ಖಾತೆಗಳನ್ನು ತೆರೆಯಲಾಗಿದೆ. ಜೀವನ್ ಜ್ಯೋತಿ ವಿಮೆಯಿಂದ 1.6 ಕೋಟಿ ಜನರು ಹಾಗೂ ಸುರಕ್ಷಾ ವಿಮೆಯಿಂದ 2.6 ಕೋಟಿ ಜನರು ಮತ್ತು ಅಟಲ್ ಪಿಂಚಣಿ ಯೋಜನೆಯಿಂದ48.9 ಲಕ್ಷಜನರು ಪ್ರಯೋಜನ ಪಡೆದಿದ್ದಾರೆ ಎಂದು ವಿವರಿಸಿದರು. ಮುದ್ರಾ ಯೋಜನೆಯಲ್ಲಿ ಉದ್ಯಮಿಗಳಿಗೆ ರೂ.40 ಲಕ್ಷ ಕೋಟಿ ವಿತರಿಸಲಾಗಿದೆ. 57 ಕೋಟಿ ಜನರು ಫಲಾನುಭವಿ. ರೂ.7160 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಬೆಂಗಳೂರು ಮೆಟ್ರೋಲೇನ್ ನ್ನು ಉದ್ಘಾಟಿಸಲಾಗಿದೆ. ರೂ.15610 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಬೆಂಗಳೂರು ಮೆಟ್ರೋ ಲೈನ್ ಪೇಸ್ 3 ಗೆ ಅಡಿಪಾಯ ಹಾಕಲಾಗಿದೆ.

> ಪ್ರಧಾನಿ ಮೋದಿಯವರ ಅಧಿಕಾರಾವಧಿಯಲ್ಲಿ ರಷ್ಯಾ-ಉಕ್ರೇನ್ ಮತ್ತು ಅಮೆರಿಕಾ-ಇರಾನ್ ಸಂಘರ್ಷಗಳಿಂದ ಉಂಟಾದ ಇಂಧನ ಬಿಕ್ಕಟ್ಟು ಮತ್ತು ವಿಶ್ವ ಆರ್ಥಿಕ ಹಿಂಜರಿತ ಸೇರಿದಂತೆ ಜಾಗತಿಕ ಸವಾಲುಗಳ ನಡುವೆಯೂ, ಭಾರತವು ವಿಶ್ವದ ಅತ್ಯುನ್ನತ ಆರ್ಥಿಕ ಬೆಳವಣಿಗೆಯ ದರ ಶೇಕಡಾ 7.7ರಷ್ಟು ತಲುಪಿದೆ.
> ■ **ಡಾ.ರಾಧಾಮೋಹನ್ ದಾಸ್ ಅಗರ್ವಾಲ್**, ಬಿಜೆಪಿ ರಾಷ್ಟೀಯ ಪ್ರಧಾನ ಕಾರ್ಯದರ್ಶಿ

ವಿಶ್ವದ ಅತಿ ಉದ್ದದ ಪ್ಲಾಟ್ ಫಾರ್ಮ್ ಅನ್ನು ಸಿದ್ಧಾರೂಢ ಸ್ವಾಮಿ ರೈಲು ನಿಲ್ದಾಣ ಹುಬ್ಬಳ್ಳಿಯಲ್ಲಿ ನಿರ್ಮಿಸಲಾಗಿದೆ. ಮೋದಿಯವರ ಅವಧಿಯಲ್ಲಿ ತಡೆರಹಿತ ಭಾರತ್ ಎಕ್ಸ್‌ಪ್ರೆಸ್ ಮತ್ತು ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಓಡಾಟ ಆರಂಭಿಸಿವೆ. ಧಾರವಾಡ, ಯಾದಗಿರಿ, ಚಿತ್ರದುರ್ಗ ಮತ್ತು ರಾಯಚೂರಿನಲ್ಲಿ ಹೊಸ ಕೇಂದ್ರೀಯ ವಿದ್ಯಾಲಯಗಳನ್ನು ತೆರೆಯಲಾಗಿದ್ದು, ಬಳ್ಳಾರಿಯಲ್ಲಿ ನವೋದಯ ವಿದ್ಯಾಲಯವನ್ನು ತೆರೆಯಲಾಗಿದೆ ಎಂದವರು ವಿವರಿಸಿದರು.

ಕಳೆದ 12 ವರ್ಷಗಳಲ್ಲಿ 25 ಕೋಟಿ ಜನರು ಬಡತನ ರೇಖೆಗಿಂತ ಮೇಲೆ ಬಂದಿದ್ದಾರೆ. ನಿರುದ್ಯೋಗ ದರ ಕೇವಲ ಶೇ.5.1 ಮತ್ತು ಹಣದುಬ್ಬರ ಕೇವಲ 4.5 ಮತ್ತು ತಲಾ ಆದಾಯ ರೂ. 49000 ರಿಂದ ರೂ. 2.35 ಲಕ್ಷಕ್ಕೆ ಏರಿದೆ ಎಂದು ಅಗರ್‌ವಾಲ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಉಮಾನಾಥ ಕೋಟ್ಯಾನ್, ಭಾಗೀರಥಿ ಮುರುಳ್ಯ, ರಾಜೇಶ್ ನ್ಯಾಕ್, ಹರೀಶ್ ಪೂಂಜ, ವಿಧಾನ ಪರಿಷತ್ ಸದಸ್ಯರಾದ ಕೆ.ಪ್ರತಾಪ ಸಿಂಹ ನಾಯಕ್, ಕಿಶೋರ್ ಕುಮಾರ್ ಪುತ್ತೂರು, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಉಪಸ್ಥಿತರಿದ್ದರು.

ನಸೀರ್ ಅಹ್ಮದ್ ಕುಟುಂಬ ದಿವಾಳಿಯೆಂದು ಘೋಷಣೆ

ಸಾಲ ಪ್ರಕರಣವೇನು?

ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್ ವಿವಿಧ ಬ್ಯಾಂಕುಗಳು ಸಾಲ ಸೌಲಭ್ಯಗಳನ್ನು ಒದಗಿಸಿದ್ದವು. ಈ ಸಾಲಗಳಿಗೆ ನಸೀರ್ ಅಹ್ಮದ್, ಅವರ ಪತ್ನಿ ನುರುಘತ್ ಆಯಿಷಾ ನಸೀರ್, ಪುತ್ರ ಅವೈಜ್ ಅಹ್ಮದ್ ವೈಯಕ್ತಿಕ ಖಾತರಿದಾರರಾಗಿದ್ದರು. 2018ರಲ್ಲಿ ಕಂಪನಿಯ ಸಾಲ ಖಾತೆಯನ್ನು ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸಿದ ಬಳಿಕ ಬ್ಯಾಂಕುಗಳು ವಸೂಲಾತಿ ಪ್ರಕ್ರಿಯೆ ಆರಂಭಿಸಿದ್ದವು.



ಬೆಂಗಳೂರು: ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್, ಅವರ ಪತ್ನಿ ನುರುಘತ್ ಆಯಿಷಾ ನಸೀರ್ ಹಾಗೂ ಪುತ್ರ ಅವೈಜ್ ಅಹ್ಮದ್ ಅವರನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರು ಪೀಠವು ದಿವಾಳಿಗಳೆಂದು ಘೋಷಿಸಿದೆ. ಈ ಬೆಳವಣಿಗೆಯಿಂದ ಅವರು ವಿಧಾನ ಪರಿಷತ್ ಸದಸ್ಯತ್ವದಿಂದ ಅನರ್ಹರಾಗುವ ಸಾಧ್ಯತೆ ಎದುರಾಗಿದೆ.

ನಸೀರ್ ಅಹ್ಮದ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿದ್ದ M/s ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್ ಕಂಪೆನಿಯ ಸಾಲಗಳಿಗೆ ಮೂವರೂ ವೈಯಕ್ತಿಕ ಖಾತರಿದಾರರಾಗಿದ್ದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಹಾಗೂ ಐಡಿಬಿಐ ಬ್ಯಾಂಕ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಫಣಿಖಿ ಸುನಿಲ್ ಕುಮಾರ್ ಅಗರ್ವಾಲ್ (ನ್ಯಾಯಾಂಗ ಸದಸ್ಯ) ಮತ್ತು ರಾಧಾಕೃಷ್ಣ ಶ್ರೀಪಾದ (ತಾಂತ್ರಿಕ ಸದಸ್ಯ) ಅವರಿದ್ದ


» ವಿಧಾನ ಪರಿಷತ್ ಸದಸ್ಯತ್ವದಿಂದ ಅನರ್ಹರಾಗುವ ಸಾಧ್ಯತೆ

ಪೀಠವು ಜೂನ್ 8ರಂದು ಆದೇಶ ನೀಡಿದೆ.

ಸೆಕ್ಷನ್ 125ರ ಅಡಿಯಲ್ಲಿ ರವೀಂದ್ರ ಬೆಲೆಯೂರ್ ಅವರನ್ನು ದಿವಾಳಿತನ ಟ್ರಸ್ಟಿಯಾಗಿ ನೇಮಿಸಿದೆ. ಇದರೊಂದಿಗೆ ನಸೀರ್ ಅಹ್ಮದ್, ಅವರ ಪತ್ನಿ ಮತ್ತು ಪುತ್ರರ ಆಸ್ತಿಗಳ ಮೇಲಿನ ನಿಯಂತ್ರಣ ಟ್ರಸ್ಟಿಗೆ ವರ್ಗಾವಣೆಯಾಗಿದ್ದು, ಸಾಲದಾತರಿಂದ ಬಾಕಿ ಹಣ ವಸೂಲಿ ಪ್ರಕ್ರಿಯೆ ಮುಂದುವರಿಯಲಿದೆ.

ತಾವು ಬ್ಯಾಂಕುಗಳಿಗೆ ನೇರವಾಗಿ ವೈಯಕ್ತಿಕ ಖಾತರಿ ನೀಡಿಲ್ಲ, ಆದ್ದರಿಂದ ತಮ್ಮ ವಿರುದ್ಧ ದಿವಾಳಿತನ ಪ್ರಕ್ರಿಯೆ ನಡೆಸಲು ಸಾಧ್ಯವಿಲ್ಲ ಎಂದು ನಸೀರ್ ಅಹ್ಮದ್, ಅವರ ಪತ್ನಿ ಹಾಗೂ ಪುತ್ರ ವಾದಿಸಿದ್ದರು. ಆದರೆ, ಬ್ಯಾಂಕುಗಳು ಮತ್ತು ಖಾತರಿದಾರರ ನಡುವಿನ ಕಾನೂನುಬದ್ಧ ಸಂಬಂಧ ಈಗಾಗಲೇ ಸ್ಥಾಪಿತವಾಗಿದೆ ಎಂದು ಪೀಠ ಈ ವಾದವನ್ನು ತಿರಸ್ಕರಿಸಿತು.

ಕಬಿನಿ ಜಲಾಶಯ ನೀರಿನ ಮಟ್ಟ 25 ಅಡಿ ಕುಸಿತ



ಮೈಸೂರು: ಕೊನೆಗೂ ಕೇರಳವನ್ನು ನಿಗದಿತ ಸಮಯಕ್ಕೆ ಪ್ರವೇಶಿಸಿರುವ ಮುಂಗಾರುಮಳೆವೈನಾಡುಹಾಗೂಪಶ್ಚಿಮ ಘಟ್ಟ ಪ್ರದೇಶದಲ್ಲಿ ಸುರಿಯಲಾರಂಭಿಸಿದೆ. ಇದರಿಂದಾಗಿ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಇದೀಗ ಸ್ವಲ್ಪ ಪ್ರಮಾಣದಲ್ಲಿ ಒಳ ಹರಿವಿನ ಮಟ್ಟ ಏರಿಕೆಯಾಗಿದೆ.

ತಮಿಳುನಾಡಿಗೆ ನೀರು ಹರಿಸಲೆಂದೇ ಇರುವ ಜಲಾಶಯ ಎಂದು ಕುಖ್ಯಾತಿಗೆ ಒಳಗಾಗಿರುವ ಕಬಿನಿ ಜಲಾಶಯ ಈ ಬಾರಿ ಬರಿದಾಗಿ ಹೋಗಿದೆ. ಜಲಾಶಯದ ನೀರಿನ ಮಟ್ಟ ತಳಕಂಡಿದ್ದು, ಇದರಿಂದಾಗಿ ಮೈಸೂರು-ಚಾಮರಾಜನಗರ, ಬೆಂಗಳೂರು ಜಿಲ್ಲೆಗಳ ಜನರಿಗೆಕುಡಿಯುವ ನೀರಿಗೂ ಸಮಸ್ಯೆ ಎದುರಾಗುವ ಆತಂಕ ಪರಿಸ್ಥಿತಿ ಇದೆ. 2284 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಈ ಜಲಾಶಯದ ಪ್ರಸ್ತುತ ನೀರಿನ ಮಟ್ಟ 2252.69 ಅಡಿ ಇದೆ. ಈಗ 2144 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕಳೆದ ಬಾರಿ ನದಿಗೆ 5 ಸಾವಿರ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿತ್ತು. ಕೇವಲ 600 ಕ್ಯೂಸೆಕ್ ನೀರನ್ನು ಮಾತ್ರ ಹೊರ ಬಿಡಲಾಗುತ್ತಿದೆ. ಈಗ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ 16 ಮಿ.ಮೀ ಮಳೆಯಾಗುತ್ತಿದೆ. ವೈನಾಡು ಹಾಗೂ ಪಶ್ಚಿಮ ಘಟ್ಟ ಅರಣ್ಯ ಪ್ರದೇಶಗಳಲ್ಲಿ ಮುಂಗಾರು ಮಳೆ ಆರ್ಭಟಿಸಿದರೆ ಮಾತ್ರ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುವ ಸಾಧ್ಯತೆಗಳಿವೆ.

ಮಳೆ ನಿರೀಕ್ಷೆಯಲ್ಲಿ ರೈತರು

ಕಬಿನಿ ಜಲಾಶಯದ ವ್ಯಾಪ್ತಿಯಲ್ಲಿ 1.10 ಲಕ್ಷಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಾಗುತ್ತಿದೆ. ಮೈಸೂರು-ಚಾಮರಾಜನಗರ ಜಿಲ್ಲೆಯ ರೈತರು ಕಬಿನಿ ಜಲಾಶಯದ ನೀರನ್ನು ನಂಬಿ ಜೋಳ, ಕಬ್ಬು, ಭತ್ತ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ಬಾರಿ ಜಲಾಶಯ ಬರಿದಾಗಿದ್ದ ಕಾರಣ ಬರಗಾಲ ಆವರಿಸಿಕೊಳ್ಳುವುದೇ ಎಂಬ ಆತಂಕ ರೈತರು, ಜಲಾಶಯ ವ್ಯಾಪ್ತಿಯ ಜನರಲ್ಲಿ ಆವರಿಸಿಕೊಂಡಿತ್ತು.

ಅಧಿಕಾರಿಗೆ ಹೊಡೆದ ಸಂತ್ರಸ್ತ ರೈತ



ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿನ ಅಧಿಕಾರಿಯೊಬ್ಬರಿಗೆ ಸಂತ್ರಸ್ತ ರೈತ ಚಪ್ಪಲಿ ಏಟು ನೀಡಿದ ಘಟನೆ ಶನಿವಾರ ನಡೆದಿದೆ.

ಸಂತ್ರಸ್ತ ರೈತ ಬಸಪ್ಪ ಎಂಬಾತನ ಜಮೀನು ಸ್ವಾಧೀನಪಡಿಸಿಕೊಂಡು ಭೂ ಪರಿಹಾರ ನೀಡುವಲ್ಲಿ ವಿಳಂಬ ಮಾಡುತ್ತಿರು ವುದನ್ನು ಕಂಡು ಆಕ್ರೋಶಗೊಂಡಿರುವ ರೈತ ಪದೇ ಪದೆ ಬಿಟಿಡಿಎ ಕಚೇರಿಗೆ ಹೋದರೂ ತನ್ನ ಕೆಲಸ ಆಗದೇ ಇದ್ದಾಗ ಬಿಟಿಡಿಎ ಕಚೇರಿಯ ಪ್ರಥಮ ದರ್ಜೆ ನೌಕರ ಅಂಕದ ಎಂಬಾತನಿಗೆ ಚಪ್ಪಲಿ ಏಟು ಬಿದ್ದಿದೆ. ರೈತ ಬಸಪ್ಪ ಅಧಿಕಾರಿಯ ಬಟ್ಟೆ ಹಿಡಿದು ಕೂಡ ಎಳೆದಾಡಿದ ಘಟನೆ ನಡೆಯುತ್ತಿದ್ದಂತೆ ಅಧಿಕಾರಿ ರೈತನಿಗೆ ಹೆದರಿ ಪಕ್ಕದ ರೂಂಗೆ ಹೋದ ಪ್ರಸಂಗ ನಡೆಯಿತು. ಪರಿಹಾರ ವಿಚಾರದಲ್ಲಿ ಪದೇ ಪದೆ ಕಾಯಿಸಿ ನೊಂದಿಸಿ ದ್ದರಿಂದ ರೈತನ ಆಕ್ರೋಶದ ಕಟ್ಟೆ ಒಡೆದು ಹೋಗಿತ್ತು. ಹೀಗಾಗಿ ಅಧಿಕಾರಿ ಜತೆ ಜಗಳ ಕೂಡ ರೈತ ಆಡಿದ್ದಾನೆ. ರೈತನೊಂದಿಗೆ ಇದ್ದ ದಲಿತ ಸಂಘಟನೆಗಳ ಮುಖಂಡರು ಕೂಡ ಬೆಂಬಲ ನೀಡಿದರು.

ಮನೆ ಕಳೆದುಕೊಂಡ ಸಂತ್ರಸ್ತರಿಗೆ ಹಕ್ಕುಪತ್ರ ವಿತರಿಸಲು ಶಾಸಕ ಉಮೇಶ ಮೇಟಿಯವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆದ ಬಳಿಕ ಬಿಟಿಡಿಎ ಕಚೇರಿಯ ಆವರಣದಲ್ಲಿ ದೊಡ್ಡ ಹೈಡ್ರಾಮಾ ನಡೆಯಿತು. ಹಕ್ಕುಪತ್ರವನ್ನು ನೀಡದ ಹಾಗೂ ದಲಿತರ ಮೇಲೆ ದೌರ್ಜನ್ಯ ಎಸಗುತ್ತಿರುವ ಅಧಿಕಾರಿಗಳು, ಬಿಟಿಡಿಎ ಅಧ್ಯಕ್ಷರ ವಿರುದ್ಧ ದಲಿತ ಸಂಘಟನೆಗಳ ಮುಖಂಡರು ಆಕ್ರೋಶ ಹೊರಹಾಕಿದರು.

ಮಕ್ಕಳನ್ನು ಕೊಂದ ತಾಯಿ ಗಂಭೀರ

ಮೈಸೂರು: ಮಹಿಳೆಯೊಬ್ಬಳು ತನ್ನ ಇಬ್ಬರು ಮಕ್ಕಳಿಗೆ ನೇಣು ಹಾಕಿ ಕೊಲೆ ಮಾಡಿ, ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿರುವ ಘಟನೆ ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಜವರೇಗೌಡನ ಕೊಪ್ಪಲಿನಲ್ಲಿ ನಡೆದಿದೆ. ಜವರೇಗೌಡನ ಕೊಪ್ಪಲು ಗ್ರಾಮದ ಅನಿಲ್‌ಕುಮಾರ್ ಪತ್ನಿ ಪ್ರಿಯಾಂಕಾ (26)ತನ್ನ ಮಕ್ಕಳಾದ ಧುತಿ (3)ಮತ್ತು ದಿಶಾ(ಒಂದೂವರೆ ವರ್ಷ)ಗೆ ದಾರದಿಂದ ಬಿಗಿದು ಕೊಲೆ ಮಾಡಿ ನಂತರ ತಾನೂ ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದಾರೆ. ಕೂಡಲೇ ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದು, ಆಕೆ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಮಕ್ಕಳ ಮೃತದೇಹಗಳನ್ನು ಕೃಷ್ಣರಾಜ ನಗರ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ.

ರಸಗೊಬ್ಬರ ಕೊರತೆಗೆ ಕೇಂದ್ರ ಕಾರಣ: ಖಂಡ್ರೆ

ಬೆಂಗಳೂರು: ಕೇಂದ್ರ ಸರ್ಕಾರ ರಾಜ್ಯಕ್ಕೆ ಬೇಡಿಕೆಗೆ ಪ್ರತಿಯಾಗಿ ಕೇವಲ ಶೇ.30ರಷ್ಟು ಮಾತ್ರ ರಸಗೊಬ್ಬರ ಪೂರೈಸಿದ್ದು, ಇದರಿಂದ ರಾಜ್ಯದಲ್ಲಿ ರಸಗೊಬ್ಬರದ ತೀವ್ರ ಕೊರತೆ ಉದ್ಭವಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ರೈತರ ಅವಶ್ಯಕತೆಗೆ ಅನುಗುಣವಾಗಿ ರಾಜ್ಯಗಳಿಗೆ ರಸಗೊಬ್ಬರ ಪೂರೈಸಬೇಕಾದ್ದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಕೇಂದ್ರ ಸರ್ಕಾರ ತಾರತಮ್ಯ ಮಾಡದೆ ಕರ್ನಾಟಕ ರಾಜ್ಯದ ರೈತರ ಹಿತಕಾಯಲು ಪೂರ್ಣ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಮಾಡುವಂತೆ ಅವರು ಒತ್ತಾಯಿಸಿದರು. ಬೀದರ್ ಜಿಲ್ಲೆಯಲ್ಲಿ ರಸಗೊಬ್ಬರವನ್ನು ಹೆಚ್ಚಿನ ದರಕ್ಕೆ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಮತ್ತು ಅಂತಹ ಮಳಿಗೆಗಳ ಮೇಲೆ ದಾಳಿ ಮಾಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಿರುವುದಾಗಿಯೂ ಈಶ್ವರ ಖಂಡ್ರೆ ತಿಳಿಸಿದರು.




> ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಕೃಷಿ ಸಚಿವರಂತೂ ಇಲ್ಲವೇ ಇಲ್ಲ, ರೈತರು ಗೋಳಾಡುತ್ತಿದ್ದಾರೆ, ಸಹಕಾರ ಸಂಘಗಳ ಮುಂದೆ ಸಾಲುಗಟ್ಟಿ ನಿಂತಿದ್ದಾರೆ, ಗೊಬ್ಬರಕ್ಕಾಗಿ ಹಗಲು ರಾತ್ರಿ ಅಲೆದಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಸರ್ಕಾರ ಮಾತ್ರ ಖಾತೆ ಹಂಚಿಕೆ ಗಲಾಟೆಯಲ್ಲಿ ಮಗ್ನವಾಗಿದೆ.
> ■ **ಆರ್. ಅಶೋಕ್**, ವಿರೋಧ ಪಕ್ಷದ ನಾಯಕ




ನನ್ನ ಹೆಸರು ಗೌಹರ್ ಜಾನ್
ಸಂಗೀತ ಕಲಾವಿದೆಯೊಬ್ಬರ ಜೀವನ ಮತ್ತು ಕಾಲಘಟ್ಟ
ಲೇ: ವಿಕ್ರಮ್ ಸಂಪತ್
ಅನುವಾದ: ಶ್ರೀಗೌರಿ ಎಸ್.ಜೋಶಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 380 ರೂ. 595
ಸಂಪರ್ಕ: 0836-4252498 / 9448110034



ಬದುಕು ಒಮ್ಮೆ ಮಾತ್ರ
ಮೂಲ ಲೇಖಕ: ಡಾ.ಎನ್.ಪ್ರಭುದೇವ
ಅನುವಾದಕರು: ಶ್ರೀಮತಿ ಭ್ರಮರ ಬಹದ್ದೂರ್ ಮತ್ತು ಶ್ರೀ ಶ್ರೀನಿವಾಸ ಬಹದ್ದೂರ್
ಪ್ರ: ವೈದ್ಯವಾರ್ತಾ ಪ್ರಕಾಶನ, ಮೈಸೂರು, ಮೊದಲ ಮುದ್ರಣ: 2026
ಪುಟ: 164 ರೂ. 200
ಸಂಪರ್ಕ: 9448402092




ಕನಡ ನುಡಿಯೋಧ ಬೊ.ಹ. ಉಪೇಂದ್ರ
ಸಂಪಾದಕರು: ಎಸ್.ಶಿವಲಿಂಗಯ್ಯ, ಬಿ.ವಿ.ರವಿಕುಮಾರ್, ಆರ್. ರಾಮಸ್ವಾಮಿ
ಪ್ರ: ಕನ್ನಡ ಗೆಳೆಯರ ಬಳಗ, ಬೆಂಗಳೂರು, ಮೊದಲ ಮುದ್ರಣ: 2026
ಪುಟ: 64 ಬೆಲೆ: ಕನ್ನಡ ಪ್ರೀತಿ
ಸಂಪರ್ಕ: 080-26794508




ಕೇಳು ಗೆಳೆಯ (ಮುಕ್ತಕಗಳು)
ಲೇ: ಭ.ರಾ.ವಿ
ಪ್ರ: ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ.ಲಿ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 104 ರೂ. 100
ಸಂಪರ್ಕ: 9632812541



ರಾಷ್ಟ ನೇತಾರ ಅಟಲ್ ಬಿಹಾರಿ ವಾಜಪೇಯಿ ಜೀವನ ಚರಿತ್ರೆ
ಲೇ: ಡಾ. ವ್ಹಿ. ಎ. ಬೆನಕನಾಳ
ಪ್ರ: ಶ್ರೀಶೈಲ ಪ್ರಕಾಶನ, ಬಾಗಲಕೋಟೆ
ಮೊದಲ ಮುದ್ರಣ: 2026
ಪುಟ: 96 ರೂ. 100
ಸಂಪರ್ಕ: 9448986708



ಬೆಳ್ಳಕ್ಕಿಗಳ ಲೋಕದಲ್ಲಿ
ಲೇ: ರಾಘವೇಂದ್ರ ಪಾಟೀಲ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 208 ರೂ. 300
ಸಂಪರ್ಕ: 0836-4252498 / 9448110034



ASKEW ಓರೆಕೋರೆ
ದೊಡ್ಡ ಬೆಂಗಳೂರಿನ ಸಣ್ಣ ಆತ್ಮಕಥೆ
ಲೇ: ಇಂಗ್ಲಿಷ್ ಮೂಲ: ಟಿ.ಜೆ.ಎಸ್. ಜಾರ್ಜ್, ಕನ್ನಡಕ್ಕೆ : ಪ್ರೊ. ಕೆ.ಈ. ರಾಧಾಕೃಷ್ಣ
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ಮೊದಲ ಮುದ್ರಣ: 2026
ಪುಟ: 160 ರೂ. 250
ಸಂಪರ್ಕ: 26617100 / 9019190502



ಕನಡ ಮೊದಲೋ ತಮಿಳು ಮೊದಲೋ
ಕನ್ನಡ ನಾಡು-ನುಡಿಗಳ ಕುರಿತ ಲೇಖನಗಳು
ಲೇ: ರಾ.ನಂ. ಚಂದ್ರಶೇಖರ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 168 ರೂ. 170
ಸಂಪರ್ಕ: 080-40114455



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಮನುಷ್ಯ ಬಹಳ ಹಗುರವಾಗುವುದು ಯಾವಾಗ?

ಅಧರ್ಮರಲ್ಲಿ ಯಾಚನೆ ಮಾಡಿದಾಗ.

ಮನುಷ್ಯ ಹಗುರವಾಗುವುದು ಎಂದರೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದು ಅಥವಾ ತನಗೆ ಇರುವ ಮೌಲ್ಯವನ್ನು ಕಳೆದುಕೊಳ್ಳುವುದು ಎಂದರ್ಥ. ಅಂದರೆ ತನಗೆ ಬೇಕಿರುವ ಯಾವುದೋ ಒಂದು ವಸ್ತುವನ್ನು ಒಬ್ಬ ಅಧರ್ಮಿಯಲ್ಲಿ ಅಥವಾ ದುಷ್ಟನಲ್ಲಿ ಬೇಡಿ ಪಡೆದುಕೊಂಡರೆ ಆಗ ಪಡೆದುಕೊಂಡವನ ವ್ಯಕ್ತಿತ್ವವು ನಾಶವಾಗುತ್ತದೆ. ಆ ಮನುಷ್ಯ ಹಗುರವಾಗುತ್ತಾನೆ ಎಂಬ ಅರ್ಥವನ್ನು ಈ ಉತ್ತರ ನೀಡುತ್ತಿದೆ.

ಇಲ್ಲಿ ನಾವು ಗಮನಿಸಬೇಕಾದ ವಿಷಯ, ಮಾಡಿದ ಯಾಚನೆಯಿಂದ ಹೇಗೆ ವ್ಯಕ್ತಿ ಹಗುರವಾಗುತ್ತಾನೆ ಎಂಬುದನ್ನು. ನಾವು ನಮಗೆ ಬೇಕಾದ ವಸ್ತುವನ್ನು ಇನ್ನೊಬ್ಬರಿಂದ ಪಡೆಯಬೇಕು; ಅದಕ್ಕೆ ಯಾಚನೆ ಅಥವಾ ಭಿಕ್ಷೆ ಎಂಬುದಾಗಿ ಕರೆಯಲಾಗಿದೆ. ಭಿಕ್ಷೆಯನ್ನು ಒಳ್ಳೆಯ ಗೃಹಸ್ಥರಲ್ಲಿ ಬೇಡಬೇಕು. ಒಂದು ವೇಳೆ ಆ ಗೃಹಸ್ಥನು ಒಳ್ಳೆಯವನಾಗದಿದ್ದರೆ ಅಥವಾ ಅವನಲ್ಲಿ ದೋಷವಿದ್ದರೆ ಆಗ ಭಿಕ್ಷೆಯನ್ನು ಬೇಡಬಾರದು ಎಂಬುದಾಗಿ ನಿಯಮವಿದೆ. ಏಕೆಂದರೆ ಆ ಗೃಹಸ್ಥನಲ್ಲಿರುವ ಅಥವಾ ಆ ವ್ಯಕ್ತಿಯಲ್ಲಿರುವ ದೋಷವು ಅವನಿಂದ ಪಡೆದ ವಸ್ತುವಿನ ಮೂಲಕ ಬೇಡಿದವನಿಗೆ ಸಂಕ್ರಾಂತವಾಗುತ್ತದೆ. ಆಗ ಬೇಡಿದವನು ಕೂಡ ಆ ದೋಷವನ್ನು ಉಣ್ಣಬೇಕಾಗುತ್ತದೆ. ಹಾಗಾಗಿ ಯಾಚನೆಯನ್ನು ಎಂತಹ ವ್ಯಕ್ತಿಯಲ್ಲಿ ಮಾಡಬೇಕು ಎಂಬುದು ಗಂಭೀರವಾದದ್ದು. ಕಾಳಿದಾಸನು ಮೇಘದೂತ ಕಾವ್ಯದಲ್ಲಿ ಒಂದು ಮಾತನ್ನು ಹೇಳುತ್ತಾನೆ,''ಯಾಞ್ಚಾ ಮೋಘಾ ವರಮ್ ಅಧಿಗುಣೇ ನಾಧಮೇ ಲಬ್ಧಕಾಮಾ'' ಎಂದು. ಅಂದರೆ ಕೆಟ್ಟವರಲ್ಲಿ ಕೇಳಿದ್ದು ಸಿಗುವುದಕ್ಕಿಂತ ಒಳ್ಳೆಯವರಲ್ಲಿ ಕೇಳಿದ್ದು ಸಿಗದಿರುವುದೇ ಲೇಸು ಎಂದು. ಕೇಳಬೇಕಾದದ್ದು ಶ್ರೇಷ್ಠರಲ್ಲಿ. ಅಪೇಕ್ಷಿತವಾದ ಪದಾರ್ಥವನ್ನು ಅಂಥವರಿಂದಲೇ ಪಡೆಯಬೇಕು. ಏಕೆಂದರೆ ಪದಾರ್ಥಗಳು ದೋಷವನ್ನು ಅಥವಾ ಗುಣವನ್ನು ದಾಟಿಸುತ್ತವೆ ಎಂಬ ಶ್ರೀರಂಗ ಮಹಾಗುರುಗಳ ಮಾತಿನ ಸಾರವನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು.

ಯಾಚನೆ ಅಥವಾ ಭಿಕ್ಷೆ ಎಂಬ ವ್ಯಾಪಾರದಲ್ಲಿ ಪದಾರ್ಥವು ಒಬ್ಬರಿಂದ ಒಬ್ಬರಿಗೆ ಬದಲಿಸಲ್ಪಡುತ್ತದೆ. ಆಗ ಆ ಪದಾರ್ಥದ ಮೂಲಕ ಅವನ ಗುಣದೋಷಗಳೂ ಕೂಡ ಸಂಕ್ರಾಂತವಾಗುತ್ತವೆ. ಇದೇ ನೇರದಲ್ಲಿ ದಾನ ಎಂಬ ಅತ್ಯಂತ ಪುಣ್ಯತಮವಾದ ಕಾರ್ಯವು ಕೂಡ ನಮ್ಮ ಸಂಪ್ರದಾಯದಲ್ಲಿ ಬಂದಿದೆ. ದಾನ ಮಾಡುವುದರಿಂದ ನಮ್ಮ ಪಾಪವು ಪರಿಹಾರವಾಗುತ್ತದೆ ಎಂದು ಹೇಳಲಾಗಿದೆ. ಅಂದರೆ ಆ ಪಾಪವು ಆ ವಸ್ತುವಿನ ಮೂಲಕ ದಾಟಿದಾಗ ಮಾತ್ರ ಅವನು ನಿಷ್ಪಾಪಿಯಾಗುತ್ತಾನೆ. ಆದ್ದರಿಂದ ವಸ್ತುವನ್ನು ಪಡೆಯುವಾಗ ಈ ಹಿನ್ನೆಲೆಯಲ್ಲಿ ಈ ಮಾರ್ಮಿಕವಾದ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕೆಂಬ ತತ್ವ ಇಲ್ಲಿ ಅಡಗಿದೆ. ಸಂಪ್ರದಾಯದಲ್ಲಿ ಗೃಹಸ್ಥರಿಗೆ ಮಾತ್ರ ಸಂಪಾದಿಸಲು ಅರ್ಹತೆ ಇದೆ. ಉಳಿದ ಆಶ್ರಮಗಳಾದ ಬ್ರಹ್ಮಚಾರಿ ಮತ್ತು ಸನ್ಯಾಸಿಗಳಿಗೆ ಸಂಪಾದಿಸಿದವರ ಸಂಪತ್ತನ್ನು ಅಥವಾ ಪದಾರ್ಥವನ್ನು ವಿನಿಯೋಗಿಸುವುದರ ಮೂಲಕ ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ಈ ಭಿಕ್ಷೆ ಅಥವಾ ಯಾಚನೆ ಎಂಬ ಉತ್ಕೃಷ್ಟವಾದ ಪದ್ಧತಿ ಬಂದಿದೆ. ಹಾಗಾಗಿ ಈ ಯಾಚನೆಯಲ್ಲಿ ಒಂದು ಗಂಭೀರವಾದ ವಿಷಯವನ್ನು ಮನನ ಮಾಡಿಕೊಂಡಿರಬೇಕು ಎಂಬ ಸಂದೇಶ ಈ ಪ್ರಶ್ನೋತ್ತರದಲ್ಲಿ ಅಡಕವಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಭೀಮಾರ್ಜುನರ ದಿಗ್ವಿಜಯ

ಅರ್ಜುನ ಉತ್ತರಕುರು, ವರ್ಷದೇಶವನ್ನು ಕಂಡವನೇ ಅದನ್ನು ಜಯಿಸಬೇಕೆಂದುಕೊಂಡನು. ಅಲ್ಲಿದ್ದ ದ್ವಾರಪಾಲಕರು ಮಹಾಕಾಯರು, ಮಹಾಬಲರು. ಆದರೂ ಮಹಾವೀರ್ಯನಾದ ಅರ್ಜುನನನ್ನು ಕಂಡು ಹರ್ಷದಿಂದ ಹೀಗೆ ಹೇಳಿದರು: ಅಯ್ಯಾ ಪಾರ್ಥನೇ, ಈ ಪುರವನ್ನು ನೀನು ಜಯಿಸಲಾರೆ. ಭದ್ರನೇ, ನೀನಿಲ್ಲಿಯವರೆಗೆ ಬಂದೆಯಲ್ಲಾ ಅಷ್ಟೇ ಸಾಕು. ಈ ನಗರಕ್ಕೆ ಯಾವನು ಪ್ರವೇಶಮಾಡುವನೋ ಆತನು ನರನಾಗಿ ಉಳಿಯನು. ನೀನು ಸಾಕಷ್ಟು ವಿಜಯವನ್ನು ಸಾಧಿಸಿದ್ದೀಯೇ. ನಿನ್ನ ವಿಷಯದಲ್ಲಿ ನಾವು ಸಂತುಷ್ಟರಾಗಿದ್ದೇವೆ. ಇಲ್ಲಿ ನಿನಗೆ ಜಯಿಸಲು ಏನೂ ಇಲ್ಲ. ಇಲ್ಲಿ ಒಳಗೆ ಪ್ರವೇಶಿಸಿದರೂ ನೀನು ಏನನ್ನೂ ಕಾಣಲಾರೆ ಕೂಡ. ಮನುಷ್ಯಶರೀರವುಳ್ಳವರಿಗೆ ಇಲ್ಲಿ ಏನನ್ನೂ ಕಾಣಲಾಗದು. ಬದಲಾಗಿ ನೀನಿಲ್ಲೇನನ್ನಾದರೂ ಮಾಡಬೇಕೆಂದು ಇಷ್ಟಪಟ್ಟಿದ್ದರೆ ಅದನ್ನು ನಮಗೆ ತಿಳಿಸು. ನೀನು ಹೇಳಿದ ಮಾತ್ರಕ್ಕೇ ನಾವದನ್ನು ಮಾಡಿಮುಗಿಸುವೆವು ಎಂದರು.

ಅವರು ಹೇಳಿದುದಕ್ಕೆ ನಗುತ್ತಾ ಅರ್ಜುನನು ಹೀಗೆ ಹೇಳಿದನು: ನನ್ನ ಸೋದರನಾದ ಧರ್ಮರಾಜನು ಸಮ್ರಾಟ್ ಆಗಬೇಕು ಎಂಬುದನ್ನು ಬಯಸುವವನು ನಾನು. ಇಲ್ಲಿ ಮನುಷ್ಯರಿಗೆ ಆಸ್ಪದವಿಲ್ಲವೆನ್ನುವುದಾದರೆ ನಾನು ಪ್ರವೇಶ ಮಾಡುವುದಿಲ್ಲ, ಯುಧಿಷ್ಠಿರನಿಗಾಗಿ ನೀವು ಒಂದಿಷ್ಟು ಕರವನ್ನು ಕೊಡಬೇಕಲ್ಲಾ ಅಷ್ಟಾದರಾಯಿತು ಎಂದನು. ದಿವ್ಯವಸ್ತ್ರಗಳು, ದಿವ್ಯಾಭರಣಗಳು, ರೇಷ್ಮೆವಸ್ತ್ರಗಳು ಹಾಗೂ ಮೃಗಚರ್ಮ ಇವುಗಳನ್ನು ಆಗ ಅವರು ಕರರೂಪವಾಗಿ ಇತ್ತರು. ಅಂತೂ ಈ ಎಲ್ಲ ಪ್ರಕಾರಗಳಿಂದ ಅರ್ಜುನನು ಉತ್ತರ ದಿಕ್ಕನ್ನು ಗೆದ್ದವನಾದನು. ಆದಕ್ಕಾಗಿ ಅನೇಕ ಕ್ಷತ್ರಿಯರೊಂದಿಗೂ ದಸ್ಯುಗಳೊಂದಿಗೂ ಹಲವಾರು ಸಂಗ್ರಾಮಗಳನ್ನು ನಡೆಸಬೇಕಾಯಿತು.

ಆ ರಾಜರನ್ನು ಜಯಿಸಿದವನೇ ಅವರಿಂದ ಕರವನ್ನೂ ಧನವನ್ನೂ ವಸೂಲಿಮಾಡಿದನು. ನಾನಾ ವಿಧವಾದ ರತ್ನಗಳನ್ನು ಪಡೆದುದಲ್ಲದೆ, ವರ್ಣಗಳ ಕುದುರೆಗಳನ್ನೂ ಪಡೆದನು. ಅವೆಲ್ಲವೂ ವಾಯುವೇಗವಿದ್ದವು. ಮಹತ್ತಾದ ಚತುರಂಗ ಸೇನೆಯೊಂದಿಗೆ ವೀರನಾದ ಅರ್ಜುನನು ಮತ್ತೆ ಇಂದ್ರಪ್ರಸ್ಥವೆಂಬ ತನ್ನ ಶ್ರೇಷ್ಠನಗರಿಗೆ ಹಿಂದಿರುಗಿದನು. ಬಂದವನೇ ಆ ಸಮಸ್ತ ಐಶ್ವರ್ಯವನ್ನೂ ವಾಹನ ಸಮೇತವಾಗಿ ಧರ್ಮರಾಜನಿಗೆ ಒಪ್ಪಿಸಿದನು. ಇತ್ತ ಪರಾಕ್ರಮಿಯಾದ ಭೀಮಸೇನನೂ ಧರ್ಮರಾಜನಿಂದ ಅನುಮತಿಯನ್ನು ಪಡೆದು ಪೂರ್ವದಿಕ್ಕಿಗೆ ಹೊರಟಿದ್ದನು. ಶತ್ರುರಾಷ್ಟ್ರಗಳನ್ನು ಮರ್ದಿಸುವ ಸೈನ್ಯಸಮೂಹವು ಆತನೊಂದಿಗಿತ್ತು. ಹಸ್ತಿ, ಅಶ್ವ ಮತ್ತು ರಥಗಳೊಂದಿಗೆ ಸುಸಜ್ಜಿತನಾಗಿದ್ದ ಆತನು, ಶತ್ರುಗಳಿಗೆ ಶೋಕವನ್ನು ಹೆಚ್ಚಿಸುವವನೇ ಆಗಿದ್ದನು. ಅಂತಹ ಭರತವಂಶದ ಶ್ರೇಷ್ಠಕ್ಷತ್ರಿಯನೇ ಆಗಿದ್ದನು. ಭೀಮನು ಮೊಟ್ಟಮೊದಲು ಹೋದದ್ದು ಪಂಚಾಲದೇಶಕ್ಕೆ. ಅಲ್ಲಿ ಯುದ್ಧವನ್ನು ಪ್ರಸ್ತಾವಿಸುವುದರ ಬದಲು ಬಗೆಬಗೆಯಾದ ಸಾಂತ್ವನದ ಮಾತುಗಳನ್ನಾಡಿ ಅವರು ತನ್ನ ಕಡೆಯವರಾಗುವಂತೆ ಮಾಡಿಕೊಂಡನು. ಆಮೇಲೆ ಗಂಡಕದೇಶ, ವಿದೇಹರಾಜ್ಯಗಳನ್ನು ಸ್ವಲ್ಪವೇ ಕಾಲದಲ್ಲಿ ಜಯಿಸಿದನು. ಆದರೆ ದಶಾರ್ಣದೇಶದ ಅಧಿಪತಿಯಾದ ಸುಧರ್ಮನೊಂದಿಗೆ ಘೋರಯುದ್ಧವೇ ಆಯಿತು. ಸುಧರ್ಮನ ಪರಾಕ್ರಮವನ್ನು ಕಂಡು ಸಂತೋಷಗೊಂಡ ಭೀಮನು ಆತನನ್ನು ತನ್ನ ಅಧಿಸೇನಾಪತಿಯನ್ನಾಗಿ ಮಾಡಿಕೊಂಡನು. ಪೂರ್ವದತ್ತ ಸಾಗಿ ಅಶ್ವಮೇಧದೇಶದ ರಾಜನಾದ ರೋಚಮಾನನನ್ನು ಸೋಲಿಸಿದನು. ಹೀಗೆ ಪೂರ್ವದೇಶದ ಮೇಲೆ ವಿಜಯವನ್ನು ಸಾಧಿಸಿ, ಅದರ ದಕ್ಷಿಣದ ಪುಲಿಂದರಾಜ್ಯವನ್ನು ಮುತ್ತಿ ಅಲ್ಲಿಯ ಸುಕುಮಾರ ಹಾಗೂ ಸುಮಿತ್ರರೆಂಬ ರಾಜರನ್ನು ತನ್ನ ವಶಕ್ಕೆ ತಂದುಕೊಂಡನು ಭೀಮ.

ತೊರೆದು ಜೀವಿಸಬಹುದೆ ಹರಿ ವರಿಯ ಕರಿಗಳನು

worry ಇಲ್ಲದ ನರನಿಲ್ಲ. 'ಸಾಮಾನ್ಯ ಚಿಂತೆ'ಯಿಂದ ಹಿಡಿದು, ಆಗಷ್ಟೇ ಪಿಂಕ್ ಸ್ಲಿಪ್ ಪಡೆದ ಉದ್ಯೋಗಿಯ 'ಮುಂದೇನು?' ಎಂಬ ಬೃಹತ್ ಚಿಂತೆಯವರೆಗೆ ವರಿಗಳು ಮುಂದುವರಿಯುತ್ತವೆ.



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

"ಜೀವನದಲ್ಲಿ ನೀವು ಮೂರನ್ನು ಬಿಟ್ಟರೆ ಮಾತ್ರ ನೆಮ್ಮದಿಯಿಂದ ಇರಬಹುದು – hurry, worry, curry" ಎಂದರು ಭಾಷಣಕಾರರು.

ನನಗಂತೂ ಈ ವಾಕ್ಯವು ಇನಿತೂ ಒಪ್ಪಿಗೆಯಾಗಲಿಲ್ಲ.

Hurry ನಮ್ಮ ಜೀವನದ ಅವಿಭಾಜ್ಯ ಅಂಗ. 'Hurry ಸರ್ವೋತ್ತಮ' ಎಂದು ಅಂದಿನ ಹಿರಿಯರೇ ಅಪ್ಪಣೆ ನೀಡಿದ್ದಾರೆ. 'ಹರಿ ನಾಮವೇ ಚಂದಾ...' ಎಂದ ಚಿತ್ರಕವಿಗಳೂ ಇದ್ದಾರೆ. 'ಹರಿ ಅರ್ಥಾತ್ ಆತುರ; ನಾಮ ಅರ್ಥಾತ್ ಅವರಿವರಿಗೆ ಟೋಪಿ ಹಾಕುವುದು; ಚಂದಾ ಅರ್ಥಾತ್ ಅವರಿವರಿಂದ ಹಣವನ್ನು ಬೇಡಿಯೋ, ಬೆದರಿಸಿಯೋ ಪಡೆಯುವುದು' ಈ ಮೂರು ಇಂದಿನ ಸಮಾಜದ ಪ್ರಮುಖ ಲಕ್ಷಣಗಳು. Worry ಇಲ್ಲದ ನರನಿಲ್ಲವೀ ಜಗದೊಳ್. ಬಹಳ ಶ್ರೀಮಂತ ರೈತರೂ 'ವರಿ'ಯಲ್ಲಿ ತೊಡಗಿರುವುದನ್ನು ಕಂಡಿದ್ದೇನೆ; 'ಒತ್ತುವರಿ'ಯಲ್ಲಿ!

ಹರಿ ಎಂಬ ಪದಕ್ಕೆ ಹಲವು ಅರ್ಥಗಳುಂಟು. 'ಹರಿ ಎಂದರೆ ಹಸಿರು. ಡಾಲರ್ ನೋಟಿನ ಬಣ್ಣ ಹಸಿರು. ಹರಿ ನಾಮವೇ ಚಂದ ಎಂದರೆ ಡಾಲರ್ ಎಂಬ ಹೆಸರೇ ಉಲ್ಲಾಸಜನಕ' ಎಂಬುದು ಅಮೆರಿಕಮುಖಿಗಳ ಸ್ಲೋಗನ್. 'ಹರಿ ಎಂದರೆ ಕುದುರೆ. ಕುದುರೆಯ ಬಾಲ ಚಂದ; ವೇಗದ ಓಟ ಚಂದ; ರೇಸಲಿದುಡ್ಡಾದರೆ ಬದುಕು ಇನ್ನೂ ಚಂದ...' ಎನ್ನುವ ಮಂದಿಗೆ ನಮ್ಮಲ್ಲೇನೂ ಕೊರತೆಯಿಲ್ಲ. 'ಹರಿ ಎಂದರೆ ಸೂರ್ಯ. ಸನ್ ಬೇತಿಂಗ್, ಸನ್ ಟ್ಯಾನ್ ನಮಗೆ ಬಹಳ ಪ್ರಿಯ. ಗೋವಾಗೆ ಹೋಗೋವಾ' ಎನ್ನುವ 'ತೀರದ ಬಯಕೆ'ಯ ಜನರೂ ಸಾಕಷ್ಟಿದ್ದಾರೆ. 'ನಿತ್ಯ ಹರಿದ್ವರ್ಣ ಭರಿತ' ಎಂಬುದೂ 'ಹರಿದ್ವರ್ಣ' ಎಂದರೆ 'ಚಾತುರ್ವರ್ಣ'ಗಳೆಂದೂ, ಅದನ್ನು ಹರಿದು (ಎಂದರೆ ಜಾತಿಗಳಲ್ಲಿ ಭೇದ ತಂದು) ತಿಂದು ತೇಗುವಂತಹ ವಾಸನೆಯನ್ನು (ಜಾಡನ್ನು) ಹಿಡಿದು ನಿತ್ಯೋತ್ಸವ ನಡೆಸುವ ನೇತಾರರು ಇದ್ದಾರೆಂದೂ ಅರ್ಥ ನೀಡುವುದಂತೆ.

ನದಿಗಳಿಗಂತೂ 'ಹರಿ' ಎನ್ನುವುದು ಇಂಗ್ಲಿಷ್ ಮತ್ತು ಕನ್ನಡ ಎರಡೂ ಅರ್ಥಗಳಲ್ಲಿ ಅನ್ವಯಿಸುತ್ತದೆ. ನದಿಯು ಉಗಮದಿಂದ ಸಾಗರದವರೆಗೆ ಹರಿಯುತ್ತಲೇ ಇರುತ್ತದೆ ಎನ್ನುವುದು ಅದರ ಚಲನೆಯನ್ನು ಸೂಚಿಸಿದರೆ 'ಓಡುವ ನದಿ' ಎನ್ನುತ್ತೇವೆಯೇ ವಿನಾ 'ನಡೆಯುವ ನದಿ' ಎಂದು ಎಲ್ಲಿಯೂ ಉಲ್ಲೇಖವಿಲ್ಲ. ಆದರೆ 'ಓಡು' ಮತ್ತು 'ನಡೆ' ಎರಡೂ ಒಂದೇ ಎನ್ನುವುದು ಸೀನುವಿನ ವ್ಯಾಖ್ಯಾನ. 'ನಿನ್ನ ವಯಸ್ಸೆಷ್ಟು?' ಎಂದು ಕೇಳಿದರೆ '40running' ಎನ್ನುವವರೇ ಕನ್ನಡದಲ್ಲಿ 'ನಲವತ್ತು ನಡೆಯುತ್ತಿದೆ' ಎನ್ನುವುದರಿಂದ ಆಂಗ್ಲದ ಓಟಕ್ಕೆ ಕನ್ನಡದ ನಡೆ ಸಮವಂತೆ!

ಹರಿಯ ವಿಷಯವನ್ನೇ ಮತ್ತಷ್ಟು ಬೆಳೆಸಿದಾಗ 'ಹರಿಚಿತ್ತ' ಎಂಬ ಪದವನ್ನು ನೀವು ಕೇಳಿಯೇ ಇರುತ್ತೀರಿ. 'ಆತುರದಿಂದ ಬರೆಯಹೊರಟು ಚಿತ್ತು ಮಾಡುವವನು' ಎಂಬುದು ಅದರ ಒಂದು ವ್ಯಾಖ್ಯಾನವಾದರೆ 'ಒಂದೆಡೆಯಿಂದ ಒಂದೆಡೆಗೆ ಹರಿಯುವ ಅರ್ಥಾತ್ ವಲಸೆ ಹೋಗುವ ಮನಸ್ಸು' ಎಂಬುದು ಇನ್ನೊಂದು ವ್ಯಾಖ್ಯಾನವಂತೆ. ಎರಡನೆಯ ವ್ಯಾಖ್ಯಾನವೂ ಎನ್‌ಆರ್‌ಐಗಳನ್ನೂ, ನುಸುಳುಕೋರರನ್ನೂ ಬಿಂಬಿಸುವುದಂತೆ.

worry ಇಲ್ಲದ ನರನಿಲ್ಲ. 'ಚಿತೆಗೂ ಚಿಂತೆಗೂ ಏನು ವ್ಯತ್ಯಾಸ?' ಎಂಬುದಕ್ಕೆ 'ಚಿತೆ ಒಂದು ಸಂಪ್ರದಾಯಕ್ಕೆ ಸೀಮಿತ. ಚಿಂತೆ ಜಾತ್ಯತೀತ' ಎಂಬುದೇ ಉತ್ತರ. 'ಒಲವಿನ ಪ್ರಿಯಲತೆ ಅವಳದೇ ಚಿಂತೆ' ಎಂದು ಪ್ರೀತಿಪಾತ್ರಳ ಬಗ್ಗೆ ಚಿಂತಿಸುವ 'ಸಾಮಾನ್ಯ ಚಿಂತೆ'ಯಿಂದ ಹಿಡಿದು, ಆಗಷ್ಟೇ ಪಿಂಕ್ ಸ್ಲಿಪ್ ಪಡೆದ ಉದ್ಯೋಗಿಯ 'ಮುಂದೇನು?' ಎಂಬ ಬೃಹತ್ ಚಿಂತೆಯವರೆಗೆ ವರಿಗಳು ಮುಂದುವರಿಯುತ್ತವೆ.

ಕೃಷಿಯ ಖುಷಿಗೆ ಕತ್ತರಿ ಹಾಕುವ ವರಿಯೇ 'ಒತ್ತುವರಿ'. ಇದು ಕೇವಲ ಜಮೀನಿಗೆ ಸೀಮಿತವಲ್ಲ. ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನೋ, 'ಹಾಹಾ ಖಾರ'ವೆನಿಸುವ ತಿನಿಸುಗಳನ್ನೋ ತಿಂದು ಸ್ವಲ್ಪ ಹೊತ್ತಿನಲ್ಲಿಯೇ ಶರೀರದಲ್ಲಿ 'ವಾಯುಸಂಚಾರ' ಆರಂಭವಾಗಿ ಎದೆಯಲ್ಲಿಯೋ, ಹೊಟ್ಟೆಯಲ್ಲಿಯೋ ಒತ್ತಡ ಹೆಚ್ಚಿ, ಒತ್ತಿದಂತಾಗುವುದೂ 'ಒತ್ತುworry'ಯೇ. ಕೆಲವು ಹಿರಿಯರು ಪಾಸ್ಪೋರ್ಟ್ ಆಫೀಸಿನಲ್ಲಿ ತಮ್ಮ ಬೆರಳಚ್ಚುಗಳನ್ನು ನೀಡಹೊರಟಾಗ ಕಂಪ್ಯೂಟರ್‌ನಲ್ಲಿ ಏನೇನೂ ಇಮೇಜ್ ಮೂಡದೆ ಕಂಪ್ಯೂಟರಿಯೂ, ಹಿರಿಯರೂ ಚಿಂತಿತರಾಗುವುದನ್ನೂ 'ಒತ್ತು worry' ಎನ್ನಬಹುದು. ತುಂಬುಗರ್ಭಿಣಿ ಬಸ್‌ಗಳಲ್ಲಿ 'ಸ್ಟ್ಯಾಂಡಿಂಗ್ ಸೀಟ್' ಸಿಕ್ಕು, ಆ ಬದಿಯ ಡೊಣಪನ ಹೊಟ್ಟೆಗೂ, ಈ ಬದಿಯ ನರಪೇತಲನ ಚೂಪು ಮೊಳಕೈಗೂ ಮಧ್ಯೆ ಸಿಲುಕಿದ ಅನುಭವವೂ 'ಒತ್ತು worry'ಯೇ ಅಲ್ಲವೇ!

ಖ್ಯಾತ ವಾಗ್ಮಿ ವೈ.ವಿ. ಗುಂಡೂರಾವ್ ತಮ್ಮ ಭಾಷಣಗಳಲ್ಲಿ 'ವರಿ'ಯ ಬಗ್ಗೆ ಹೇಳುತ್ತಾರೆ. ಅದನ್ನೊಳಗೊಂಡ, ಅದರ ಮುಂದುವರಿದ ಭಾಗ ಹೀಗಿದೆ:

ಇಂಗ್ಲೀಷರಿಗೆ ವರ್ಷಕ್ಕೆ ಎರಡೇ ವರಿ – ಜನವರಿ; ಫೆಬ್ರವರಿ. ಉತ್ತರ ಕರ್ನಾಟಕದ ಮಂದಿಗೆ ಗಂಟೆಗಂಟೆಗೂ ವರಿ – ಒಂದೂವರಿ, ಎರಡೂವರಿ, ಮೂರೂವರಿ... ಸಾಲ ಕೊಟ್ಟ ಬ್ಯಾಂಕಿನವರಿಗೆ ದಿನವೂ ವರಿ – ಕೊಟ್ಟ ಸಾಲದ ರಿಕವರಿ; ವಿಜ್ಞಾನಿಗಳ ದೈನಂದಿನ ಕೆಲಸವೂ ವರಿಯೇ– ಡಿಸ್ಕವರಿ; ಸ್ವಿಗ್ಗಿ ಹುಡುಗರಿಗೂ ಒಂದೇ ವರಿ; ಸಾಧ್ಯವಾದಷ್ಟು ಬೇಗ ಮಾಡಬೇಕು ಡೆಲಿವರಿ. (ಗರ್ಭಿಣಿಯರಿಗೂ ಇದೇ ವರಿ!) ಗಡಿ ಕಾಯುವ ಸೈನಿಕರಲ್ಲಿ ಕಂಡುಬರುವ ಮೆಚ್ಚತಕ್ಕ ವರಿಯೇ ಬ್ರೇವರಿ. ಕಂಡಕ್ಟರ್‌ಗಳದು ದಿನವೂ ಒಂದೇ ಮಂತ್ರ – ಮುಂದುವರಿ; ಹೆಣ್ಣಿನ ಆಲೋಚನೆಯ ರೀತಿಯಲ್ಲಿಯೂ ವರಿ –ವೇವರಿ! ಇವೆಲ್ಲ ಪಾಡುಗಳಿಂದ ನಮ್ಮನ್ನು ಕಾಪಾಡಬಲ್ಲವಳು ರಾಜರಾಜೇಶ್ವರಿ, ತಾಯಿ ಭುವನೇಶ್ವರಿ.

curry ಇಲ್ಲದ ಖಾದ್ಯವಂ ಹರಿಯೂ ಒಪ್ಪನು ಎನ್ನುತ್ತಾನೆ 'ರೋಟಿ ಕರಿ'ಪ್ರಿಯನಾದ ಪಾಂಡು. ರೋಟಿ ಕರಿ ಆರ್ಡರ್ ಮಾಡಿದಾಗ ಕರಿಕರಿಯಾದ ರೋಟಿ ದೊರೆತಾಗಲೂ ಕರೆಕರೆ ಮಾಡದೆ ತಿನ್ನುವ ಅವನು 'ನಾನ್, ರೋಟಿ, ಕುಲ್ಚಾಗಳೊಡನೆ ಕರಿ ಇರದೊಡೆ ಎಲಾಸ್ಟಿಕ್ ಬೆಲ್ಟನ್ನು ಜಗಿದಂತೆ ಟೇಸ್ಟಪ್ಪ' ಎನ್ನುತ್ತಾನೆ. ತಿಂಡಿಪೋತನಾದ ಪಾಂಡುವಿಗೆ ಬೇ'ಕರಿ' ಪ್ರಾಡಕ್ಟ್‌ಗಳೂ ಇಷ್ಟ, ಸಂಜೆ ಐದರ ಮೇಲೆ ಕರಿಕರಿದು ನೀಡುವ ಬೋಂಡಾದಿ ಖಾದ್ಯಗಳೂ ಇಷ್ಟ.

ಸ್ವಿಮ್ಮಿಸಿ ಬಿಸಿಬಿಸಿ ಎಣ್ಣೆಯ ಒಳಗೆ
ಘಮ್ಮನೆ ವಾಸನೆ ಹೊರಡಿಸಿ ಹೊರಗೆ
ಎಮ್ಮಯ ನಾಸ್ಟ್ರಿಲ್ಸ್ ಚುರುಚುರುಗುಡಿಸುತ
'yummy' ರುಚಿಯನು ನಾಲಿಗೆಗೀಯುವ
ಬೋಂಡ ಕರೆಯುತಿದೆ ಕೇಳಿದಿರಾ...
ವಡೆಯು ತೇಲುತಿದೆ ನೋಡಿದಿರಾ...

ಎನ್ನುತ್ತಾ ಕರಿದ ತಿಂಡಿಯನ್ನು ಆಸ್ವಾದಿಸುವ 'ಕರಿವದನ'ರಿಗೆ 'ಕರಿಯನ್ನು ಬಿಡಿ' ಎಂದರೆ ಬಾಂಡಲಿಯ ತಳದಲ್ಲಿನ ಮಸಿಯನ್ನು ನಿಮ್ಮ ಮುಖಕ್ಕೇ ಬಳಿದು ನಿಮ್ಮನ್ನು 'ಕರಿವದನ'ನನ್ನಾಗಿಸಿಯಾರು.

ಬೇಕೋ ಬೇಡವೋ, ಕೆಲವು ಕರಿಗಳು ನಮ್ಮ ಜೀವನದ ಅಂಗಗಳೆನಿಸಿವೆ. ಪ್ರತಿ ಮನೆಯಲ್ಲಿಯೂ ಒಂದಿಷ್ಟಾದರೂ 'ಕ್ರಾ–ಕರಿ' ಇದ್ದೇ ಇರುತ್ತದೆ. ನಮ್ಮ ರಾಜ್ಯದ ವಿದ್ಯುತ್ತನ್ನು ನಂಬಿದವರ ಮನೆಯಲ್ಲಿ ಆಗಾಗ್ಗೆ ದೀಪಗಳು 'ಫ್ಲಿ–ಕರಿ' ಆಗುತ್ತಿರುತ್ತವೆ. ಶಾಲೆಯಲ್ಲೋ, ಸಭೆಗಳಲ್ಲೋ ಒಬ್ಬರಲ್ಲ ಒಬ್ಬರ 'ಮಾ–ಕರಿ' ನಡೆದೇ ಇರುತ್ತದೆ. ಆನ್‌ಲೈನ್ ಕಳ್ಳರಂತೂ ನಮ್ಮ ಅಕೌಂಟಿನಿಂದ ಹಣ ಸೆಳೆಯಲು ದಿನಕ್ಕೊಂದು 'ಟ್ರಿ–ಕರಿ' ಬಳಸುತ್ತಲೇ ಇರುತ್ತಾರೆ. ನಮ್ಮ ಇತಿಹಾಸದಲ್ಲಿಯೂ ಓಬವ್ವನ ಖ್ಯಾತಿಯ ಹಿಂದೆಯೂ ಒಂದು ಕರಿ ಇದೆ; ವೀರ ಮದಕರಿ!

ಇಷ್ಟೆಲ್ಲ ವಿಶೇಷಗಳು ಹರಿ, ವರಿ, ಕರಿಗಳಲ್ಲಿರುವಾಗ 'ತೊರೆದು ಜೀವಿಸಬಹುದೆ ಹರಿ ವರಿಯ ಕರಿಗಳನು!'

ಯುವ ಕ್ರೀಡಾಳುಗಳ ಡಿಜಿಟಲ್ ಗೌಪ್ಯತೆಯ ಆತಂಕ

▸ ಗಣೇಶ್ ಕುಡ್ವಾ

ಯುವ ಕ್ರೀಡಾಳುಗಳು ಡಿಜಿಟಲ್ ವಂಚನೆಯ ಜಾಲಕ್ಕೆ ಸಿಲುಕದಂತೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಭಾರತದ ಯುವ ಕ್ರೀಡಾಪಟುಗಳು ಶಾಲೆ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ನೋಂದಾಯಿಸುವಾಗ ಆಧಾರ್ ಕಾರ್ಡ್‌ಗಳು, ಛಾಯಾಚಿತ್ರಗಳು, ಜನನ ಪ್ರಮಾಣಪತ್ರಗಳು ಮತ್ತು ಸಂಪರ್ಕ ವಿವರಗಳನ್ನು ಸಲ್ಲಿಸುವುದು ನಡೆಯುತ್ತದೆ. ಈ ಕ್ರಮಗಳು ಹೆಚ್ಚಾಗಿ ವಯಸ್ಸು ಮತ್ತು ಗುರುತನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ ಎಂಬುದೇನೋ ನಿಜವೇ. ಆದರೆ ಬದಲಾಗುತ್ತಿರುವ ಸನ್ನಿವೇಶದಲ್ಲಿ ಇದರಿಂದ ಹದಿಹರೆಯದವರು ಡಿಜಿಟಲ್ ಗೌಪ್ಯತೆಯ ಅಪಾಯಗಳಿಗೆ ಈಡಾಗುತ್ತಿರುವ ಬಗ್ಗೆ ಸಮಾಜ ಅಥವಾ ಸರಕಾರ ಎಚ್ಚೆತ್ತುಕೊಂಡಿದೆಯೇ? ಈ ಪ್ರಶ್ನೆಗೆ ಸಮಾಧಾನಕರ ಉತ್ತರ ಲಭಿಸುತ್ತಿಲ್ಲ ಎಂಬುದು ಆತಂಕಕಾರಿ ಅಂಶ.

ಭಾರತವು ತನ್ನ ಮಕ್ಕಳ ರಕ್ಷಣೆ ಮತ್ತು ಡೇಟಾ ಗೌಪ್ಯತೆ ಚೌಕಟ್ಟುಗಳನ್ನು ಬಲಪಡಿಸುವುದನ್ನು ಮುಂದುವರಿಸುತ್ತಿದ್ದಂತೆ, ನೀತಿ ನಿರೂಪಕರು, ಕ್ರೀಡಾ ಒಕ್ಕೂಟಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕಾನೂನು ಜಾರಿ ಸಂಸ್ಥೆಗಳು ಕ್ರೀಡಾ ಪರಿಸರ ವ್ಯವಸ್ಥೆಯೊಳಗೆ ಅಪ್ರಾಪ್ತ ವಯಸ್ಕರ ವೈಯಕ್ತಿಕ ಮಾಹಿತಿಯನ್ನು ಹೇಗೆ ಸಂಗ್ರಹಿಸಲಾಗುತ್ತದೆ, ಹಂಚಿಕೊಳ್ಳಲಾಗುತ್ತದೆ ಮತ್ತು ರಕ್ಷಿಸಲಾಗುತ್ತದೆ ಎಂಬುದನ್ನು ಪರಿಶೀಲಿಸಬೇಕಾದ ತುರ್ತು ಅನಿವಾರ್ಯತೆ ಸೃಷ್ಟಿಯಾಗಿದೆ.

ಗೌಪ್ಯತೆ ಸವಾಲು!



ಚರ್ಚೆಯು ಕೇವಲ ಆಧಾರ್ ಸಂಖ್ಯೆಗಳ ಬಗ್ಗೆ ಅಲ್ಲ. ನೋಂದಣಿ ನಮೂನೆಗಳು ಸಾಮಾನ್ಯವಾಗಿ ವೈಯಕ್ತಿಕ ಮಾಹಿತಿಯ ಬಹು ತುಣುಕುಗಳನ್ನು ಒಳಗೊಂಡಿರುತ್ತವೆ. ಅವುಗಳೆಂದರೆ: ಪೂರ್ಣ ಹೆಸರು, ಜನ್ಮ ದಿನಾಂಕ, ವಿಳಾಸ, ಮೊಬೈಲ್ ಸಂಖ್ಯೆ, ಪೋಷಕರು ಅಥವಾ ಪೋಷಕರ ವಿವರಗಳು, ಭಾವಚಿತ್ರ, ಶಾಲಾ ಮಾಹಿತಿ ಇತ್ಯಾದಿ. ಹೀಗಿರುವಾಗ ಇಂತಹ ಮಾಹಿತಿಗಳನ್ನು ಸ್ಪರ್ಧೆಗಳ ವೇಳೆ ಸಾವಿರಾರು ಅಪ್ರಾಪ್ತ ಕ್ರೀಡಾಳುಗಳಿಂದ ಸಂಗ್ರಹಿಸಿದಾಗ, ಈ ಡೇಟಾ ಸೂಕ್ಷ್ಮ ವೈಯಕ್ತಿಕ ಮಾಹಿತಿಯ ಗಣನೀಯ ಭಂಡಾರವನ್ನು ಸೃಷ್ಟಿಸುತ್ತದೆ. ಇದರ ದುಷ್ಪರಿಣಾಮದ ಬಗೆಗೆ ಸಮಾಜದಲ್ಲಿ ಜಾಗೃತಿ ಇದೆಯೇ ಎಂದರೆ ನಿರಾಶಾದಾಯಕ ಉತ್ತರವೇ ಲಭಿಸುತ್ತದೆ. ಈ ಬಗ್ಗೆ ಮುಂಚಿತವಾಗಿಯೇ ಎಚ್ಚೆತ್ತುಕೊಳ್ಳಬೇಕಾಗಿದ್ದ ಸರಕಾರ ಕೂಡ ಈ ಬಗ್ಗೆ ಗಂಭೀರವಾಗಿರುವಂತೆ ತೋರುತ್ತಿಲ್ಲ.

ಹಲವು ಕ್ರೀಡಾ ಸಂಘಟಕರು ವೇಳಾಪಟ್ಟಿಗಳು, ಸ್ಥಳ ಮಾಹಿತಿ, ಪ್ರಯಾಣ ವ್ಯವಸ್ಥೆಗಳು ಮತ್ತು ಪಂದ್ಯಾವಳಿಯ ನವೀಕರಣಗಳನ್ನು ಸಂವಹನ ಮಾಡಲು ವಾಟ್ಸಾಪ್ ಗುಂಪುಗಳನ್ನು ಬಳಸುತ್ತಾರೆ. ಇವು ಸಂಘಟಕರಿಗೆ ಅನುಕೂಲಕರವಾಗಿದ್ದರೂ, ಈ ಗುಂಪುಗಳು ಕ್ರೀಡಾಪಟುಗಳು, ತರಬೇತುದಾರರು, ಸ್ವಯಂಸೇವಕರು, ಅಧಿಕಾರಿಗಳು ಮತ್ತು ಕೆಲವೊಮ್ಮೆ ವೀಕ್ಷಕರು ಸೇರಿದಂತೆ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಗೆ ಭಾಗವಹಿಸುವವರ ಫೋನ್ ಸಂಖ್ಯೆಗಳು, ಹೆಸರುಗಳು ಮತ್ತು ಪ್ರೊಫೈಲ್ ಛಾಯಾಚಿತ್ರಗಳನ್ನು ಬಹಿರಂಗಪಡಿಸುತ್ತವೆ. ಅಷ್ಟೇ ಅಲ್ಲದೆ ಅನಪೇಕ್ಷಿತ ವ್ಯಕ್ತಿ–ಶಕ್ತಿಗಳು ಇದರ ದುರ್ಲಾಭ ಪಡೆಯುತ್ತಿವೆ ಎಂಬುದು ಕಳವಳಕಾರಿ ಅಂಶ.

ಸಾಮಾಜಿಕ ಮಾಧ್ಯಮ ಸಂಪರ್ಕ

ಇಂತಹ ಸಂದರ್ಭಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಹದಿಹರೆಯದವರಿಗೆ, ಕ್ರೀಡಾಕೂಟವನ್ನು ಮೀರಿ ವಿಸ್ತರಿಸುವ ಡಿಜಿಟಲ್ ಹೆಜ್ಜೆಗುರುತನ್ನು ಸೃಷ್ಟಿಸುತ್ತದೆ. ಪೋಷಕರು ಮತ್ತು ಯುವ ಕ್ರೀಡಾಪಟುಗಳು ಕೆಲವು ಕುತೂಹಲಕಾರಿ ವಿಷಯಗಳನ್ನು ವರದಿ ಮಾಡಿದ್ದಾರೆ. ಕ್ರೀಡೆಗೆ ಸಂಬಂಧಿಸಿದ ವಾಟ್ಸಾಪ್ ಗುಂಪುಗಳಿಗೆ ಸೇರಿದ ಸ್ವಲ್ಪ ಸಮಯದ ನಂತರ, ಅವರು ಸ್ನ್ಯಾಪ್‌ಚಾಟ್, ಇನ್‌ಸ್ಟಾಗ್ರಾಮ್ ಮತ್ತು ಇತರ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಸ್ನೇಹಿತರ ವಿನಂತಿಗಳು, ಪ್ರೊಫೈಲ್ ಸಲಹೆಗಳು ಮತ್ತು ಸಂಪರ್ಕ ಆಹ್ವಾನಗಳನ್ನು ಸ್ವೀಕರಿಸಲು ಪ್ರಾರಂಭಿಸುತ್ತಾರೆ. ಇದನ್ನು ಇಂದು ಅನಪೇಕ್ಷಿತ ಶಕ್ತಿಗಳು ದುರ್ಬಳಕೆ ಮಾಡಿಕೊಂಡು ಅನೇಕ ಅನಾಹುತಗಳಿಗೆ ದಾರಿಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅನೇಕ ಸಾಮಾಜಿಕ ಮಾಧ್ಯಮ ಅಪ್ಲಿಕೇಶನ್‌ಗಳು ಸಂಪರ್ಕ–ಅನ್ವೇಷಣೆ ಅಲ್ಗಾರಿದಮ್‌ಗಳನ್ನು ಬಳಸುತ್ತವೆ ಎಂದು ತಜ್ಞರು ಬೊಟ್ಟು ಮಾಡುತ್ತಾರೆ.

ಈ ಪ್ರಕ್ರಿಯೆಯು ವೈಯಕ್ತಿಕ ಬಳಕೆದಾರರಿಂದ ಯಾವುದೇ ದುರುದ್ದೇಶವಿಲ್ಲದೆ ಸ್ವಯಂಚಾಲಿತವಾಗಿ ಸಂಭವಿಸಬಹುದು. ಆದಾಗ್ಯೂ, ಇದರ ಪರಿಣಾಮವಾಗಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ಅಪ್ರಾಪ್ತ ವಯಸ್ಕರು ಇದ್ದಕ್ಕಿದ್ದಂತೆ ಆನ್‌ಲೈನ್‌ನಲ್ಲಿ ಅಪರಿಚಿತ ವ್ಯಕ್ತಿಗಳ ವ್ಯಾಪಕ ಸಂಪರ್ಕಜಾಲಕ್ಕೆ ಸಿಲುಕುತ್ತಿರುವ ಬಗೆಗೆ ಸಂಬಂಧಿಸಿದ ಸಂಘಸಂಸ್ಥೆಗಳು ಯೋಚಿಸಿವೆಯೇ? ಈ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತಿವೆಯೇ? ಇದು ಮುಂದೆ ಹದಿಹರೆಯದವರನ್ನು ಈ ಕೆಳಗಿನ ಅಪಾಯಗಳಿಗೆ ಸಿಲುಕುವಂತೆ ಮಾಡಬಹುದು. ಅದೆಂದರೆ ಅನಗತ್ಯ ಸಂವಹನ, ಆನ್‌ಲೈನ್ ಕಿರುಕುಳ, ಸೈಬರ್‌ಬೆದರಿಕೆ, ಸಾಮಾಜಿಕ ಇಂಜಿನಿಯರಿಂಗ್ ವಂಚನೆಗಳು, ಸಹ ಕ್ರೀಡಾಪಟುಗಳು ಅಥವಾ ಕ್ರೀಡಾ ಉತ್ಸಾಹಿಗಳಂತೆ ನಟಿಸುವ ವಂಚಕರಿಂದ ಮೋಸಹೋಗುವ ಅಪಾಯಗಳು ಮುಂತಾಗಿ. ಈ ಬಗ್ಗೆ ಸಮಾಜ ಮತ್ತು ಸರಕಾರ ತುರ್ತಾಗಿ ಎಚ್ಚೆತ್ತುಕೊಳ್ಳಬೇಡವೇ?

ಬೇಕು ಸೂಕ್ತ ನಿಯಂತ್ರಣ – ತುರ್ತು ಕ್ರಮ!

ಮಕ್ಕಳು ಮತ್ತು ಹದಿಹರೆಯದವರು ಇಂಟರ್ನೆಟ್ ಬಳಕೆದಾರರ ನಿರ್ದಿಷ್ಟ ದುರ್ಬಲ ವರ್ಗವನ್ನು ಪ್ರತಿನಿಧಿಸುತ್ತಾರೆ. ಇಂದು ಸಾಮಾನ್ಯವಾಗಿ ಕ್ರೀಡಾ ಸಂಸ್ಥೆಗಳು ಸ್ಪರ್ಧೆಗಳ ಸಮಯದಲ್ಲಿ ದೈಹಿಕ ಸುರಕ್ಷತೆ, ವೈದ್ಯಕೀಯ ಸಿದ್ಧತೆ ಮತ್ತು ಸುರಕ್ಷತೆಯ ಮೇಲೆ ಹೆಚ್ಚು ಗಮನಹರಿಸುತ್ತವೆಯೇ ಹೊರತು ಡಿಜಿಟಲ್ ಸುರಕ್ಷತಾ ಪ್ರೋಟೋಕಾಲ್‌ಗಳ ಬಗ್ಗೆ ಕಾಳಜಿ ವಹಿಸುತ್ತಿಲ್ಲ.

ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸುವಿಕೆಗೆ ಆಧಾರ್ ಯಾವತ್ತೂ ಅಗತ್ಯವೆ? ಇದ್ದರೂ, ಪೂರ್ಣ ಆಧಾರ್ ಬದಲಿಗೆ ಮಾಸ್ಕ್‌ಡ್ ಆಧಾರ್ ಸಾಕಾಗುವುದಿಲ್ಲವೇ? ಇಂತಹ ಅವಕಾಶಗಳು ಈಗ ಇರುವಾಗ ಇನ್ನೂ ಪೂರ್ಣ ಆಧಾರ್‌ನ್ನು ಯಾಕೆ ಕೇಳಲಾಗುತ್ತದೆ? ಗುರುತಿನ ದಾಖಲೆಗಳನ್ನು ಎಷ್ಟು ಸಮಯದವರೆಗೆ ಉಳಿಸಿಕೊಳ್ಳಬೇಕೆಂಬ ನಿಯಮ ಇದೆಯೇ? ಇದ್ದರೆ ಅದನ್ನು ಪಾಲಿಸಲಾಗುತ್ತಿದೆಯೇ? ಭಾಗವಹಿಸುವವರ ಡೇಟಾ ಯಾರ ಕೈಗಳಿಗೆಲ್ಲ ತಲುಪುತ್ತಿವೆ? ಈ ಬಗ್ಗೆ ಸಂಬಂಧಿಸಿದವರು ಗಮನ ಹರಿಸುತ್ತಿದ್ದಾರೆಯೇ? ಅಪ್ರಾಪ್ತ ವಯಸ್ಕರ ಫೋನ್ ಸಂಖ್ಯೆಗಳು ಸಮರ್ಪಕ ವಾಗಿ ರಕ್ಷಿಸಲ್ಪಡುತ್ತಿವೆಯೇ? ಹೀಗಿರುವಾಗ, ದೊಡ್ಡ ವಾಟ್ಸಾಪ್ ಗುಂಪುಗಳನ್ನು ಗೌಪ್ಯತೆ ಕಾಪಾಡುವ ಸಂವಹನ ವ್ಯವಸ್ಥೆಗಳಿಂದ ಬದಲಾಯಿಸಬೇಕಾದ ಅಗತ್ಯವಿಲ್ಲವೇ? ತಮ್ಮ ಮಕ್ಕಳ ಡೇಟಾವನ್ನು ಹೇಗೆ ಬಳಸಲಾಗುತ್ತದೆ ಎಂಬುದರ ಕುರಿತು ಪೋಷಕರಿಗೆ ಸಂಪೂರ್ಣ ಮಾಹಿತಿ ಇದೆಯೇ?

ಬಲವಾದ ಸುರಕ್ಷತೆಗಳ ಅಗತ್ಯ

ಸರ್ಕಾರಿ ಇಲಾಖೆಗಳು, ಮಕ್ಕಳ ರಕ್ಷಣಾ ಸಂಸ್ಥೆಗಳು, ಸೈಬರ್ ಅಪರಾಧ ಘಟಕಗಳು, ಕ್ರೀಡಾ ಅಧಿಕಾರಿಗಳು ಮತ್ತು ಶೈಕ್ಷಣಿಕ ನಿಯಂತ್ರಕರು ಈ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸುವ ತುರ್ತು ಇಂದು ಹಿಂದೆಂದಿಗಿಂತ ಹೆಚ್ಚಾಗಿದೆ.

- ಕ್ರೀಡಾ ಸಂಸ್ಥೆಗಳಿಗೆ ಪ್ರಮಾಣೀಕೃತ ಡೇಟಾ–ರಕ್ಷಣಾ ಮಾರ್ಗಸೂಚಿಗಳನ್ನು ನೀಡಬೇಕಾಗಿದೆ ಮತ್ತು ಅವುಗಳ ಪಾಲನೆಯನ್ನು ಕಡ್ಡಾಯಗೊಳಿಸಬೇಕಾಗಿದೆ.
- ಪೂರ್ಣ ಆಧಾರ್ ಬದಲಿಗೆ ಮಾಸ್ಕ್ಡ್ ಆಧಾರ್ (ಇದರಿಂದ ವ್ಯಕ್ತಿ/ ಅಪ್ರಾಪ್ತರ /ನಾಗರಿಕರ ಡೇಟಾ ಅನಪೇಕ್ಷಿತರ ಕೈಗೆ ಹೋಗುವ ಅಪಾಯವನ್ನು ತಪ್ಪಿಸಬಹುದು) ಕಡ್ಡಾಯ ಬಳಕೆಗೆ ಸೂಚಿಸುವುದು.
- ದೊಡ್ಡ ವಾಟ್ಸಪ್ ಗುಂಪುಗಳಿಗೆ ಅಪ್ರಾಪ್ತ ವಯಸ್ಕರ ಫೋನ್ ಸಂಖ್ಯೆಗಳನ್ನು ಪ್ರದರ್ಶಿಸುವುದರ ಮೇಲೆ ನಿರ್ಬಂಧಗಳನ್ನು ಹೇರಬೇಕು.
- ಕ್ರೀಡಾ ನಿರ್ವಾಹಕರು ಮತ್ತು ಸ್ವಯಂಸೇವಕರಿಗೆ ಗೌಪ್ಯತೆ ತರಬೇತಿಯನ್ನು ಕಡ್ಡಾಯಗೊಳಿಸಬೇಕು.
- ಈವೆಂಟ್‌ಗಳು ಅಥವಾ ಉದ್ದೇಶಿತ ಕಾರ್ಯಕ್ರಮಗಳು ಮುಗಿದ ನಂತರ ವೈಯಕ್ತಿಕ ಮಾಹಿತಿಯನ್ನು ಅಳಿಸಲು ಸ್ಪಷ್ಟವಾದ ಪ್ರೋಟೋಕಾಲ್‌ಗಳನ್ನು ರೂಪಿಸಬೇಕು.

ಯುವ ಕ್ರೀಡಾಳುಗಳಿಗೆ ಡಿಜಿಟಲ್–ಸುರಕ್ಷತೆ

ಕ್ರೀಡೆಗಳಲ್ಲಿ ಭಾಗವಹಿಸುವುದು ಮಕ್ಕಳಿಗೆ ಆತ್ಮವಿಶ್ವಾಸ, ಶಿಸ್ತು ಮತ್ತು ಆಜೀವ ಸ್ನೇಹವನ್ನು ಬೆಳೆಸಲು ಸಹಾಯ ಮಾಡಬೇಕು. ಆದರೆ ಈ ಸಂದರ್ಭದಲ್ಲಿ ಅವರು ಅಥವಾ ಅವರ ಪೋಷಕರು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದ ಗೌಪ್ಯತೆಯ ಅಪಾಯಗಳಿಗೆ ಅಜಾಗರೂಕತೆಯಿಂದ ಅವರನ್ನು ತಳ್ಳುವುದಕ್ಕೆ ಅವಕಾಶವಾಗಬಾರದು.

ಯುವ ಕ್ರೀಡಾಪಟುಗಳ ವೈಯಕ್ತಿಕ ಮಾಹಿತಿಯನ್ನು ಅವರ ದೈಹಿಕ ಸುರಕ್ಷತೆಯಂತೆಯೇ ಗಂಭೀರತೆಯಿಂದ ರಕ್ಷಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕ್ರೀಡಾ ಸಂಸ್ಥೆಗಳು, ತಂತ್ರಜ್ಞಾನ ವೇದಿಕೆಗಳು, ಸರ್ಕಾರಿ ಸಂಸ್ಥೆಗಳು ಮತ್ತು ಕಾನೂನು ಜಾರಿ ಅಧಿಕಾರಿಗಳು ಒಟ್ಟಾಗಿ ಕೆಲಸ ಮಾಡಲು ಇದು ಸಕಾಲವಾಗಿದೆ. ಭಾರತದ ಯುವ ಕ್ರೀಡಾ ಪರಿಸರ ವ್ಯವಸ್ಥೆಯು ವಿಸ್ತರಿಸುತ್ತಲೇ ಇರುವುದರಿಂದ, ಡಿಜಿಟಲ್ ಸುರಕ್ಷತೆಯು ಕ್ರೀಡಾಪಟುಗಳ ಕಲ್ಯಾಣದ ಅತ್ಯಗತ್ಯ ಭಾಗವಾಗಬೇಕು. ಹೆಚ್ಚುತ್ತಿರುವ ಸಂಪರ್ಕಿತ ಜಗತ್ತಿನಲ್ಲಿ ದೇಶದ ಯುವ ಕ್ರೀಡಾಕೂಟಗಳಲ್ಲಿ ಭಾಗವಹಿಸುವವರ ಗೌಪ್ಯತೆಯನ್ನು ಸಮರ್ಪಕವಾಗಿ ರಕ್ಷಿಸುತ್ತವೆಯೇ ಎಂಬುದನ್ನು ಪರಿಶೀಲಿಸುವ ಸಮಯ ಬಂದಿದೆ.

ಹದಿಹರೆಯದವರನ್ನು ಕ್ರೀಡೆಗಳಿಗೆ ಸಂಬಂಧಿಸಿದ ವಾಟ್ಸಾಪ್ ಗುಂಪುಗಳಿಗೆ ಸೇರಿಸಿದಾಗ, ಅವರ ಫೋನ್ ಸಂಖ್ಯೆಗಳು ಭಾಗವಹಿಸುವ ಇತರರಿಗೂ ಗೋಚರಿಸಬಹುದು. ಆಧುನಿಕ ಸಾಮಾಜಿಕ ಮಾಧ್ಯಮ ವೇದಿಕೆಗಳು ಹೆಚ್ಚಾಗಿ ಸಂಪರ್ಕ–ಹೊಂದಾಣಿಕೆಯ ಅಲ್ಗಾರಿದಮ್‌ಗಳನ್ನು ಬಳಸುತ್ತವೆ. ಅದು ಉಳಿಸಿದ ಫೋನ್ ಸಂಖ್ಯೆಗಳ ಆಧಾರದ ಮೇಲೆ ಇದು ಅನಪೇಕ್ಷಿತ ವ್ಯಕ್ತಿ–ಶಕ್ತಿಗಳಿಗೆ ಇದು ದಾರಿ ಮಾಡಿಕೊಡಬಹುದು. ಪರಿಣಾಮವಾಗಿ, ಯುವ ಕ್ರೀಡಾಪಟುಗಳು ಸ್ನ್ಯಾಪ್‌ಚಾಟ್ ಮತ್ತು ಇನ್‌ಸ್ಟಾಗ್ರಾಮ್‌ನಂತಹ ವೇದಿಕೆಗಳಲ್ಲಿ 'ಅನಿರೀಕ್ಷಿತ ಮತ್ತು ಅನಪೇಕ್ಷಿತ ಸ್ನೇಹಿತ'ರ ವಿನಂತಿಗಳು, ಫಾಲೋ ವಿನಂತಿಗಳು ಅಥವಾ ಪ್ರೊಫೈಲ್ ಸಲಹೆಗಳನ್ನು ಸ್ವೀಕರಿಸಲು ಪ್ರಾರಂಭಿಸಬಹುದು. ಇದು ಆನ್‌ಲೈನ್‌ನಲ್ಲಿ ಅಪರಿಚಿತ ವ್ಯಕ್ತಿ/ಶಕ್ತಿಗಳ ಅಪಾಯಕಾರಿ ಜಾಲಕ್ಕೆ ಅವರು ತಮ್ಮನ್ನು ಒಡ್ಡಿಕೊಳ್ಳುವಂತೆ ಮಾಡಬಹುದು. ಈ ಬಗ್ಗೆ ಯುವಜನತೆ, ಪೋಷಕರು, ಸರಕಾರ ಕೂಡಲೇ ಎಚ್ಚೆತ್ತುಕೊಂಡು ಸೂಕ್ತ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಸನಾತನ ಧರ್ಮವು ಅವಿನಾಶಿಯೆಂಬ ಸಂದೇಶ!

▸ ದಿವಾಕರ ಹನಕೋಡು

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೇರಿ ಸರಕಾರ ರಚಿಸಿಯೂ ಆಗಿದೆ. ಪ.ಬಂಗಾಳದ ಚುನಾವಣಾ ಫಲಿತಾಂಶ ಕೇವಲ ಬಿಜೆಪಿಯ ವಿಜಯವಲ್ಲ, ಅಕ್ಷರಶಃ ಅದು ಅಲ್ಲಿನ ಜನರ ಗೆಲುವಾಗಿದೆ.

1977ರಿಂದ 2011 ರವರೆಗೆ 34 ವರ್ಷಗಳಷ್ಟು ಸುದೀರ್ಘ ಕಾಲ ಆ ರಾಜ್ಯ ವಾಮಪಕ್ಷಗಳ ಆಡಳಿತದಲ್ಲಿತ್ತು. ದೇಶದಲ್ಲಿ ನವಕ್ರಾಂತಿ ತರುತ್ತೇವೆಂಬ ಭ್ರಮೆಯಲ್ಲಿದ್ದ ಕಮ್ಯುನಿಸ್ಟ್ ಪಕ್ಷ ಶಾಲಾಶಿಕ್ಷಣದ ಪಠ್ಯಪುಸ್ತಕಗಳಲ್ಲಿ ತನ್ನ ಸಿದ್ಧಾಂತವನ್ನು ತುರುಕಿತ್ತು. ಸನಾತನ ಧರ್ಮ ಸಂಸ್ಕೃತಿಗಳ ಬಗ್ಗೆ ಇರುವ ಶ್ರದ್ಧೆಯನ್ನು ನಾಶಮಾಡುವಂತಹ ಅನೇಕ ಸಂಗತಿಗಳನ್ನು ಪಠ್ಯದಲ್ಲಿ ಸೇರಿಸಿತ್ತು. ಹಿಂದೂಗಳ ಧಾರ್ಮಿಕ ಶ್ರದ್ಧೆಗಳನ್ನು ನಾಶಮಾಡುವಂತಹ ಒಂದು ವ್ಯವಸ್ಥಿತ ತಂತ್ರವನ್ನು ಕಮ್ಯುನಿಸ್ಟ್ ಹಣೆದಿದ್ದರು.

ಆದರೆ... ಮೂರು ದಶಕಗಳ ಕಮ್ಯುನಿಸ್ಟ್ ಆಡಳಿತದ ನಂತರವೂ... ಬಳಿಕ ಒಂದೂವರೆ ದಶಕಗಳ ಮತಾಂಧ ಶಕ್ತಿಗಳ ಆಡಳಿತದ ನಂತರವೂ ಬಂಗಾಳದಲ್ಲಿ ಮತ್ತೆ ಹಿಂದೂಗಳು ತಲೆ ಎತ್ತಿ ನಿಲ್ಲುತ್ತಿದ್ದಾರೆಂದರೆ... ಅತ್ಯಂತ ಕಷ್ಟದ ಅವಧಿಯಲ್ಲೂ ತಮ್ಮತನವನ್ನು ಕಾಪಾಡಿಕೊಂಡು ಮತ್ತೆ ಬಲಿಷ್ಠರಾಗುತ್ತಿದ್ದಾರೆಂದರೆ.... ಸನಾತನ ಧರ್ಮವು ಅವಿನಾಶಿ, ಯಾರಿಂದಲೂ ಇದನ್ನು ನಾಶಮಾಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಈ ಹಿಂದೂ ಐಕ್ಯತೆ ಪ್ರಪಂಚಕ್ಕೆ ಸಾರಿ ಸಾರಿ ಹೇಳುತ್ತಿದೆ.

ಈ ಚುನಾವಣೆ ಗೆಲ್ಲಲು ಮಮತಾ ಬ್ಯಾನರ್ಜಿ ಏನೆಲ್ಲಾ ಆಟಗಳನ್ನು ಆಡಿದರು! ಚುನಾವಣಾ ಪ್ರಚಾರದ ವೇಳೆ, ಮಮತಾ ಬ್ಯಾನರ್ಜಿ ತಮ್ಮ ಪಕ್ಷ ಆಡಳಿತದಲ್ಲಿಲ್ಲದಿದ್ದರೆ ಒಂದು ನಿರ್ದಿಷ್ಟ ಸಮುದಾಯ ಹಿಂದೂಗಳನ್ನು ಒಂದು ಕ್ಷಣದಲ್ಲಿ ನಾಶಮಾಡಿಬಿಡುತ್ತದೆ ಎಂದು ಬೆದರಿಸುವ ಪ್ರಯತ್ನ ಮಾಡಿದ್ದರು! ಹೈದರಾಬಾದಿನಲ್ಲಿ ಒಬ್ಬ ಮತಾಂಧ ಹಿಂದೊಮ್ಮೆ ಹತ್ತು ನಿಮಿಷದಲ್ಲಿ ಹಿಂದೂಗಳನ್ನು ಮುಗಿಸುವ ಮಾತನಾಡಿದ್ದ!! ಇಂತಹ ಮಾತುಗಳನ್ನು ಕೇಳಿ ವಿಧಿಯು ಗಹಗಹಿಸಿ ನಗುತ್ತಿರುತ್ತದೆ. ಮಹಮದ್ ಬಿನ್ ಕಾಸಿಂ ಭಾರತದ ಮೇಲೆ ದಾಳಿ ಮಾಡಿದ್ದು ಏಳನೆಯ ಶತಮಾನದಲ್ಲಿ, ಅಲ್ಲಿಂದ ಈವರೆಗೆ 1300ಕ್ಕೂ ಹೆಚ್ಚು ವರ್ಷಗಳು ಕಳೆದು ಹೋದವು. ಇನ್ನೂ ಈ ದೇಶದಲ್ಲಿ ಹಿಂದೂಗಳು ಪ್ರಬಲವಾದ ಅಸ್ತಿತ್ವವನ್ನು ಹೊಂದಿದ್ದಾರೆ. 1300 ವರ್ಷಗಳ ಕಾಲ ನಿರಂತರವಾಗಿ ನಡೆದ ದಾಳಿಗಳ ನಡುವೆಯೂ ಹಿಂದೂಗಳು ಈ ಭೂಮಿಯಲ್ಲಿ ಉಳಿದಿರುವಾಗ....ಈ ನಾಯಕ ಮಣಿಗಳು ನಿಮಿಷಗಳಲ್ಲಿ, ಸೆಕೆಂಡುಗಳಲ್ಲಿ... ಹಿಂದೂಗಳನ್ನು ನಾಶಮಾಡುವ ಮಾತನಾಡುತ್ತಿರುವುದೆಷ್ಟು ಹಾಸ್ಯಾಸ್ಪದ!

70ರ ದಶಕದಲ್ಲಿ ಮಾನ್ಯ ಹೊವೆ ಶೇಷಾದ್ರಿಯವರು ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ ಬರೆದ 'ಕ್ರಾಂತಿಯಲ್ಲ ಭ್ರಾಂತಿ!' ಎಂಬ ಪುಸ್ತಕ ಹಲವರಿಗೆ ನೆನಪಿರಬಹುದು. ಅಂದು ಆ ಗ್ರಂಥದಲ್ಲಿ ಪ್ರತಿಪಾದಿಸಿದ ವಿಷಯಗಳ ಬಗ್ಗೆ ನಂಬಿಕೆ ಹೊಂದಲು ಅನೇಕರಿಗೆ ಕಷ್ಟವಾಗಿತ್ತು. ಏಕೆಂದರೆ ಕಮ್ಯುನಿಸಂ ಅತ್ಯಂತ ಉಚ್ಛ್ರಾಯವಾಗಿದ್ದ ಕಾಲ ಅದು. ಜಗತ್ತಿನ ಕಾಲು ಭಾಗದಷ್ಟು ಭೂಮಿ ಕಮ್ಯುನಿಸ್ಟರ ಆಡಳಿತದಲ್ಲಿತ್ತು. ಆದರೆ ಇಂದಿನ ಕಾಲಘಟ್ಟದಲ್ಲಿ ನಿಂತು ಆ ಗ್ರಂಥದ ಸಾರಾಂಶವನ್ನು ಮೆಲುಕು ಹಾಕುವಾಗ ಶೇಷಾದ್ರಿಯವರು ಪ್ರತಿಪಾದಿಸಿದ ಅಂಶಗಳು ಎಷ್ಟು ನಿಜವಾಗಿದೆ ನೋಡಿ. ಇಂದು ಚೀನಾ ಬಿಟ್ಟರೆ ಬೇರೆಲ್ಲೂ ಕಮ್ಯುನಿಸ್ಟರು ಅಧಿಕಾರದಲ್ಲಿಲ್ಲ.

ಅನೇಕ ವರ್ಷಗಳ ಹಿಂದೆ ಮಾಜಿ ಪ್ರಧಾನಿ ವಿ.ಪಿ.ಸಿಂಗ್ 'ಬಿಜೆಪಿ ಧರ್ಮಾಧಾರಿತ ರಾಜಕಾರಣ ಮಾಡುತ್ತಿದೆ. ಸುದೀರ್ಘ ಅವಧಿಯಲ್ಲಿ ಇಂತಹ ಧರ್ಮಾಧಾರಿತ ರಾಜಕಾರಣ ವಿಫಲವಾಗುತ್ತದೆ'' ಎಂದು ನುಡಿದಿದ್ದರು. ಯುರೋಪ್, ಅಮೆರಿಕದಂತಹ ಖಂಡಗಳಲ್ಲಿ ಧರ್ಮಾಧಾರಿತ ರಾಜಕಾರಣ ವಿಫಲವಾಗಬಹುದು. ಆದರೆ ಭಾರತ ಈಗಿರುವಂತಹ ಪರಿಸ್ಥಿತಿಯಲ್ಲಿ ಧರ್ಮಾಧಾರಿತ ರಾಜಕಾರಣ ವಿಫಲವಾಗುವುದಿಲ್ಲ. ಏಕೆಂದರೆ, ಇಲ್ಲಿ ಸಕ್ರಿಯವಾಗಿರುವ ಮತಾಂಧ ಶಕ್ತಿಗಳು, ಎಡರಂಗಗಳು, ತುಷ್ಟೀಕರಣದ ಪರವಾದ ರಾಜಕೀಯ ಪಕ್ಷಗಳು ಬಿಜೆಪಿಯ ಧರ್ಮಾಧಾರಿತ ರಾಜಕಾರಣ ವಿಫಲವಾಗಲು ಬಿಡುವುದಿಲ್ಲ.

ನಿಜಾರ್ಥದಲ್ಲಿ ಬಿಜೆಪಿಯ ಅದ್ಭುತವಾದ ಬೆಳವಣಿಗೆಗೆ ವೋಟ್ ಬ್ಯಾಂಕ್ ರಾಜಕಾರಣ, ಮತಾಂಧ ಶಕ್ತಿಗಳ ತುಷ್ಟೀಕರಣ ಮಾಡುವ ರಾಜಕೀಯ ಪಕ್ಷಗಳೂ ಕಾರಣಗಳಾಗಿವೆ! ಅಲ್ಪಸಂಖ್ಯಾತರಿಗೆ ಒಂದಿಷ್ಟು ಸೌಲಭ್ಯಗಳನ್ನು ಕೊಡುವುದಕ್ಕೆ ಮಾತ್ರ ಈ ಓಲೈಕೆ ಸೀಮಿತವಾಗಿರುವುದಿಲ್ಲ. ಮತಾಂಧ ಶಕ್ತಿಗಳು ಎಂತಹ ಅಪರಾಧ ಕೃತ್ಯಗಳನ್ನು ಮಾಡಿದರೂ ಅವುಗಳನ್ನು ಸಹಿಸಿಕೊಳ್ಳಬೇಕು ಎನ್ನುವ ಮಟ್ಟಕ್ಕೆ ಯಾವಾಗ ಈ ರಾಜಕೀಯ ಪಕ್ಷಗಳು ಹೋಗುತ್ತವೆಯೋ ಆಗ ತುಳಿತಕ್ಕೊಳಗಾದ ಹಿಂದೂ ಸಮಾಜ ಅನಿವಾರ್ಯವಾಗಿ ಸಂಘಟಿತವಾಗಲೇಬೇಕಾದ ಸ್ಥಿತಿಗೆ ಬರುತ್ತದೆ. ಪ. ಬಂಗಾಳದಲ್ಲಿ ಆಗಿದ್ದು ಇದೇ.

ಹಿಂದೆ ಮಥುರಾದಲ್ಲಿ ಕಂಸನ ವಧೆಯ ನಂತರ ಯಾವ ರೀತಿ ಜನರು ಸಂಭ್ರಮದಿಂದ ವಿಜಯೋತ್ಸವವನ್ನು ಆಚರಿಸಿದರೋ ಅಂತಹ ದೃಶ್ಯಗಳು ಈಗ ಬಂಗಾಳದಲ್ಲಿ ಮರುಕಳಿಸುತ್ತಿವೆ.

ರಾಜಕಾರಣಿಗಳು ತಮಗೆ ಲಾಭವಾಗುತ್ತದೆ ಎಂದರೆ ಕೇವಲ ಜಾತಿ, ಸಮಾಜಗಳನ್ನಲ್ಲ, ದೇವರನ್ನೂ ಸಹ ತಮ್ಮ ವಿಭಜನಾವಾದಿ ರಾಜಕಾರಣಕ್ಕೆ ಎಳೆದು ತರುತ್ತಾರೆ. ಬಂಗಾಳದ ಪಕ್ಷಗಳು ಭಾರತದಲ್ಲಿ ಎಲ್ಲೆಡೆ ನೆಲೆಯನ್ನು ಹೊಂದಿರುವ ಶ್ರೀರಾಮನನ್ನು ಉತ್ತರ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಲು ನೋಡಿದರು!! ಬಂಗಾಳಿ ಅಸ್ಮಿತೆಯ ಹೆಸರಿನಲ್ಲಿ ಆಕ್ರಮ ಬಾಂಗ್ಲಾ, ರೋಹಿಂಗ್ಯಾ ವಲಸಿಗರನ್ನು ರಕ್ಷಿಸುವ ಪ್ರಯತ್ನ ಜನರಿಗೆ ಅರ್ಥವಾಗದಿರುತ್ತದೆಯೇ?!

ಮುಸ್ಲಿಮರ ಹಬ್ಬದ ದಿನ ಮುಸ್ಲಿಮರೊಂದಿಗೆ ಪ್ರಾರ್ಥನೆಯಲ್ಲಿ ಪಾಲ್ಗೊಂಡು ತಮ್ಮ ಚುನಾವಣಾ ಪ್ರಚಾರ ಆರಂಭಿಸಿದ ಮಮತಾ ತಮಗೆ ಮುಸ್ಲಿಂ ಮತಗಳೇ ಮುಖ್ಯ ಎಂಬ ಸಂದೇಶವನ್ನು ಜನರಿಗೆ ನೀಡಿದ್ದರು. ಅವರ ಈ ವರ್ತನೆಗೆ ಬಂಗಾಳಿ ಹಿಂದುಗಳು ಹೇಗೆ ಉತ್ತರ ಕೊಟ್ಟರು ನೋಡಿ. ರಾಜಕೀಯ ನಾಯಕರಿಂದ ಉತ್ತೇಜಿಸಲ್ಪಟ್ಟ ವಿಪರೀತವಾದ ಪ್ರಾದೇಶಿಕ ಒಡಕಿನ ಭಾವನೆಗಳು ರಾಷ್ಟ್ರಹಿತದ ಮುಂದೆ ಗೌಣವಾಗುತ್ತವೆ ಎಂಬ ಸಂದೇಶವನ್ನು ಬಂಗಾಳಿಗರು ದೇಶದ ಜನತೆಗೆ ನೀಡಿದ್ದಾರೆ.

ಬಂಗಾಳದ ವಿದ್ಯಮಾನಗಳನ್ನು ಗಮನಿಸಿದಾಗ ಹಿಂದೆ ಶಾಖೆಗಳಲ್ಲಿ ಹಾಡುತ್ತಿದ್ದ ಕನ್ನಡಕ್ಕೆ ಅನುವಾದಿಸಿರುವ ರವೀಂದ್ರನಾಥ ಟಾಗೋರರ ರಚನೆ :

ಎಲ್ಲಿ ಮನವು ನಿರ್ಭಯದಿ ತಲೆಯನೆತ್ತಿ ನಿಲ್ಲುವುದೋ
ಎಲ್ಲಿ ಮಾತು ಸತ್ಯದಾಳದಿಂದ ಚಿಮ್ಮಿ ಬರುವುದೋ
ಆ ಸ್ವತಂತ್ರ ಸ್ವರ್ಗಕ್ಕೆ ನಮ್ಮ ನಾಡು ಏಳಲೇಳಲೇಳಲೇಳಲಿ...

ಎಂಬ ಹಾಡು ನೆನಪಾಗುತ್ತದೆ. 1947ರ ನಂತರ ಈಗ ಬಂಗಾಳಿಗರಿಗೆ ಎರಡನೆಯ ಬಾರಿ ಸ್ವಾತಂತ್ರ್ಯ ಸಿಕ್ಕಂತಾಗಿದೆ.

ರಾಮಕೃಷ್ಣ, ವಿವೇಕಾನಂದ, ಅರವಿಂದ, ಸುಭಾಷರ ಈ ಪುಣ್ಯಭೂಮಿ ಮತ್ತೊಮ್ಮೆ ಭಾರತದ ಸಾಂಸ್ಕೃತಿಕ ರಂಗದ ಮುಂಚೂಣಿಯಲ್ಲಿ ನಿಲ್ಲಲಿದೆ.

ಯುವ ಶಕ್ತಿಯ 12 ವರ್ಷ ಶ್ಲಾಘಿಸಿದ ಮೋದಿ

ಯುವಜನ ನೇತೃತ್ವದ ಪ್ರಗತಿಗೆ ದೃಢ ಸಂಕಲ್ಪ



ಹೊಸದಿಲ್ಲಿ: ಯುವಭಾರತೀಯರಆಕಾಂಕ್ಷೆಗಳನ್ನು ಈಡೇರಿಸಲು ಮತ್ತು ಅವರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ತಮ್ಮ ಸರ್ಕಾರ ಸಂಪೂರ್ಣ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ. 'ಯುವ ಶಕ್ತಿಯ 12 ವರ್ಷಗಳು' ಎಂಬ ವಿಷಯದಲ್ಲಿ ದೇಶದ ಯುವಜನತೆ ಸಾಧಿಸಿರುವ ಅಭೂತಪೂರ್ವ ಪ್ರಗತಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ #12YearsOfYuvaShakti ಹ್ಯಾಶ್‌ಟ್ಯಾಗ್‌ನೊಂದಿಗೆ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ, ನಮ್ಮ ಎನ್‌ಡಿಎ ಸರ್ಕಾರವು ಯುವ ನೇತೃತ್ವದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಕಳೆದ 12 ವರ್ಷಗಳ ಅತ್ಯಂತ ಗಮನಾರ್ಹ ವೈಶಿಷ್ಟ್ಯವೆಂದರೆ, ಭಾರತದ ಯುವ ಪೀಳಿಗೆಯು ಅಚಲ ಆತ್ಮವಿಶ್ವಾಸದೊಂದಿಗೆ ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುತ್ತಿರುವುದೇ ಆಗಿದೆ ಎಂದು ಹೆಮ್ಮೆಯಿಂದ ಉಲ್ಲೇಖಿಸಿದ್ದಾರೆ.

ನಾವೀನ್ಯತೆ, ಉದ್ಯಮಶೀಲತೆಗೆ ವೇಗ: ಯುವ ಸಮುದಾಯದ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಮಹತ್ವಾಕಾಂಕ್ಷಿ ಯೋಜನೆಗಳನ್ನು ಪ್ರಧಾನಿ ಪಟ್ಟಿ ಮಾಡಿದ್ದಾರೆ. ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಕಿಲ್ ಇಂಡಿಯಾ ಮತ್ತು ಅಟಲ್ ಇನ್ನೋವೇಶನ್ ಮಿಷನ್‌ಗಳಂತಹ ಕ್ರಾಂತಿಕಾರಿ ಕಾರ್ಯಕ್ರಮಗಳು ದೇಶದಲ್ಲಿ ನಾವೀನ್ಯತೆ ಹಾಗೂ ಉದ್ಯಮಶೀಲತೆಯನ್ನು ಉತ್ತೇಜಿಸುವ ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿವೆ ಎಂದಿದ್ದಾರೆ.

ಇಂದು ಭಾರತವು ಜಾಗತಿಕ ಮಟ್ಟದಲ್ಲಿ ಪ್ರಮುಖ ಸ್ಟಾರ್ಟ್‌ಅಪ್ ತಾಣವಾಗಿ ಹೊರಹೊಮ್ಮಿದೆ. ವಿಶೇಷವೆಂದರೆ, ಈ ಯಶೋಗಾಥೆಗಳು ಕೇವಲ ಮೆಟ್ರೋ ನಗರಗಳಿಗಷ್ಟೇ ಸೀಮಿತವಾಗಿರದೆ, ದೇಶದ ಸಣ್ಣ ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಭಾಗದ ಯುವ ಶಕ್ತಿಯಿಂದಲೇ ಲಿಖಿತವಾಗುತ್ತಿವೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ವಿಜ್ಞಾನ, ಅತ್ಯಾಧುನಿಕ ತಂತ್ರಜ್ಞಾನ, ಸುಧಾರಿತ ಉತ್ಪಾದನೆ, ಬಾಹ್ಯಾಕಾಶ ಪರಿಶೋಧನೆ, ಸೆಮಿಕಂಡಕ್ಟರ್ ಮತ್ತು ಡ್ರೋನ್ ತಂತ್ರಜ್ಞಾನದಂತಹ ಭವಿಷ್ಯದ ಪ್ರಮುಖ ಕ್ಷೇತ್ರಗಳಲ್ಲಿ ಭಾರತದ ಯುವಕರು ಮುಂಚೂಣಿಯಲ್ಲಿದ್ದು, ಜಾಗತಿಕ ಮಟ್ಟದಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ ಎಂದು ಮೋದಿ ಪ್ರಶಂಸಿಸಿದ್ದಾರೆ.

ಕ್ರೀಡಾ ಕ್ಷೇತ್ರದಲ್ಲಿ ಯುವ ಕೀರ್ತಿ: ಕ್ರೀಡಾ ರಂಗದಲ್ಲಿ ಯುವ ಕ್ರೀಡಾಪಟುಗಳ ಸಾಧನೆಯನ್ನು ಕೊಂಡಾಡಿದ ಪ್ರಧಾನಿ ಮೋದಿ, ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಯುವ ಭಾರತೀಯ ಕ್ರೀಡಾಪಟುಗಳು ಸತತವಾಗಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ದೇಶದ ಹೆಮ್ಮೆಯನ್ನು ಹೆಚ್ಚಿಸುತ್ತಿದ್ದಾರೆ ಎಂದರು. ಕ್ರೀಡಾ ಮೂಲಸೌಕರ್ಯಗಳ ಆಧುನೀಕರಣ, ಬಲಿಷ್ಠ ಕ್ರೀಡಾ ಪರಿಸರ ವ್ಯವಸ್ಥೆಯ ನಿರ್ಮಾಣ ಹಾಗೂ ಕ್ರೀಡಾಪಟುಗಳಿಗೆ ಸರ್ಕಾರ ನೀಡುತ್ತಿರುವ ನಿರಂತರ ಪ್ರೋತ್ಸಾಹವು ಯುವಪ್ರತಿಭೆಗಳಿಗೆ ಹೊಸ ಆಶಾಕಿರಣ ಮೂಡಿಸಿದೆ ಎಂದು ಅಭಿಪ್ರಾಯಪಟ್ಟರು.

ಕಳೆದ 12 ವರ್ಷಗಳಲ್ಲಿ ಭಾರತವು 'ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್ ಮತ್ತು ಸಬ್ಕಾ ಪ್ರಯಾಸ್' ಎಂಬ ಮೂಲ ಮಂತ್ರದೊಂದಿಗೆ ಮುನ್ನಡೆಯುತ್ತಿದ್ದು, ಯುವಕರನ್ನು ದೇಶದ ಬೆಳವಣಿಗೆಯ ಕೇಂದ್ರಬಿಂದುವಾಗಿ ಇರಿಸಲಾಗಿದೆ ಎಂದು ನುಡಿದರು.

ಜೂ.17ಕ್ಕೆ ಮೋದಿ- ಟ್ರಂಪ್ ಭೇಟಿ

ಹೊಸದಿಲ್ಲಿ: ಫ್ರಾನ್ಸ್‌ನಲ್ಲಿ ಜೂನ್ 15ರಿಂದ 17ರವರೆಗೆ ನಡೆಯಲಿರುವ ಜಿ-7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಈ ಕುರಿತು ಶ್ವೇತಭವನ ಅಧಿಕೃತವಾಗಿ ದೃಢಪಡಿಸಿದೆ. ಇವರಿಬ್ಬರು ನಾಯಕರ ನಡುವೆ ಜೂ.17ರಂದು ಮಾತುಕತೆ ನಡೆಯುವ ಸಾಧ್ಯತೆಗಳಿವೆ.

ಕಳೆದ 16 ತಿಂಗಳಲ್ಲಿ ಉಭಯ ನಾಯಕರು ಮುಖಾಮುಖಿಯಾಗಿ ಭೇಟಿಯಾಗುತ್ತಿರುವುದು ಇದೇ ಮೊದಲ ಬಾರಿಯಾಗಿದೆ. 2025ರ ಫೆಬ್ರವರಿಯಲ್ಲಿ ಪ್ರಧಾನಿ ಮೋದಿ ಅಮೆರಿಕಕ್ಕೆ ಭೇಟಿ ನೀಡಿ ಟ್ರಂಪ್ ಅವರನ್ನು ಭೇಟಿಯಾಗಿದ್ದ ಬಳಿಕ ಮತ್ತೊಮ್ಮೆ ನೇರ ಮಾತುಕತೆ ನಡೆಯುತ್ತಿದೆ.

ಫ್ರಾನ್ಸ್‌ನ ಎವಿಯಾನ್‌ನಲ್ಲಿ ನಡೆಯಲಿರುವ ಜಿ-7 ಶೃಂಗಸಭೆಯಲ್ಲಿ ಜಾಗತಿಕ ಆರ್ಥಿಕತೆ, ಪಶ್ಚಿಮ ಏಷ್ಯಾದ ಬೆಳವಣಿಗೆಗಳು, ಹೋರ್ಮುಜ್ ಜಲಸಂಧಿಯ ಭದ್ರತೆ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಗೆ ಬರಲಿವೆ. ಈ ಹಿನ್ನೆಲೆಯಲ್ಲಿ ಮೋದಿ-ಟ್ರಂಪ್ ಭೇಟಿಯು ವಿಶೇಷ ಮಹತ್ವ ಪಡೆದುಕೊಂಡಿದೆ.ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ, ವೀಸಾ ನೀತಿ, ಇಂಧನ ಸಹಕಾರ ಹಾಗೂ ಪ್ರಾದೇಶಿಕ ಭದ್ರತೆ ಸೇರಿದಂತೆ ಹಲವು ದ್ವಿಪಕ್ಷೀಯ ವಿಷಯಗಳು ಮಾತುಕತೆಯಲ್ಲಿ ಪ್ರಸ್ತಾಪವಾಗುವ ಸಾಧ್ಯತೆಯಿದೆ. ಭಾರತ ಮತ್ತು ಅಮೆರಿಕ ನಡುವಿನ ವ್ಯೂಹಾತ್ಮಕ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಈ ಭೇಟಿ ಮಹತ್ವದ್ದಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರಧಾನಿ ಮೋದಿ ಅವರು ಫ್ರಾನ್ಸ್ ಹಾಗೂ ಸ್ಲೋವಾಕಿಯಾ ದೇಶಗಳ ಪ್ರವಾಸಕ್ಕಾಗಿ ಶನಿವಾರ ಭಾರತದಿಂದ ಪ್ರಯಾಣ ಬೆಳೆಸಿದ್ದು, ಜಿ-7 ಶೃಂಗಸಭೆಯಲ್ಲಿ ಭಾಗವಹಿಸುವ ಜೊತೆಗೆ ಹಲವು ರಾಷ್ಟ್ರಗಳ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ.

ಅಂತಿಮ ಹಂತಕ್ಕೆ ತಲುಪಿದ ವರದಿ

ದೇಶಿ ಹಸುಗಳು ಹಾಗೂ ಅವುಗಳ ಉತ್ಪನ್ನಗಳ ವೈಜ್ಞಾನಿಕ ಬಳಕೆ ಮತ್ತು ಗುಣಲಕ್ಷಣಗಳನ್ನು ಅಧ್ಯಯನ ಮಾಡಲು ಆರಂಭಿಸಲಾದ ಈ ಯೋಜನೆ, ಇದೀಗ ಸಂಶೋಧನಾ ವರದಿಗಳ ಪ್ರಕಟಣೆಯೊಂದಿಗೆ ಪ್ರಮುಖ ಘಟ್ಟ ತಲುಪಿದೆ. ಸುತ್ರಾ-ಪಿಕ್ (ಸೈಂಟಿಫಿಕ್ ಯುಟಿಲೈಸೇಶನ್ ಥ್ರೂ ರಿಸರ್ಚ್ ಆಗ್ಮೆಂಟೇಶನ್- ಪ್ರೈಮ್ ಪ್ರೊಡಕ್ ಫ್ರಂ ಇಂಡಿಜೀನಿಯಸ್ ಕೌಸ್) ಕಾರ್ಯಕ್ರಮವನ್ನು ಏಪ್ರಿಲ್ 2020ರಲ್ಲಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದಲ್ಲಿ ಆರಂಭಿಸಲಾಗಿತ್ತು. ಆರೋಗ್ಯ, ಕೃಷಿ ಮತ್ತು ಪೌಷ್ಟಿಕಾಂಶ ಕ್ಷೇತ್ರದಲ್ಲಿ ದೇಶಿ ಹಸುಗಳು ಹಾಗೂ ಅವುಗಳ ಉತ್ಪನ್ನಗಳ ವೈಜ್ಞಾನಿಕ ಸಂಶೋಧನೆಯನ್ನು ಬೆಂಬಲಿಸಲು 98 ಕೋಟಿ ರೂ. ಅನುದಾನದೊಂದಿಗೆ ಈ ಯೋಜನೆ ರೂಪಿಸಲಾಗಿತ್ತು. ಈ ಯೋಜನೆಯಲ್ಲಿ ಒಟ್ಟು 10 ಯೋಜನೆಗಳಿಗೆ ಅನುಮೋದನೆ ನೀಡಲಾಗಿತ್ತು. ಇದರಲ್ಲಿ ಐಐಟಿ ಸಂಶೋಧಕರ ನೇತೃತ್ವದ ನಾಲ್ಕು ಯೋಜನೆಗಳು(ಐಐಟಿ-ಬಿಎಚ್‌ಯುನಲ್ಲಿ ಎರಡು, ಐಐಟಿ ಧನ್‌ಬಾದ್ ಮತ್ತು ಐಐಟಿ ಕಾನ್ಪುರದಲ್ಲಿ ತಲಾ ಒಂದು) ಸೇರಿವೆ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ (ಎನ್‌ಎಫ್‌ಎಸ್‌ಯು) ಮತ್ತು ಐಸಿಎಆರ್ ನಂತಹ ಇತರ ಸಂಸ್ಥೆಗಳೂ ಇದರಲ್ಲಿ ಸಂಶೋಧನೆ ಕೈಗೊಂಡಿವೆ.

ಮುಂದುವರಿದ ಪಂಚಗವ್ಯ ಸಂಶೋಧನೆ

ಸುತ್ರಾ-ಪಿಕ್ ಅನ್ವಯ ಹಲವು ಯೋಜನೆಗಳು ಇನ್ನೂ ಪ್ರಗತಿಯಲ್ಲಿವೆ. ಐಐಟಿ-ಬಿಎಚ್‌ಯುನಲ್ಲಿ ಹಾಲು, ಮೊಸರು, ತುಪ್ಪ, ಮೂತ್ರ ಮತ್ತು ಸಗಣಿಯನ್ನು ಒಳಗೊಂಡಿರುವ 'ಪಂಚಗವ್ಯ'ದ ಸೋಂಕು ನಿವಾರಕ ಸಾಮರ್ಥ್ಯದ ಕುರಿತು ಅಧ್ಯಯನ ನಡೆಯುತ್ತಿದೆ. ಅವರು ಪಂಚಗವ್ಯದಲ್ಲಿರುವ ರಾಸಾಯನಿಕ ಅಣುಗಳನ್ನು ವಿಶ್ಲೇಷಿಸುತ್ತಿದ್ದು, ಸ್ಥಳೀಯ ಹಸುಗಳ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಈ ಕುರಿತ ವರದಿ ಮತ್ತು ಪೇಟೆಂಟ್ ಅರ್ಜಿ ಸಿದ್ಧವಾಗುತ್ತಿದ್ದು, ಸಂಶೋಧನೆ ಪೂರ್ಣಗೊಳಿಸಲು ಆರು ತಿಂಗಳ ಕಾಲಾವಕಾಶ ಕೋರಲಾಗಿದೆ ಎಂದು ಜೈನ್ ತಿಳಿಸಿದ್ದಾರೆ. ಐಐಟಿ ಹೊರತಾಗಿ, ಗಾಂಧಿನಗರದ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯದ ಸಂಶೋಧಕ ಜಯರಾಜ್‌ಸಿನ್ಹ್ ಸರ್ವೈಯಾ, ಅಸಲಿ ಪಂಚಗವ್ಯ ಉತ್ಪನ್ನಗಳನ್ನು ಗುರುತಿಸುವ ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ.



ಭಾರತದಲ್ಲಿ ಹಸುವಿಗೆ ಶ್ರೇಷ್ಠ ಸ್ಥಾನವಿದೆ. ಹಿಂದು ಸಂಪ್ರದಾಯದಲ್ಲಿ ಯಾವುದೇ ಶುಭ ಸಮಾರಂಭಗಳ ಆರಂಭಕ್ಕೂ ಗೋ ಮೂತ್ರ, ಗೋಮಯಗಳ ಪ್ರೋಕ್ಷಣೆ, ಪಂಚಗವ್ಯ ಸೇವನೆಯು ಸಾಮಾನ್ಯವಾಗಿ ನಡೆಯುತ್ತದೆ. ಇನ್ನು ಕೃಷಿ ಚಟುವಟಿಕೆಗಳಿಗೂ ಹಸುವಿನ ಸಗಣಿ ಮತ್ತು ಗೋ ಮೂತ್ರಗಳನ್ನು ಬಳಸುತ್ತಾರೆ. ಇದರಿಂದ ಕೃಷಿಗೂ ಬಹಳ ಸಹಕಾರಿಯಾಗುತ್ತದೆ. ಇದಕ್ಕೆ ಪೂರಕವೆಂಬಂತೆ ದೇಸಿ ಹಸುಗಳು ಹಾಗೂ ಅವುಗಳ ಉತ್ಪನ್ನಗಳ ಸಂಶೋಧನೆಗಾಗಿ ಕೇಂದ್ರ ಸರ್ಕಾರ 98 ಕೋಟಿ ರೂ.ಗಳ ಯೋಜನೆ ಹಮ್ಮಿಕೊಂಡಿದ್ದು, ಗೋ ಉತ್ಪನ್ನಗಳಿಂದಾಗುವ ಪ್ರಯೋಜನಗಳೇನು? ವರದಿಗಳಲ್ಲಿ ಏನಿದೆ? ಎಂಬಿತ್ಯಾದಿ ವಿಚಾರ ಇಲ್ಲಿದೆ.

ಗೋ ಉತ್ಪನ್ನಗಳಲ್ಲಿ ಪೌಷ್ಟಿಕತೆಯ ಸಾರ

ದೇಶದಲ್ಲಿ 98 ಕೋಟಿ ರೂ. ಮೊತ್ತದ ಗೋವು ಸಂಶೋಧನಾ ಕಾರ್ಯಕ್ರಮ

ಗೋಮೂತ್ರದ ಗುಣಲಕ್ಷಣಗಳ ಅಧ್ಯಯನ

ಐಐಟಿ-ಬಿಎಚ್‌ಯುನ ಪ್ರೊಫೆಸರ್ ಅಭಿಷೇಕ್ ಎಸ್. ಧೋಬಲೆ, ಈ ಕಾರ್ಯಕ್ರಮದಲ್ಲಿ ಪ್ರಮುಖ ಅಧ್ಯಯನ ನಡೆಸಿದ್ದಾರೆ. ಹಾಲಿನ ಉತ್ಪನ್ನಗಳು, ಸಗಣಿ ಮತ್ತು ಗೋಮೂತ್ರದ ಕುರಿತು ಅವರು ಸಂಶೋಧನೆ ಕೈಗೊಂಡಿದ್ದರು. ಜುಲೈ 2025ರ ಅಪ್ಲೈಡ್ ಬಯೋಕೆಮಿಸ್ಟ್ರಿ ಅಂಡ್ ಬಯೋಟೆಕ್ನಾಲಜಿ ಸಂಚಿಕೆಯಲ್ಲಿ ಪ್ರಕಟವಾದ ಈ ಅಧ್ಯಯನ, ವಿವಿಧ ತಳಿಗಳ ಗೋಮೂತ್ರವನ್ನು ವಿಶ್ಲೇಷಿಸಿದೆ. ಏಳು ದೇಶಿ ಹಾಗೂ ಒಂದು ವಿದೇಶಿ ತಳಿ ಸೇರಿದಂತೆ ಒಟ್ಟು ಎಂಟು ತಳಿಗಳ ಗೋಮೂತ್ರದ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಗೋಮೂತ್ರದಲ್ಲಿ ಫೀನಾಲ್, ಕ್ರೆಸಾಲ್‌ನಂತಹ ಜೈವಿಕ ಸಂಯುಕ್ತಗಳ ಜತೆಗೆ ಕ್ವಿಲೀನ್ ಮತ್ತು ಫಾರ್ಮಾಮೈಡ್‌ನಂತಹ ಕೆಲವು ವಿಷಕಾರಿ ಅಂಶಗಳೂ ಇರುವುದನ್ನು ಅಧ್ಯಯನ ಪತ್ತೆಹಚ್ಚಿದೆ. ಈ ಸಂಯುಕ್ತಗಳನ್ನು ಸೌಂದರ್ಯವರ್ಧಕಗಳು, ಕ್ರಿಮಿನಾಶಕಗಳು ಮತ್ತು ಕೃಷಿ ರಾಸಾಯನಿಕಗಳಲ್ಲಿ ಬಳಸಬಹುದು ಎಂದು ವರದಿ ತಿಳಿಸಿದೆ.



ಬೆಳೆಯುತ್ತಿರುವ ಸಂಶೋಧನಾ ಕ್ಷೇತ್ರ

ಸುತ್ರಾ-ಪಿಕ್ ಹೊರತಾಗಿಯೂ ಹಸುವಿನ ಉತ್ಪನ್ನಗಳ ಕುರಿತ ಸಂಶೋಧನೆಗಳು ಮುಂದುವರಿದಿವೆ. ಸಗಣಿ ಆಧಾರಿತ ಗಿಡಮೂಲಿಕೆ ಸೊಳ್ಳೆ ನಿವಾರಕದ ಬಗ್ಗೆ ಐಐಟಿ ಮದ್ರಾಸ್‌ನ ಸಂಶೋಧಕರೊಬ್ಬರು 2024ರಲ್ಲಿ ವರದಿ ಪ್ರಕಟಿಸಿದ್ದರು. 2023ರಲ್ಲಿ ಐಐಟಿ ಗುವಾಹಟಿ ಆಧುನಿಕ ಜೀವನದಲ್ಲಿ ಗೋ ವಿಜ್ಞಾನದ ಕುರಿತು ರಾಷ್ಟ್ರೀಯ ಸಮ್ಮೇಳನ ಆಯೋಜಿಸಿತ್ತು.

ಪ್ರಮುಖಾಂಶಗಳು

- 98 ಕೋಟಿ ರೂ. ವೆಚ್ಚದಲ್ಲಿ 2020ರಲ್ಲಿ ಸುತ್ರಾ-ಪಿಕ್ ಆರಂಭ
- 10 ಯೋಜನೆಗಳ ಪೈಕಿ ಸಂಶೋಧನೆಗೆ 4 ಐಐಟಿ ನೇತೃತ್ವ
- 8 ತಳಿಗಳ ಗೋಮೂತ್ರದ ಬಗ್ಗೆ ಐಐಟಿ-ಬಿಎಚ್‌ಯು ಅಧ್ಯಯನ
- ಕ್ರೋಮಿಯಂ ತೆಗೆಯಲು ಸಗಣಿ ಬಳಸಿದ ಐಐಟಿ ಧನ್‌ಬಾದ್
- ಪಂಚಗವ್ಯದ ಹಲವು ಅಧ್ಯಯನಗಳು, ಪೇಟೆಂಟ್‌ಗಳು ಸಿದ್ಧತೆ

ಸಗಣಿ ಬಳಸಿ ನೀರು ಶುದ್ಧೀಕರಣ

ಐಐಟಿ ಧನ್‌ಬಾದ್‌ನ ಪ್ರೊಫೆಸರ್ ಬ್ರಿಜೇಶ್ ಕುಮಾರ್ ಮಿಶ್ರಾ ಅವರ ತಂಡ ಪರಿಸರ ಸಂರಕ್ಷಣೆಯಲ್ಲಿ ಸಗಣಿಯ ಬಳಕೆಯ ಕುರಿತು ಅಧ್ಯಯನ ಮಾಡಿದೆ. ಪರಿಸರ ವಿಜ್ಞಾನ ಮತ್ತು ರಸಾಯನಶಾಸ್ತ್ರ ವಿಭಾಗಗಳು ಜಂಟಿಯಾಗಿ ಈ ಯೋಜನೆ ಕೈಗೊಂಡಿದ್ದವು. ಮಲಿನಗೊಂಡ ನೀರಿನಿಂದ ವಿಷಕಾರಿ ಕ್ರೋಮಿಯಂ ಅಂಶವನ್ನು ತೆಗೆದುಹಾಕಲು ಸಗಣಿಯಿಂದ ತಯಾರಿಸಿದ ವಸ್ತುವನ್ನು ಬಳಸುವ ಕುರಿತ ಅಧ್ಯಯನ ಬಯೋಕೆಮಿಕಲ್ ಎಂಜಿನಿಯರಿಂಗ್ ಜರ್ನಲ್‌ನ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾಗಲಿದೆ. ಕ್ರೋಮಿಯಂ ಅನ್ನು ಹೀರಿಕೊಂಡ ಬಳಿಕ, ಅದೇ ವಸ್ತುವನ್ನು ಶಕ್ತಿ ಶೇಖರಣಾ ಸಾಧನಗಳಲ್ಲಿ(ಬ್ಯಾಟರಿಗಳಂತೆ) ಮರುಬಳಕೆ ಮಾಡಬಹುದು ಎಂದು ಸಂಶೋಧಕರು ತಿಳಿಸಿದ್ದಾರೆ. ಸಗಣಿ ಮತ್ತು ಕೈಗಾರಿಕಾ ತ್ಯಾಜ್ಯವನ್ನು ಪರಿಸರ ಸ್ನೇಹಿ ವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಈ ಅಧ್ಯಯನ ವಿವರಿಸಿದೆ.

ತುಕ್ಕು ನಿವಾರಕವಾಗಿ ಸಗಣಿ



ಐಐಟಿ ಕಾನ್ಪುರದ ಪ್ರೊಫೆಸರ್ ಕಲ್ಲೋಲ್ ಮಂಡಲ್, ಸಗಣಿಯಿಂದ ಪರಿಸರ ಸ್ನೇಹಿ ತುಕ್ಕು ನಿವಾರಕವನ್ನು ಸಿದ್ಧಪಡಿಸುವ ಸಂಶೋಧನೆ ನಡೆಸಿದ್ದಾರೆ. ಸಗಣಿಯ ಸಾರವನ್ನು ಕಬ್ಬಿಣದ ತುಕ್ಕು ತಡೆಯಲು ಕಡಿಮೆ ವೆಚ್ಚದ ವಸ್ತುವಾಗಿ ಬಳಸಬಹುದು ಎಂದು ಜೂನ್ 2024ರಲ್ಲಿ ಬಯೋರಿಸೋರ್ಸ್ ಟೆಕ್ನಾಲಜಿ ರಿಪೋರ್ಟ್ಸ್‌ನಲ್ಲಿ ಪ್ರಕಟವಾದ ವರದಿಯೊಂದು ತಿಳಿಸಿದೆ. ಸಗಣಿಯಲ್ಲಿರುವ ಅಂಶಗಳು ಲೋಹದ ಮೇಲೆ ರಕ್ಷಣಾತ್ಮಕ ಪದರ ನಿರ್ಮಿಸಿ, ತುಕ್ಕು ಹಿಡಿಯುವುದನ್ನು ತಡೆಯುತ್ತವೆ ಎಂದು ಸಂಶೋಧಕರು ಹೇಳಿದ್ದಾರೆ. ಈ ಸಂಶೋಧನೆಯನ್ನು ಕೈಗಾರಿಕಾ ಮಟ್ಟದಲ್ಲಿ ಪರೀಕ್ಷಿಸಲು ತಂಡವು ಯೋಜಿಸಿದೆ ಎಂದು ಐಐಟಿ ಮದ್ರಾಸ್‌ನ ಶಸ್ತ್ರ ಪತ್ರಿಕೆ ವರದಿ ಮಾಡಿದೆ.

ಕಿರುಸುದ್ದಿ

ಮೂರನೇ ಭಾಷೆ ಸಂಸ್ಕೃತ ಭಾಷಾ ವಿಭಾಗ ಕಡ್ಡಾಯ

ಹೊಸದಿಲ್ಲಿ: 2026-27ರ ಶೈಕ್ಷಣಿಕ ವರ್ಷಕ್ಕೆ ಮೂರನೇ ಭಾಷೆ ಚೌಕಟ್ಟಿನ ಅನುಷ್ಠಾನದಲ್ಲಿ ಕೇಂದ್ರೀಯ ವಿದ್ಯಾಲಯ ಸಂಘಟನೆ(ಕೆವಿಎಸ್) ತನ್ನ ಎಲ್ಲಾ ಶಾಲೆಗಳಿಗೆ 6 ಮತ್ತು 9ನೇ ತರಗತಿಯಲ್ಲಿ ಕನಿಷ್ಠ ಒಂದು ಸಂಸ್ಕೃತ ಭಾಷಾ ಕಲಿಕೆ ವಿಭಾಗವನ್ನು ಕಡ್ಡಾಯಗೊಳಿಸಿದೆ.

ಟ್ರಂಪ್ ಆರೋಪ ತಳ್ಳಿಹಾಕಿದ ಇರಾನ್

ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯಿಂದ ಹೊರಡುವ ಭಾರತೀಯ ಹಡಗುಗಳ ಮೇಲೆ ಇರಾನ್ ಡ್ರೋನ್ ದಾಳಿಗಳನ್ನು ನಡೆಸುತ್ತಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆರೋಪವನ್ನು ಇರಾನ್ ತಳ್ಳಿಹಾಕಿದೆ. ಈ ಆರೋಪವನ್ನು ಆಧಾರರಹಿತ ಎಂದು ತಿರಸ್ಕರಿಸಿದೆ. ಈ ವಾರ ಒಮಾನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿಯನ್ನು ಹೊಂದಿದ್ದ ಮೂರು ಹಡಗುಗಳ ಮೇಲೆ ದಾಳಿ ನಡೆಸಲಾಗಿತ್ತು. ಬುಧವಾರ ಮೂವರು ಭಾರತೀಯ ನಾವಿಕರು ಮೃತಪಟ್ಟಿದ್ದರು.

18 ವರ್ಷ ಮೇಲ್ಪಟ್ಟವರಿಗೆ ಅಸ್ಸಾಂನಲ್ಲಿ ಆಧಾರ್ ಇಲ್ಲ

ಗುವಾಹಟಿ: ಅಕ್ರಮ ವಲಸಿಗರು ಆಧಾರ್ ಕಾರ್ಡ್ ಪಡೆಯುವುದನ್ನು ತಡೆಯುವ ಉದ್ದೇಶದಿಂದ 18 ವರ್ಷ ಮೇಲ್ಪಟ್ಟವರಿಗೆ ಹೊಸ ಆಧಾರ್ ಕಾರ್ಡ್ ವಿತರಣೆ ಸ್ಥಗಿತಗೊಳಿಸಲು ಅಸ್ಸಾಂ ಸಚಿವ ಸಂಪುಟ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಅವರು, ವಿಶೇಷ ಸಂದರ್ಭಗಳಲ್ಲಿ ಮಾತ್ರ ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಿದ್ದು, ಪರಿಶೀಲನೆಯ ನಂತರ ಮಾತ್ರ ಆಧಾರ್ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದರು.

ರಾಜ್ಯದಲ್ಲಿ ಆಧಾರ್ ವಿತರಣೆಯು ಈಗಾಗಲೇ ತೃಪ್ತಿಕರ ಮಟ್ಟ ತಲುಪಿದ್ದು, ಕೆಲವು ಜಿಲ್ಲೆಗಳಲ್ಲಿ ಜನಸಂಖ್ಯೆಗಿಂತಲೂ ಹೆಚ್ಚು ಆಧಾರ್ ಕಾರ್ಡ್‌ಗಳು ದಾಖಲಾಗಿವೆ. ಹೆಚ್ಚುವರಿ ಆಧಾರ್ ಪಡೆದಿರುವವರು ಯಾರು ಎಂಬುದನ್ನು ಪತ್ತೆಹಚ್ಚುವುದು ಅಗತ್ಯವಾಗಿದೆ ಎಂದು ಹೇಳಿದರು. ಈ ಕ್ರಮದ ಮುಖ್ಯ ಉದ್ದೇಶ ಅಕ್ರಮ ಬಾಂಗ್ಲಾದೇಶಿ ವಲಸಿಗರು ಆಧಾರ್ ಪಡೆಯುವುದನ್ನು ತಡೆಯುವುದಾಗಿದೆ. ಆದರೆ ಚಹಾ ತೋಟ ಕಾರ್ಮಿಕ ಸಮುದಾಯ ಹಾಗೂ ಪರಿಶಿಷ್ಟ ಪಂಗಡಗಳ ಅನೇಕ ಜನರಿಗೆ ಇನ್ನೂ ಆಧಾರ್ ಸಿಗದಿರುವುದರಿಂದ ಅವರಿಗೆ ತಾತ್ಕಾಲಿಕ ವಿನಾಯಿತಿ ನೀಡಲಾಗಿದೆ.

ಆದರೆ, 2027ರ ಏ.1ರಿಂದ ಈ ವಿನಾಯಿತಿಯನ್ನೂ ಹಿಂತೆಗೆದುಕೊಳ್ಳಲಾಗುವುದು. ಆ ದಿನಾಂಕದ ನಂತರ 18 ವರ್ಷ ಮೇಲ್ಪಟ್ಟ ಯಾರಿಗೂ ಹೊಸ ಆಧಾರ್ ಕಾರ್ಡ್ ನೀಡಲಾಗುವುದಿಲ್ಲ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮಾತ್ರ ಆಧಾರ್ ವಿತರಣೆ ಮುಂದುವರಿಯಲಿದೆ ಎಂದು ಸಿಎಂ ಸ್ಪಷ್ಟಪಡಿಸಿದರು.

ಕೇರಳದಲ್ಲಿ ಬೆಳೆಯುತ್ತಿದೆ ಬಿಜೆಪಿ: ಒಪ್ಪಿದ ಸಿಪಿಎಂ

ತಿರುವನಂತಪುರಂ: ಕೇರಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಒಂದು ವರ್ಗದ ಮತದಾರರು ಬಿಜೆಪಿಗೆ ಮತ ನೀಡಿದ್ದು, ಕೇರಳದಲ್ಲಿ ಬಿಜೆಪಿ ಬೆಳೆಯುತ್ತಿದ್ದು, ಸಿಪಿಎಂನ ಬಲಿಷ್ಠ ಕೋಟೆಗಳನ್ನೇ ಭೇದಿಸಿ ಬೆಳವಣಿಗೆ ಕಾಣುತ್ತಿದೆ ಎಂಬುದಾಗಿ ಸಿಪಿಎಂ ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದೆ.

ಸಿಪಿಎಂನ ಚುನಾವಣಾ ಅವಲೋಕನಾ ವರದಿಯಲ್ಲಿ ಸಿಪಿಎಂನ ಮತದಾರರಾಗಿದ್ದ ಒಂದು ವರ್ಗ ಇದೀಗ ಬಿಜೆಪಿ ಪರ ವಾಲಿದ್ದು, ಈ ಬಾರಿ ಬಿಜೆಪಿಗೆ ಮತ ಚಲಾಯಿಸಿದ್ದಾರೆ. ಹಾಗೆಯೇ ಹಲವು ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಮತಗಳನ್ನು ಯುಡಿಎಫ್‌ಗೆ ವರ್ಗಾಯಿಸುವ ಮೂಲಕ ಎಲ್‌ಡಿಎಫ್ ಸೋಲಿಗೆ ಕಾರಣವಾಗಿದೆ ಎಂದು ಹೇಳಲಾಗಿದೆ. ಕೇರಳದಲ್ಲಿ ಈ ಬಾರಿ ಬಿಜೆಪಿ ಗೆಲುವು ಸಾಧಿಸಿದ ಮೂರು ಕ್ಷೇತ್ರಗಳಲ್ಲಿ ಎಲ್‌ಡಿಎಫ್‌ನ ಸಾಂಪ್ರದಾಯಿಕ ಮತಗಳಲ್ಲಿ ಕುಸಿತವಾಗಿ ಬಿಜೆಪಿಗೆ ಹೋಗಿರುವುದನ್ನು ಉಲ್ಲೇಖಿಸಲಾಗಿದೆ. 2021ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಚಾತನ್ನೂರ್‌ನಲ್ಲಿ ಸಿಪಿಎಂಗೆ 11,771 ಮತಗಳು, ನೇಮಮ್‌ನಲ್ಲಿ 3,623 ಮತಗಳು ಮತ್ತು ಕಳಕ್ಕೂಟಮ್‌ನಲ್ಲಿ 17,554 ಮತಗಳು ಕುಸಿತವಾಗಿರುವುದು ಸ್ಪಷ್ಟವಾಗಿದೆ.ಅಷ್ಟೇ ಅಲ್ಲದೆ ಕೇರಳದಲ್ಲಿ ಈ ಬಾರಿ ಬಿಜೆಪಿ ಆರು ಕ್ಷೇತ್ರಗಳಲ್ಲಿ ಎರಡನೇ ಸ್ಥಾನ ಪಡೆದಿದ್ದು, ಇದರಲ್ಲಿ ಸಿಪಿಎಂನ ಭದ್ರಕೋಟೆಯಾಗಿರುವ ಕ್ಷೇತ್ರಗಳೂ ಸೇರಿರುವುದು ಪಕ್ಷದಲ್ಲಿ ತಳಮಳಕ್ಕೆ ಕಾರಣವಾಗಿದೆ. ಕಾಸರಗೋಡು, ಮಲಂಪುಳ, ಪಾಲಕ್ಕಾಡ್ ಮತು ಅಟ್ಟಿಂಗಾಲ್ ಕ್ಷೇತ್ರಗಳಲ್ಲಿ ಬಿಜೆಪಿ ಮತಗಳಿಕೆಯಲ್ಲಿ ಹೆಚ್ಚಳವಾಗಿದ್ದು, ಇಲ್ಲಿ ಸಿಪಿಎಂನ ಮತಗಳೇ ಬಿಜೆಪಿ ಪಾಲಾಗಿವೆ ಎಂದು ವರದಿ ಉಲ್ಲೇಖಿಸಿದೆ.

ಕ್ಷಿಪಣಿ ರಕ್ಷಣಾ ಸಾಮರ್ಥ್ಯ ಪ್ರದರ್ಶಿಸಿದ ಡಿಆರ್‌ಡಿಒ

ಹೊಸದಿಲ್ಲಿ: ಅಂತರಖಂಡೀಯ ಕ್ಷಿಪಣಿಗಳನ್ನು ತಡೆಹಿಡಿಯುವ ತನ್ನ ಹಲವು ಹಂತಗಳ ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಭಾರತ ಜೂನ್ 10 ಮತ್ತು 11 ರಂದು ಸತತ ಮೂರು ಯಶಸ್ವಿ ಉಡಾವಣಾ ಪರೀಕ್ಷೆಗಳನ್ನು ನಡೆಸಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಒಳಗೆ ನುಗ್ಗಿಬರುವ ಬ್ಯಾಲಿಸ್ಟಿಕ್ ಕ್ಷಿಪಣಿಗಳ ವಿರುದ್ಧ ಸಾಮರ್ಥ್ಯವನ್ನು ಪರಿಶೀಲಿಸಲು ಈ ಉಡಾವಣಾ ಪರೀಕ್ಷೆಗಳನ್ನು ನಡೆಸಿದೆ. ಸತತ ಮೂರು ಕಾರ್ಯಾಚರಣೆಗಳು ಭೂಮಿಯ ವಾತಾವರಣದ ಒಳಗಿನ ಮತ್ತು ಹೊರಗಿನ ಗಡಿಗಳಲ್ಲಿ ನಡೆದಿವೆ ಮತ್ತು ಇಂಟರ್‌ಸೆಪ್ಟರ್‌ಗಳು ತಮ್ಮ ಗುರಿಗಳನ್ನು ಯಶಸ್ವಿಯಾಗಿ ಧ್ವಂಸಗೊಳಿಸಿವೆ.

ಈ ಯಶಸ್ವಿ ಪ್ರದರ್ಶನದೊಂದಿಗೆ, ಅಮೆರಿಕ, ರಷ್ಯಾ ಮತ್ತು ಚೀನಾ ಸೇರಿದಂತೆ ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣಾ ಸಾಮರ್ಥ್ಯಗಳನ್ನು ಹೊಂದಿರುವ ಗಣ್ಯ ರಾಷ್ಟ್ರಗಳ ಗುಂಪಿಗೆ ಭಾರತ ದೇಶವನ್ನು ಸೇರಿದಂತಾಗಿದೆ. ಈ ವ್ಯವಸ್ಥೆಗಳು, ದೂರಗಾಮಿ ಪರಮಾಣು ಕ್ಷಿಪಣಿಗಳು, ಇತರ ವಾಯು ಆಧಾರಿತ ಅಪಾಯಗಳು ಮತ್ತು ನಿಯಂತ್ರಣ ವ್ಯವಸ್ಥೆಗಳನ್ನು ಒಳಗೊಂಡಂತೆ ವೈರಿ ವಿಮಾನಗಳನ್ನು ಎದುರಿಸುತ್ತವೆ.

ಈ ಕಾರ್ಯಕ್ರಮದ ಅನ್ವಯ ದೇಶ, ಎಂಡೋ-ಅಟ್ಮಾಸ್ಫಿಯರಿಕ್ ಮತ್ತು ಎಕ್ಸೋ-ಅಟ್ಮಾಸ್ಫಿಯರಿಕ್ ಹಂತಗಳಿಗೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿದೆ. ಎಂಡೋ-ಅಟ್ಮಾಸ್ಫಿಯರಿಕ್ ಕ್ಷಿಪಣಿಗಳು 100 ಕಿಮೀಗಿಂತ ಕಡಿಮೆ ಎತ್ತರದಲ್ಲಿ ಭೂಮಿಯ ವಾತಾವರಣದೊಳಗೆ ಕಾರ್ಯನಿರ್ವಹಿಸುತ್ತವೆ.

ಮುಂಬೈ: 11 ಕೆಜಿ ಗಾಂಜಾ ವಶ, ರೂಪದರ್ಶಿ ಸೆರೆ

ವಯನಾಡ್: ಮಿಸ್ ಕೇರಳ ಸೌಂದರ್ಯ ಸ್ಪರ್ಧೆಯ ಮಾಜಿ ಸ್ಪರ್ಧಿ ಹಾಗೂ ರೂಪದರ್ಶಿಯೊಬ್ಬಳನ್ನು 11 ಕೆಜಿ ಉನ್ನತ ದರ್ಜೆಯ ಹೈಡ್ರೋಪೋನಿಕ್ ಗಾಂಜಾ ಸಹಿತವಾಗಿ ಮುಂಬೈ ಛತ್ರಪತಿ ಶಿವಾಜಿ ಮಹಾರಾಜ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಬಂಧಿಸಲಾಗಿದೆ. ಈ ಮಾದಕದ್ರವ್ಯದ ಮೌಲ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 11.82 ಕೋಟಿ ರೂ.ಗಳಾಗಿವೆ. ಆರೋಪಿಯನ್ನು ಮಾನಂತವಾಡಿ ಬಳಿಯ ಪುತ್ತುಶ್ಶೇರಿಯ ಹರ್ಷ ಸನ್ನಿ(28)ಎಂದು ಗುರುತಿಸಲಾಗಿದ್ದು, ಬ್ಯಾಂಕಾಕ್‌ನಿಂದ ಆಗಮಿಸಿದ ಅವರನ್ನು ಮುಂಬೈ ಕಸ್ಟಮ್ಸ್‌ನ ವೈಮಾನಿಕ ಗುಪ್ತಚರ ಘಟಕ(ಎಐಯು) ತಡೆದು ವಿಚಾರಣೆಗೊಳಪಡಿಸಿದಾಗ ಈ ಮಾದಕದ್ರವ್ಯ ಪತ್ತೆಯಾಗಿದೆ. ಟ್ರಾಲಿ ಬ್ಯಾಗ್‌ನಲ್ಲಿ ''ಹಸಿರು ವಸ್ತು'' ತುಂಬಿದ 12 ನಿರ್ವಾತ-ಮುಚ್ಚಿದ ಪ್ಲಾಸ್ಟಿಕ್ ಪ್ಯಾಕೆಟ್‌ಗಳಲ್ಲಿ ಈ ಗಾಂಜಾ ಪತ್ತೆಯಾಗಿದೆ.

ಸ್ಪೇಸ್‌ಎಕ್ಸ್ ಮುಖ್ಯಸ್ಥ ಮಸ್ಕ್ ವಿಶ್ವದ ಮೊದಲ ಟ್ರಿಲಿಯನೇರ್

ಹೊಸದಿಲ್ಲಿ: ವಿಶ್ವದ ಮೊದಲ ಟ್ರಿಲಿಯನೇರ್ ಆಗಿ ಹೊರಹೊಮ್ಮಿರುವ ಎಲಾನ್ ಮಸ್ಕ್ ಅವರ ಒಟ್ಟು ಆಸ್ತಿ ಮೌಲ್ಯ ಅಕ್ಷರಶಃ ಇಡೀ ಜಗತ್ತನ್ನೇ ನಿಬ್ಬೆರಗಾಗಿಸಿದೆ. ಅವರ ಒಟ್ಟು ಸಂಪತ್ತು ಈಗ ಬರೋಬ್ಬರಿ 1.1 ಟ್ರಿಲಿಯನ್ ಡಾಲರ್(ಸುಮಾರು 91.3 ಲಕ್ಷ ಕೋಟಿ ರೂಪಾಯಿ) ದಾಟಿದೆ ಎಂದು ಅಂದಾಜಿಸಲಾಗಿದೆ. ಈ ಬೃಹತ್ ಮೊತ್ತವನ್ನು ನಮ್ಮ ಕರ್ನಾಟಕ ರಾಜ್ಯದ ವಾರ್ಷಿಕ ಆಯವ್ಯಯಕ್ಕೆ ಹೋಲಿಸಿದರೆ ಮಸ್ಕ್ ಅವರ ಆರ್ಥಿಕ ಸಾಮರ್ಥ್ಯದ ನೈಜ ಚಿತ್ರಣ ಸಿಗುತ್ತದೆ.



ಕರ್ನಾಟಕ ಸರ್ಕಾರವು 2026-27ರ ಸಾಲಿಗಾಗಿ ಮಂಡಿಸಿರುವ ಬಜೆಟ್‌ನ ಒಟ್ಟು ಗಾತ್ರ 4,48,004 ಕೋಟಿ ರೂಪಾಯಿ. ಅಂದರೆ, ಕನ್ನಡಿಗರ ಒಟ್ಟಾರೆ ಅಭಿವೃದ್ಧಿ, ಗ್ಯಾರಂಟಿ ಯೋಜನೆಗಳು ಹಾಗೂ ಮೂಲಸೌಕರ್ಯಕ್ಕಾಗಿ ಇಡೀ ರಾಜ್ಯ ಸರ್ಕಾರ ಒಂದು ವರ್ಷಕ್ಕೆ ಖರ್ಚು ಮಾಡುವ ಬಜೆಟ್‌ಗಿಂತ ಎಲಾನ್ ಮಸ್ಕ್ ಅವರ ವೈಯಕ್ತಿಕ ಸಂಪತ್ತು ಬರೋಬ್ಬರಿ 20 ಪಟ್ಟು ಹೆಚ್ಚು. ಇನ್ನು ಸರಳವಾಗಿ ಹೇಳಬೇಕೆಂದರೆ, ಇಂದಿನ ಮಸ್ಕ್ ಅವರ ಆಸ್ತಿಯಿಂದ ಕರ್ನಾಟಕದಂತಹ ಇಡೀ ರಾಜ್ಯದ ವಾರ್ಷಿಕ ಬಜೆಟ್ ಅನ್ನು ಸತತ 20 ವರ್ಷಗಳ ಕಾಲ ಯಾವುದೇ ತೆರಿಗೆ ಇಲ್ಲದೆ ಸುಲಭವಾಗಿ ನಿಭಾಯಿಸಬಹುದು.

ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಕ್ರಾಂತಿ ಸೃಷ್ಟಿಸುತ್ತಿರುವ ಸ್ಪೇಸ್‌ಎಕ್ಸ್ ಐಪಿಒ ಮೂಲಕ ಮಸ್ಕ್ ಗಳಿಸಿರುವ ಈ ಸಂಪತ್ತು, ಕೇವಲ ಒಬ್ಬ ವ್ಯಕ್ತಿಯ ಆಸ್ತಿಯಾಗಿರದೆ ಜಗತ್ತಿನ ಹಲವು ಪ್ರಮುಖ ಅಭಿವೃದ್ಧಿಶೀಲ ರಾಷ್ಟ್ರಗಳ ಒಟ್ಟು ಜಿಡಿಪಿಗಿಂತಲೂ ದೊಡ್ಡದಾಗಿದೆ ಎಂಬುದು ಗಮನಾರ್ಹ.


ಬಲಿಷ್ಠರಾಗಿದ್ದರೆ ಮಾತ್ರ ಜಗತ್ತು ನಿಮ್ಮ ಮಾತು ಕೇಳುತ್ತದೆ: ಡಾ. ಭಾಗವತ್

ಜಗತ್ತಿನಲ್ಲಿ ಸತ್ಯಕ್ಕಿಂತ ಶಕ್ತಿಗೆ ಹೆಚ್ಚಿನ ಮಹತ್ವ

ತಿರುವನಂತಪುರಂ: ಜಗತ್ತು ಸತ್ಯಕ್ಕಿಂತ ಶಕ್ತಿಗೆ ಹೆಚ್ಚಿನ ಮಹತ್ವ ನೀಡುತ್ತದೆ. ಬಲಿಷ್ಠರಾಗಿದ್ದರೆ ಜಗತ್ತು ನಿಮ್ಮ ಮಾತನ್ನು ಕೇಳುತ್ತದೆ, ಇಲ್ಲದಿದ್ದರೆ ಸತ್ಯವಂತರಾಗಿದ್ದರೂ ಯಾರೂ ಗಮನ ಕೊಡುವುದಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದ್ದಾರೆ.

ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಶನಿವಾರ ತಿರುವನಂತಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂ ಸಮಾಜವು ತನ್ನ ರಕ್ಷಣೆಗಾಗಿ ಸಂಘಟಿತ ಹಾಗೂ ಬಲಿಷ್ಠವಾಗಬೇಕಿದೆ ಎಂದು ಪ್ರತಿಪಾದಿಸಿದರು.

ಜಗತ್ತು ಬಲಿಷ್ಠರ ಮಾತನ್ನು ಮಾತ್ರ ಕೇಳುತ್ತದೆ. ನೀವು ಸತ್ಯದ ಮಾರ್ಗದಲ್ಲಿದ್ದರೂ ಬಲವಿಲ್ಲದಿದ್ದರೆ ನಿಮ್ಮ ಮಾತಿಗೆ ಬೆಲೆ ಸಿಗುವುದಿಲ್ಲ. ಆದರೆ ಬಲವಿದ್ದರೆ ಅಸತ್ಯದ ಹಾದಿಯಲ್ಲಿ ನಡೆದರೂ ಯಾರೂ ಪ್ರಶ್ನಿಸುವುದಿಲ್ಲ. ವೆನೆಜುವೆಲಾವನ್ನೇ ವಶಪಡಿಸಿಕೊಂಡರೂ ಯಾರೂ ಏನೂ ಹೇಳುವುದಿಲ್ಲ. ಜಗತ್ತಿನ ವಾಸ್ತವಿಕತೆ ಇದೇ ಎಂದು ಅವರು ಹೇಳಿದರು. ಹಿಂದೂ ಸಮಾಜವನ್ನು ಒಗ್ಗೂಡಿಸಿ, ಪರಸ್ಪರ ಆತ್ಮೀಯತೆಯ ಭಾವನೆ ಬೆಳೆಸಿ, ಬಲಿಷ್ಠ ಸಮಾಜವಾಗಿ ರೂಪಿಸುವ ಕಾರ್ಯವನ್ನು ಸಂಘ ಮಾಡುತ್ತಿದ್ದು, ನಾವು ಒಂದೇ ರಾಷ್ಟ್ರವಾಗಿದ್ದೇವೆ ಮತ್ತು ಮುಂದೆಯೂ ಇರುತ್ತೇವೆ. ಅದು ಹಿಂದೂ ರಾಷ್ಟ್ರವಾಗಿ ಇರುತ್ತೇವೆ ಎಂದರು. 'ಹಿಂದೂ' ಎಂಬ ಪದವು ಕೇವಲ ಆರಾಧನಾ ಪದ್ಧತಿಯನ್ನು ಸೂಚಿಸುವುದಿಲ್ಲ. ಅದು ಭಾರತದ ನಾಗರಿಕತಾ ಗುರುತು ಎಂದು ಅವರು ವಿವರಿಸಿದರು. ಅಂದರೆ ಹಿಂದೂ ಎಂದರೆ ಅದು ನಮ್ಮ ಸಾಂಸ್ಕೃತಿಕ ಗುರುತಾಗುತ್ತದೆ. ಇದನ್ನು ನನ್ನ ಭಾಷಾಂತರದಲ್ಲಿ ಹೇಳುವುದಾದರೆ ಅದು ಭಾರತದ ನಾಗರಿಕತಾ ಗುರುತು.



ಮುಸ್ಲಿಮರು ಮತ್ತು ಕ್ರೈಸ್ತರನ್ನು ಸ್ವಯಂ ಸೇವಕರು ಭೇಟಿಯಾದಾಗ, ಸಂಪ್ರದಾಯ, ಪೂರ್ವಜರು ಮತ್ತು ಸಾಂಸ್ಕೃತಿಕ ಪ್ರಭಾವದ ಆಧಾರದ ಮೇಲೆ ಅವರೂ ಹಿಂದೂಗಳೇ ಎಂದು ಹೇಳುತ್ತೇವೆ. ಆದರೆ ಅವರು ಅದನ್ನು ಒಪ್ಪುವುದಿಲ್ಲ ಎಂದರು.

ಆರ್‌ಎಸ್‌ಎಸ್ ತಪ್ಪಾಗಿ ಅರ್ಥೈಸಲ್ಪಟ್ಟ ಸಂಘಟನೆ: ವಿಶ್ವದ ಅತಿದೊಡ್ಡ ಸ್ವಯಂಸೇವಾ ಸಂಘಟನೆಯಾಗಿದ್ದರೂ ಆರ್‌ಎಸ್‌ಎಸ್ ಅತ್ಯಂತ ತಪ್ಪಾಗಿ ಅರ್ಥೈಸಲ್ಪಟ್ಟ ಸಂಘಟನೆಯಾಗಿದೆ ಎಂದು ಭಾಗವತ್ ಹೇಳಿದರು. ಸ್ವಯಂಸೇವಕರ ಪಥಸಂಚಲನ ಮತ್ತು ಸಮವಸ್ತ್ರದ ಕಾರಣದಿಂದ ಕೆಲವರು ಇದನ್ನು ಅರೆಸೇನಾ ಸಂಘಟನೆ ಎಂದು ಭಾವಿಸುತ್ತಾರೆ. ಭಾರತೀಯ ಕ್ರೀಡೆ ಹಾಗೂ ಯುದ್ಧಕಲೆಗಳಿಗೆ ಉತ್ತೇಜನ ನೀಡುವುದರಿಂದ ಇದನ್ನು ಅಖಿಲ ಭಾರತೀಯ ವ್ಯಾಯಾಮಶಾಲೆಯಂತೆ ಕಾಣುತ್ತಾರೆ. ಆದರೆ ಸಂಘದ ನಿಜಸ್ವರೂಪವನ್ನು ಹೊರಗಿನಿಂದ ಅರ್ಥಮಾಡಿಕೊಳ್ಳುವುದು ಕಷ್ಟ ಎಂದರು. ಸಂಘವನ್ನು ಅರ್ಥಮಾಡಿಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ ಅದರೊಂದಿಗೆ ಬೆರೆತು ಅನುಭವಿಸುವುದು. ಪ್ರಚಾರ, ವದಂತಿಗಳು ಅಥವಾ ಕೇಳಿದ ಮಾತುಗಳ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಡಿ. ಬಂದು ನೋಡಿ, ಅನುಭವಿಸಿ ಎಂದು ಅವರು ಕರೆ ನೀಡಿದರು. ಸಂಘವು ಯಾವುದೇ ನಿರ್ದಿಷ್ಟ ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡದ್ದಲ್ಲ. ಯಾವುದೇ ಸಮುದಾಯ ಅಥವಾ ರಾಜಕೀಯ ಪಕ್ಷದ ವಿರುದ್ಧವೂ ಅಲ್ಲ ಎಂದು ಸ್ಪಷ್ಟಪಡಿಸಿದ ಅವರು, ಸಂಘದ ಮೂಲ ಚಿಂತನೆ ಹಿಂದೂತ್ವವಾಗಿದ್ದು ಅದು ಹೊಸ ಸಿದ್ಧಾಂತವಲ್ಲ, ಭಾರತದ ಸುದೀರ್ಘ ಪರಂಪರೆಯ ಭಾಗವಾಗಿದೆ ಎಂದರು.

ಸಂಘ ರಾಜಕೀಯ ಸಂಘಟನೆಯಲ್ಲ

ಸಂಘ ರಾಜಕೀಯ ಸಂಘಟನೆಯಲ್ಲ. ಆದರೆ ಅದರ ಅನೇಕ ಕಾರ್ಯಕರ್ತರು ರಾಜಕೀಯ ಕ್ಷೇತ್ರದಲ್ಲಿದ್ದಾರೆ ಎಂದ ಅವರು, ರಾಮ ಜನ್ಮಭೂಮಿ ಮತ್ತು ಸಂವಿಧಾನದ 370ನೇ ವಿಧಿ ರಾಜಕೀಯ ವಿಷಯಗಳಲ್ಲ, ಬದಲಿಗೆ ಅವು ದೇಶದ ಏಕತೆ ಮತ್ತು ಸಮಗ್ರತೆಗೆ ಸಂಬಂಧಿಸಿದ ಪ್ರಶ್ನೆಗಳಾಗಿವೆ ಎಂದು ಅಭಿಪ್ರಾಯಪಟ್ಟರು. ಇತ್ತೀಚಿನ ಹಿಂದೂತ್ವ ಜಾಗೃತಿಗೆ ಕೇವಲ ಸಂಘವೇ ಕಾರಣವಲ್ಲ. ಅನೇಕ ವ್ಯಕ್ತಿಗಳು ಮತ್ತು ಸಂಘಟನೆಗಳ ಪ್ರಯತ್ನಗಳ ಫಲವಾಗಿ ಅದು ಸಾಧ್ಯವಾಗಿದೆ ಎಂದು ಅವರು ಹೇಳಿದರು. ನಮಗೆ ಯಾರೂ ವಿರೋಧಿಗಳಲ್ಲ. ಇಂದು ನಮ್ಮನ್ನು ವಿರೋಧಿಸುವವರನ್ನೂ ಭವಿಷ್ಯದ ಸ್ವಯಂಸೇವಕರಾಗಿಯೇ ನಾವು ನೋಡುತ್ತೇವೆ. ನೀವು ಯಾವಾಗ ಬೇಕಾದರೂ ಬಂದು ಸೇರಬಹುದು, ಹಾಗೆಯೇ, ನಿಮಗೆ ಬೇಕೆನಿಸಿದಾಗ ಬಿಟ್ಟೂ ಹೋಗಬಹುದು. ಸಮಾಜದ ಎಲ್ಲ ವರ್ಗಗಳನ್ನು ಒಗ್ಗೂಡಿಸುವುದೇ ನಮ್ಮ ಉದ್ದೇಶ. ರಾಷ್ಟ್ರದ ಭವಿಷ್ಯವನ್ನು ಯಾವುದೋ ಒಂದು ಗುಂಪು ಬದಲಾಯಿಸಲು ಸಾಧ್ಯವಿಲ್ಲ, ಅದನ್ನು ಬದಲಾಯಿಸುವ ಶಕ್ತಿ ಇಡೀ ಸಮಾಜಕ್ಕಿದೆ ಎಂದು ಭಾಗವತ್ ಹೇಳಿದರು.

ಕಿರುಸುದ್ದಿ

ಇಂದು ಪ್ರತಿಭಾ ಪುರಸ್ಕಾರ

ಸಿಂಧನೂರು: 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90 ಅಂಕಗಳನ್ನು ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಭೋವಿ (ವಡ್ಡರ) ಸಮಾಜ ತಾಲ್ಲೂಕು ಘಟಕದ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ಸಮಾಜದ ನಿವೃತ್ತ ಸರ್ಕಾರಿ ಅಧಿಕಾರಿಗಳಿಗೆ ಸನ್ಮಾನ ಸಮಾರಂಭವನ್ನು ಜೂ.14ರಂದು ನಗರದ ಕುಷ್ಟಗಿ ಮಾರ್ಗದ ರಸ್ತೆಯ ಸರ್ಕ್ಯೂಟ್‌ಹೌಸ್‌ನ ಸಭಾಂಗಣದಲ್ಲಿ ಬೆಳಿಗ್ಗೆ 11ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಮುಖಂಡ ವೀರೇಶ ಸಿದ್ರಾಂಪೂರ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಮುದಾಯದ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಮತ್ತು ಆತ್ಮವಿಶ್ವಾಸ ಮೂಡಿಸುವ ಹಿನ್ನೆಲೆಯಲ್ಲಿ ಈ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ನಿವೃತ್ತ ಅಧಿಕಾರಿಗಳಾದ ಟಿ.ಅಂಬಣ್ಣ ಹಾಗೂ ಎ.ಹನುಮಂತಪ್ಪ ಉಮಲೂಟಿ ಅವರನ್ನು ಸನ್ಮಾನಿಸಲಾಗುವುದು. ಸಮಾಜದ ಜಿಲ್ಲಾ ಘಟಕದ ಅಧ್ಯಕ್ಷ ನಾರಾಯಣಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಶಶಿಕಲಾ ಭೀಮರಾಯ ಅವರು ಸೇರಿದಂತೆ ತಾಲ್ಲೂಕು ಹಾಗೂ ಜಿಲ್ಲಾ ಘಟಕದ ಪದಾಧಿಕಾರಿಗಳು ಭಾಗವಹಿಸಲಿದ್ದರಿಂದ ಸಮುದಾಯ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಕೋರಿದರು. ಈಗಾಗಲೇ ಸಮಾಜದ 10 ವಿದ್ಯಾರ್ಥಿಗಳು ಹೆಸರು ನೊಂದಾಯಿಸಿದ್ದಾರೆ. ಈ ಪತ್ರಿಕಾಗೋಷ್ಠಿಯಲ್ಲಿ ಭೋವಿ ಸಮಾಜದ ಮಾಜಿ ತಾಲೂಕ ಅಧ್ಯಕ್ಷ ಲಕ್ಷ್ಮಣ್ ಭೋವಿ,ಮರಿಯಪ್ಪ ಬಂಡಿ, ಕೆ.ನಾಗಪ್ಪ ಕಲ್ಲೂರು, ಯುವ ಘಟಕದ ಅಧ್ಯಕ್ಷ ಹನುಮೇಶ, ಶಂಕರ್ ಬ್ಯಾಡಗಿ, ವೆಂಕಟೇಶ ತುರ್ವಿಹಾಳ, ವೆಂಕಟೇಶ ಜಂಗಮರ ಹಟ್ಟಿ, ಸಣ್ಣ ಕರಿಯಪ್ಪ ಮಲ್ಲದಗುಡ್ಡ, ಹುಲುಗಪ್ಪ ಮಾಸ್ತರ ಇತರರಿದ್ದರು.

ನಗದು, ಮೊಬೈಲ್ ವಶ

ಬಳ್ಳಾರಿ: ಜಿಲ್ಲೆಯ ಕುಡುತಿನಿ ಪಟ್ಟಣದಲ್ಲಿ ಕುರುಗೋಡು ಸಿಪಿಐ ಬಾಳನಗೌಡ ಎಸ್.ಎಂ.ಹಾಗೂ ಪಿಎಸ್‌ಐ ವಾಣಿ ಅವರ ನೇತೃತ್ವದಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ಕ್ಲಬ್‌ಗಳ ಮೇಲೆ ಶುಕ್ರವಾರ ದಿಢೀರ್ ದಾಳಿ ನಡೆಸಿ 2,14,602 ನಗದು ಹಣ, 40 ಮೊಬೈಲ್‌ಗಳನ್ನು ಜಪ್ತಿ ಮಾಡಿ 69 ಜನ ಆರೋಪಿಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಪಟ್ಟಣದ ಬಸವೇಶ್ವರ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ ಅಸೋಸಿಯೇಷನ್ ಕ್ಲಬ್ ಹಾಗೂ ಗುರುರಾಯರ ರಿಕ್ರಿಯೇಷನ್ ಅಸೋಸಿಯೇಷನ್ ಕ್ಲಬ್ ಗಳಲ್ಲಿ ಮನೋರಂಜನಾ ಕ್ರೀಡಾ ಚಟುವಟಿಕೆಗಳ ಹೆಸರಿನಲ್ಲಿ ಕಾನೂನು ಬಾಹಿರವಾಗಿ ನಗದು ಹಣದ ಬದಲಾಗಿ ಪ್ಲಾಸ್ಟಿಕ್ ಕ್ವಾಯಿನ್‌ಗಳ ಮೂಲಕ ಇಸ್ಪೀಟ್ ಜೂಜಾಟ ಆಡುತ್ತಿದ್ದ ಸ್ಥಳದ ಮೇಲೆ ಕುರುಗೋಡು ಸಿಪಿಐ ಬಾಳನಗೌಡ ಎಸ್.ಎಂ. ಹಾಗೂ ಪಿಎಸ್‌ಐ ವಾಣಿ ಅವರ ನೇತೃತ್ವದ ಕುಡುತಿನಿ ಹಾಗೂ ಕುರುಗೋಡು ಠಾಣೆ ಸಿಬ್ಬಂದಿಗಳ ತಂಡ ದಿಢೀರ್ ದಾಳಿ ನಡೆಸಿ, ಎರಡು ಕ್ಲಬ್ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಬಿಸಿ ಮುಟ್ಟಿಸಿದ್ದಾರೆ. ಬಸವೇಶ್ವರ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ ಅಸೋಸಿಯೇಷನ್ ಕ್ಲಬ್‌ನಲ್ಲಿ 1,24,577 ನಗದು ಹಣ, 21 ಮೊಬೈಲ್ ಜಪ್ತಿ ಮಾಡಿ, 24 ಜನ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಿದ್ದಾರೆ ಎಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ತಿಳಿಸಿದ್ದಾರೆ.

ಔಷಧಿಗುಣ ಹೊಂದಿರುವ ಚಳ್ಳೆಹಣ್ಣು

▸ ಪುಷ್ಪವತಿ ಜಿಎಂ ಬಸಯ್ಯ

ಕುರುಗೋಡು: ಒಂದು ಕಾಲದಲ್ಲಿ ಗ್ರಾಮೀಣ ಭಾಗದ ಬೇಲಿ, ಹಳ್ಳ-ಕೊಳ್ಳಗಳ ದಡದಲ್ಲಿ ಹೇರಳವಾಗಿ ಸಿಗುತ್ತಿದ್ದ ಚಳ್ಳೆ ಹಣ್ಣುಗಳು ಇತ್ತೀಚಿನ ದಿನಗಳಲ್ಲಿ ಮಾಯವಾಗುತ್ತಿವೆ.

ಪ್ರಸಕ್ತ ದಿನಮಾನದಲ್ಲಿ ಜಿಲ್ಲೆಯ ಕುರುಗೋಡು-ಕಂಪ್ಲಿ ಎರಡು ತಾಲೂಕಿನ 27 ಕಿಮೀ. ರಸ್ತೆಯ ಈ ಚೆಳ್ಳೆಯ ಗಿಡಗಳು ಅಪರೂಪದ ಅರಣ್ಯ ಇಲಾಖೆಯು ಕೆಲ ವರ್ಷಗಳ ಆಗಿನ ಸಸಿಗಳು ಈಗ ರಸ್ತೆಯ ಎಡ-ಬಲ ಬದಿಯಲ್ಲಿ ಸಮೃದ್ಧವಾಗಿ ಬೆಳೆದು ಹಣ್ಣು ಬಿಟ್ಟಿವೆ. ಇದು ಹಳೆಯ ತಲೆಮಾರಿಗೆ ಹಲವು ಗ್ರಾಮಳ ರಸ್ತೆಯಲ್ಲಿ ಸಾಲು ಸಾಲಾಗಿ ಬೆಳೆದು ನಿಂತ ಚಳ್ಳೆ ಹಣ್ಣಿನ ಗಿಡ. ಗಿಡದಲ್ಲಿ ಗೊಂಚಲು ಗೊಂಚಲಾಗಿ ಚಳ್ಳೆಹಣ್ಣು ಬಿಟ್ಟಿರುವುದು.

ನಾಲಿಗೆ ಸೀಳಿದರೆ, ಬಾಯಿ ಇತರೆ ಸಮಸ್ಯೆಗೆ ಜೋಲ್ಲ ಉತ್ಪಾದನಕ್ಕೆ ಈ ಹಣ್ಣು ಸೇವಿದರಗೆ ಅನುಭವ ಗೋತ್ತು



ಇದು ನಿಜ ಪ್ರಕೃತಿಯ ಅಪೂರ್ವ ಸೌಂದರ್ಯಕ್ಕೆ ಸಾಕ್ಷಿಯಾದ ಅಂದದ ಗಿಡಗಳು ದಾರಿಹೋಕರ ಮನಸೆಳೆದ ಹಣ್ಣು-ಹಸಿರೆಲೆಗಳ ಗೊಂಚಲು ಈ ಗಿಡದ ಹಣ್ಣು, ಎಲೆ-ತೊಗಟೆಯಲ್ಲಿದೆ ಔಷಧೀಯ ಗುಣಗಳು ನಿತ್ಯ ಸವಾರರಿಗೆ ನಿಂತು ಸವಿವುದು ಒಂದು ಸಿಹಿ ಪ್ರೀತಿಯ ಅನುಭವ ಆಗುತ್ತದೆ. ಇಲ್ಲಿನ ಸಾಲಿನ ಗಿಡಗಳ ಗೊಂಚಲು ಸಿಹಿ ಸೇವಿ ನೆನಪು ನಾಲಿಗೆ ರುಚಿ ಖಂಡಿತಾ ಸಾಲು ಸಾಲಾಗಿ ಬೆಳೆದು ನಿಂತಿರುವ ಚಳ್ಳೆ ಹಣ್ಣು (ಸಿಬಳೆ ಹಣ್ಣು, ಜಿಬ್ಬು ಹಣ್ಣು) ಗಿಡಗಳು

> **ಮಾನವನ ಆರೋಗ್ಯಕ್ಕೆ ಅತ್ಯಂತ ಪ್ರಯೋಜನಕಾರಿಯಾದ ಚಳ್ಳೆ ಹಣ್ಣು ಪ್ರೋಟೀನ್, ಕಬ್ಬಿಣ, ಮೆಗ್ನೀಶಿಯಮ್, ಪೋಟ್ಯಾಶಿಯಂ ಮತ್ತು ಕ್ಯಾಲ್ಸಿಯಂ ಅಂಶಗಳಿಂದ ಸಮೃದ್ಧವಾಗಿದೆ. ಇದರ ಔಷಧಿ ಈ ಗಿಡದ ಹಣ್ಣು, ಎಲೆ ಮತ್ತು ತೊಗಟೆ-ಎಲ್ಲವೂ ರೋಗ ನಿವಾರಕ ಶಕ್ತಿಹೊಂದಿವೆ. ಒಟ್ಟಾರೆ ಹೇಳಬೇಕಂದ್ರೆ, ಚಳ್ಳೆ ಹಣ್ಣು ಕೇವಲ ಒಂದು ಹಣ್ಣಲ್ಲ, ಇದು ಪ್ರಕೃತಿ ನೀಡಿದ ಅದ್ಭುತ ಔಷಧಾಲಯ.**
>
> ■ **ಮಂಜುನಾಥ ಜವಳಿ ತಾಲೂಕು ವೈಧ್ಯಾಧಿಕಾರಿಗಳು ಕುರುಗೋಡು**

ಪ್ರಕೃತಿಯ ಅಪೂರ್ವ ಸೌಂದರ್ಯಕ್ಕೆ ಸಾಕಿಯಾಗಿ ನಿಂತಿವೆ. ಗಿಡದ ತುಂಬಾ ಹಸಿರೆಲೆಗಳ ಜತೆ ಜತೆಗೆ ಗೊಂಚಲು ಗೊಂಚಲಾಗಿ ಬಿಟ್ಟಿರುವ ಚಳ್ಳೆ ಹಣ್ಣುಗಳು ದಾರಿಹೋಕರ, ವಾಹನ ಸವಾರರ ಗಮನ ಸೆಳೆಯುತ್ತಿವೆ.

ಸ್ವಾಮಿಹಳ್ಳಿ ಪಿಎಚ್‌ಸಿಗೆ ಡಿಎಚ್‌ಒ ಭೇಟಿ

ಸಂಡೂರು: ತಾಲೂಕಿನ ಸ್ವಾಮಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಿಶೀಲನೆ ವೇಳೆ ಆರೋಗ್ಯ ಕೇಂದ್ರದ ಕಟ್ಟಡದ ಸಮಸ್ಯೆಗಳನ್ನು ಅವಲೋಕಿಸಿದ ಅಧಿಕಾರಿಗಳು, ಸಾರ್ವಜನಿಕರ ಆರೋಗ್ಯ ಸೇವೆಗೆ ಯಾವುದೇ ತೊಂದರೆಯಾಗದಂತೆ ತಾತ್ಕಾಲಿಕ ಕ್ರಮ ಕೈಗೊಂಡಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಬೆಳಿಗ್ಗೆಯಿಂದ ಸಂಜೆವರೆಗೆ ಮೊಬೈಲ್ ಮೆಡಿಕಲ್‌ಯುನಿಟ್(ಎಂಎಂಯು)ಅನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದ್ದು, ಘಟಕದಲ್ಲಿ ವೈದ್ಯಾಧಿಕಾರಿಗಳು, ನರ್ಸಿಂಗ್ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಹಾಗೂ ಪ್ರಯೋಗಾಲಯ ತಾಂತ್ರಿಕ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಂತೆ ಡಿಎಚ್‌ಒ



ಸೂಚನೆ ನೀಡಿದರು

ಇದಲ್ಲದೆ, ವ್ಯಾಪ್ತಿಯ ಉಪಕೇಂದ್ರಗಳ ಸಿಬ್ಬಂದಿಯನ್ನು ಸಹ ತಾತ್ಕಾಲಿಕವಾಗಿ ಪಿಎಚ್‌ಸಿಯಲ್ಲಿ ನಿಯೋಜಿಸಿ, ಸಾರ್ವಜನಿಕರಿಗೆ ಆರೋಗ್ಯ ಸೇವೆ ಮತ್ತು ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಆರೋಗ್ಯ ಸೇವೆಗಳನ್ನು ನಿರಾತಂಕವಾಗಿ ಪಡೆದುಕೊಳ್ಳುವಂತೆ ಮನವಿ ಮಾಡಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ವೀರೇಂದ್ರ ಕುಮಾರ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅಕ್ಷಯ್ ಉಪಸ್ಥಿತರಿದ್ದರು.

ಬಾಲಕಾರ್ಮಿಕರ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿ



ಕೂಡ್ಲಿಗಿ: ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ತಾಲೂಕು ಕಾನೂನು ಸೇವಾ ಸಮಿತಿ, ವಿವಿಧ ಇಲಾಖೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಶ್ರೇಣಿ ನ್ಯಾಯಾಧೀಶ ಎಚ್.ಜೆ. ಶಿಲ್ಪಾ ಅವರು ಮಾತನಾಡಿ, ಮಕ್ಕಳನ್ನು ಶಿಕ್ಷಣ ನೀಡಿ ಸಮಾಜದ ಅಭಿವೃದ್ಧಿಗೆ ಪೂರಕವಾಗಲಿದೆ. ಪ್ರತಿ ಮಗುವಿಗೂ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷಿತ ವಾಗಿರಬೇಕು ಬಾಲಕಾರ್ಮಿಕ ಪದ್ಧತಿಯು ಮಕ್ಕಳ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಬಾಲಕಾರ್ಮಿಕರ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಅಲ್ಲದೆ, ಸಾರ್ವಜನಿಕರು ಬಾಲಕಾರ್ಮಿಕರನ್ನು ಗಮನಿಸಿದರೆ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ಕೆ.ಎಚ್. ವೀರೇಶ್ ಮಾತನಾಡಿ, ಶಿಕ್ಷಣವೇ ಮಕ್ಕಳ ಜೀವನ ರೂಪಿಸುವ ವ್ಯವಸ್ಥೆಯಾಗಲಿ, ವಿದ್ಯಾರ್ಥಿಗಳು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು ಎಂದು ಸಲಹೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಡಿಪಿಒ ಮಾಲೂಂಬಿ, ವಕೀಲ ಸಂಘದ ಅಧ್ಯಕ್ಷ ಜಿ.ಹೊನ್ನೂರಪ್ಪ, ಉಪಾಧ್ಯಕ್ಷ ಮಲ್ಲಿಕಾರ್ಜುನ, ಕಾರ್ಯದರ್ಶಿ ಸಿ.ವಿರೂಪಾಕ್ಷಪ್ಪ, ಸಹ ಕಾರ್ಯದರ್ಶಿ ಡಿ.ಎಚ್.ದುರುಗೇಶ್, ಕಾರ್ಮಿಕ ನಿರೀಕ್ಷಕ ಶಿವಶಂಕರ ಮತ್ತು ಹಿರಿಯ ವಕೀಲ ಕೆ.ಎಚ್.ಎಂ.ಶೈಲಜಾ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಬಾಲಕಾರ್ಮಿಕ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಜ್ಞೆ ಸ್ವೀಕರಿಸಿದರು.

ಶಿಕ್ಷಕರ ಸಮಸ್ಯೆ ಪರಿಹಾರಕ್ಕೆ ಸಂಘ ಮಾದರಿ: ಅಶೋಕಗೌಡ್ರ

ಯಲಬುರ್ಗಾ: ತಾಲೂಕಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ತಾಲೂಕಿನಾದ್ಯಂತಹ ಶಿಕ್ಷಕರ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ಧ್ವನಿಯಾಗಿ ಕಾರ್ಯನಿರ್ವಹಿಸುವ ಮೂಲಕ ಇತರ ಸಂಘಗಳಿಗೆ ಈ ಶಿಕ್ಷಕರ ಸಂಘ ಮಾದರಿಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕಗೌಡ ಹೇಳಿದರು.

ಪಟ್ಟಣದ ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ನಿವೃತ್ತ ಶಿಕ್ಷಕರ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚೆಗೆ ಶಿಕ್ಷಕರ ಸಂಘಕ್ಕೆ ಯಾವ ಚುನಾವಣೆ ನಡೆಸದೆ ಎಲ್ಲರೂ ಒಗ್ಗಟ್ಟಿನಿಂದ ಎಲ್ಲ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದು ಶ್ಲಾಘನೀಯವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಈ ತಾಲೂಕು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುವುದು ಇಲ್ಲಿನ ಶಿಕ್ಷಕರ ಪರಿಶ್ರಮ, ಸಮರ್ಪಣೆ ಹಾಗೂ ಬದ್ಧತೆಯ ಪ್ರತಿಫಲವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಜಿಲ್ಲಾ ನಿವೃತ್ತ ಉಪನಿರ್ದೇಶಕ ಎಸ್.ಡಿ.ಗಾಂಜಿ



ಮಾತನಾಡಿ, ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮಕ್ಕಳ ಕಲಿಕೆಗೆ ಹೆಚ್ಚು ಗಮನ ಹರಿಸಿ ಗುಣಮಟ್ಟ ಶಿಕ್ಷಣ ನೀಡಿದರೆ ಇದಕ್ಕಿಂತಹ ಬಹುದೊಡ್ಡ ಪ್ರಶಸ್ತಿ, ಬಹುಮಾನ ಯಾವುದು ಇಲ್ಲ.ನಾವುಗಳು ಕಲಿಸಿದ ಮಕ್ಕಳು, ಪಾಲಕರು ಬದುಕಿರುವವರೆಗೊ ನಮ್ಮನ್ನು ಮರೆಯಲೂ ಸಾಧ್ಯವಿಲ್ಲ ಎಂದರು.

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಎಸ್.ವಿ.ಧರಣಾ ಸಭೆ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಸ.ಪ್ರಾ.ಶಾ.ಶಿ.ಸಂ, ಅಧ್ಯಕ್ಷ ಶರಣಬಸನಗೌಡ ಪಾಟೀಲ, ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ, ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರ ಮಾತನಾಡಿದರು.ಬಳಿಕ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪ್ರಮಾಣಪತ್ರ ವಿತರಿಸಿದರು ಹಾಗೂ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ,ಗೌರವಿಸಿದರು.

ವೀರಭದ್ರಪ್ಪ ಅಂಗಡಿ, ಶರಣಯ್ಯ ಸರಗಣಚಾರ, ಎಂ.ಎನ್.ಜನಾದ್ರಿ, ಮರ್ಧನಸಾಬ ಕುಕನೂರು, ಮಾರುತಿ ತಳವಾರ, ಶಿವಪ್ಪ ಕೊಂಡಗುರಿ, ಶಿವಾನಂದ ಮಳಗಿ, ರಾಮಣ್ಣ ತಳವಾರ, ಬಸಮ್ಮ ಛಲವಾದಿ, ಮೈಹಬೂಬ ಬಾದಶಾಹ, ಸಂಗಯ್ಯ ಹಿರೇಮಠ, ಮಂಜುನಾಥ ಮುರಡಿ, ಗಂಗಮ್ಮ ಸೋಬಗಿನ್, ನಾಗರಾಜ ನಡುವಲಕೇರಿ, ವಿದ್ಯಾಶ್ರೀ ಕುಡಗುಂಟಿ, ಶೃತಿ, ಕಳಕಮಲ್ಲಪ್ಪ ಮತ್ತಿತರರಿದ್ದರು.

ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು: ಅಶೋಕ್

ಸಿರುಗುಪ್ಪ : ಬಾಲ್ಯದಲ್ಲಿ ಆಟವಾಡುತ್ತ, ತನ್ನ ಜೊತೆಗಾರರೊಂದಿಗೆ ಶಾಲೆಗೆ ಹೋಗಿ ಕಲಿಯಬೇಕಾದ ಮಕ್ಕಳು ಹಲವಾರು ಸಮಸ್ಯೆಗಳಿಂದಾಗಿ ಬಾಲ ಕಾರ್ಮಿಕರಾಗಿ ದುಡಿಯುತ್ತಿರುವುದು ಒಂದು ಸಾಮಾಜಿಕ ಪಿಡುಗು ಆಗಿದೆ ಎಂದು ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶ ಅಶೋಕ್ ಆರ್. ಎಚ್. ಹೇಳಿದರು.

ನಗರದ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯಲ್ಲಿ ತಾಲೂಕಿನ ವಿವಿಧ ಇಲಾಖೆಯ ಸಹಯೋಗದೊಂದಿಗೆ ಶುಕ್ರವಾರ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದರು.

ಗಾರ್ಮೆಂಟ್ಸ್‌ಗಳಲ್ಲಿ, ಬೇಕರಿ, ಗ್ಯಾರೇಜ್, ಹೊಟೇಲ್, ಕಾರ್ಖಾನೆಗಳಲ್ಲಿ ಕೆಲಸದಾಳುಗಳಾಗಿ ಇನ್ನಿತರೆ ಪ್ರಮುಖ ಅಪಾರ ಸ್ಥಳಗಳಲ್ಲಿ ತಮ್ಮ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಕ್ಕೆ ಕಷ್ಟವಾಗುವಂಥ ಕೆಲಸಗಳನ್ನು ಮಾಡುತ್ತಿದ್ದಾರೆ. ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಅವರು ಕೆಲಸಕ್ಕೆ ಸೇರಿಕೊಂಡರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಒಂದು ಕೋಟಿಗೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗೆ ಉಳಿದ್ದಿದ್ದಾರೆ. 14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯ ಶಿಕ್ಷಣವನ್ನು ಪಡೆಯಬೇಕು. ಬಾಲ ಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳು ಈ ಕೆಟ್ಟ ವ್ಯವಸ್ಥೆಯಿಂದ ಹೊರಬಂದು ತಮ್ಮ ಹಕ್ಕುಗಳ ಕುರಿತು ಜಾಗೃತಿ ಹೊಂದಿ ದೇಶದ ಉತ್ತಮ ನಾಗರಿಕರಾರಬೇಕು ಎಂದರು. ತಹಶೀಲ್ದಾರ್ ಗೌಸಿಯ ಬೇಗಂ, ವಕೀಲರ ಸಂಘದ ಅಧ್ಯಕ್ಷ ಉಪ್ಪಾರ ವೆಂಕೋಬ, ಸಹಾಯಕ ಸರ್ಕಾರಿ ಅಭಿಯೋಜಕ ಶಿವರಾಜ, ತಾಲ್ಲೂಕು ಕಾರ್ಮಿಕ ನಿರೀಕ್ಷಕ ತಿರುಮಲೇಶ, ಶಾಲಾ ಮುಖ್ಯಗುರು ಗೋಪಾಲ್ ಮಾತನಾಡಿದರು.

ನಗರಸಭೆ ಪೌರಾಯುಕ್ತ ಗಂಗಾಧರ, ವಕೀಲರ ಸಂಘದ ಉಪಾಧ್ಯಕ್ಷ ಎಂ.ಶರೀಫ್ ಸಾಬ್ ಕಾರ್ಯದರ್ಶಿ ಎಂ.ಶಿವಕುಮಾರ್, ಜಂಟಿ ಕಾರ್ಯದರ್ಶಿ ಮಂಜುಳಾ, ಸಮಾಜಕಲ್ಯಾಣ ಇಲಾಖೆ ತಾಲೂಕು ಸಹಾಯಕ ನಿರ್ದೇಶಕ ಮಡ್ಡೇರು ಸಿದ್ಧಯ್ಯ, ಬಿಸಿಎಂ ತಾಲೂಕು ಅಧಿಕಾರಿ ಕೆ.ಮಲ್ಲಿಕಾರ್ಜುನ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಾಧಿಕಾರಿ ಉಮೇಶ, ಮಕ್ಕಳ ಸಹಾಯವಾಣಿ ಅಧಿಕಾರಿ ಕಿರಣ್, ವಕೀಲರಾದ ಮಲ್ಲಿಗೌಡ, ನೀಲಕುಂಠಯ್ಯ, ಜೀಲಾನಿ, ಅಬ್ದುಲ್ ನಬೀ ಸಾಬ್ ಭಾಗವಹಿಸಿದ್ದರು.



ನ್ಯಾನೋ ಡಿಎಪಿ ಬಳಕೆ ಕುರಿತು ರೈತರಿಗೆ ಜಾಗೃತಿ



ಹನುಮಸಾಗರ: ಪಿಎಸಿಎಸ್ ಹಾಗೂ ವಿವಿಧ ರಸಗೊಬ್ಬರ ಮಾರಾಟ ಮಳಿಗೆಗಳ ಮುಂಭಾಗದಲ್ಲಿ ರೈತರಿಗೆ ನ್ಯಾನೋ ಯೂರಿಯಾ, ನ್ಯಾನೋ ಡಿಎಪಿ ಹಾಗೂ ಸಮತೋಲನ ರಸಗೊಬ್ಬರ ಬಳಕೆಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಗೊಬ್ಬರಗಳ ಪ್ರಯೋಜನಗಳು, ಅವುಗಳ ಸಮರ್ಪಕ ಬಳಕೆ ವಿಧಾನಗಳು ಹಾಗೂ ಅಧಿಕ ಪ್ರಮಾಣದಲ್ಲಿ ಯೂರಿಯಾ ಬಳಸುವುದರಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ರೈತರಿಗೆ ಕರಪತ್ರ ಮತ್ತು ಪೋಸ್ಟರ್‌ಗಳ ಮೂಲಕ ಅರಿವು ಮೂಡಿಸಲಾಯಿತು. ಅಲ್ಲದೆ ಬೆಳೆಗಳ ಸಮತೋಲನ ಪೋಷಣೆಗಾಗಿ ಸಂಯುಕ್ತ ರಸಗೊಬ್ಬರಗಳ ಬಳಕೆಯ ಮಹತ್ವವನ್ನು ವಿವರಿಸಲಾಯಿತು.

ಅಧಿಕ ಪ್ರಮಾಣದಲ್ಲಿ ಯೂರಿಯಾ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿತ, ಪರಿಸರ ಮಾಲಿನ್ಯ, ಬೆಳೆಗಳಲ್ಲಿ ಪೋಷಕಾಂಶಗಳ ಅಸಮತೋಲನ ಹಾಗೂ ಉತ್ಪಾದನಾ ವೆಚ್ಚ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದರು. ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಬಳಕೆಯಿಂದ ಗೊಬ್ಬರದ ಬಳಕೆ ಕಡಿಮೆಯಾಗುವುದರ ಜೊತೆಗೆ ಬೆಳೆಗಳಿಗೆ ಅಗತ್ಯ ಪೋಷಕಾಂಶಗಳು ಪ'ರಿಣಾಾಮ'ಕಾರಿಯಾಗಿ ದೊರೆಯುತ್ತವೆ ಎಂದು ಹೇಳಿದರು. ಕೃಷಿ ಸಹಾಯಕ ನಿರ್ದೇಶಕ ನಾಗರಾಜ್ ಕಾತರಕಿ ಮಾತನಾಡಿ, 'ನ್ಯಾನೋ ಗೊಬ್ಬರಗಳ ಸಮರ್ಪಕ ಬಳಕೆ ಪರಿಸರ ಸಂರಕ್ಷಣೆ, ಮಣ್ಣಿನ ಫಲವತ್ತತೆ ಕಾಪಾಡುವುದು ಹಾಗೂ ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಆದ್ದರಿಂದ ಪ್ರತಿಯೊಬ್ಬ ರೈತರೂ ಇದರ ಕುರಿತು ಸಂಪೂರ್ಣ ಮಾಹಿತಿ ಪಡೆದು ಜವಾಬ್ದಾರಿಯುತವಾಗಿ ಬಳಸುವುದು ಅಗತ್ಯವಾಗಿದೆ' ಎಂದು ತಿಳಿಸಿದರು. ವಿಎಸ್‌ಎಸ್‌ಎನ್ ಹನುಮಸಾಗರದ ಕಾರ್ಯನಿರ್ವಾಹಕ ಅಧಿಕಾರಿಗಳು, ಸದಸ್ಯರು, ಕೃಷಿ ಇಲಾಖೆ ಸಿಬ್ಬಂದಿ ಹಾಗೂ ರೈತರು ಉಪಸ್ಥಿತರಿದ್ದರು.

ಹೊಸ ಜ್ಞಾನಕ್ಕೆ ನಿರಂತರ ಅಧ್ಯಯನ ಅಗತ್ಯ: ಡಾ.ಪ್ರಕಾಶ

ವಿಜಯನಗರ: ಅವಕಾಶವೆನ್ನುವುದು ಆಕಾಶಕ್ಕಿಂತ ದೊಡ್ಡದು. ಅವಕಾಶಗಳು ದೊರೆತಾಗ ಅವುಗಳನ್ನು ಸಮರ್ಥವಾಗಿ ಬಳಸಿಕೊಂಡರೆ ಯಶಸ್ಸು ಸಾಧ್ಯ. ಕಲಿಯಬೇಕು, ಕಲಿತಿರುವುದನ್ನು ಮರೆಯಬೇಕು ಹಾಗೂ ಹೊಸ ಜ್ಞಾನವನ್ನು ಮತ್ತೆ ಕಲಿಯಬೇಕು ಎಂಬ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಆಂಧ್ರಪ್ರದೇಶದ ನೆಲ್ಲೂರು ಆರ್.ಐ.ಇ.ಎನ್.ಸಿ.ಇ.ಆರ್.ಟಿ. ಸಹ ಪ್ರಾಧ್ಯಾಪಕ ಡಾ.ಪ್ರಕಾಶ ಬಡಿಗೇರ ಹೇಳಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಂಪ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿರುವ 14 ದಿನಗಳ ಯುಜಿಸಿ ನೆಟ್, ಜೆಆರ್‌ಎಫ್ ಮತ್ತು ಕೆ-ಸೆಟ್ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಪೂರಕವಾಗುವ ಇಂತಹ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ತಮ್ಮ ಕನಸುಗಳು ಹಾಗೂ ಭರವಸೆಗಳನ್ನು ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಧಾರವಾಡ ಗುಡಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಭೀಮೇಶ ಯರಡೋಣಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ನಿರಂತರ ಅಭ್ಯಾಸ ಮತ್ತು ಆತ್ಮವಿಶ್ವಾಸ ಅತ್ಯಗತ್ಯ. ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿ ಇಂಗ್ಲಿಷ್ ವಿಷಯವನ್ನು ನಿರ್ಲಕ್ಷಿಸಬಾರದು ಎಂದು ಹೇಳಿದರು.



ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಮಾತನಾಡಿ, ಇಂದಿನ ಜಗತ್ತು ಅತ್ಯಂತ ಸ್ಪರ್ಧಾತ್ಮಕವಾಗಿದ್ದು, ಪ್ರತಿಭೆ ಮತ್ತು ಪರಿಶ್ರಮ ಹೊಂದಿರುವವರಿಗೆ ಅವಕಾಶಗಳ ಕೊರತೆಯಿಲ್ಲ. ಉನ್ನತ ಶಿಕ್ಷಣವು ವ್ಯಕ್ತಿಯ ಜೀವನದ ಬೆಳವಣಿಗೆಗೆ ಮಾತ್ರವಲ್ಲದೆ ದೇಶದ ಸಮಗ್ರ ಅಭಿವೃದ್ಧಿಗೂ ಅಗತ್ಯವಾಗಿದೆ. ಸಮಾಜದ ಎಲ್ಲ ವರ್ಗಗಳ ಜನರು ಉನ್ನತ ಶಿಕ್ಷಣ ಪಡೆಯುವಂತಾದಾಗ ಮಾತ್ರ ದೇಶವು ಮತ್ತಷ್ಟು ಉನ್ನತ ಹಂತಕ್ಕೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ವೆಂಕಟಗಿರಿ ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಯನಾಂಗದ ನಿರ್ದೇಶಕ ಡಾ.ಅಮರೇಶ ಯತಗಲ್ ಹಾಗೂ ವಿವಿಧ ವಿಭಾಗಗಳ ಡೀನರು, ಬೋಧಕ ಹಾಗೂ ಆಡಳಿತ ಸಿಬ್ಬಂದಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು, ವಿವಿಧ ವಿಶ್ವವಿದ್ಯಾಲಯದ ಪರೀಕ್ಷಾರ್ಥಿಗಳು ಉಪಸ್ಥಿತರಿದ್ದರು.

ಆರೋಪಿಗಳಿಬ್ಬರ ಬಂಧನ

ಕಲಬುರಗಿ: ವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸುಮಾರು 8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ವಾಡಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿದ್ದು, ಬೆಂಗಳೂರು, ಯಾದಗಿರಿ, ಕಲಬುರಗಿ, ನಾಲವಾರ, ಕುಂಬಾರಹಳ್ಳಿ, ಸೇಡಂ ಹಾಗೂ ವಾಡಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿ ಇಬ್ಬರನ್ನೂ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಕಾರ್ಯಾಚರಣೆ ಜಿಲ್ಲಾ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ವಾಡಿ ಪೊಲೀಸ್ ಠಾಣೆಯ ಪಿಎಸ್‌ಐ ತಿರುಮಲೇಶ್, ತನಿಖಾ ಪಿಎಸ್‌ಐ ರೇಣುಕಾ, ಎಎಸ್‌ಐ ಮೊಹಮ್ಮದ್ ಯೂಸುಫ್, ಹೆಡ್ ಕಾನ್ಸ್ಟೇಬಲ್‌ಗಳಾದ ಸುರೇಶ್, ಬಸಲಿಂಗಪ್ಪ ಹಾಗೂ ಪೊಲೀಸ್ ಸಿಬ್ಬಂದಿಗಳಾದ ಸಂಗಮೇಶ್ ಮತ್ತು ಮಾಪಣ್ಣ ಅವರ ತಂಡದಿಂದ ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಶಂಸಿಸಿದ್ದಾರೆ.

ಶರಣರ ತತ್ವಾದರ್ಶ ಯುವ ಪೀಳಿಗೆಗೆ ದಾರಿದೀಪ

ಹುಣಸಗಿ: ತಾಲೂಕಿನ ಸುಕ್ಷೇತ್ರ ಬಲಶೆಟ್ಟಿಹಾಳ ಗ್ರಾಮದ ಶ್ರೀಗುರು ಬಸವಲಿಂಗ ಶಿವಯೋಗಿಗಳವರ ವಿರಕ್ತ ಮಠದಲ್ಲಿ ಸಿದ್ದಲಿಂಗ ದೇವರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಕಡಕೋಳ ಶ್ರೀಮಡಿವಾಳೇಶ್ವರರ ಪುರಾಣವು ಭಕ್ತಿಭಾವ ಹಾಗೂ ಧಾರ್ಮಿಕ ಉತ್ಸಾಹದೊಂದಿಗೆ ಜರುಗಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಗುಳಬಾಳ ಶ್ರೀರಾಮಲಿಂಗೇಶ್ವರ ಆನಂದಾಶ್ರಮದ ಮರಿ ಹುಚ್ಚೇಶ್ವರ ಸ್ವಾಮೀಜಿ ವಹಿಸಿ ಆಶೀರ್ವಚನ ನೀಡಿದರು.

ಈ ವೇಳೆ ಮಾತನಾಡಿದ ಅವರು, ಮನುಷ್ಯನು ಪುರಾಣ, ಪ್ರವಚನ ಹಾಗೂ ಸತ್ಸಂಗ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಅವನಲ್ಲಿರುವ ಅಜ್ಞಾನ, ಮೂಢನಂಬಿಕೆ ಹಾಗೂ ಮೌಢ್ಯತೆ ದೂರವಾಗಿ ಆತ ಸುಜ್ಞಾನವನ್ನು ಸಂಪಾದಿಸುತ್ತಾನೆ.ಧರ್ಮದಮಾರ್ಗದಲ್ಲಿನಡೆಯುವ ಮೂಲಕ ಸತ್ಕಾರ್ಯಗಳಲ್ಲಿ ತೊಡಗಿಸಿಕೊಂಡು ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಡಕೋಳ ಮಡಿವಾಳೇಶ್ವರರು ಸಮಾಜ ಸುಧಾರಣೆಗೆ ಹಾಗೂ ಮಾನವೀಯ ಮೌಲ್ಯಗಳ ಬೆಳವಣಿಗೆಗೆ ನೀಡಿದ ಕೊಡುಗೆ ಅಪಾರವಾಗಿದೆ.



ಅವರ ತತ್ವಾದರ್ಶಗಳು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿದ್ದು, ಸಮಾನತೆ, ಶ್ರಮದ ಗೌರವ, ನೈತಿಕತೆ ಹಾಗೂ ಸೌಹಾರ್ದತೆಯ ಸಂದೇಶವನ್ನು ಸಾರುತ್ತವೆ ಎಂದು ತಿಳಿಸಿದರು.

ಬಸವರಾಜ ಮೇಲಿನಮನಿ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸೌಹಾರ್ದತೆ, ಶಾಂತಿ ಮತ್ತು ಸಹೋದರತ್ವವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪ್ರತಿಯೊಬ್ಬರೂ ತಮ್ಮ ದೈನಂದಿನ ಬದುಕಿನಲ್ಲಿ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳನ್ನು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹುಣಸಗಿ ತಾಲೂಕ ಅಧ್ಯಕ್ಷ ಅಂಬ್ರೇಶ ಮಾಲಗತ್ತಿ ಹಾಗೂ ಪದಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕರವೇ ಉತ್ತರ ಕರ್ನಾಟಕ ಅಧ್ಯಕ್ಷ ಶರಣು ಗದ್ದುಗೆ, ಬಸವರಾಜ್ ಮೇಲಿನಮನಿ, ನಾಗರಾಜ್ ಬಿರಾದಾರ್, ಹೊನ್ನ ಕೇಶವ ದೇಸಾಯಿ, ರಮೇಶ್ ಬಿರಾದಾರ್, ಅಂಬ್ರೇಶ ಮಾಲಗತ್ತಿ, ಶಿವಕುಮಾರ್ ಹಿರೇಮಠ, ಬಸಲಿಂಗಯ್ಯ ಹಿರೇಮಠ, ಪುರಾಣಿಕರಾದ ರಘುನಂದನ್ ಶಾಸ್ತ್ರಿ, ಸಂಗೀತಗಾರರಾದ ನಾಗರಾಜ್ ಹೂಗಾರ್, ಸುರೇಶ್ ಹೂಗಾರ್ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು, ಗಣ್ಯರು ಉಪಸ್ಥಿತರಿದ್ದರು. ಶಿಕ್ಷಕ ಬಸವರಾಜ ಭದ್ರಗೋಳ ಕೊಡೆಕಲ್ ನಿರೂಪಿಸಿದರು.

ಸಾಧಕ ವಿದ್ಯಾರ್ಥಿಗಳಿಗೆ ಶಿಕ್ಷಕಿಯಿಂದ ಉಚಿತ ವಿಮಾನಯಾನ ಭಾಗ್ಯ

ಕಲಬುರಗಿ: ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಕಿ ತಮ್ಮ ಸ್ವಂತ ಗಳಿಕೆಯ ಹಣದಲ್ಲಿ ವಿಮಾನ ಪ್ರವಾಸ ಮಾಡಿಸುವ ಮೂಲಕ ಇಡೀ ರಾಜ್ಯವೇ ಮೆಚ್ಚುವಂತಹ ವಿನೂತನ ಹಾಗೂ ಮಾದರಿ ಕಾರ್ಯವೊಂದನ್ನು ಮಾಡಿ ತೋರಿಸಿದ್ದಾರೆ.

ನಗರದ ಹಿಂಗುಲಾಂಬಿಕಾ ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಈ ಅಪೂರ್ವ ಸಾಹಸಕ್ಕೆ ಕೈಹಾಕಿದ ಹೆಮ್ಮೆಯ ಗುರುಗಳಾಗಿದ್ದಾರೆ.

ಶಾಲೆಯ 8, 9 ಮತ್ತು 10ನೇ ತರಗತಿಯ ವಾರ್ಷಿಕ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದ ಒಟ್ಟು 11 ಜನ ವಿದ್ಯಾರ್ಥಿಗಳಿಗೆ ಈ ಉಚಿತ ವಿಮಾನ ಸಂಚಾರದ ಮಹಾಯೋಗ ಒದಗಿಬಂದಿದೆ. ಸಾಮಾನ್ಯವಾಗಿ ಖಾಸಗಿ ಶಾಲೆಗಳಲ್ಲೂ ಇಂತಹ ಸೌಲಭ್ಯಗಳು ಅಪರೂಪ. ಆದರೆ, ಬಡ ಹಾಗೂ ಮಧ್ಯಮ ವರ್ಗದ ಮಕ್ಕಳು ಕಲಿಯುವ ಈ ಅನುದಾನಿತ ಶಾಲೆಯಲ್ಲಿ ಮಕ್ಕಳಿಂದ ಒಂದೇ ಒಂದು ರೂಪಾಯಿ ಪ್ರವಾಸದ ಶುಲ್ಕವನ್ನು ಪಡೆಯದೆ, ಶಿಕ್ಷಕರೇ ಸಂಪೂರ್ಣ ವೆಚ್ಚವನ್ನು ಭರಿಸಿ ಪ್ರವಾಸ ಆಯೋಜಿಸಿದ್ದಾರೆ. ಈ ಮಹತ್ಕಾರ್ಯದಲ್ಲಿ ಶಾಲೆಯ ಆಂಗ್ಲಭಾಷಾ ಶಿಕ್ಷಕಿ ಸಂತೋಷಿಮಾ ಅವರು ಒಟ್ಟು 10 ಜನ ವಿದ್ಯಾರ್ಥಿಗಳ ವಿಮಾನದ ಟಿಕೆಟ್ ಮೊತ್ತವನ್ನು ತಾವೇ ಸ್ವತಃ ಭರಿಸುವ ಮೂಲಕ ದೊಡ್ಡ ಔದಾರ್ಯ ಮೆರೆದಿದ್ದಾರೆ.

ಆಕಾಶದಲ್ಲಿ ಹಾರಾಡಿದ ಬಡ ಮಕ್ಕಳ ಕನಸು ಸಾಧಕ ವಿದ್ಯಾರ್ಥಿಗಳನ್ನು ಕಲಬುರಗಿ ವಿಮಾನ ನಿಲ್ದಾಣದಿಂದ ರಾಜಧಾನಿ ಬೆಂಗಳೂರಿಗೆ ವಿಮಾನದ ಮೂಲಕ ಕರೆತರಲಾಯಿತು.

ಮೊದಲ ಬಾರಿಗೆ ರನ್‌ವೇ ಮೇಲೆ ಓಡಿ ಆಕಾಶದ ಎತ್ತರಕ್ಕೆ ಹಾರಿದ ವಿಮಾನದಲ್ಲಿ ಕುಳಿತ ವಿದ್ಯಾರ್ಥಿಗಳ ಆನಂದ ಮುಗಿಲು ಮುಟ್ಟಿತ್ತು.



ವಿಧಾನಸೌಧದಲ್ಲಿ ಪ್ರಾಯೋಗಿಕ ಪಾಠ

ಬೆಂಗಳೂರಿಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಕೇವಲ ಪ್ರವಾಸ ಮಾತ್ರವಲ್ಲದೆ ಜ್ಞಾನಾರ್ಜನೆಗೂ ಅವಕಾಶ ಕಲ್ಪಿಸಲಾಗಿತ್ತು. ಶಿಕ್ಷಕರು ವಿಶೇಷ ಅನುಮತಿಯನ್ನು ಪಡೆದು ಮಕ್ಕಳನ್ನು ರಾಜ್ಯದ ಶಕ್ತಿ ಸೌಧವಾದ 'ವಿಧಾನಸೌಧ'ದ ಒಳಗಡೆ ಕರೆದೊಯ್ದರು. ಅಲ್ಲಿ ಮೇಲ್ಮನೆ (ವಿಧಾನಪರಿಷತ್) ಮತ್ತು ಕೆಳಮನೆ (ವಿಧಾನಸಭೆ) ಎರಡೂ ಸದನಗಳ ಕಾರ್ಯಕಲಾಪಗಳು ಹೇಗೆ ನಡೆಯುತ್ತವೆ, ಕಾಯ್ದೆಗಳು ಹೇಗೆ ಜಾರಿಗೆ ಬರುತ್ತವೆ ಎಂಬ ಪ್ರಜಾಪ್ರಭುತ್ವದ ವ್ಯವಸ್ಥೆಯ ಕುರಿತು ಮಕ್ಕಳಿಗೆ ಪ್ರಾಯೋಗಿಕ ಮಾಹಿತಿ ಒದಗಿಸಿಕೊಟ್ಟರು. ಶಿಕ್ಷಕರ ಈ ವಿದ್ಯಾರ್ಥಿ ಸ್ನೇಹಿ ನಡೆಗೆ ಸಾರ್ವಜನಿಕ ವಲಯ ಹಾಗೂ ಶಿಕ್ಷಣ ಇಲಾಖೆಯಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದ್ದು, ಭವಿಷ್ಯದಲ್ಲಿ ಮತ್ತಷ್ಟು ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಇದು ಪ್ರೇರಣೆಯಾಗಿದೆ.

ಕಿರುಸುದ್ದಿ

ರಾಷ್ಟ್ರವ್ಯಾಪಿ ಜಾಗೃತಿ, ವಕಾಲತ್ತು ಅಭಿಯಾನ

ಹುಬ್ಬಳ್ಳಿ: ಶಿಕ್ಷಕರ ಅರ್ಹತಾ ಪರೀಕ್ಷಾ ಕುರಿತು 2026ರ ಮೇ 29ರಂದು ಸರ್ವೋಚ್ಚ ನ್ಯಾಯಾಲಯ ನೀಡಿದ ಆದೇಶವನ್ನು ಮರು ಪರಿಶೀಲಿಸಬೇಕು ಎಂದು ರಾಷ್ಟ್ರವ್ಯಾಪಿ ಜಾಗೃತಿ ಹಾಗೂ ವಕಾಲತ್ತು ಅಭಿಯಾನ ಆರಂಭಿಸಲಾಗುವುದು. ಇದರ ಭಾಗವಾಗಿ ಜೂನ್ 18ರಂದು ಧಾರವಾಡದಲ್ಲಿ ಸಂಜೆ 4 ಗಂಟೆಗೆ ಪ್ರಧಾನಮಂತ್ರಿಗಳು ಮತ್ತು ಕೇಂದ್ರ ಶಿಕ್ಷಣ ಸಚಿವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಂದೀಪ ಬೂದಿಹಾಳ ತಿಳಿಸಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಕರ ಅರ್ಹತಾ ಪರೀಕ್ಷಾ ಕುರಿತು ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಿಂದ ದೇಶದಾದ್ಯಂತ 17 ಲಕ್ಷ ಶಿಕ್ಷಕರಲ್ಲಿ ಸೇವಾ ಭದ್ರತೆ ಮತ್ತು ಭವಿಷ್ಯದ ಬಗ್ಗೆ ಅಭದ್ರತೆಯ ಭಾವನೆ ನಿರ್ಮಾಣವಾಗಿದೆ ಎಂದರು. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್‌ಸಿಟಿಇ) ಆಗಸ್ಟ್ 23, 2010ರಿಂದ ಶಿಕ್ಷಕರಾಗಿ ನೇಮಕಾತಿ ಹೊಂದುವವರಿಗೆ ಕಡ್ಡಾಯವಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (ಟಿಇಟಿ) ಉತ್ತೀರ್ಣವಾಗಿರಬೇಕೆಂದು ಕಡ್ಡಾಯ ಮಾಡಿದೆ. ಶಿಕ್ಷಕರ ನೇಮಕಾತಿ ನಿಯಮಾವಳಿಗಳ ಪ್ರಕಾರ 2010 ಆಗಸ್ಟ್ 23ರ ಮುಂಚೆ ನೇಮಕಗೊಂಡ ಶಿಕ್ಷಕರಿಗೆ ಟಿಇಟಿ ಕಡ್ಡಾಯದಿಂದ ವಿನಾಯತಿ ನೀಡುವುದು ನ್ಯಾಯ ಸಮ್ಮತವಾಗಿದೆ ಎಂದು ಆದೇಶವಾಗಿತ್ತು ಎಂದು ತಿಳಿಸಿದರು. ಆದರಂತೆ 2026 ಮೇ 29ರಂದು ಸರ್ವೋಚ್ಚ ನ್ಯಾಯಾಲಯ ಶಿಕ್ಷಕರ ಹಿತ ಕಾಯುವ ಶಿಕ್ಷಕ ಸಂಘಟನೆಗಳು ಮತ್ತು ವಿವಿಧ ರಾಜ್ಯಗಳ ಪರಿಶೀಲನಾ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಹಿಂದಿನ ಅರ್ಜಿಯನ್ನು ಎತ್ತಿ ಹಿಡಿದಿದೆ. ಇದರಿಂದಾಗಿ 2010 ಕ್ಕಿಂತ ಮುಂಚೆ ನೇಮಕಗೊಂಡು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಲಕ್ಷಾಂತರ ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಬೇಕಾಗುವುದು. ಇದರಿಂದ ಲಕ್ಷಾಂತರ ಕುಟುಂಬಗಳು ಬೀದಿಗೆ ಬರಲಿವೆ. ರಾಜ್ಯದಲ್ಲಿ 80 ಸಾವಿರ ಶಿಕ್ಷಕರು ಬೀದಿಗೆ ಬೀಳಲಿದ್ದಾರೆ. ಶಿಕ್ಷಕರ ಸೇವಾ ಹಕ್ಕುಗಳು, ಹಿರಿತನ, ಬಡ್ತಿ ನಿರೀಕ್ಷೆಗಳು ಮತ್ತು ಇತರ ಕಾನೂನು ಬದ್ಧ ಪ್ರಯೋಜನಗಳನ್ನು ರಕ್ಷಿಸಲು ಅಗತ್ಯವಾದ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದರು. ರಾಜ್ಯ ಸಂಚಾಲಕ ಡಾ.ಶಿವಪೂಜಿ ಕೋಟಿ, ರಾಜ್ಯ ಕಾರ್ಯದರ್ಶಿ ಶ್ರೀಧರ್ ಪಾಟೀಲ್ ಕುಲಕರ್ಣಿ ಇದ್ದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ

ಜನಪರ ಜನಕಲ್ಯಾಣಕ್ಕೆ ಬದ್ಧತೆಯಿಂದ ಕೆಲಸ ಮಾಡಿ

ಬೆಂಗಳೂರು: ಜನಪರ ಮತ್ತು ಜನಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯತೆ ತೋರದೆ ಹೆಚ್ಚು ಬದ್ಧತೆಯಿಂದ ಕೆಲಸ ಮಾಡುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ರಾಜ್ಯದ ಮುಖ್ಯಮಂತ್ರಿಯಾದ ನಂತರ ಆಡಳಿತ ಯಂತ್ರಕ್ಕೆ ಚುರುಕು ನೀಡಲು ಮುಂದಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಶನಿವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ವರಿಷ್ಠಾಧಿಕಾರಿಗಳು ಮತ್ತು ವಿವಿಧ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳ ಸಭೆ ನಡೆಸಿ ಆಡಳಿತ ಸುಗಮ, ಸಮರ್ಪಕ ಹಾಗೂ ಜನಪರ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಸಲಹೆ, ಸೂಚನೆಗಳನ್ನು ಅಧಿಕಾರಿಗಳಿಗೆ ನೀಡಿದರು.

ರಾಜ್ಯ ಸರ್ಕಾರ ಬಡವರು, ಹಿಂದುಳಿದವರು, ದಮನಿತರ ಕಲ್ಯಾಣಕ್ಕಾಗಿ ಹತ್ತು ಹಲವು ಯೋಜನೆಗಳನ್ನು ಜಾರಿ ಮಾಡಿದೆ. ಬಜೆಟ್‌ನಲ್ಲೂ ಹೊಸ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಈ ಎಲ್ಲಾ ಸಮರ್ಪಕವಾಗಿ ಯೋಜನೆಗಳು ಜಾರಿಯಾಗುವಂತೆ ನೋಡಿಕೊಳ್ಳಬೇಕು ಹಾಗೂ ಯಾರಿಗೆ ಯೋಜನೆಗಳನ್ನು ರೂಪಿಸಲಾಗಿದೆಯೋ ಆಯೋಜನೆಗಳ ಲಾಭ ಆ ವರ್ಗದವರಿಗೆ ಆಗುವಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳು

ರಸಗೊಬ್ಬರ, ಬಿತ್ತನೆ ಬೀಜ ಕೊರತೆ ನೀಗಿಸಿ: ರಾಜ್ಯದಲ್ಲಿ ಮುಂಗಾರು ಹಂಗಾಮು ಆರಂಭವಾಗಿ



ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ರಸಗೊಬ್ಬರ ಹಾಗೂ ಬಿತ್ತನೆ ಬೀಜದ ಕೊರತೆಯಾಗದಂತೆ ಎಚ್ಚರ ವಹಿಸಿ. ಹಾಗೆಯೇ ರಸಗೊಬ್ಬರ ಸಮಸ್ಯೆಯಿಂದ ಕಾನೂನು ಸುವ್ಯವಸ್ಥೆಗೆ ತೊಂದರೆಯಾಗದಂತೆಯೂ ಎಚ್ಚರ ವಹಿಸಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು.

ಕೇಂದ್ರದಿಂದ ಬರಬೇಕಾದ ರಸಗೊಬ್ಬರ ಪ್ರಮಾಣ ಕಡಿಮೆ ಬಂದಿದೆ. ಹಾಗಾಗಿ ಮುಂದೆ ರಸಗೊಬ್ಬರ ಕೊರತೆಯಾಗದಂತೆ ಈಗಿನಿಂದಲೇ ಏನೆಲ್ಲಾ ಮಾಡಬೇಕೋ ಆಕ್ರಮಗಳನ್ನು ಕೈಗೊಳ್ಳಿ, ರಸಗೊಬ್ಬರಕ್ಕಾಗಿ ರೈತರು ಹೋರಾಟದ ಹಾದಿ ಹಿಡಿದು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರದಂತೆ ಎಚ್ಚರ ವಹಿಸಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ ಕೆಲ ಜಲಾಶಯಗಳಲ್ಲಿ ನೀರಿನ ಕೊರತೆಯಾಗಿದೆ. ಹಾಗಾಗಿ ರಾಜ್ಯದ ಯಾವುದೇ ಕಡೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಮುಂದಿನ ದಿನಗಳಲ್ಲಿ ಹೆಚ್ಚು ಮಳೆಯಾದರೆ ಮಳೆಯಿಂದ ಯಾವುದೇ ಅವಘಡಗಳಾಗದಂತೆ ಈಗಿನಿಂದಲೇ ಕ್ರಮ ವಹಿಸಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಾವುದೇ ಕಾರಣಕ್ಕೂ ಅಧಿಕಾರಿಗಳು ಜನಪರ ಯೋಜನೆಗಳ ಜಾರಿ ವಿಚಾರದಲ್ಲಿ ವಿಳಂಬ ಧೋರಣೆ ತಾಳದೆ ಶೀಘ್ರ ಅನುಷ್ಠಾನಕ್ಕೆ ಕ್ರಮ ವಹಿಸಬೇಕು ಎಂದು ಅವರು ಹೇಳಿದರು. ಯಾವುದೇ ಅಧಿಕಾರಿ ಜನರ ಕಷ್ಟಗಳಿಗೆ ಸ್ಪಂದಿಸಬೇಕು. ಜನರ ಕಷ್ಟಗಳಿಗೆ ಸ್ಪಂದಿಸದೆ ಜನ ಕಲ್ಯಾಣ ಯೋಜನೆಗಳ ಜಾರಿ ವಿಚಾರದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ಕಾನೂನು ಸುವ್ಯವಸ್ಥೆ: ಎಚ್ಚರ ವಹಿಸಿ

ಕರ್ನಾಟಕ ಸರ್ವಜನಾಂಗದ ಶಾಂತಿಯ ತೋಟವಾಗಿದೆ. ಈ ಶಾಂತಿಯ ತೋಟವನ್ನು ಮುಂದುವರೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕಾನೂನು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಿ, ಸಮಾಜಘಾತುಕಶಕ್ತಿಗಳು ತಲೆಎತ್ತದಂತೆ ಕಾರ್ಯನಿರ್ವಹಿಸಿ ಸಿಎಂ ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಜನಸಾಮಾನ್ಯರಿಗೆ ಅನಗತ್ಯ ತೊಂದರೆ ಕೊಡಬೇಡಿ. ಅವರ ಜತೆ ಬಹಳ ಸಂಯಮ, ಸೌಜನ್ಯದಿಂದ ವರ್ತಿಸಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು. ಕಂದಾಯ ಇಲಾಖೆ ಮತ್ತಷ್ಟು ಜನಪರವಾಗಬೇಕು. ಈ ಇಲಾಖೆ ರೈತರು ಮತ್ತು ಜನಸಾಮಾನ್ಯರಿಗೆ ನೇರ ಸಂಬಂಧಪಟ್ಟ ಇಲಾಖೆಯಾಗಿದ್ದು, ನಿಯಮಗಳ ನೆಪಹೇಳಿ ಯಾವುದನ್ನೂ ವಿಳಂಬ ಮಾಡಬೇಡಿ. ಭೂ ಪರಿವರ್ತನೆ ಇರಬಹುದು, ಭೂ ಮಂಜೂರಾತಿ ಇರಬಹುದು, ಖಾತೆ, ಪೋಡಿ ವಿಚಾರದಲ್ಲೂ ಅತ್ಯಂತ ಕ್ಷಿಪ್ರವಾಗಿ ಕೆಲಸಗಳು ಆಗಬೇಕು. ವಿಳಂಬ ಧೋರಣೆಯಾದರೆ ಅದನ್ನು ನಾನು ಸಹಿಸಲ್ಲ ಎಂದು ಮುಖ್ಯಮಂತ್ರಿಗಳು ಎಚ್ಚರಿಸಿದರು.

ಜನರ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರ ಒದಗಿಸಿ

ದೂರದ ಊರುಗಳಿಂದ ಸಣ್ಣಪುಟ್ಟ ಸಮಸ್ಯೆಗಳನ್ನು ಹೊತ್ತು ಜನ ಬೆಂಗಳೂರಿಗೆ ಬರುವುದನ್ನು ತಪ್ಪಿಸಿ, ಜಿಲ್ಲಾಧಿಕಾರಿಗಳು ಜನರ ಬಳಿಗೆ ಹೋಗಿ ಅವರ ಸಮಸ್ಯೆಗಳನ್ನು ಆಲಿಸಿ ಪರಿಹಾರ ದೊರಕಿಸಬೇಕು ಎಂದು ಸೂಚಿಸಿದರು. ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಜನಸ್ಪಂದನ ಸಭೆಗಳನ್ನು ನಡೆಸುವ ಮೂಲಕ ಜನರ ಅಹವಾಲು ಆಲಿಸುವ ಕೆಲಸ ಅಧಿಕಾರಿಗಳು ಮಾಡಬೇಕು. ಹಾಗೆಯೇ ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸುವ ಕೆಲಸವು ಆಗಬೇಕಿದೆ ಎಂದು ಹೇಳಿದರು. ಆಡಳಿತ ಯಂತ್ರ ಅನ್ನು ಹೆಚ್ಚು ಚುರುಕಿನಿಂದ ಕೆಲಸ ಮಾಡಬೇಕಿದೆ. ಹಾಗಾಗಿ ಅಧಿಕಾರಿಗಳು ಹೆಚ್ಚು ಕೆಲಸ ಮಾಡುವ ಮೂಲಕ ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಜವಾಬ್ದಾರಿಯಿಂದ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸಮಾಡಿದರೆ ನಿಮಗೂ ಹೆಸರು, ಸರ್ಕಾರಕ್ಕೂ ಹೆಸರು ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿ. ಏನು ಮಾಡಿದರೂ ನಡೆದೀತು ಎಂಬ ಧೋರಣೆ ಬೇಡ ಎಂದರು.



ಭಾರೀ ಮಳೆಗೆ ನದಿಯಂತಾದ ರಸ್ತೆ, ಜನಜೀವನ ಅಸ್ತವ್ಯಸ್ತ

ಗೋಕರ್ಣ: ಶನಿವಾರ ಸುರಿದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಇಲ್ಲಿನ ಪ್ರಮುಖ ರಸ್ತೆಗಳು ನೀರು ತುಂಬಿ ನದಿಯಾಗಿ ಮಾರ್ಪಟ್ಟಿತ್ತು. ಮಹಾಬಲೇಶ್ವರ ಮಂದಿರದ ಪಶ್ಚಿಮ ಬಾಗಿಲಿನ ಎದುರಗಡೆ ಮುಖ್ಯ ಕಡಲತೀರಕ್ಕೆ ಸಾಗುವ ಮಾರ್ಗದಲ್ಲಿ ಮಳೆ ನೀರು ಸಂಗಮ ನಾಲೇ ಸೇರುವಲ್ಲಿ ಪಕ್ಕದ ಅಂಗಡಿಕಾರರು ಚರಂಡಿ ಮುಚ್ಚಿದ ಪರಿಣಾಮ ನೀರು ತುಂಬಿ ಸಂಚಾರಕ್ಕೆ ತೊಡಕಾಯಿತು. ಇದರಿಂದ ದೇವಾಲಯದ ಅಮೃತಾನ್ನ ಭೋಜನ ಶಾಲೆಯ ಆವಾರಕ್ಕೂ ನೀರು ನುಗ್ಗಿತ್ತು. ದೇವಾಲಯದ ಹೊರಗಡೆ ಬಿಟ್ಟಿದ್ದ ಪಾದರಕ್ಷೆಗಳು ತೇಲುತ್ತಾ ಅತ್ತಿತ್ತ ಸಾಗುವುದು, ಹೊಲಸು ನೀರು ತುಳಿದು ಭಕ್ತರ ಸಾಗುವ ದೃಶ್ಯ ಕಂಡು ಬಂತು.

ಮಹಾಗಣಪತಿ ಮಂದಿರದ ಪಕ್ಕದ ಗಾಯತ್ರಿ ಓಣಿಯಿಂದ ಬಂದ ಪರ್ವತ ಪ್ರದೇಶದ ಭಾರೀ ಪ್ರಮಾಣದ ನೀರು ಮಹಾಬಲೇಶ್ವರ ಮಂದಿರದ ಆವಾರ, ಮುಂಭಾಗದ ರಸ್ತೆಗಳಿಗೆ ನುಗ್ಗಿತ್ತು. ಎಲ್ಲೆಂದರಲ್ಲಿ ಬಿಸಾಡಿದ ಪ್ಲಾಸ್ಟಿಕ್ ಮತ್ತಿತರ ವಸ್ತುಗಳನ್ನ ನೀರಿನಲ್ಲಿ ತೇಲಿ ಬಂದಿತ್ತು.

ಇದರಂತೆ ಭದ್ರಕಾಳಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಮುಂಭಾಗದ ರಾಜ್ಯ ಹೆದ್ದಾರಿಯಲ್ಲಿ ನೀರು ತುಂಬಿ ವಿದ್ಯಾರ್ಥಿಗಳಿಗೆ, ವಾಹನ ಸವಾರರಿಗೆ ತೀವ್ರ ತೊಂದರೆಯಾಯಿತು. ಇಲ್ಲಿ ಚರಂಡಿ ಸರಿಪಡಿಸಿ ನೀರು ಸರಾಗವಾಗಿ ಹೋಗು ವಂತೆ ಮಾಡಿಕೊಡಲು ಬೇಸಿಗೆಯಲ್ಲೇ ಗ್ರಾಪಂ ಹಾಗೂ ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗಿತ್ತು. ಆದರೆ ಯಾವುದೇ ಕ್ರಮ ತೆಗೆದುಕೊಳ್ಳದ ಪರಿಣಾಮ ಈ ಅವಾಂತರಕ್ಕೆ ಕಾರಣ ಎಂದು ಗ್ರಾಪಂ ಮಾಜಿ ಸದಸ್ಯ ಗಣಪತಿ ನಾಯ್ಕ ಹೇಳಿದ್ದಾರೆ.

ಭಗವಾನ್ ಕ್ಷಮೆಯಾಚಿಸಲಿ

ಗದಗ: ಶಂಭುಕನ ಘಟನೆಯೊಂದನ್ನೇ ಆಧರಿಸಿ ಮಹರ್ಷಿವಾಲ್ಮೀಕಿ ಬರೆದ ರಾಮಾಯಣದ ಬಗ್ಗೆ ಲಘುವಾಗಿ ಮಾತನಾಡುತ್ತಿರುವ ಚಿಂತಕ ಪ್ರೊ.ಕೆ.ಎಸ್.ಭಗವಾನ್ ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಗ್ರಹಿಸಿದರು. 24 ಸಾವಿರ ಶ್ಲೋಕಗಳಿರುವ 390 ಭಾಷೆಗಳಿಗೆ ತರ್ಜುಮೆಯಾದ ರಾಮಾಯಣ ಮಹಾಕೃತಿಯನ್ನು ನಿಂದಿಸುವುದು ಭಗವಾನ್ ಅವರಿಗೆ ಶೋಭೆ ತರುವುದಿಲ್ಲ. ಅದರ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ. ಪ್ರಚಾರಕ್ಕಾಗಿ ಅವರು ಈ ರೀತಿ ಮಾತನಾಡುತ್ತಿದ್ದಾರೆ ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಸಂದೀಪ್ ಸಾವಿನ ಪ್ರಕರಣ: ಮರು ತನಿಖೆಗೆ ಒತ್ತಾಯ

ಬೆಳಗಾವಿ: ಸಂದೀಪ್ ಸಾವಿನ ಪ್ರಕರಣಕ್ಕೆ ಹೊಸ ತಿರುವು ದೊರೆತಿದ್ದು, ಮೃತರ ಪತ್ನಿ ಸುಮಾ ಮಾಂಜರಿ ಅವರೊಂದಿಗೆ ಸಂಬಂಧ ಹೊಂದಿದ್ದೇನೆ ಎಂದು ಹೇಳಿಕೊಂಡಿರುವ ಪುಂಡಲೀಕ ಡೊಂಬರ್ ಅವರು ಸೆಲ್ಫಿ ವಿಡಿಯೋ ಬಿಡುಗಡೆ ಮಾಡಿ ಹಲವು ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ವಿಡಿಯೋದಲ್ಲಿ ಮಾತನಾಡಿರುವ ಪುಂಡಲೀಕ, ಸುಮಾ ಅವರು ಸಂದೀಪ್ ಅವರಿಗೆ ನಿರಂತರವಾಗಿ ಮದ್ಯ ಹಾಗೂ ನಿದ್ದೆ ಮಾತ್ರೆಗಳನ್ನು ನೀಡುತ್ತಿದ್ದರು ಎಂದು ಆರೋಪಿಸಿದ್ದಾರೆ. ಅಲ್ಲದೆ, ಸಂದೀಪ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಕ್ರಿಮಿ ನಾಶಕ ಔಷಧಿ ತಂದು ಕೊಡಲು ಸುಮಾ ಕೇಳಿದ್ದರು. ತಾನು ಅದನ್ನು ತಂದುಕೊಟ್ಟ ಮರು ದಿನವೇ ಸಂದೀಪ್ ಮೃತಪಟ್ಟರು ಎಂದು ಹೇಳಿದ್ದಾರೆ.

ಇದರ ಜೊತೆಗೆ, ಸಂದೀಪ್ ಅವರ ಹೆಸರಿನಲ್ಲಿ ಸುಮಾರು 2 ಕೋಟಿ ರೂಪಾಯಿ ವಿಮೆ ಮಾಡಲಾಗಿದ್ದು, ಆ ಹಣದ ಬಗ್ಗೆ ಸುಮಾತಮ್ಮೊಂದಿಗೆ ಮಾತನಾಡಿದ್ದರು ಎಂಬ ಆರೋಪವನ್ನೂ ಪುಂಡಲೀಕ ಮಾಡಿದ್ದಾರೆ. ಪ್ರಕರಣದ ಸಂಪೂರ್ಣ ಮರು ತನಿಖೆ ನಡೆಸಬೇಕು ಹಾಗೂ ತನಿಖೆ ಪೂರ್ಣಗೊಳ್ಳುವವರೆಗೆ ವಿಮೆ ಹಣವನ್ನು ಬಿಡುಗಡೆ ಮಾಡಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಪೊಲೀಸರು ಸಂದೀಪ್ ಅವರ ಶವವನ್ನು ಹೊರ ತೆಗೆದು ಮರು ಪರಿಶೀಲನೆ ಹಾಗೂ ಮರಣೋತ್ತರ ಪರೀಕ್ಷೆಯ ವರದಿ ಮರು ವಿಮರ್ಶೆ ಮಾಡುವ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಹಂತದಲ್ಲಿ ಪುಂಡಲೀಕ ಡೊಂಬರ್ ಮಾಡಿರುವ ಆರೋಪಗಳು ಕೇವಲ ಅವರ ವೈಯಕ್ತಿಕ ಹೇಳಿಕೆಗಳಾಗಿದ್ದು, ಅವುಗಳನ್ನು ಪೊಲೀಸ್ ತನಿಖೆ ಅಥವಾ ನ್ಯಾಯಾಲಯ ಇನ್ನೂ ದೃಢೀಕರಿಸಿಲ್ಲ. ಪ್ರಕರಣದ ನಿಜಾಂಶವು ಪೊಲೀಸ್ ತನಿಖೆ, ವೈದ್ಯಕೀಯ ವರದಿಗಳು ಹಾಗೂ ನ್ಯಾಯಾಂಗ ಪ್ರಕ್ರಿಯೆ ಪೂರ್ಣಗೊಂಡ ನಂತರವೇ ಸ್ಪಷ್ಟವಾಗಲಿದೆ.

ಹೀಗಾಗಿ, ಪ್ರಕರಣ ತನಿಖೆಯ ಹಂತದಲ್ಲಿರುವುದರಿಂದ ಸಂಬಂಧಿತ ವ್ಯಕ್ತಿಗಳನ್ನು ಈಗಲೇ ತಪ್ಪಿತಸ್ಥರೆಂದು ನಿರ್ಧರಿಸುವುದು ಸೂಕ್ತವಲ್ಲ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬಹುಕೋಟಿ ಹಣ ವಂಚನೆ ಪ್ರಕರಣ ನೀಲಣ್ಣವರಗೆ ಷರತ್ತುಬದ್ಧ ಜಾಮೀನು

ಬೆಳಗಾವಿ: ಹೂಡಿಕೆದಾರರಿಗೆ ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಸುಮಾರು 4,500 ಕೋಟಿ ರೂಪಾಯಿ ವಂಚನೆ ನಡೆಸಿದ ಆರೋಪ ಎದುರಿಸುತ್ತಿರುವ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮಾಲೀಕ ಶಿವಾನಂದ ನೀಲಣ್ಣವರ ಅವರಿಗೆ ಬೆಂಗಳೂರಿನ 93ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿದ ನ್ಯಾಯಾಲಯವು ಆರೋಪಿಗೆ ಕಠಿಣ ಷರತ್ತುಗಳನ್ನು ವಿಧಿಸಿದೆ. 3 ಲಕ್ಷ ರೂ.ಗಳ ವೈಯಕ್ತಿಕ ಬಾಂಡ್ ಸಲ್ಲಿಸುವುದರ ಜೊತೆಗೆ ಯಾವುದೇ ಕಾರಣಕ್ಕೂ ದೇಶ ತೊರೆಯಬಾರದು ಎಂಬ ಷರತ್ತಿನ ಮೇರೆಗೆ ಜಾಮೀನು ನೀಡಲಾಗಿದೆ.

ಪ್ರಸ್ತುತ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಿವಾನಂದ ನೀಲಣ್ಣವರ, ಜಾಮೀನು ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಸೋಮವಾರ ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ಹಿನ್ನೆಲೆ: ಆರೋಪದ ಪ್ರಕಾರ, ಶಿವಾನಂದ ನೀಲಣ್ಣವರ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮೂಲಕ, ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸೆಬಿಯಿಂದ ಅಗತ್ಯ ಅನುಮೋದನೆ ಅಥವಾ ಪರವಾನಗಿ ಪಡೆಯದೇ ಕಾನೂನು ಬಾಹಿರ ಹಣಕಾಸು ಚಟುವಟಿಕೆ ನಡೆಸುತ್ತಿದ್ದರು. ಸಾರ್ವಜನಿಕರಿಗೆ ಹೆಚ್ಚಿನ ಬಡ್ಡಿದರದ ಭರವಸೆ ನೀಡಿ ಸಾವಿರಾರು ಹೂಡಿಕೆದಾರರಿಂದ ಸುಮಾರು 4,500 ಕೋಟಿ ರೂ. ಸಂಗ್ರಹಿಸಿ ವಂಚನೆ ಎಸಗಿರುವ ಆರೋಪ ಕೇಳಿಬಂದಿದೆ.

ಈ ಸಂಬಂಧ ದಾಖಲಾಗಿದ್ದ ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿದ್ದರು. ಇದೀಗ ನ್ಯಾಯಾಲಯ ಜಾಮೀನು ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಪ್ರಕರಣ ಮತ್ತೊಮ್ಮೆ ಸಾರ್ವಜನಿಕರ ಗಮನ ಸೆಳೆದಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	6001	6001
ಕಡಲೆಕಾಳು	550	5911
ಉದ್ದಿನಕಾಳು	1700	7211
ಒಣ ಮೆಣಸಿನಕಾಯಿ	5316	52200
ಅವರೇಕಾಯಿ	6925	6925
ಹೆಸರುಕಾಳು	1500	6211
ನೆಲಗಡಲೆ (ಶೇಂಗಾ)	4269	7600
ಹುರುಳಿ ಕಾಳು	4126	4126
ಜೋಳ	2101	3419
ಮೆಕ್ಕೆಜೋಳ	2039	2039
ಮಡಿಕೆ (ಮಟಕಿ)	1310	15808
ಈರುಳ್ಳಿ	500	2200
ಆಲೂಗಡ್ಡೆ	1400	1800
ಕುಸುಬೆ	5206	5206
ಸೋಯಾಬಿನ್	1125	7046
ತೊಗರಿ	3569	3569
ಗೋಧಿ	2159	3720

ಭಾನುವಾರದ ಪಂದ್ಯಗಳು

- ಹೈತಿ–ಸ್ಕಾಟ್ಲೆಂಡ್(ಬೆಳಗ್ಗೆ 6:30)
- ಆಸ್ಟ್ರೇಲಿಯಾ–ಟರ್ಕಿ(ಬೆಳಗ್ಗೆ 9:30)
- ಜರ್ಮನಿ–ಕುರಾಕೋ(10:30)

ಕಿರುಸುದ್ದಿ

ಸಂಚಲನ ಮೂಡಿಸಿದ ಮತ್ತೊಬ್ಬ ಸೂರ್ಯವಂಶಿ

ಹೊಸದಿಲ್ಲಿ: 15 ವರ್ಷದ ವೈಭವ್ ಸೂರ್ಯವಂಶಿ ಹಿಂದೆಯೇ ಮತ್ತೊಬ್ಬ ಬಾಲ ಕ್ರಿಕೆಟಿಗ ದೇಶದ ಚಿತ್ತ ಕದಿಯುವುದಕ್ಕೆ ಶುರು ಮಾಡಿದ್ದು, ವೈಭವ್ ಸಹೋದರ 10 ವರ್ಷದ ಆರ್ಶೀವಾದ್ ಸೂರ್ಯವಂಶಿ ಬಿಹಾರದ ಸ್ಥಳೀಯ ಕ್ಲಬ್ ಕ್ರಿಕೆಟ್ ಕೂಟದಲ್ಲಿ ಶತಕ ಬಾರಿಸಿದ್ದಾನೆ. ವಿಶ್ವ ಕ್ರಿಕೆಟ್ ನಿಬ್ಬೆರಗಾಗುವಂತೆ ಬ್ಯಾಟಿಂಗ್ ಮಾಡುತ್ತಿರುವ ವೈಭವ್ ಸೂರ್ಯವಂಶಿ ದಾಖಲೆಗಳನ್ನು ಬರೆಯುತ್ತಿದ್ದಾರೆ. ಈ ನಡುವೆಯೇ 10 ವರ್ಷದ ಆರ್ಶೀವಾದ್ ಸ್ಥಳೀಯ ಕ್ರಿಕೆಟ್ ಪಂದ್ಯವೊಂದರಲ್ಲಿ 87 ಎಸೆತಗಳನ್ನು ಎದುರಿಸಿ 103 ರನ್ ಬಾರಿಸಿದ್ದಾನೆ. ಅದರಲ್ಲಿ 20 ಬೌಂಡರಿಗಳು ಮತ್ತು 1 ಸಿಕ್ಸರ್ ಸೇರಿದೆ. ಈ ಬಗ್ಗೆ ವೈಭವ್ ಸೂರ್ಯವಂಶಿಯೇ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಶುಭಾಶಯಗಳನ್ನು ತಿಳಿಸಿದ್ದಾರೆ.



ವೈಭವ್ ಸಹೋದರ ಶತಕ

ಭಾರತ ತಂಡಕ್ಕೆ ಹುಬ್ಬಳ್ಳಿಯ ಅವಿನಾಶ್ ಮ್ಯಾನೇಜರ್

ಬೆಂಗಳೂರು: ಹುಬ್ಬಳ್ಳಿ ಮೂಲದ ಮಾಜಿ ವಿಕೆಟ್ ಕೀಪರ್–ಬ್ಯಾಟರ್ ಅವಿನಾಶ್ ವೈದ್ಯ ಅವರು ಐರ್ಲೆಂಡ್ ಮತ್ತು ಇಂಗ್ಲೆಂಡ್ ಟಿ20 ಸರಣಿಗಳಿಗೆ ಭಾರತ ತಂಡದ ಮ್ಯಾನೇಜರ್ ಆಗಿ ನೇಮಕಗೊಂಡಿದ್ದಾರೆ. ಜೂನ್ 26ರಿಂದ 28ರ ವರೆಗೆ ಐರ್ಲೆಂಡ್ ಸರಣಿ ನಡೆಯಲಿದ್ದರೆ, ಜುಲೈ 1ರಿಂದ 11ರವರೆಗೆ ಇಂಗ್ಲೆಂಡ್ ವಿರುದ್ಧ ಟಿ20 ಸರಣಿ ನಡೆಯಲಿದೆ. ಇದೇ ಪಂದ್ಯಗಳಿಗೆ ಭಾರತ ತಂಡಕ್ಕೆ ಮ್ಯಾನೇಜರ್ ಆಗಿ ನೇಮಕಗೊಂಡಿದ್ದಾರೆ. ಈ ಹಿಂದೆ ವೈದ್ಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಳಿತಾಧಿಕಾರಿಯಾಗಿ ಕಾಣಿಸಿಕೊಂಡಿದ್ದರು. ಇದಲ್ಲದೆ ಸದ್ಯ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನಿರ್ವಾಹಕ ಆಡಳಿತಗಾರರಾಗ್ಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಆಟಗಾರರಾಗಿದ್ದಾಗ ಅವರು ಭಾರತ ಎ ತಂಡದಲ್ಲಿ ಆಡಿದ್ದರು. ಬೋರ್ಡ್ ಪ್ರೆಸಿಡೆಂಟ್ ಮತ್ತು ದಕ್ಷಿಣ ವಲಯದಲ್ಲೂ ಆಡಿದ್ದಾರೆ. ಇದಲ್ಲದೆ ರಣಜಿಯಲ್ಲೂ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದಾರೆ.

ಪಿ. ವಿ. ಸಿಂಧುಗೆ ನಿರಾಸೆ

ಸಿಡ್ನಿ: ಆಸ್ಟ್ರೇಲಿಯನ್ ಓಪನ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ಪಿ. ವಿ. ಸಿಂಧು ಸೋತ ನಂತರ ಭಾರತದ ಅಭಿಯಾನ ಶನಿವಾರ ಅಂತ್ಯಗೊಂಡಿತು. ಪದಕ ಗೆಲುವಿನ ಹತ್ತಿರಕ್ಕೆ ತಲುಪಿದ್ದ ಸಿಂಧು ಉಪಾಂತ್ಯ ಪಂದ್ಯದಲ್ಲಿ ಜಪಾನ್‌ನ ಯಮಾಗುಚಿ ಅವರನ್ನು ಎದುರಿಸಿದ್ದರು. ಪಂದ್ಯಾವಳಿಯುದ್ದಕ್ಕೂ ತಮ್ಮ ಕರಾರುವಾಕ್ ಪ್ರದರ್ಶನ ನೀಡಿದ್ದ ಸಿಂಧು ಸೆಮಿನಲ್ಲಿ ಮೊದಲಿನಿಂದಲೂ ಹಿನ್ನಡೆ ಅನುಭವಿಸಿದರು. ಮೊದಲನೇ ಸೆಟ್‌ನಲ್ಲಿ ಸಿಂಧು ಕಠಿಣ ಸ್ಪರ್ಧೆ ಮಾಡಿದರೂ 22–20 ರಿಂದ ಯಮಾಗುಚಿ ಗೆದ್ದರು. ಎರಡನೇ ಸೆಟ್‌ನಲ್ಲಿ ಸಿಂಧು ಪ್ರತಿರೋಧಿಸುವ ಪ್ರಯತ್ನ ವಿಫಲವಾಯಿತು. 12 ಅಂಕಗಳಿಸುವಷ್ಟರಲ್ಲಿ ಎದುರಾಳಿ 21 ಅಂಕದೊಂದಿಗೆ ಫೈನಲ್‌ಗೇರಿದರು.

ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್: ಭಾರತ ತಂಡ

ಹೊಸದಿಲ್ಲಿ: ಎರಡು ಬಾರಿಯ ಏಷ್ಯನ್ ಗೇಮ್ಸ್ ಪದಕ ವಿಜೇತ ಪಿ.ವಿ. ಸಿಂಧು ಮತ್ತು ಹಾಲಿ ಚಾಂಪಿಯನ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತೀಯ ಬ್ಯಾಡ್ಮಿಂಟನ್ ತಂಡವನ್ನು ಮುನ್ನಡೆಸಲಿದ್ದಾರೆ. ಭಾರತದ ಬ್ಯಾಡ್ಮಿಂಟನ್ ಅಸೋಸಿಯೇಷನ್ (ಬಿಎಐ) ಆಯ್ಕೆ ಸಮಿತಿಯು ಮೇ 26, 2026 ರವರೆಗೆ ಬಿಡಬ್ಲ್ಯುಎಫ್ ಶ್ರೇಯಾಂಕಗಳ ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿನ ಇತ್ತೀಚಿನ ಪ್ರದರ್ಶನಗಳನ್ನು ಪರಿಶೀಲಿಸಿದ ನಂತರ ತಂಡವನ್ನು ಅಂತಿಮಗೊಳಿಸಿದೆ. ಭಾರತದ ಅಗ್ರ ಶ್ರೇಯಾಂಕಿತ ಪುರುಷರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ನೇತೃತ್ವದಲ್ಲಿ, ತಂಡವು ಅನುಭವಿ ಎಚ್.ಎಸ್. ಪ್ರಣಯ್ ಮತ್ತು ಕಿಡಂಬಿ ಶ್ರೀಕಾಂತ್ ಅವರನ್ನು ಸಹ ಒಳಗೊಂಡಿದೆ. ಹಿಂದಿನ ಆವೃತ್ತಿಯಲ್ಲಿ ಭಾರತದ ಐತಿಹಾಸಿಕ ಪುರುಷರ ತಂಡದ ಬೆಳ್ಳಿ ಪದಕ ಅಭಿಯಾನದ ಭಾಗವಾಗಿದೆ.

ಪಂದ್ಯದ ಸ್ವಾರಸ್ಯ

- ಅಮೆರಿಕದಿಂದ ವಿಶ್ವಕಪ್ ಪಂದ್ಯದಲ್ಲಿ ಮೊದಲ ಬಾರಿಗೆ 4 ಗೋಲ್
- ಮೊದಲಾರ್ಧದಲ್ಲೇ 3–0 ಮುನ್ನಡೆ ಸಾಧಿಸಿದ ಅಮೆರಿಕದ ಐತಿಹಾಸಿಕ ಸಾಧನೆ

9 70,492 ಪ್ರೇಕ್ಷಕರ ಹಾಜರಿ



ಫೋಲರಿನ್ ಹೀರೋ

- 2 ಗೋಲು
- ವಿಶ್ವಕಪ್ ಚೊಚ್ಚಲ ಪಂದ್ಯದಲ್ಲೇ ದ್ವಿಗೋಲು
- ಅಮೆರಿಕದ ಗೆಲುವಿನ ಪ್ರಮುಖ ರೂವಾರಿ
- 1930ರ ಬಳಿಕ ವಿಶ್ವಕಪ್‌ನಲ್ಲಿ ಅಮೆರಿಕ ಆಟಗಾರನೊಬ್ಬ ದಾಖಲಿಸಿದ ಮೊದಲ ದ್ವಿಗೋಲು ಸಾಧನೆ

ಯಾವಾಗ ಗೋಲು?

- ಅಮೆರಿಕ 4-1 ಪರಾಗ್ವೆ
- 7ನೇ ನಿಮಿಷ: ಡಾಮಿಯನ್ ಬೊಬಡಿಲ್ಲಾ (ಅಮೆರಿಕ)
- 31ನೇ ನಿಮಿಷ: ಫೋಲರಿನ್ ಬಲೋಗನ್(ಅಮೆರಿಕ)
- 45+5ನೇ ನಿಮಿಷ: ಫೋಲರಿನ್ ಬಲೋಗನ್ (ಅಮೆರಿಕ)
- ಎರಡನೇ ಅರ್ಧ: ಮೌರಿಸಿಯೊ (ಪರಾಗ್ವೆ)
- 90+ ನಿಮಿಷ ಜಿಯೋ ರೇನಾ(ಅಮೆರಿಕ)

ಪರಾಗ್ವೆ ವಿರುದ್ಧ 4–1 ಜಯ | ಬಲೋಗನ್ ದ್ವಿಗೋಲು
ಕೆನಡಾ–ಬೋಸ್ನಿಯಾ–ಹರ್ಜೆಗೋವಿನಾ ಪಂದ್ಯ ಡ್ರಾ

ಅಮೆರಿಕ ಅಬ್ಬರ

ಲಾಸ್ ಏಂಜಲೀಸ್: ಗೋಲಿನ ಮಳೆ ಸುರಿಸಿದ ಅಮೆರಿಕನ್ನರು 32 ವರ್ಷಗಳ ಬಳಿಕ ತವರಿನಲ್ಲಿ ಆಡಿದ ಪ್ರತಿಷ್ಠಿತ ಫಿಫಾ ವಿಶ್ವಕಪ್ ಪಂದ್ಯಾವಳಿಯ ಪಂದ್ಯದಲ್ಲಿ ಪರಾಗ್ವೆ ವಿರುದ್ಧ 4–1 ಗೋಲುಗಳ ಭರ್ಜರಿ ಗೆಲುವು ದಾಖಲಿಸಿದೆ. ಇಂಗಲ್‌ವುಡ್‌ನ ಸೋಫೈ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಫೋಲರಿನ್ ಬಲೋಗನ್ ಎರಡು ಗೋಲು ಬಾರಿಸಿ ಗೆಲುವಿನ ಹೀರೋ ಅನಿಸಿಕೊಂಡರು. ದಿನದ ಮತ್ತೊಂದು ಪಂದ್ಯದಲ್ಲಿ ಆತಿಥ್ಯ ಕೆನಡಾ ದಾಖಲೆಯ ಮೊದಲ ಅಂಕ ಗಳಿಸಿತು. ತಡರಾತ್ರಿ ನಡೆದ ಪಂದ್ಯದಲ್ಲಿ ಕೆನಡಾ ತಂಡವು ಬೋಸ್ನಿಯಾ–ಹರ್ಜೆಗೋವಿನಾ ವಿರುದ್ಧ 1–1 ಡ್ರಾ ಸಾಧಿಸಿದೆ. ಇದು ಈ ಬಾರಿಯ ವಿಶ್ವಕಪ್‌ನ ಮೊದಲನೇ ಡ್ರಾ ಆಗಿದೆ. ಲಾರಿ ಗೋಲ್ ಕೆನಡಾ ತಂಡದ ಇತಿಹಾಸವನ್ನು ರೂಪಿಸಿದೆ.

ಅಮೆರಿಕ ಅಬ್ಬರ: ಬೆಳಗ್ಗೆ ನಡೆದ ಪಂದ್ಯದಲ್ಲಿ ಅಮೆರಿಕ ಮೊದಲಾರ್ಧದಲ್ಲೇ ಮೂರು ಗೋಲುಗಳ ಮುನ್ನಡೆ ಸಾಧಿಸಿ ಪಂದ್ಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಪಂದ್ಯದ 7ನೇ ನಿಮಿಷದಲ್ಲಿ ಪರಾಗ್ವೆಯ ಡಾಮಿಯನ್ ಬೊಬಡಿಲ್ಲಾ ದಾಖಲಿಸಿದ ಗೋಲಿನೊಂದಿಗೆ ಅಮೆರಿಕ ಖಾತೆ ತೆರೆಯಿತು. ಬಳಿಕ 31ನೇ ನಿಮಿಷದಲ್ಲಿ ಬಲೋಗನ್ ಗೋಲು ಬಾರಿಸಿದರೆ, ಮೊದಲಾರ್ಧದ ಹೆಚ್ಚುವರಿ ವೇಳೆಯಲ್ಲಿ ಮತ್ತೊಮ್ಮೆ ಗುರಿ ತಲುಪಿ ತಂಡದ ಮುನ್ನಡೆಯನ್ನು 3–0ಕ್ಕೆ ಏರಿಸಿದರು. ಎರಡನೇ ಅರ್ಧದಲ್ಲಿ ಪರಾಗ್ವೆಯ ಮೌರಿಸಿಯೊ ಒಂದು ಗೋಲು ಗಳಿಸಿ ಅಂತರ ಕಡಿಮೆ ಮಾಡಿದರೂ, ಹೆಚ್ಚುವರಿ ವೇಳೆಯಲ್ಲಿ ಜಿಯೋ ರೇನಾ ಗೋಲು ಬಾರಿಸಿ ಅಮೆರಿಕದ ಗೆಲುವಿಗೆ ಮುದ್ರೆ ಹಾಕಿದರು.



ಅತಿ ಹೆಚ್ಚು ಗೋಲ್‌ಗಳ ಮುನ್ನಡೆ

3 ಗೋಲ್‌ಗಳ ಮುನ್ನಡೆ ಸಾಧಿಸಿದ ಅಮೆರಿಕ ಇತಿಹಾಸದಲ್ಲೇ ಎಂದೂ ಆಡದ ಶ್ರೇಷ್ಠ ಆಟ ಪ್ರದರ್ಶಿಸಿದೆ. ಅಂದರೆ ಫಿಫಾ ವಿಶ್ವಕಪ್‌ನಲ್ಲಿ ಹಿಂದೆಂದೂ ಅಮೆರಿಕ ಮೂರು ಗೋಲುಗಳ ಮುನ್ನಡೆ ಸಾಧಿಸಿರಲಿಲ್ಲ. ಅದೂ ಕೂಡ ಮೊದಲಾರ್ಧದಲ್ಲೇ ಮಾಡಿದ ಸಾಧನೆ ದಾಖಲೆ ನಿರ್ಮಿಸಿದೆ. ಇದಲ್ಲದೆ ವಿಶ್ವಕಪ್ ಪಂದ್ಯವೊಂದರಲ್ಲಿ ಮೊದಲ ಬಾರಿಗೆ 4 ಗೋಲುಗಳನ್ನು ಬಾರಿಸಿದೆ. ಹಲವು ಬಾರಿ 3 ಗೋಲುಗಳನ್ನು ಗಳಿಸಿದ್ದರೂ ಅಮೆರಿಕ ಒಂದೇ ಪಂದ್ಯದಲ್ಲಿ 4 ಗೋಲ್ ಬಾರಿಸಿರಲಿಲ್ಲ.

ಕೆನಡಾಗೆ ಐತಿಹಾಸಿಕ ಮೊದಲ ಅಂಕ

ಲಾರಿನ್ ಗೋಲು | ವಿಶ್ವಕಪ್ ಇತಿಹಾಸದಲ್ಲಿ ಆತಿಥೇಯರಿಂದ ಎರಡನೇ ಗೋಲು

ಆತಿಥೇಯ ಕೆನಡಾ, ಬೋಸ್ನಿಯಾ–ಹರ್ಜೆಗೋವಿನಾ ವಿರುದ್ಧ 1–1 ಗೋಲುಗಳ ಡ್ರಾ ಸಾಧಿಸಿ ವಿಶ್ವಕಪ್ ಇತಿಹಾಸದಲ್ಲಿ ತವರಿನಲ್ಲಿ ಮೊದಲ ಅಂಕ ಗಳಿಸಿದ ಸಂಭ್ರಮ ಆಚರಿಸಿತು.

ಟೊರಾಂಟೊದಲ್ಲಿನ ಸಿಎನ್ ಟವರ್ ಸಮೀಪ ನಡೆದ ಪಂದ್ಯದಲ್ಲಿ ಬೋಸ್ನಿಯಾ–ಹರ್ಜೆಗೋವಿನಾ ಆರಂಭದಲ್ಲೇ ಮುನ್ನಡೆ ಸಾಧಿಸಿತು. 21ನೇ ನಿಮಿಷದಲ್ಲಿ ಜೋವೊ ಲುಕಿಚ್ ಕಾರ್ನರ್ ಕಿಕ್‌ನಿಂದ ಬಂದ ಚೆಂಡನ್ನು ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿ ತಂಡಕ್ಕೆ 1–0 ಮುನ್ನಡೆ ತಂದುಕೊಟ್ಟರು. ಹಿನ್ನಡೆಯಲ್ಲಿದ್ದ ಕೆನಡಾ ಸಮಬಲಕ್ಕಾಗಿ ನಿರಂತರ ಹೋರಾಟ ನಡೆಸಿತು. ಪಂದ್ಯದ 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದ ಕೈಲ್ ಲಾರಿನ್ ಕೇವಲ ಎರಡು ನಿಮಿಷಗಳಲ್ಲೇ ಪರಿಣಾಮ ಬೀರಿದರು. 78ನೇ ನಿಮಿಷದಲ್ಲಿ ಪ್ರಾಮಿಸ್ ಡೇವಿಡ್ ನೀಡಿದ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ಕೆನಡಾಗೆ ಸಮಬಲ ತಂದುಕೊಟ್ಟರು. ಮುಂದಿನ ಪಂದ್ಯದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ.

ಕೆನಡಾಗೆ ಐತಿಹಾಸಿಕ ಎರಡನೇ ಗೋಲ್: ಕೆನಡಾ ಪರ ವಿಶ್ವಕಪ್ ಇತಿಹಾಸದಲ್ಲಿ ಇದು ಕೇವಲ ಎರಡನೇ ಗೋಲಾಗಿದ್ದು, ನಾಲ್ಕು ವರ್ಷಗಳ ಹಿಂದೆ ಕತಾರ್ ವಿಶ್ವಕಪ್‌ನಲ್ಲಿ ಅಲ್ಫೋನ್ಸೊ ಡೇವಿಸ್ ದಾಖಲಿಸಿದ್ದ ಮೊದಲ ಗೋಲಿನ ಬಳಿಕ ಮತ್ತೊಂದು ಮಹತ್ವದ ಕ್ಷಣವಾಗಿ ದಾಖಲಾಯಿತು. ಅಲ್ಲದೆ ಆತಿಥ್ಯ ವಹಿಸುತ್ತಿರುವ ಕೆನಡಾ ತವರಿನ ಅಭಿಮಾನಿಗಳ ಮುಂದೆ ಮೊದಲ ಗೋಲು ಬಾರಿಸಿದ್ದಲ್ಲದೆ ಮೊದಲ ಅಂಕ ಪಡೆದು ಸಂಭ್ರಮಿಸಿದೆ.



ಅಂಕಿ–ಅಂಶಗಳು

- ವಿಶ್ವಕಪ್‌ನಲ್ಲಿ ಕೆನಡಾದ ಮೂರನೇ ಭಾಗವಹಿಸುವಿಕೆ
- ತವರಿನಲ್ಲಿ ಆಡಿದ ಮೊದಲ ವಿಶ್ವಕಪ್ ಪಂದ್ಯ
- ಕೆನಡಾ ಪರ ವಿಶ್ವಕಪ್ ಇತಿಹಾಸದ ಎರಡನೇ ಗೋಲು
- ಜೋವೊ ಲುಕಿಚ್‌ಗೆ ಇದು ಅಂತಾರಾಷ್ಟ್ರೀಯ ವೃತ್ತಿಜೀವನದ ಮೊದಲ ಗೋಲು

ಮುಖ್ಯಾಂಶ

- ಕೆನಡಾ 1–1 ಬೋಸ್ನಿಯಾ-ಹರ್ಜೆಗೋವಿನಾ
- 21ನೇ ನಿಮಿಷ: ಜೋವೊ ಲುಕಿಚ್ (ಬೋಸ್ನಿಯಾ-ಹರ್ಜೆಗೋವಿನಾ)
- 78ನೇ ನಿಮಿಷ: ಕೈಲ್ ಲಾರಿನ್ (ಕೆನಡಾ)
- ವಿಶ್ವಕಪ್‌ನಲ್ಲಿ ತವರಿನಲ್ಲಿ ಕೆನಡಾದ ಮೊದಲ ಅಂಕ
- ಬದಲಿ ಆಟಗಾರನಾಗಿ ಬಂದ ಲಾರಿನ್ ಎರಡು ನಿಮಿಷದಲ್ಲೇ ಗೋಲು

ಇಂದು ಭಾರತ–ಪಾಕಿಸ್ತಾನ ಪಂದ್ಯ

ಬರ್ಮಿಂಗ್ಹ್ಯಾಮ್: ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯ ಹೈ–ವೋಲ್ಟೇಜ್ ಕದನದಲ್ಲಿ ಭಾನುವಾರದಂದು ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪ್ರತಿಷ್ಠಿತ ಪಂದ್ಯಾವಳಿಗೆ ಕಿಕ್‌ಆಫ್ ಸಿಕ್ಕಿದೆ.

ಗುಂಪು ಹಂತದ ತಮ್ಮ ಮೊದಲನೇ ಪಂದ್ಯದಲ್ಲೇ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿರುವುದು ಕುತೂಹಲ ಮೂಡಿಸಿದೆ. ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂಧಾನ, ಶೆಫಾಲಿ ವರ್ಮಾ ಸೇರಿದಂತೆ ಪ್ರಮುಖ ಆಟಗಾರ್ತಿಯರು ಭಾರತ ತಂಡವನ್ನು ಬಲಿಷ್ಠಗೊಳಿಸಿದ್ದಾರೆ. ಮಹಿಳೆಯರ ಕ್ರಿಕೆಟ್‌ನಲ್ಲಿ ಭಾರತದೊಂದಿಗೆ ತೀರಾ ಹಿನ್ನಡೆ ಅನುಭವಿಸಿ ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಪಾಕಿಸ್ತಾನಕ್ಕೆ ಸೋಲದಿರುವುದೇ ದೊಡ್ಡ ಸವಾಲಾಗಿದೆ. ಬರ್ಮಿಂಗ್ಹ್ಯಾಮ್‌ನಲ್ಲಿ ಪಂದ್ಯ ನಡೆಯಲಿದೆ.

ಭಾರತಕ್ಕೆ ಆತ್ಮವಿಶ್ವಾಸ: ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದಿರುವ ಭಾರತೀಯ ಮಹಿಳಾ ತಂಡವು ವಿಶ್ವಾಸದೊಂದಿಗೆ ಟಿ20 ವಿಶ್ವಕಪ್‌ಗೆ ಬಂದಿದೆ. ಅನುಭವ ಮತ್ತು ಕೌಶಲ್ಯಗಳಿಂದ ಕೂಡಿರುವ ತಂಡದಲ್ಲಿ ಬ್ಯಾಟಿಗರ ದಂಡು ಮತ್ತು ಬೌಲರ್‌ಗಳ ಅಬ್ಬರವೇ ಇದೆ. ಸ್ಮೃತಿ ಮಂಧಾನ, ಹರ್ಮನ್‌ಪ್ರೀತ್ ಕೌರ್ ಕ್ಲಾಸ್ ಬ್ಯಾಟಿಗರಾದರೆ ಶೆಫಾಲಿ ವರ್ಮಾ, ರಾಡ್ರಿಗ್ಸ್, ರಿಚಾ ಘೋಷ್ ಸೇರಿದಂತೆ ವಿವಿಧ ಬ್ಯಾಟರ್‌ಗಳು ಸ್ಫೋಟಕ ಬ್ಯಾಟಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಕ್ರಾಂತಿ ಗೌಡ, ರೇಣುಕಾ ಠಾಕೂರ್, ಅರುಂಧತಿ ರೆಡ್ಡಿ, ಶ್ರೇಯಾಕಾ ಪಾಟೀಲ್ ಸೇರಿದಂತೆ ಪ್ರಮುಖರಿದ್ದಾರೆ

ಪಾಕ್‌ಗೆ ಸವಾಲು: ಫಾತಿಮಾ ಸನಾ ನೇತೃತ್ವದಲ್ಲಿ ಆಡಲಿರುವ ಪಾಕಿಸ್ತಾನ ತಂಡಕ್ಕೆ ಬ್ಯಾಟಿಂಗ್ ಮತ್ತು ಬೌಲಿಂಗ್ ಸಮತೋಲನೆಯ ಸವಾಲಿರಲಿದೆ. ಹಿಂದಿನ ಪಂದ್ಯಗಳಲ್ಲಿ ಪಾಕಿಸ್ತಾನ ವೈಫಲ್ಯ ಅನುಭವಿಸುತ್ತಾ ಬಂದಿದೆ. ಆಯೇಶಾ ಜಾಫರ್, ಗುಲ್ ಫಿರೋಜಾ, ಇಮ್ರಾನ್ ಜಾವೇದ್ ಬ್ಯಾಟಿಂಗ್ ವಿಭಾಗದಲ್ಲಿದ್ದರೆ, ಬೌಲಿಂಗ್‌ನಲ್ಲಿ ನಶಾರಾ, ಸಾದೀಯಾ, ರಮೀನ್ ಸೇರಿದಂತೆ ಪ್ರಮುಖರಿದ್ದಾರೆ. ಆದರೆ ಪಾಕಿಸ್ತಾನ ತಂಡದಲ್ಲಿ ಸಮತೋಲನೆ ಇರದಿರುವುದೇ ಸವಾಲು. ಮುಖ್ಯವಾಗಿ ಬ್ಯಾಟರ್‌ಗಳು ಲಯದಲ್ಲಿಲ್ಲವಾದರೆ ಬೌಲರ್‌ಗಳು ಭಾರತದ ಪ್ರಮುಖ ಬ್ಯಾಟರ್‌ಗಳನ್ನು ಎದುರಿಸುವ ಸವಾಲಿದೆ.

ಪಿಚ್

ಬರ್ಮಿಂಗ್ಹ್ಯಾಮ್ ಕ್ರೀಡಾಂಗಣದಲ್ಲಿ ಹೆಚ್ಚಿನ ಕ್ರ್ಯಾಕ್ ಇರುವುದು ಬೌಲರ್‌ಗಳಿಗೆ ಸಹಾಯಕವಾಗಿರಲಿದೆ. ಆದಾಗ್ಯೂ ಬೌಂಡರಿಗಳ ದೂರ ಮತ್ತು ಹೆಚ್ಚಿನ ಬೌನ್ಸ್ ಬ್ಯಾಟರ್‌ಗಳಿಗೆ ಅನುವು ಮಾಡಿಕೊಡಲಿದೆ. 200ರನ್ ದಾಟುವುದು ಅಲ್ಪ ಕಠಿಣವೇ ಹೌದು. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ದೊರಕಲಿದೆ.

ಪಂದ್ಯದ ಸಮಯ: ಸಂಜೆ 7:00(ಭಾರತೀಯ ಕಾಲಮಾನ)

ಬಾಂಗ್ಲಾ VS ಕಿವೀಸ್

ವಿಶ್ವಕಪ್ ಪಂದ್ಯಾವಳಿಯ 5ನೇ ಪಂದ್ಯದಲ್ಲಿ ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ತಂಡಗಳು ಎದುರಾಗಲಿದ್ದರೆ, 7ನೇ ಪಂದ್ಯದಲ್ಲಿ ನ್ಯೂಜಿಲೆಂಡ್ ಮತ್ತು ಶ್ರೀಲಂಕಾ ತಂಡಗಳು ಎದುರಾಗಲಿವೆ.

ಆಂಗ್ಲರಿಗೆ ಭರ್ಜರಿ ಗೆಲುವು

ಬರ್ಮಿಂಗ್ಹ್ಯಾಮ್: ವ್ಯಾಟ್ ಹಾಜ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ 200ಕ್ಕೂ ಅಧಿಕ ಸ್ಕೋರ್ ಮಾಡಿದ್ದಲ್ಲದೆ 87 ರನ್‌ಗಳ ದೊಡ್ಡ ಗೆಲುವು ದಾಖಲಿಸಿದೆ.

ಶ್ರೀಲಂಕಾ ವಿರುದ್ಧ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 1 ವಿಕೆಟ್ ಮಾತ್ರ ಕಳೆದುಕೊಂಡು 219 ರನ್ ಗಳಿಸಿತು. ವ್ಯಾಟ್ ಹಾಜ್ ಅಜೇಯ 105 ರನ್ ಬಾರಿಸಿದರು. ಜೋನಸ್ 53 ರನ್ ಗಳಿಸಿದರೆ, ಸೀವರ್ ಬ್ರಂಟ್ 46 ರನ್ ಬಾರಿಸಿದರು. ಗುರಿ ಬೆನ್ನತ್ತಿದ ಶ್ರೀಲಂಕಾ 20 ಓವರ್‌ಗಳಲ್ಲಿ 131 ರನ್‌ಗಳಿಗೆ ಆಲೌಟ್ ಆಯಿತು. ಸಿಲ್ವಾ 39 ರನ್ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ಹೆಚ್ಚಿನ ರನ್ ಗಳಿಸಿರಲಿಲ್ಲ. ಇಂಗ್ಲೆಂಡ್ ಪರ ಕೆಂಪ್ 22 ರನ್‌ಗೆ 4 ವಿಕೆಟ್ ಕಿತ್ತರು.

ಸ್ಕಾಟ್ಲೆಂಡ್ ಶುಭಾರಂಭ: ನಾಯಕಿ ಕ್ಯಾಥ್ರೀನ್ ಬ್ರೇಸ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಗಾರ್ಡನ್, ಫ್ರೇಸರ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಭರ್ಜರಿ ಪ್ರದರ್ಶನ ನೀಡಿರುವ ಸ್ಕಾಟ್ಲೆಂಡ್ ಮಹಿಳಾ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಐರ್ಲೆಂಡ್ ತಂಡವನ್ನು ಮಣಿಸಿದೆ.



ಪಂದ್ಯದಲ್ಲಿ ಟಾಸ್ ಗೆದ್ದ ಸ್ಕಾಟ್ಲೆಂಡ್ ಬ್ಯಾಟಿಂಗ್ ಗಿಳಿಯಿತು. ಕ್ಯಾಥ್ರೀನ್(60) ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ಸರಾಹ್ ಕೂಡ 49 ರನ್ ಬಾರಿಸಿದರು. ಗುರಿ ಬೆನ್ನತ್ತಿದ ಐರ್ಲೆಂಡ್ 121 ರನ್‌ಗಳಿಗೆ ಆಲೌಟ್ ಆಯಿತು. ಅಮಿ ಹಂಟರ್ 39, ಒರ್ಲಾ 33 ರನ್ ಗಳಿಸಿದರು. ಸ್ಕಾಟ್ಲೆಂಡ್ ಪರ ಕ್ರಿಸ್ಟಿ 16/3, ಫ್ರೇಸರ್ 19/3 ವಿಕೆಟ್ ಪಡೆದುಕೊಂಡರು.

ಗಿಲ್ ಆರ್ಭಟಕ್ಕೆ ಅಫ್ಘಾನಿಸ್ತಾನ ತತ್ತರ

ಧರ್ಮಶಾಲಾ: ನಾಯಕ ಶುಭಮನ್ ಗಿಲ್, ಇಶಾನ್ ಕಿಶಾನ್ ಮತ್ತು ಕೆ.ಎಲ್. ರಾಹುಲ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ತಂಡವು ಅಫ್ಘಾನಿಸ್ತಾನದೊಂದಿಗಿನ ಸರಣಿಯ ಮೊದಲನೇ ಪಂದ್ಯದಲ್ಲಿ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ.


ಶನಿವಾರ ನಡೆದ ಮೊದಲ ಏಕದಿನ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಸಮಯಾಭಾವದಿಂದಾಗಿ ಪಂದ್ಯವನ್ನು 25 ಓವರ್‌ಗೆ ಇಳಿಸಲಾಗಿತ್ತು. ಬ್ಯಾಟಿಂಗ್‌ಗಿಳಿದ ಅಫ್ಘಾನಿಸ್ತಾನ ಪರ ರೆಹಮತ್ತುಲ್ಲಾ ಗುರ್ಬಾಜ್ 51 ಬಾಲ್‌ಗಳಲ್ಲಿ 102 ರನ್ ಬಾರಿಸಿದರು. ಇನ್ನುಳಿದ ಬ್ಯಾಟರ್‌ಗಳು ಹೇಳಿಕೊಳ್ಳುವ ಪ್ರದರ್ಶನ ನೀಡದ ನಿಟ್ಟಿನಲ್ಲಿ ಆಫ್ಘನ್ನರು 194 ರನ್‌ಗಳಿಗೆ ಆಲೌಟ್ ಆದರು. ಭಾರತ ಪರ ಪದಾರ್ಪಣೆ ಮಾಡಿದ ಗುರ್ನೂರ್ 3, ಹರ್ಷ ದುಬೆ 3 ವಿಕೆಟ್ ಪಡೆದು ಗಮನ ಸೆಳೆದರು. ಗುರಿ ಬೆನ್ನತ್ತಿದ ಭಾರತ ರೋಹಿತ್ ಶರ್ಮ(16), ಗಿಲ್(84*) ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆಯಿತು. ಮೂರನೇ ಕ್ರಮಾಂಕದಲ್ಲಿ ಕಿಶನ್(34) ರನ್‌ಗಳಿಸಿ ಪಂದ್ಯದ ತಿರುವು ಬದಲಿಸಿದರು. ಉಳಿದ ರನ್‌ಗಳನ್ನು ಗಿಲ್ ಮತ್ತು ಕೆ.ಎಲ್. ರಾಹುಲ್(39*) ಗಳಿಸಿ ಪಂದ್ಯ ಗೆಲ್ಲಿಸಿದರು. ಭಾರತ 22.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿ ಪಂದ್ಯ ಗೆದ್ದಿತು.



ಗುರ್ಬಾಜ್ ಶತಕದ ಹೋರಾಟ: ಟಾಸ್ ಗೆದ್ದ ಭಾರತ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ನಿಗದಿತ 25 ಓವರ್‌ಗಳಲ್ಲಿ ಟಿ20ಯಂತೆ ಬ್ಯಾಟಿಂಗ್ ಶುರು ಮಾಡಿದ ರೆಹತ್ತುಲ್ಲಾ ಗುರ್ಬಾಜ್ ಅಬ್ಬರದ ಶತಕ ಬಾರಿಸಿದರು. ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದೆ ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಿದ ಅವರು, 8 ಬೌಂಡರಿ, 8 ಸಿಕ್ಸರ್ ಬಾರಿಸಿ 51 ಬಾಲ್‌ಗಳಲ್ಲಿ 102 ರನ್ ಬಾರಿಸಿದರು. ಅವರಿಗೆ ಮಧ್ಯಮ ಕ್ರಮಾಂಕದಲ್ಲಿ ನಾಯಕ ಶಹಿದಿ ಮತ್ತು ಓಮರ್ಝೈ ಸಾಥ್ ಕೊಟ್ಟರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6014

6013 ಉತ್ತರ

ಎಡದಿಂದ ಬಲಕ್ಕೆ:
1.ಅನುಗ್ರಹ 3.ಮಕರಂದ
5.ಸುನೇರಿ 6.ನಗ
8.ರಜನೀಶ 10.ಅವನತಿ
12.ಜಲ 14.ಕಬ್ಬಿಲ
15.ತತ್ಪರತೆ 16.ಗಣಾಧೀಶ

ಮೇಲಿನಿಂದ ಕೆಳಕ್ಕೆ:
1.ಅಧ್ಯಾಪನ 2.ಹಸುತನ
3.ಮರಿ 4.ದಶಮಾಂಶ
7.ಗಡವ 9.ನೀರಜ
10.ಅವ್ಯಾಹತ
11.ಕಟ್ಟೋಲಗ
13.ಲವಲೇಶ 14.ಕತೆ

ಎಡದಿಂದ ಬಲಕ್ಕೆ
1.ಮೊದಲು ಹುಟ್ಟಿದ–ವಂಶದ ಮೂಲಪುರುಷ (3)
3.ಹಿಮಾಲಯದ ಉಪಸರಣಿಯಾದ ಶ್ವೇತಪರ್ವತ (5)
5.ಕಣಿಯ ನಡುವೆ ಶ್ರೇಷ್ಠವಾದುದಿದೆ (3)
6.ತಾತ್ಕಾಲಿಕ ಅಧಿಕಾರವನ್ನು ಹೀಗೆನ್ನಬಹುದು (3)
7.ಸೊಕ್ಕಿದ ಆನೆಯಂಥಹ ದುರ್ಗದ ಪಾಳೆಯಗಾರ (4)
9.ದೇವರ ತೇರು ಸಾಗುವ ಹಾದಿ (4)
12.ಅಗಲ ಬಾಯಿಯ ದುಂಡನೆಯ ಪಾತ್ರೆ (3)
13.ಇದು ಉತ್ತಮವಾದ ಅರಿವು (3)
15.ಕಲೆಯ ಸೌಂದರ್ಯ,ತತ್ವ, ಕೌಶಲಗಳನ್ನು ತಿಳಿದವನು (5)
16.ಆಯುರ್ವೇದದಲ್ಲಿ ಲೋಳೆಸರದ ಹೆಸರು (3)

ಮೇಲಿನಿಂದ ಕೆಳಕ್ಕೆ
1.ವಾಕ್ಯ ಪೂರ್ಣಗೊಳಿಸಲು ಬಳಸುವ ಚಿಹ್ನೆ (5)
2.ಮಿಥಿಲಾ ನಗರಿಯ ರಾಜ (3)
3. ಭೂಮಿಯ ಮಗಳೆಂದು ನಂಬಲಾದ ಸೀತೆ (4)
4.ಕೆಟ್ಟದ್ದನ್ನು ಪುನಃ ಬಳಸುವ ಸ್ಥಿತಿಗೆ ತರುವುದು (3)
6.ಶಿವನ ಗಣ, ಪರಿಚಾರಕರ ಹೆಸರು (3)
8.ಕಲೆಯ ನಡುವೆ ಆಜ್ಞಾಪತ್ರವಿದೆ (3)
10.ರಾಜರ ಕಾಲದ ಮುಖ್ಯಮಂತ್ರಿಪದವಿ (5)
11.ನವಜಾತ ಶಿಶು–ಪುಟ್ಟಮಗುವಿದು (4)
12.ಕಾತುರತೆ,ತೀವ್ರವಾದ ಇಚ್ಛೆಯಿದು (3)
14.ನೋವು ಸಂಕಟದಿಂದ ಧ್ವನಿ ಮಾಡುವುದು (3)

ಕಿರುಸುದ್ದಿ

ಅತ್ತಿಕಟ್ಟಿ ಗ್ರಾಮಕ್ಕೆ ಬಸ್



• **ಮುಂಡರಗಿ:** ತಾಲೂಕಿನ ಡಂಬಳ ಹೋಬಳಿಯ ಅತ್ತಿಕಟ್ಟಿ ಗ್ರಾಮಕ್ಕೆ ಗದಗ ನಗರದಿಂದ ಪ್ರತಿದಿನ ಬೆಳಗ್ಗೆ 10 ಗಂಟೆಗೆ ಹೊರಟು ಕದಾಂಪುರ, ಡೋಣಿ, ಡೋಣಿ ತಾಂಡ ಮಾರ್ಗವಾಗಿ ಅತ್ತಿಕಟ್ಟಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಹೊಸ ಬಸ್ ಸೇವೆಗೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಬಸ್ ಗ್ರಾಮಕ್ಕೆ ಆಗಮಿಸಿದ ಸಂದರ್ಭದಲ್ಲಿ ಮುಂಡರಗಿ ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ರಾಮಣ್ಣ ಮೇಗಲಮನಿ ಅವರು ಬಸ್‌ಗೆ ಪೂಜೆ ಸಲ್ಲಿಸಿ ಸ್ವಾಗತಿಸಿ ಮಾತನಾಡಿ, ಅವರು ಗ್ರಾಮೀಣ ಭಾಗದ ಜನರಿಗೆ ಸುಲಭ ಸಂಚಾರ ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ ರೋಣ ಮತಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲರ ಮತ್ತು ಗದಗ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ ಅವರ ಸಹಕಾರದ ಮೇರೆಗೆ ಈ ಬಸ್ ಸೇವೆ ಆರಂಭವಾಗಿರುವುದು ಸಂತಸದ ವಿಷಯವಾಗಿದೆ. ವಿದ್ಯಾರ್ಥಿಗಳು, ರೈತರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ಗದಗ ನಗರಕ್ಕೆ ತೆರಳಲು ಅನುಕೂಲಕರವಾಗಲಿದೆ ಎಂದರು. ಹಾಲನಗೌಡ ಪಾಟೀಲ, ನಿಂಗಪ್ಪ ಮಳ್ಳಣ್ಣವರ, ನಿಂಗಪ್ಪ ಮೂಲಿಮನಿ, ಕೆಂಚಪ್ಪ ಪೀಕಿ, ಹನಮಪ್ಪ ಗೋಡಿ, ಶೇಕಪ್ಪ ಗುಡ್ಡದ, ಸಿದ್ದನಗೌಡ್ರ ಜಾಯನಗೌಡರ, ಸಿದ್ದಪ್ಪ ಕಿತ್ತಲಮನಿ, ಹನಮಪ್ಪ ಯಲಿಸೂರ, ಥಾವರೇಪ್ಪ ನಾಯಕ, ಪರಸಪ್ಪ ಪೀಕಿ, ನಿಂಗಪ್ಪ ಕಲ್ಯಾಣದವರ, ಪರಸಪ್ಪ ಹರಕೇರಿ ಉಪಸ್ಥಿತರಿದ್ದರು.

ಸಾಮಾನ್ಯ ಸಭೆ ಇಂದು

• **ಗದಗ:** ನಗರದ ಮುಳಗುಂದ ನಾಕಾ ಬಳಿಯ ಕುಮಾರೇಶ್ವರ ಧಾರ್ಮಿಕ ಪಾಠಶಾಲೆಯಲ್ಲಿ ಅಖಿಲ ಭಾರತ ಜಂಗಮ ಸೇವಾ ಸಮಿತಿಯಿಂದ ಸಾಮಾನ್ಯ ಸಭೆ ಜೂ.14ರಂದು ಬೆಳಗ್ಗೆ 11.30ಕ್ಕೆ ಜರುಗಲಿದೆ. ಸಭೆಯಲ್ಲಿ ಸಮಿತಿಯ ಸಾಮಾನ್ಯ ಸದಸ್ಯರನ್ನು ನೇಮಕ ಮಾಡುವುದು, ಪದಾಧಿಕಾರಿಗಳನ್ನು ಆಯ್ಕೆ ಮಾಡುವುದು ಸೇರಿ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಗುವುದು. ಸಮಿತಿ ಅಧ್ಯಕ್ಷ ಪ್ರಭಯ್ಯ ದಂಡಾವತಿಮಠ ಅಧ್ಯಕ್ಷತೆ ವಹಿಸುವರು. ಅದ್ದರಿಂದ ಸರ್ವ ಜಂಗಮ ಸಮಾಜದ ಗುರುಗಳು, ಹಿರಿಯರು, ಮಹಿಳಾ ಪ್ರತಿನಿಧಿಗಳು, ಸಮಾಜದ ಪ್ರಮುಖರು ಹಾಗೂ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕು ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ತೋಟಯ್ಯ ಗುಡ್ಡಿಮಠ ತಿಳಿಸಿದ್ದಾರೆ.

ಜೂ.16ಕ್ಕೆ ಮಹಾ ಮಂಗಲೋತ್ಸವ

• **ನರಗುಂದ:** ರಾಮದುರ್ಗ ತಾಲೂಕಿನ ಕಲ್ಲೂರ ಸುಕ್ಷೇತ್ರ ಸಿದ್ದೇಶ್ವರ ದೇವಸ್ಥಾನದಲ್ಲಿ ತಾಲೂಕಿನ ಶಿರೋಳ ಹಾಗೂ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ 31 ದಿನಗಳ ಪರ್ಯಂತರ ಲೋಕ ಕಲ್ಯಾಣಾರ್ಥವಾಗಿ 17ನೇ ವರ್ಷದ ಮೌನಲಿಂಗಾನುಷ್ಠಾನವನ್ನು ಕೈಗೊಂಡಿದ್ದಾರೆ. ಇದರ ಮಹಾ ಮಂಗಲೋತ್ಸವ ಸಮಾರಂಭವು ಜೂ.16ರ ಬೆಳಗ್ಗೆ 10.30ಕ್ಕೆ ಸಿದ್ದೇಶ್ವರ ದೇವಸ್ಥಾನದಲ್ಲಿ ಜರುಗಲಿದೆ.

ಸಮಾರಂಭದಲ್ಲಿ ಎಡೆಯೂರು ತೋಂಟದಾರ್ಯ ಸಂಸ್ಥಾನಮಠ ಡಂಬಳ- ಗದಗನ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಮುಳ್ಳೂರ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ಚಿಪ್ಪಲಕಟ್ಟಿ ಬ್ರಹನ್ಮಠದ ಸಿದ್ದಲಿಂಗ ಸ್ವಾಮೀಜಿ, ರಾಮದುರ್ಗ ಶಿವಮೂರ್ತೇಶ್ವರಮಠದ ಶಾಂತವೀರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಸಿದ್ದೇಶ್ವರ ದೇವಸ್ಥಾನ ಸಮಗ್ರ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಚಂದ್ರಶೇಖರ ಮಟ್ಟಿ ವಹಿಸುವರು. ಅತಿಥಿಗಳಾಗಿ ಸವಣೂರಿನ ಖ್ಯಾತ ಉದ್ಯಮಿ ಬಸವರಾಜ ಗುರುಸಿದ್ದಪ್ಪ ಸಿಂಧೂರ, ಪ್ರೊ. ಶಶಿಧರ ತೋಡಕರ, ಬಸವರಾಜ ಚಿಕ್ಕಮಠ, ಸುರೇಶ ಸಿದ್ದಪ್ಪ ಪೂಜಾರ ಉಪಸ್ಥಿತರಿರುವರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	4639-6057
ಉದ್ದಿನಕಾಳು	3044-5612
ಧನಿಯಾ	9919-11029
ಅಲಸಂದೆ	1417-5666
ಒಣ ಮೆಣಸಿನಕಾಯಿ	3300-32199
ಹೆಸರುಕಾಳು	1812-7147
ಶೇಂಗಾ	1800-7810
ಹುರುಳಿಕಾಳು	3769-4194
ಬೆಲ್ಲ	5666-5666
ಜೋಳ	1693-4833
ಮೆಕ್ಕೆಜೋಳ	1619-1619
ಸಾಸುವೆ	4943-5129
ಕುಸುಬೆ	1169-5200
ಸೂರ್ಯಕಾಂತಿ	7007-7219
ತೊಗರಿ	5644-5644
ಗೋಧಿ	1439-4989



ಶಿರಹಟ್ಟಿ: ಪಟ್ಟಣದ ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಭಾರತೀಯ ಸೇನೆಯ ಅಗ್ನಿವೀರ ವಿಭಾಗಕ್ಕೆ ಆಯ್ಕೆಯಾಗಿದ್ದು, ಅವರನ್ನು ಸನ್ಮಾನಿಸಲಾಯಿತು. ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿ ಚೆನ್ನವೀರ ಮಲ್ಲಿಗವಾಡ ಮತ್ತು ಬಿ.ಕಾಂ. ದ್ವಿತೀಯ ವರ್ಷದ ವಿದ್ಯಾರ್ಥಿ ಅನ್ವರ ಮಂಜಲಾಪುರ ಅವರನ್ನು ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ ಅರಹುಣಸಿ ಹಾಗೂ ಉಪನ್ಯಾಸಕ ವೃಂದ, ಸಿ.ಡಿ.ಸಿ. ಅಧ್ಯಕ್ಷರು, ಸದಸ್ಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಶೈಕ್ಷಣಿಕ ಲೋಕಕ್ಕೆ ಕಾಲಿಟ್ಟ ಪುಟಾಣಿಗಳು

• **ಗಜೇಂದ್ರಗಡ:** ಸೈನಿಕ ನಗರದ ಹತ್ತಿರವಿರುವ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ಪುಟ್ಟ ಮಕ್ಕಳಿಗಾಗಿ ಸಂಭ್ರಮ ಹಾಗೂ ಸಾಂಪ್ರದಾಯಿಕವಾಗಿ ಅಕ್ಷರಾಭ್ಯಾಸ (ವಿದ್ಯಾರಂಭ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲಾ ಆವರಣದಲ್ಲಿ ಜ್ಞಾನದೇವತೆ ಸರಸ್ವತಿ ದೇವಿಯ ಭಾವಚಿತ್ರಕ್ಕೆ ವಿಶೇಷ ಪೂಜೆ ಹಾಗೂ ಮಂತ್ರಘೋಷಗಳೊಂದಿಗೆ ಅರ್ಚನೆ ಮಾಡಲಾಯಿತು. ಸ್ಥಳೀಯ ವರಸಿದ್ದಿ ವಿನಾಯಕ ದೇಗುಲದ ಪ್ರಧಾನ ಅರ್ಚಕ ಶ್ರೀನಿವಾಸ ತೈಲಂಗ ಕಾರ್ಯಕ್ರಮದ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿಕೊಟ್ಟರು. ನಂತರ ಪೋಷಕರ ಸಮ್ಮುಖದಲ್ಲಿ ಪುಟಾಣಿಗಳ ಕೈಹಿಡಿದು, ತಟ್ಟೆಯಲ್ಲಿ ಹರಡಿದ್ದ ಅಕ್ಕಿಯ ಮೇಲೆ ಪ್ರಣವ ಮಂತ್ರ ಹಾಗೂ ಅಕ್ಷರಗಳನ್ನು ಬರೆಸುವ ಮೂಲಕ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿ, ಶೈಕ್ಷಣಿಕ ಪಯಣಕ್ಕೆ ಮಂಗಲಾರ್ಪಣೆ ಮಾಡಿದರು. ಸಂಸ್ಥೆಯ ಅಧ್ಯಕ್ಷ ಸೀತಲ ಓಲೇಕಾರ ಮಾತನಾಡಿ, ಅಕ್ಷರಾಭ್ಯಾಸ ಎನ್ನುವುದು ಮಗುವಿನ ಜ್ಞಾನದ ಕಣ್ಣನ್ನು ತೆರೆಸುವ ಅತ್ಯಂತ ಪವಿತ್ರವಾದ ಸಂಸ್ಕಾರವಾಗಿದೆ. ಮಗುವಿನ ಮೊದಲ ಹೆಜ್ಜೆಯೇ ಸಂಸ್ಕಾರಯುತವಾಗಿದ್ದರೆ ಅವರ ಭವಿಷ್ಯ ಉಜ್ವಲವಾಗಿರುತ್ತದೆ ಎಂದರು. ಸಂಸ್ಥೆಯ ಕಾರ್ಯದರ್ಶಿ ನಾಜೀಯಾ ಮುದಗಲ್ ಮಾತನಾಡಿ, ಪೂರ್ವ ಪ್ರಾಥಮಿಕ ಹಂತವು ಮಕ್ಕಳ ಶೈಕ್ಷಣಿಕ ಜೀವನದ ಭದ್ರ ಬುನಾದಿಯಾಗಿದೆ. ಪೋಷಕರು ಮತ್ತು ಶಿಕ್ಷಕರು ಜಂಟಿಯಾಗಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಶ್ರಮಿಸಬೇಕು ಎಂದರು. ಕಿರಣ ನಿಡಗುಂದಿ, ಸಂಗಮೇಶ ರೇವಡಿ, ತವಸೀನಬಾನು ಕರ್ನಾಚಿ, ಬಂಡಿಹಾಳ, ನಸ್ರೀನ ಮುಧೋಳ,ಕೀರ್ತನಾ ಬಂಡಿಹಾಳ, ರವಿ ನಿಡಗುಂದಿ, ರಮೇಶ ಲಕ್ಕಲಕಟ್ಟಿ, ಶಾಂತಮ್ಮ ಮುದುಟಗಿಮಠ, ಶಾಂತಾ ಇತರರಿದ್ದರು.



ಗಜೇಂದ್ರಗಡ: ನಗರ ಸಮೀಪದ ಸೈನಿಕ ನಗರದ ಹತ್ತಿರವಿರುವ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ಪುಟ್ಟ ಮಕ್ಕಳಿಗಾಗಿ ಸಂಭ್ರಮ ಹಾಗೂ ಸಾಂಪ್ರದಾಯಿಕವಾಗಿ ಅಕ್ಷರಾಭ್ಯಾಸ (ವಿದ್ಯಾರಂಭ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಶಿಕ್ಷಕ ವೃಂದದವರು ವಿದ್ಯಾರ್ಥಿಗಳಿಗೆ ಸಿಹಿ ಹಂಚಿ, ಪ್ರೀತಿಯಿಂದ ಶಾಲಾ ವಾತಾವರಣಕ್ಕೆ ಬರಮಾಡಿಕೊಂಡರು.

ಹೆಸರು ಬೆಳೆಗೆ ರಸ ಹೀರುವ ಕೀಟಗಳ ಬಾಧೆ | ರೈತರಲ್ಲಿ ಆತಂಕ

ರೋಗ ಹತೋಟಿಗೆ ಕ್ರಮ ಅವಶ್ಯ



▸ ಶಿವಲಿಂಗಯ್ಯ ಹೊತಗಿಮಠ

• **ಲಕ್ಷ್ಮೇಶ್ವರ:** ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆ ಹೆಸರು ಮುಂಗಾರು ಹಂಗಾಮಿನ ಬೆಳೆಯಾಗಿದ್ದು ಇದು 70 ರಿಂದ 75 ದಿನಗಳಲ್ಲಿ ಕೊಯ್ಲಿಗೆ ಬರುವ ಒಂದು ಪ್ರಮುಖ ಬೆಳೆಯಾಗಿದೆ. ಲಾಭ ಸಿಗುವ ಬೆಳೆಯಾಗಿದೆ. ಹಾಗಾಗಿ ಮುಂಗಾರಿನಲ್ಲಿ ಬೆಳೆಯಲು ಸೂಕ್ತವಾದ ಬೆಳೆ. ಆದರೆ ಈಗ ಹೆಸರು ಬೆಳೆಗೆ ರಸ ಹೀರುವ ಕೀಟಗಳ ಬಾಧೆ ಕಾಡುತ್ತಿದ್ದು ರೈತರನ್ನು ಚಿಂತೆಗೀಡುಮಾಡಿದೆ.

ರಸ ಹಿರುವ ಕೀಟಗಳ ಬಾದೆ ವೈರಸ್ ಆಗಿದ್ದು, ಒಂದರಿಂದ ಒಂದು ಹೊಲಕ್ಕೆ ಹರುಡುತ್ತದೆ. ಮೊದಲೇ ರೈತರು ಸಾಲ ಶೂಲ ಮಾಡಿ ಬೀಜ ಗೊಬ್ಬರಗಳನ್ನು ತಂದು ಬೆಳೆದಿರುತ್ತಾರೆ. ಅಂಥವುದರಲ್ಲಿ ಇದರಿಂದ ರೈತರಿಗೆ ಎಲ್ಲಿ ಬೆಳೆ ಕೈ ಕೊಡುತ್ತದೆಯೋ ಎಂಬ ಆತಂಕ ಕಾಡುತ್ತಿದೆ.

ಜಿಪಿಎಸ್ ಕಡ್ಡಾಯ

ಪ್ರತಿಯೊಂದು ಬೆಳೆಯ ಬಗ್ಗೆ ರೈತರು ಕೃಷಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು, ವಿಜ್ಞಾನಿಗಳನ್ನು ಭೇಟಿ ಮಾಡಿ ಅವರು ಕೊಟ್ಟ ಸಲಹೆ ಅನುಸರಿಸಬೇಕು. ಇಲಾಖೆಯ ಜೊತೆ ರೈತರು ನಿರಂತರ ಸಂಪರ್ಕ ಇರಬೇಕು. ರೋಗ ಹತೋಟಿಗೆ ಇಲಾಖೆಯ ಸೂಚನೆ ಪಾಲಿಸಬೇಕು. ಅಧಿಕಾರಿಗಳು ಜಮೀನಿಗೆ ಭೇಟಿ ಕೊಡಬೇಕು. ಬಿತ್ತಿದ ಬೆಳೆಗಳನ್ನು ರೈತರು ಕಡ್ಡಾಯವಾಗಿ ಜಿಪಿಎಸ್ ಮಾಡಿಕೊಳ್ಳಬೇಕು. ಅತಿವೃಷ್ಟಿ, ಅನಾವೃಷ್ಟಿ ಮತ್ತು ಬೆಳೆವಿಮಾ ಮತ್ತು ಸರ್ಕಾರದ ಬೆಂಬಲ ಬೆಲೆ ಮಾರಾಟ ಮಾಡಲು ಉಪಯೋಗವಾಗುತ್ತದೆ. ಬೆಳೆ ಪರಿಹಾರ ಪಡೆಯಲು ಅನುಕೂಲವಾಗುತ್ತದೆ ಎಂದು ಕೃಷಿಕ ಸಮಾಜದ (ನವದಳಿ) ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷ ಚನ್ನಪ್ಪ ಷಣ್ಮುಖಿ ಹೇಳಿದರು.



ದಿಗಂತ ವಿಶೇಷ

- ತಾಲೂಕಿನಲ್ಲಿ 5100 ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ
- ಮುಂಗಾರು ಮಳೆ ಕೈಕೊಟ್ಟಿದ್ದರಿಂದ 2005 ಹೆಕ್ಟೇರ್ ಅಷ್ಟೇ ಬಿತ್ತನೆ
- ಈಗಿರುವ ಹೆಸರು 20 ರಿಂದ 25 ದಿನ ಬೆಳೆಯಲ್ಲಿಯೆ ರಸ ಹೀರುವ ಕೀಟಗಳ ಬಾಧೆ ಬೆಳೆಯ ಬೆಳವಣಿಗೆ ಕುಂಠಿತ
- ಸಮಯಕ್ಕೆ ತಕ್ಕಂತೆ ಬೆಳೆಯ ಅನುಗುಣವಾಗಿ ರೋಗ ಹತೋಟಿಗೆ ಕ್ರಮ ಕೈಗೊಳ್ಳಲಿ
- ಇದನ್ನ ಹತೋಟಿ ತರಲು ಆಗದಿದ್ದರೆ ಮುಂಬರುವ ದಿನಗಳಲ್ಲಿ ಹಳದಿ ನಂಜಾಣು ರೋಗ ಕಾಡುತ್ತದೆ ಎಂಬುದು ಕೃಷಿ ತಜ್ಞರ ಅಭಿಪ್ರಾಯ

"ಸದ್ಯ ಹೆಸರು ಬೆಳೆಗೆ ರಸ ಹೀರುವ ಕೀಟಗಳ ಬಾಧಿಸುತ್ತಿರುವ ಜಮೀನುಗಳಿಗೆ ಭೇಟಿ ನೀಡುತ್ತಿದ್ದೇವೆ. ಅಂತಹ ಲಕ್ಷಣಗಳು ಕಂಡು ಬಂದರೆ ಥಯಾಮೆಥಾಕ್ಸಾಮ್ ಕೆಮಿಕಲ್ಸ್ 5ಎಂಎಲ್ ಗೆ 15 ಲೀಟರ್ ನೀರಿಗೆ ಬೆರಿಸಿ ಸಿಂಪಡನೆ ಅಥವಾ ಅಸಿಟಾಮಪ್ರೈಡ್ 6 ರಿಂದ 8 ಮಿಲಿ ಗ್ರಾಂ 15 ಲೀಟರ ನೀರಿಗೆ ಬೆರಿಸಿ ಸಿಂಪಡಣೆ ಮಾಡಬೇಕು

■ **ಶಿವಕುಮಾರ ಕಾಶಪ್ಪನವರ,** ಸಹಾಯಕ ಕೃಷಿ ನಿರ್ದೇಶಕ, ಶಿರಹಟ್ಟಿ

ಭಾರತದ ಮಾರುಕಟ್ಟೆಯಲ್ಲಿ ದ್ವಿದಳ ಧಾನ್ಯಗಳಿಗೆ ಬೇಡಿಕೆ

• **ಲಕ್ಷ್ಮೇಶ್ವರ:** ತಾಲೂಕಿನ ಸೂರಣಗಿ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಭೂಮಿ ಬಚಾವ್ರೋ ಹಾಗೂ ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರ್ ಅಭಿಯಾನದಡಿ ರೈತರ ಜಾಗೃತಿ ಕಾರ್ಯಕ್ರಮವು ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಕಾರ್ಯಕ್ರಮದ ಉದ್ಘಾಟಿಸಿದ ಚೇತನಾ ಪಾಟೀಲ್ ಮಾತನಾಡಿ, ರೈತರು ತಮ್ಮ ಜಮೀನುಗಳಲ್ಲಿ ನೈಸರ್ಗಿಕ ಮತ್ತು ಸಾವಯವ ಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ರಾಸಾಯನಿ ಗೊಬ್ಬರಗಳ ಬಳಕೆ ಅತೀ ಹೆಚ್ಚು ಪ್ರಮಾಣದಲ್ಲಿ ಬಳಕೆಯಾಗುತ್ತಿದ್ದು, ಇದರಿಂದ ಭೂಮಿತನ್ನ ಫಲವತ್ತತೆಯನ್ನು ಕಳೆದುಕೊಂಡು ಬರಡಾಗುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷ ರೈತರು ಕೆಲವು ಭಾಗವಾದರೂ ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಮೀಸಲಿಡಬೇಕು. ಇದನ್ನು ಒಂದು ಪ್ರಯೋಗ ಶಾಲೆಯನ್ನಾಗಿ ಮಾಡಿ ರೈತರು ರಾಸಾಯನಿಕ ಮುಕ್ತ ಕೃಷಿಗೆ ಮುಂದಾಗಬೇಕು. ಭಾರತದ ಮಾರುಕಟ್ಟೆಯಲ್ಲಿ ದ್ವಿದಳ ಧಾನ್ಯಗಳಿಗೆ ಸಾಕಷ್ಟು ಬೇಡಿಕೆ ಇದ್ದು ರೈತರು ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡಲು ದ್ವಿದಳ ಧಾನ್ಯಗಳನ್ನು ಬೆಳೆಯಬೇಕು ಎಂದರು.

ಕೃಷಿ ಇಲಾಖೆಯ ಉಪನಿರ್ದೇಶಕಿ ಜಿ.ಎಸ್. ಸ್ಫೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿವರ್ಷ ರೈತರು ಬಿತ್ತನೆ ವೇಳೆಯಲ್ಲಿ ಅನೇಕ ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುತ್ತಿರುವ ಪ್ರಮಾಣ ಹೆಚ್ಚಳವಾಗುತ್ತಿದ್ದು, ವರ್ಷದ ಫಸಲು ಉತ್ತಮವಾಗಬೇಕೆನ್ನುವ ನಿಟ್ಟಿನಲ್ಲಿ ರಾಸಾಯನಿಕ ಬಳಕೆ ಹೆಚ್ಚು ಬಳಕೆ ಮಾಡಿ ಭವಿಷ್ಯತ್ತಿನಲ್ಲಿ ಮಣ್ಣಿನ ಸತ್ವವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದೇವೆ ಎನ್ನುವ ಕಲ್ಪನೆ ಎಲ್ಲ ರೈತರಲ್ಲಿ ಬರಬೇಕಾಗಿದೆ. ಅವಶ್ಯಕತೆಗಿಂತ ಹೆಚ್ಚು ಬಳಕೆ ನಿಲ್ಲಿಸಿ ಅದರ ಜೊತೆ ದ್ವಿದಳ ಧಾನ್ಯ ಬೆಳೆಗಳ ಕಡೆ ಗಮನ ಹರಿಸುವಂತೆ ಹೇಳಿದರು.

ಇಪ್ಕೋ ಕಂಪನಿಯ ಕ್ಷೇತ್ರ ಅಧಿಕಾರಿ ಯಕ್ಷಿತ್ ಡಿ.ಎಸ್ ಮಾತನಾಡಿದರು. ವಿಜ್ಞಾನಿಗಳಾದ ಚೇತನ್ ಬಾಬು ಮತ್ತು ಕೃಷಿ ತಂತ್ರಜ್ಞಾನದ ಕುರಿತು ವಿನಾಯಕ ನಿರಂಜನ, ಸುಧಾ ಮಂಕಣಿ ರೈತರಿಗೆ ಉಪಯುಕ್ತ ಸಲಹೆ ನೀಡಿದರು. ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಿವಕುಮಾರ ಕಾಶಪ್ಪನವರ, ಕೃಷಿ ಸಮಾಜದ ಬಸವರಾಜ ಇಟಗಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಶಂಕ್ರಣ್ಣ ಶಿರನಹಳ್ಳಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಶಶಿಕಲಾ ಸಾಸಲವಾಡ, ಉಪಾಧ್ಯಕ್ಷ ಪ್ರಕಾಶ ಕಳ್ಳಿಹಾಳ, ಚನ್ನಪ್ಪ ಶಿರನಹಳ್ಳಿ, ಚಂದ್ರಶೇಖರ ಮೂಲಿಮನಿ ಸೇರಿದಂತೆ ಅನೇಕರಿದ್ದರು. ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಚಂದ್ರಶೇಖರ್ ನರಸಮ್ಮನವರ, ಎಫ್‌ಪಿಒದ ಈರಣ್ಣ ಶಿರನಳ್ಳಿ ನಿರ್ವಹಿಸಿದರು.



ಮೀಸಲಾತಿ ಪ್ರಮಾಣ ಶೇ.56ಕ್ಕೆ ಹೆಚ್ಚಿಸಲು ಆಗ್ರಹ

• **ಗದಗ:** ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅಧಿನಿಯಮ-2022 ಅನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಿ, ಮೀಸಲಾತಿ ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶ್ರಮಿಸಬೇಕು ಎಂದು ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ 101, ಪರಿಶಿಷ್ಟ ಪಂಗಡದಲ್ಲಿ 51 ಉಪಜಾತಿಗಳಿವೆ. ಹಿಂದುಳಿದ ವರ್ಗದವರೂ ಸೇರಿ ರಾಜ್ಯದಲ್ಲಿ ಸುಮಾರು 4 ಕೋಟಿಯಷ್ಟು ಮಂದಿ ಈ ವರ್ಗದವರೇ ಇದ್ದಾರೆ. ಆದರೂ ಮೀಸಲಾತಿ ವಿಚಾರದಲ್ಲಿ ಅನ್ಯಾಯವಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಿಗ್ಗಿಸಿ ಸೂಕ್ತ ಪ್ರಾತಿನಿಧ್ಯ ನೀಡಲು ಸುಪ್ರೀಂಕೋರ್ಟ್ ಸೂಚಿಸಿದೆ. ಈ ಕುರಿತು ರಚನೆಯಾದ ವಿವಿಧ ಆಯೋಗಗಳು ಇದೇ ಶಿಫಾರಸು ಮಾಡಿವೆ. ಮೀಸಲಾತಿ ಕ್ಷೇತ್ರದಿಂದ ಆಯ್ಕೆಯಾದ ಜನಪ್ರತಿನಿಧಿಗಳು ಈ ಬಗ್ಗೆ ಧ್ವನಿ ಎತ್ತಬೇಕು. ಸಾಮಾಜಿಕ ನ್ಯಾಯದ ವಿರೋಧಿಗಳು ಮೀಸಲಾತಿ ಹಿಗ್ಗಿಸುವ ಕುರಿತು ಕೆಟಿ, ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ನ್ಯಾಯಾಲಯ ನೀಡಿದ ತಡೆಯಾಜ್ಞೆ ತೆರವಿಗೆ ರಾಜ್ಯ ಸರ್ಕಾರ ಹೆಚ್ಚಿನ ಪ್ರಯತ್ನ ಮಾಡಬೇಕು. ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಮಂತ್ರಿ ಬಳಿಗೆ ಕೊಂಡೊಯ್ದು 2022ರ ಅಧಿನಿಯಮ ಊರ್ಜಿತಗೊಳಿಸಬೇಕು. ಬೇಡಿಕೆ ಈಡೇರಿಸದಿದ್ದರೆ ದೊಡ್ಡ ಮಟ್ಟದಲ್ಲಿ ಧರಣಿ, ಪತ್ರ ಚಳವಳಿ ನಡೆಸಲಾಗುತ್ತದೆ. ಬೆಂಗಳೂರಿನವರೆಗೆ ರಥಯಾತ್ರೆ, ಬೈಕ್ ರ‍್ಯಾಲಿ ಹಮ್ಮಿಕೊಳ್ಳುವ ಯೋಚನೆಯೂ ಇದೆ ಎಂದರು. ಬಸವರಾಜ ಬೆಳ್ಳಡಿ, ಅನಿಲಕುಮಾರ ಸಿದ್ದಮ್ಮನಹಳ್ಳಿ, ಎಂ. ನರಸಿಂಹಯ್ಯ, ವೆಂಕಟೇಶ ನಾಯಕ ಆಸ್ತಿಹಾಳ್, ಆದಪ್ಪ ಮಾರೆಪ್ಪನವರ, ಬಸವರಾಜ ತಳವಾರ, ಭೀಮಣ್ಣ ತಳವಾರ, ಭೀಮಪ್ಪ ಯಂಗಾಡಿ, ರಾಮಣ್ಣ ಕೋಳಿ, ಗೋವಿಂದಪ್ಪ ಬಾಗೇವಾಡಿ, ವೈ.ಎಫ್. ಸುಗ್ರೇಶ ಇದ್ದರು.

ಎಸ್‌ಟಿ ನಕಲಿ ಪ್ರಮಾಣಪತ್ರ

ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಹೇಳಿಕೆ ನೀಡುತ್ತಾರೆ. ಇದಕ್ಕೆ ಕುಲಶಾಸ್ತ್ರೀಯ ಅಧ್ಯಯನ ಅಗತ್ಯ. ಹೊಸ ಜಾತಿಯನ್ನು ಬೇರೊಂದು ವರ್ಗಕ್ಕೆ ಸೇರ್ಪಡೆ ಮಾಡುವುದಾದರೆ ಮೀಸಲಾತಿ ಪ್ರಮಾಣವನ್ನೂ ಹೆಚ್ಚಿಸಬೇಕು. ವಡ್ಡರು ಜನಾಂಗಕ್ಕೆ ನೀಡಿದ ಪ್ರಾತಿನಿಧ್ಯವನ್ನು ಭೋವಿ ಸಮಾಜಕ್ಕೂ ನೀಡಬೇಕು. ಒಡೆದು ಆಳುವ ಅಥವಾ ಜನಾಂಗವನ್ನೇ ಮುಗಿಸುವ ಸಂಚು ಸರಿಯಲ್ಲ. ವಾಲ್ಮೀಕಿ ಸಮಾಜದ ತಳವಾರ ವರ್ಗದವರು ಎಸ್.ಟಿ ಪ್ರಮಾಣಪತ್ರ ಪಡೆಯಬೇಕಿದ್ದು, ಇತರೆ ಜಾತಿಗಳಲ್ಲಿರುವ ತಳವಾರ ವರ್ಗದವರೂ ಎಸ್.ಟಿ ನಕಲಿ ಪ್ರಮಾಣಪತ್ರ ಪಡೆಯುತ್ತಿದ್ದಾರೆ. ಕಾನೂನುಬದ್ಧವಾಗಿ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾಗಿ ಪ್ರಮಾಣಪತ್ರ ಪಡೆಯಲಿ ಎಂದು ವಿ.ಎಸ್. ಉಗ್ರಪ್ಪ ಹೇಳಿದ್ದಾರೆ.



ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಅಜ್ಜಯ್ಯನವರ ಬಗ್ಗೆ ವ್ಯಂಗ್ಯ ಖಂಡನೀಯ

• **ಲಕ್ಷ್ಮೇಶ್ವರ:** ಮಾಜಿ ಸಿಎಂ ಮತ್ತು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಅಜ್ಜಯ್ಯನವರ (ಲಿ. ವೀರಗಂಗಾಧರ ಜಗದ್ಗುರುಗಳು) ಹೆಸರನ್ನು ವ್ಯಂಗವಾಗಿ ಬಳಸಿದ್ದಾರೆ ಎಂದು ಆರೋಪಿಸಿ ಮಾಜಿ ಶಾಸಕ ಜಿ.ಎಂ ಮಹಾಂತಶೆಟ್ಟರ ತೀವ್ರವಾಗಿ ಖಂಡಿಸಿದ್ದಾರೆ.

ಅವರು ಈ ಕುರಿತು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾನವ ಧರ್ಮಕ್ಕೆ ಜಯವಾಗಲಿ-ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ವಿಶ್ವ ಮಾನವ ಸಂದೇಶ ಸಾರಿದ ಶ್ರೇಷ್ಠ ಜಗದ್ಗುರುಗಳಾದ ಲಿಂ.ವೀರಗಂಗಾಧರರು (ಅಜ್ಜಯ್ಯ) ಯಾರು? ದೇವ ಮಾನವರೇ ಆಗಿದ್ದ ಅವರ ಶ್ರೇಷ್ಠತೆ, ತಪಃ ಶಕ್ತಿ ಬಗ್ಗೆ ಕುಮಾರಸ್ವಾಮಿ ಅವರು ತಿಳಿದುಕೊಂಡು ಮಾತನಾಡಬೇಕು.



ಬಿಡದಿ ಟೌನ್‌ಶಿಪ್ ವಿಚಾರದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ ವೇಳೆ ರೈತರನ್ನು ಒಕ್ಕಲೆಬ್ಬಿಸಿ ಎಂದು ಅಜ್ಜಯ್ಯ ಹೇಳಿದ್ದಾರಾ ? ಎಂದು ಅಜ್ಜಯ್ಯನವರ ಹೆಸರನ್ನು ವ್ಯಂಗ್ಯವಾಗಿ ಬಳಸಿರುವುದು ದೇಶದಾದ್ಯಂತ ಇರುವ ಅವರ ಅಪಾರ ಭಕ್ತರ ಭಾವನೆಗೆ ನೋವಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಬಗ್ಗೆ ಇರುವ ನಿಮ್ಮ ವೈಯಕ್ತಿಕ ದ್ವೇಷ, ರಾಜಕೀಯದಲ್ಲಿ ದೇವರ ಸ್ವರೂಪದಲ್ಲಿ ಪೂಜಿಸುವ ಅಜ್ಜಯ್ಯನವರ ಹೆಸರು ಬಳಸಿದ್ದು ತಪ್ಪು. ಸ್ವತಃ ಕೃಷಿ ಮಾಡಿದ ಅವರು ಮನುಷ್ಯ ಸೇರಿ ಸಕಲ ಜೀವರಾಶಿಗಳ ಕ್ಷೇಮ, ಶ್ರೇಯೋಭಿವೃದ್ಧಿಗಾಗಿ, ಲೋಕ ಕಲ್ಯಾಣಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ. ಅವರ ಹೆಸರನ್ನು ನಿಮ್ಮ ರಾಜಕಾರಣದಲ್ಲಿ ಬಳಸಬೇಡಿ ಇದು ನಿಮ್ಮ ರಾಜಕೀಯ ಭವಿಷ್ಯಕ್ಕೆ ಮುಳುವಾಗಲಿದೆ ಎಂದು ಎಚ್ಚರಿಸಿದ್ದಾರೆ. ಅಜ್ಜಯ್ಯನವರ ಭಕ್ತರಾದ ಚಂಬಣ್ಣ ಬಾಳಿಕಾಯಿ, ಆನಂದ ಮೆಕ್ಕಿ ಕುಬೇರಪ್ಪ ಮಹಾಂತಶೆಟ್ಟರ, ರುದ್ರಮುನಿ ಘಂಟಾಮಠ ಸೇರಿ ಹಲವರಿದ್ದರು.

ಮಕ್ಕಳಿಗೆ ಕಲಿಕಾ ಹಂತದಲ್ಲಿ ಗುಣಮಟ್ಟದ ಶಿಕ್ಷಣ, ಉತ್ತಮ ಸಂಸ್ಕಾರ ನೀಡಿ

• **ಶಿರಹಟ್ಟಿ:** ಮಕ್ಕಳಿಗೆ ಕಲಿಕಾ ಹಂತದಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಸಂಸ್ಕಾರ ನೀಡಬೇಕು. ಚಿಕ್ಕ ವಯಸ್ಸಿನಲ್ಲಿ ಶಾಲೆ ಬಿಡಿಸಿ ದುಡಿಮೆಗೆ ಕಳಿಸುವುದು ತಪ್ಪು, ಶಿಕ್ಷಣದಿಂದ ಯಾವೊಬ್ಬ ಮಗು ವಂಚಿತರಾಗಬಾರದು ಎಂದು ದಿವಾಣಿ ನ್ಯಾಯಾಧೀಶ ಸತೀಶ ಎಂ. ಹೇಳಿದರು.

ಪಟ್ಟಣದ ಸಿ.ಸಿ.ಎನ್. ಸರ್ಕಾರಿ ಪ್ರೌಢ ಶಾಲೆಯಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ಲಕ್ಷ್ಮೇಶ್ವರ, ತಹಶೀಲ್ದಾರ್ ಸಂಘ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆಯವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಬಾಲ್ಯದಲ್ಲಿ ಆಟವಾಡುತ್ತಾ ತನ್ನ ಜೊತೆಗಾರರೊಂದಿಗೆ ಶಾಲೆಗೆ ಹೋಗಿ ಕಲಿಯಬೇಕಾದ ಮಕ್ಕಳು ಹಲವಾರು ಕಾರಣಗಳಿಂದ ಹಾಗೂ ಸಮಸ್ಯೆಗಳಿಂದ ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇದು ಒಂದು ಸಾಮಾಜಿಕ ಪಿಡುಗು. ಕಟ್ಟಡಗಳ ಕೆಲಸಗಳಲ್ಲಿ, ಅಂಗಡಿ ಮಳಿಗೆಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ, ಬೇಕರಿ, ಗ್ಯಾರೇಜ್, ಹೊಟೇಲ್, ಕಾರ್ಖಾನೆಗಳಲ್ಲಿ, ದೊಡ್ಡ ಮನೆಗಳಲ್ಲಿ ಕೆಲಸದಾಳುಗಳಾಗಿ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ತಮ್ಮ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಕ್ಕೆ ಕಷ್ಟವಾಗುವಂಥ ಕೆಲಸಗಳನ್ನು ಮಾಡುತ್ತಿದ್ದಾರೆ. ಬಾಲಕಾರ್ಮಿಕ ಪದ್ಧತಿ ತೊಲಗಿಸಬೇಕು, ಕಡ್ಡಾಯವಾಗಿ ಶಿಕ್ಷಣ ನೀಡಿದಾಗ ಮಾತ್ರ ಸುಸಂಸ್ಕೃತ ಸಮಾಜ ಕಟ್ಟಲು ಸಾಧ್ಯವಾಗುತ್ತದೆ ಎಂದರು.

ತಹಶೀಲ್ದಾರ್ ಕೆ. ರಾಘವೇಂದ್ರರಾವ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಬಾಲಕಾರ್ಮಿಕ ಪದ್ಧತಿಯಲ್ಲಿ ತೊಡಗಿಕೊಂಡಿರುವ ಮಕ್ಕಳನ್ನು ಪುನಃ ಮುಖ್ಯ ವಾಹಿನಿಗೆ ತರಲಾಯಿತು ಮತ್ತು ಶಿಕ್ಷಣದಿಂದ ವಂಚಿತರಾಗದಂತೆ ತಿಳಿಸಿದರು. ಶಿರಹಟ್ಟಿ ಸಹಾಯಕ ಸರ್ಕಾರಿ ಅಭಿಯೋಜಕ ಹೀನಾಕೌಸರ್ ಗಂಜಿಹಾಳ ಬಾಲಕಾರ್ಮಿಕ ನಿಷೇಧದ ಕುರಿತಾಗಿರುವ ಕಾನೂನುಗಳನ್ನು ಹಾಗೂ ಪಿಎಸ್‌ಐ ಈರಪ್ಪ ಎಚ್ ರಿತ್ತಿ ಅವರು ಬಾಲ ಕಾರ್ಮಿಕ ನಿಷೇಧದ ಕುರಿತು ಪೊಲೀಸ್ ಇಲಾಖೆ ಕೈಗೊಳ್ಳುವ ಕ್ರಮಗಳನ್ನು ವಿವರಿಸಿದರು. ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ವಕೀಲರ ಸಂಘ ಉಪಾಧ್ಯಕ್ಷ ಅನಿಲ ಮಾನೆ, ಬಿ.ಎಸ್. ಭಜಂತ್ರಿ, ವೀರನಗೌಡ ಸಿ. ಪೊಲೀಸ್ ಪಾಟೀಲ್, ಎಚ್.ಎಂ. ದೇವಗಿರಿ, ಅಭಿನಂದನ ಖಿವಟಕೊಪ್ಪ, ವೆಂಕಟೇಶ ಗುಡಗುಂಡಿ, ಸುಮಯ್ಯ ಸಯ್ಯದ್, ಎಸ್. ಎಸ್. ಡೊಳ್ಳಿನ ಇದ್ದರು.



ಕೊನೆಗೂ ಬೆಳಕು ಕಂಡ ಎಂಆರ್‌ಬಿಸಿ ಪರಿವೀಕ್ಷಣಾ ಮಂದಿರ

• **ರೋಣ:** ಪಟ್ಟಣದ ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡಿರುವ ಎಂಆರ್‌ಬಿಸಿ ಪರಿವೀಕ್ಷಣಾ ಮಂದಿರದ ಮೂಲಭೂತ ಸೌಲಭ್ಯಗಳಿಂದ ವಂಚಿತಗೊಂಡಿರುವ ಬಗ್ಗೆ ಜೂ.11 ರಂದು ಹೊಸ ದಿಗಂತ ಪತ್ರಿಕೆಯು ಮೂಲಸೌಲಭ್ಯ ವಂಚಿತ ಎಂಆರ್ ಬಿಸಿ ಪರಿವೀಕ್ಷಣಾ ಮಂದಿರ ಎಂಬ ಶೀರ್ಷಿಕೆಯಡಿಯಲ್ಲಿ ವರದಿಯನ್ನು ಪ್ರಕಟಿಸಿತ್ತು. ವರದಿ ಆಲಿಸಿದ ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಪರಿವೀಕ್ಷಣಾ ಮಂದಿರಕ್ಕೆ ವಿದ್ಯುತ್ ಸಂಪರ್ಕ ಒದಗಿಸಲು ಕ್ರಮತೆಗೆದುಕೊಂಡಿದ್ದಾರೆ.

2013ರಲ್ಲಿ ನಿರ್ಮಾಣಗೊಂಡಿದ್ದ ಎಂಆರ್ ಬಿಸಿ ಪರಿವೀಕ್ಷಣಾ ಮಂದಿರುವು ಇತ್ತೀಚಿಗೆ ಮೂಲಭೂತ ಸೌಲಭ್ಯಗಳಿಂದ ವಂಚಿತಗೊಂಡಿತ್ತು. ಅಲ್ಲದೇ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಇದರಿಂದ ವಿಶ್ರಾಂತಿ ಪಡೆಯಲು ಬರುವ ನೌಕರರಿಗೆ ಹಾಗೂ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ತೀವ್ರ ತೊಂದರೆಗಳಾಗುತ್ತಿದ್ದವು. ಈ ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಇದಕ್ಕೆ ಮುಕ್ತಿ ಹಾಡುವ ಉದ್ದೇಶದಿಂದ ಹೊಸ ದಿಗಂತ ಪತ್ರಿಕೆಯಲ್ಲಿ ವಿಸ್ತೃತ ವರದಿಯನ್ನು ಪ್ರಕಟಿಸಲಾಗಿತ್ತು. ವರದಿ ಪ್ರಕಟಗೊಂಡ ನಂತರ ಎಂಆರ್‌ಬಿಸಿ ಪರಿವೀಕ್ಷಣಾ ಮಂದಿರದ ಸಮಸ್ಯೆಗೆ ಶೀಘ್ರ ಸ್ಪಂದಿಸಿದ ಇಲಾಖೆಯ ಅಧಿಕಾರಿಗಳು ಮೊದಲ ಹಂತದಲ್ಲಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮುಂದಾಗಿರುವುದು ವಿಶ್ರಾಂತಿ ಪಡೆಯಲು ಬರುವವರಿಗೆ ಸ್ವಲ್ಪ ಮಟ್ಟಿಗೆ ನೆಮ್ಮದಿ ನೀಡಿದಂತಾಗಿದೆ.

ದಿಗಂತ ವರದಿ ಪರಿಣಾಮ



ಜೂ.11 ರಂದು ಹೊಸ ದಿಗಂತ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ.



ಬಾಲ ಕಾರ್ಮಿಕ ಪದ್ಧತಿ ಸಮಾಜಕ್ಕೆ ಕಳಂಕ

• **ಗಜೇಂದ್ರಗಡ:** ಬಾಲಕಾರ್ಮಿಕ ಪದ್ಧತಿ ಸಮಾಜಕ್ಕೆ ಕಳಂಕವಾಗಿದ್ದು, ಮಕ್ಕಳಿಗೆ ಶಿಕ್ಷಣ, ಆರೋಗ್ಯ ಹಾಗೂ ಸುರಕ್ಷಿತ ಬಾಲ್ಯ ಒದಗಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಗಜೇಂದ್ರಗಡ ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಹೇಳಿದರು.

ನಗರದಲ್ಲಿನ ಪುರಸಭೆ ಆವರಣದಲ್ಲಿ ಆಯೋಜಿಸಿದ್ದ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳನ್ನು ದುಡಿಮೆಗೆ ತಳ್ಳುವುದು ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಪ್ರತಿಯೊಂದು ಮಗು ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದ್ದು, ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಮಾಜದ ಎಲ್ಲ ವರ್ಗಗಳ ಸಹಕಾರ ಅಗತ್ಯ ಎಂದರು.

ರಾಘವೇಂದ್ರ ಮಂತಾ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ, ಪೌಷ್ಟಿಕ ಆಹಾರ ಹಾಗೂ ಸುರಕ್ಷಿತ ವಾತಾವರಣ ಮಕ್ಕಳನ್ನು ದುಡಿಮೆಗೆ ತಳ್ಳುವುದು ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಪೌಷ್ಟಿಕ ಆಹಾರ ಹಾಗೂ ಸುರಕ್ಷಿತ ವಾತಾವರಣ ಒದಗಿಸಿದಾಗ ಮಾತ್ರ ದೇಶದ ಭವಿಷ್ಯ ಉಜ್ವಲವಾಗಲಿದೆ ಎಂದರು. ಮಲ್ಲಿಕಾರ್ಜುನ ಬಿ., ಶಿವಕುಮಾರ ಇಲ್ಲಾಳ, ರಾಘವೇಂದ್ರ ಮಂತಾ, ಜಿ.ಎಸ್.ಪಟ್ಟಣಶೆಟ್ಟಿ, ಸಿ.ಡಿ.ದೊಡ್ಡಮನಿ, ಹನಮಂತಮ್ಮ ನಾಯಕ, ಜೆ.ಎನ್.ಕಾಳೆ, ರಿಯಾಜ ಒಂಟಿ, ಅಜ್ಜಪ್ಪ ನೀಲಿ ಇತರರಿದ್ದರು.



ಅಂಗನವಾಡಿ ಕೇಂದ್ರಗಳ ಪ್ರಾರಂಭೋತ್ಸವ ಕಾರ್ಯಕ್ರಮ

• **ನರಗುಂದ:** ತಾಲೂಕಿನ ಕುರುಗೋವಿನಕೊಪ್ಪ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನೆ ವತಿಯಿಂದ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನಾಗಿ ಆಯ್ಕೆ ಮಾಡಿದ ಅಂಗನವಾಡಿ ಕೇಂದ್ರಗಳ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಪ್ಪ ಗಿರಿತಿಮ್ಮಣ್ಣವರ ಅವರು ಸರಸ್ವತಿ ಪೂಜೆಯೊಂದಿಗೆ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳ ಆರೋಗ್ಯ, ಶಿಕ್ಷಣದ ಜೊತೆಗೆ ಕೇಂದ್ರದಲ್ಲಿ ವಿತರಿಸಲಾಗುವ ಮೊಟ್ಟೆ ಪೂರಕ ಪೌಷ್ಟಿಕ ಆಹಾರ, ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಯೋಜನೆ, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ, ಪೋಷಣ್ ಅಭಿಯಾನ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಮೇಲ್ವಿಚಾರಕಿ ಭಾರತಿ ಕಾಲಚೆಟ್ಟಿ ಮಾತನಾಡಿ, ಸರ್ಕಾರದಿಂದ

ಪ್ರಾರಂಭಿಸಿದ ಈ ಯೋಜನೆಯಲ್ಲಿ ಮಕ್ಕಳ ಮಾನಸಿಕ, ದೈಹಿಕ, ಸಾಮಾಜಿಕ, ಭಾವನಾತ್ಮಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸುವ ಬಗ್ಗೆ ಹಾಗೂ ಟಿ.ವಿ, ವಾಟರ್ ಫೀಲ್ಟರ್ ಇತರೆ ಮೂಲಭೂತ ಸೌಕರ್ಯಗಳನ್ನು ಸರಕಾರದಿಂದ ನೀಡಲಾಗುತ್ತಿದ್ದು ಇದರ ಸದುಪಯೋಗಕ್ಕೆ ಮಕ್ಕಳ ಪಾಲಕರ ಸಹಕಾರ ಅಗತ್ಯ ಎಂದರು.



ವಿಶೇಷವಾಗಿ ಮಕ್ಕಳಿಗೆ ಹೂಗುಚ್ಛ ನೀಡಿ ಹಾಗೂ ಸೆಲ್ಫೀ ಬೂತ್ ಮಾಡಿ ಮಕ್ಕಳ ಫೋಟೋ ಕ್ಲಿಕ್ಕಿಸಿ ಆಕರ್ಷಿಸಲಾಯಿತು. ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರಾದ ಜಿ.ವಿ. ಮೂಗನೂರ, ಆರ್.ವಿ. ಕಮ್ಮಾರ, ಪೋಷಣ್ ಅಭಿಯಾನ ಸಂಯೋಜಕ ಮಂಜುನಾಥ ಗುಗ್ಗರಿ, ಅಬ್ದುಲ್ ತಹಸೀಲ್ದಾರ, ಗ್ರಾಮಸ್ಥರು, ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರು ಭಾಗವಹಿಸಿದ್ದರು. ಶಿವಲೀಲಾ ಹಿರೇಮಠ ವಂದಿಸಿದರು. ಬೇಬಿ ದೊಡ್ಡಮನಿ ಕಾರ್ಯಕ್ರಮ ನಿರೂಪಿಸಿದರು.

ಪ್ರವೇಶಾತಿ ಶುಲ್ಕದಲ್ಲಿ ಗೋಲ್‌ಮಾಲ್ | ತನಿಖೆಗೆ ಹೆಚ್ಚಿದ ಒತ್ತಡ

ಮಹಿಳಾ ವಿವಿ ಸ್ನಾತಕ (ಯುಜಿ) ವಿಭಾಗದಲ್ಲಿ ಭ್ರಷ್ಟಾಚಾರ?

▸ ಪರಶುರಾಮ ಶಿವಶರಣ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿಯ ಸ್ನಾತಕ ವಿಭಾಗದ ವಿದ್ಯಾರ್ಥಿನಿಯರ ಪ್ರವೇಶಾತಿ ಶುಲ್ಕದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಗಂಭೀರ ಆರೋಪ ಕೇಳಿ ಬಂದಿದ್ದು, ಈ ಬಗ್ಗೆ ಉನ್ನತ ತನಿಖೆಗೆ ಆಗ್ರಹ ಕೇಳಿ ಬಂದಿದೆ.

ರಾಜ್ಯ ಸರ್ಕಾರ ಪಾರದರ್ಶಕ ಆಡಳಿತಕ್ಕಾಗಿ ಉನ್ನತ ಶಿಕ್ಷಣ ಇಲಾಖೆ ಯುಯುಸಿಎಂಎಸ್ (ಯುನಿಫೈಡ್ ಯೂನಿವರ್ಸಿಟಿ ಆ್ಯಂಡ್ ಕಾಲೇಜ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ವೆಬ್‌ಸೈಟ್‌ನ್ನು ಸ್ಥಾಪಿಸಿದ್ದು, ತನ್ನ ಎಲ್ಲ ವ್ಯವಹಾರಗಳನ್ನು ಈ ವೆಬ್ ಮೂಲಕ ನಿರ್ವಹಿಸುತ್ತಿದೆ. ಅದರಲ್ಲೂ ವಿದ್ಯಾರ್ಥಿನಿಯರ ಪ್ರವೇಶ ಶುಲ್ಕವನ್ನು ಭರಿಸಿಕೊಳ್ಳಲು ಆನ್‌ಲೈನ್, ಆಫ್‌ಲೈನ್ ವ್ಯವಸ್ಥೆ ಇದ್ದು, ಇದನ್ನೆ ದುರುಪಯೋಗ ಮಾಡಿಕೊಂಡ ಮಹಿಳಾ ವಿವಿಯ ಸ್ನಾತಕ (ಯುಜಿ) ವಿಭಾಗದ ಸಿಬ್ಬಂದಿಗಳು ಲಕ್ಷಾಂತರ ರೂ.ಗಳನ್ನು ದೋಚುತ್ತಿದ್ದಾರೆ ಎನ್ನುವ ಮಾತು ವಿವಿ ಆವರಣದಲ್ಲಿ ಪ್ರತಿಧ್ವನಿಸುವಂತಾಗಿದೆ.

ಆನ್‌ಲೈನ್ ಅಕ್ರಮ: ಪ್ರವೇಶಾತಿ ಶುಲ್ಕವನ್ನು ಭರಿಸಲು ಯುಯುಸಿಎಂಎಸ್ ವೆಬ್‌ಸೈಟ್‌ನಲ್ಲಿನ ಆಫ್‌ಲೈನ್ ಮೂಲಕ ಶುಲ್ಕ ಭರಿಸಲು ಬ್ಯಾಂಕಿನ ಚಲನ್ ಬಳಸಲಾಗುತ್ತದೆ. ಬ್ಯಾಂಕಿಗೆ ಹೋಗಿ ಶುಲ್ಕ ಕಟ್ಟಿ, ಅದರ ರಶೀದಿಯನ್ನು ತಂದು, ವೆಬ್‌ಸೈಟ್‌ನಲ್ಲಿ ಆಯಾ ವಿದ್ಯಾರ್ಥಿನಿಯರ ಸ್ಟೂಡೆಂಟ್ ಪೋರ್ಟಲ್‌ನಲ್ಲಿ ಸಿಬ್ಬಂದಿ ಅಪ್‌ಲೋಡ್ ಮಾಡಿದಾಗ ಒಟ್ಟು ಮೊತ್ತ ಮಾನ್ಯವಾಗಿ, ವಿದ್ಯಾರ್ಥಿನಿಯರ ಪ್ರವೇಶಾತಿ ಖಚಿತವಾಗುತ್ತದೆ.

ಹಾಗೆಯೇ ಆನ್‌ಲೈನ್ ವಿಧಾನದಲ್ಲಿ ಶುಲ್ಕವನ್ನು ಭರಿಸಲು ಇದೇ ವೆಬ್‌ಸೈಟ್ ಮೂಲಕ ಸ್ಟೂಡೆಂಟ್ ಪೋರ್ಟಲ್‌ಗೆ ಹೋಗಿ, ಯುಪಿಐ ವಿಧಾನದ ಮೂಲಕ ಶುಲ್ಕವನು ಭರಿಸಿದಾಗ, ಅಧಿಕೃತ ರಶೀದಿ ದೊರೆಯುತ್ತದೆ. ಒಂದು ವೇಳೆ ತಾಂತ್ರಿಕ ದೋಷದಿಂದ ಶುಲ್ಕ ಸಂದಾಯವಾಗದಿದ್ದರೆ, ಅದರ ಮಾಹಿತಿಯೂ ದೊರೆಯುತ್ತದೆ. ಆದರೆ ಇಲ್ಲಿನ ಸಿಬ್ಬಂದಿಗಳು ಈ ತಂತ್ರಜ್ಞಾನವನ್ನೇ ದುರುಪಯೋಗ ಪಡೆಸಿಕೊಂಡು, ಲಕ್ಷಾಂತರ ರೂ.ಗಳನ್ನು ನುಂಗುತ್ತಿದ್ದಾರೆ ಎನ್ನುವುದು ಚರ್ಚೆಗೆ ಗ್ರಾಸವಾಗಿದೆ.



ದಿಗಂತ ವಿಶೇಷ

ವಿವಿ ಬೊಕ್ಕಸಕ್ಕೆ ಭ್ರಷ್ಟರ ಕನ್ನ: ವಿದ್ಯಾರ್ಥಿನಿಯರು ಪ್ರವೇಶಾತಿ ಶುಲ್ಕವನ್ನು ಭರಿಸಲು ಬಂದಾಗ, ಆಡಳಿತ ವಿಭಾಗದ ಸಿಬ್ಬಂದಿ ತಮ್ಮ ಖಾತೆಗೆ ಹಣ ಭರಿಸಿಕೊಳ್ಳುವುದರ ಜೊತೆಗೆ ನೇರವಾಗಿ ಹಣ ಪಡೆಯುತ್ತಾರೆ. ನಂತರ ವಿದ್ಯಾರ್ಥಿನಿಯರು ಹಾಗೂ ಪಾಲಕರಿಗೆ ಶುಲ್ಕವನ್ನು ಭರಿಸುವುದಾಗಿ ಹೇಳಿ ಸಾಗಹಾಕುತ್ತಾರೆ.

> ವಿಜಯಪುರ ಮಹಿಳಾ ವಿವಿಯ ಸ್ನಾತಕ ವಿಭಾಗದ ಪ್ರವೇಶಾತಿಯಲ್ಲಿನ ಭ್ರಷ್ಟಾಚಾರದ ಆರೋಪದ ಕುರಿತು ಪರಿಶೀಲಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.
> ■ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಪತಿ, ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ, ವಿಜಯಪುರ

ಅಸಲಿಗೆ ಅವರು ಪ್ರವೇಶಾತಿಯ ಹಣವನ್ನು ಬ್ಯಾಂಕಿಗೆ ಕಟ್ಟದೆ, ಹಿಂದಿನ ವಿದ್ಯಾರ್ಥಿನಿಯರ ಆನ್‌ಲೈನ್‌ನಲ್ಲಿ ಶುಲ್ಕ ಭರಿಸಿದ ಫೋನ್ ಪೇ ರಶೀದಿಯನ್ನು ಡೌನ್‌ಲೋಡ್ ಮಾಡಿಕೊಂಡು, ಅದರ ಮೇಲೆ ನಮೂದಾದ ಸಮಯ, ದಿನಾಂಕವನ್ನು ಕ್ರಾಪ್ ಮಾಡಿ, ಬರೀ ಮೊತ್ತವಿರುವ ರಶೀದಿ ಮಾತ್ರ ಅಪ್‌ಲೋಡ್ ಮಾಡಿ, ವಿವಿ ಖಜಾನೆಗೆ ಕನ್ನ ಹಾಕುತ್ತಿದ್ದಾರೆ ಎಂದು ವಿದ್ಯಾರ್ಥಿನಿಯರು ದೂರುತ್ತಿದ್ದಾರೆ.

ವಿಜ್ಞಾನ, ಕಲೆ, ವಾಣಿಜ್ಯ, ವ್ಯವಹಾರ ವಿಭಾಗಕ್ಕೆ ಅಂದಾಜು 5,900, 7,600 ರೂ.ಗಳ ಪ್ರವೇಶಾತಿ ಶುಲ್ಕವಿದ್ದು, ಕಳೆದ ಎರಡು ವರ್ಷಗಳಿಂದ ಈ ಅವ್ಯವಹಾರ ನಡೆಯುತ್ತಿರುವ ಆರೋಪ ಕೇಳಿ ಬರುತ್ತಿದ್ದು, ಇದರಲ್ಲಿ ಬಹುತೇಕ ವಿದ್ಯಾರ್ಥಿನಿಯರ ಲಕ್ಷಾಂತರ ರೂ.ಗಳ ಶುಲ್ಕವನ್ನು ಆಡಳಿತ ಸಿಬ್ಬಂದಿ ನುಂಗಿ ಹಾಕಿರುವುದು ಸ್ಟೂಡೆಂಟ್ ಪೋರ್ಟನಲ್ಲಿ ಬಹಿರಂಗವಾಗುತ್ತಿದ್ದು, ವೆಬ್‌ಸೈಟಿನ ಸ್ಟೂಡೆಂಟ್ ಪೋರ್ಟಲ್‌ನ ಪ್ರವೇಶಾತಿ ರಿಪೋರ್ಟ್ಸ್‌ನಲ್ಲಿ ಇರುವಂತಹ ಅಡ್ಮಿಶನ್ ಪೇಮೆಂಟ್ ಟ್ರಾಂಜೆಕ್ಷನ್ ಹಿಸ್ಟರಿ ಗಮನಿಸಿದಾಗ, ಈ ಭ್ರಷ್ಟಾಚಾರ ನಡೆದಿರುವುದು ಕಂಡು ಬರುತ್ತದೆ ಎನ್ನುವ ಮಾತು ತಿಳಿದು ಬಂದಿದೆ.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿಕೆ

ಜಾಗತಿಕ ಮಟ್ಟದಲ್ಲಿ ಭಾರತ ಮಹತ್ವದ ಸಾಧನೆ

ಹಾವೇರಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ 12 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ದೇಶವು ಜಾಗತಿಕಮಟ್ಟದಲ್ಲಿಮಹತ್ವದಸಾಧನೆಗಳನ್ನು ಮಾಡಿದೆ ಎಂದು ವಿಧಾನ ಪರಿಷತ್ ಸದಸ್ಯ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಭಾರತದ ಪ್ರಧಾನಮಂತ್ರಿ ವಿದೇಶಗಳಿಗೆ ಹೋದರೆ ಸಾಲ ಕೇಳಲು ಹೋಗಿದ್ದಾರೆ ಎಂದು ಟೀಕಿಸಲಾಗುತ್ತಿತ್ತು. ಆದರೆ, ಇಂದು ಭಾರತವು ವಿಶ್ವದ ಎಲ್ಲ ಪ್ರಮುಖ ರಾಷ್ಟ್ರಗಳ ಗೌರವ ಮತ್ತು ಮಾನ್ಯತೆ ಪಡೆದ ದೇಶವಾಗಿ ಬೆಳೆದಿದೆ.

ಹಿಂದೆ ಆಮದು ಆಧಾರಿತ ಆರ್ಥಿಕತೆಯಾಗಿ ಗುರುತಿಸಿಕೊಂಡಿದ್ದ ಭಾರತ, ಈಗ ರಫ್ತು ಆಧಾರಿತ ರಾಷ್ಟ್ರವಾಗಿ ರೂಪುಗೊಂಡಿದೆ. ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಚಂದ್ರಯಾನ ಸೇರಿದಂತೆ ವಿವಿಧ ಯೋಜನೆಗಳ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಗಮನಾರ್ಹ ಸಾಧನೆ ಮಾಡಿದೆ. ಪ್ರಸ್ತುತ ಭಾರತವು 190 ದೇಶಗಳಿಗೆ 7,500ಕ್ಕೂ ಹೆಚ್ಚು ಸರಕುಗಳನ್ನು ರಫ್ತು ಮಾಡುತ್ತಿದೆ ಎಂದು ತಿಳಿಸಿದರು.

ಭಯೋತ್ಪಾದನೆ ಮತ್ತು ನಕ್ಸಲಿಸಂ ವಿರುದ್ಧ ಕೇಂದ್ರ ಸರ್ಕಾರ ಶೂನ್ಯ ಸಹಿಷ್ಣುತೆ (ಜೀರೊ ಟಾಲರೆನ್ಸ್) ನೀತಿಯನ್ನು ಅನುಸರಿಸಿದ್ದು, ಸರ್ಜಿಕಲ್ ಸ್ಟ್ರೈಕ್ ಮೂಲಕ ಭಯೋತ್ಪಾದಕರಿಗೆ ತಕ್ಕ ಪಾಠ ಕಲಿಸಲಾಗಿದೆ. ವಿಶ್ವದಾದ್ಯಂತ ಅಂತಾರಾಷ್ಟ್ರೀಯಯೋಗದಿನಾಚರಣೆಗೆ ಭಾರತವೇ ಪ್ರೇರಣೆಯಾಗಿದ್ದು, ಡಿಜಿಟಲ್ ಹಣ ವರ್ಗಾವಣೆಯಲ್ಲಿ ಭಾರತವು ಅಮೆರಿಕ ಮತ್ತು ಚೀನಾವನ್ನೂ ಹಿಂದಿಕ್ಕಿದೆ. ಭಾರತ ಮತ್ತು ಫ್ರಾನ್ಸ್ ನೇತೃತ್ವದ ಅಂತಾರಾಷ್ಟ್ರೀಯ ಸೋಲಾರ್ ಅಲಯನ್ಸ್‌ಗೆ 120ಕ್ಕೂ ಹೆಚ್ಚು ರಾಷ್ಟ್ರಗಳು ಸದಸ್ಯತ್ವ ಪಡೆದಿವೆ ಎಂದು ತಿಳಿಸಿದರು.



> ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನಯ್ಯ ಅವರು ಹೈಕೋರ್ಟ್ ಎದುರು ಎಲ್ಲ ಸ್ವಾಂತಕಗಳನ್ನು ಬಿಚ್ಚಿಟ್ಟಿದ್ದಾರೆ. ಪ್ರಕಾಶ್ ರಾಜ್ ಸೇರಿದಂತೆ ಯಾರೇ ಆಗಿದ್ದರೂ ಆರೋಪಗಳು ಸಾಬೀತಾದರೆ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು. ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ ಸತ್ಯ ಹೊರಬರಬೇಕು.
> ■ ಎನ್.ರವಿಕುಮಾರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಯುಪಿಎ ಸರ್ಕಾರದ ಅವಧಿಯಲ್ಲಿ ರಕ್ಷಣಾ ಸಾಮಗ್ರಿಗಳ ರಫ್ತು ಸುಮಾರು 6 ಸಾವಿರ ಕೋಟಿ ಇದ್ದರೆ, ಮೋದಿ ಸರ್ಕಾರದ ಅವಧಿಯಲ್ಲಿ ಅದು 36 ಸಾವಿರ ಕೋಟಿಗೆ ಏರಿಕೆಯಾಗಿದೆ. ಕೋವಿಡ್ ಸಂದರ್ಭದಲ್ಲಿ ಭಾರತವು ಅನೇಕ ರಾಷ್ಟ್ರಗಳಿಗೆ ಲಸಿಕೆ ಪೂರೈಕೆ ಮಾಡಿ ಮಾನವೀಯತೆ ಮೆರೆದಿದೆ ಎಂದರು.

ಬೆಂಗಳೂರುಮಹಾನಗರದಅಭಿವೃದ್ಧಿಗೆ ಕೇಂದ್ರ ಸರ್ಕಾರ ವಿಶೇಷ ಒತ್ತು ನೀಡಿದ್ದು, ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸೇರಿದಂತೆ ಹಲವು ಮೂಲಸೌಕರ್ಯ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕರ್ನಾಟಕಕ್ಕೆ ಕೇಂದ್ರದಿಂದ ದೊರೆಯುವ ತೆರಿಗೆ ಪಾಲು ಯುಪಿಎ ಅವಧಿ 81,794 ಕೋಟಿಯಿಂದ ಮೋದಿ ಸರ್ಕಾರದ ಅವಧಿಯಲ್ಲಿ 2,96,730 ಕೋಟಿಗೆ ಏರಿಕೆಯಾಗಿದ್ದು, ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂಬ ಆರೋಪಕ್ಕೆ ಅರ್ಥವಿಲ್ಲ ಎಂದು ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕ ಶಿವರಾಜ ಸಜ್ಜನರ, ಗವಿಸಿದ್ದಪ್ಪ ದ್ಯಾಮಣ್ಣವರ, ಭೋಜರಾಜ ಕರೂದಿ, ನೀಲಪ್ಪ ಚಾವಡಿ, ನಿರಂಜನ ಹೇರೂರ, ನಂಜುಂಡೇಶ ಕಳ್ಳೇರ, ವಿಜಯಕುಮಾರ ಚಿನ್ನಿಕಟ್ಟಿ, ಕರಬಸಪ್ಪ ಹಳದೂರ ಉಪಸ್ಥಿತರಿದ್ದರು.

ಕಿರುಸುದ್ದಿ

ಶ್ರೀಗಳಿಗೆ ಕಾಶಿ ಪೀಠದಿಂದ ತಪೋರತ್ನಂ ಪ್ರಶಸ್ತಿ

ದೇವರಹಿಪ್ಪರಗಿ: ತಾಲೂಕಿನ ಕೋರವಾರ ಗ್ರಾಮದ ಹಿರೇಮಠ ಸಂಸ್ಥಾನದ ಷ.ಬ್ರ ಬಸವಲಿಂಗ ಶಿವಾಚಾರ್ಯರು ತಮ್ಮ ಧಾರ್ಮಿಕ ಆಚರಣೆಗಳ ಮೂಲಕ ಸುಮಾರು 25 ವರ್ಷದ ನಿಸ್ವಾರ್ಥ ರಜತ ಮಹೋತ್ಸವದ ಸಂದರ್ಭದಲ್ಲಿ ಕಾಶಿ ಜ್ಞಾನ ಸಿಂಹಸನ ಪೀಠದ ಪ.ಪೂ ಶ್ರೀ ಶ್ರೀ 1008 ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜಿಗಳು ಹಾಗೂ ಪ.ಪೂ ಶ್ರೀ ಶ್ರೀ ಶ್ರೀ 1008 ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಗಳ ಗೌರವದ ಶುಭ ಆಶೀರ್ವಾದದಿಂದ ತಪೋ ರತ್ನಂ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ. ಸೊಲ್ಲಾಪುರದ ಹೊಟಗಿ ಬೃಹನ್ಮಠದ ಆವರಣದಲ್ಲಿ ಜೂ.14ರಂದು ಜಗದ್ಗುರುಗಳ ಗೌರವದ ಶುಭ ಆಶೀರ್ವಾದದಿಂದ ತಪೋ ರತ್ನಂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವಿಸಲಾಗುವುದು ಎಂದು ಶ್ರೀ ಮಠದಿಂದ ತಿಳಿಸಿದ್ದಾರೆ. ರಜತ ಮಹೋತ್ಸವದ ಸಂದರ್ಭದಲ್ಲಿ ಕಾಶಿ ಜಗದ್ಗುರುಗಳ ಶುಭ ಆಶೀರ್ವಾದಿಂದ ತಪೋರತ್ನ ಪ್ರಶಸ್ತಿಗೆ ಪಾತ್ರರಾಗಿರುವ ಶ್ರೀಗಳಿಗೆ ರಾಜಕೀಯ ಮುಖಂಡರು, ಗಣ್ಯರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಗ್ರಾಮದ ಪ್ರಮುಖರು ಅಭಿನಂದಿಸಿದ್ದಾರೆ.



ರಾಷ್ಟ್ರೀಯ ಯೋಗಾ ಚಾಂಪಿಯನ್‌ಶಿಪ್‌ಗೆ ಶ್ರಾವಣಿ

ರಬಕವಿ-ಬನಹಟ್ಟಿ: ಈಚೆಗೆ ರಾಜ್ಯಮಟ್ಟದಲ್ಲಿ ಸಾಧನೆ ಮಾಡಿ, ಕರ್ನಾಟಕದಿಂದ ಪ್ರತಿನಿಧಿಸಿರುವ ಯೋಗಪಟು ಬನಹಟ್ಟಿಯ ಶ್ರಾವಣಿ ತಮ್ಮಣ್ಣಪ್ಪ ಭದ್ರನ್ನವರ ಬರುವ ಜೂ.26ರಿಂದ 28ರ ವರೆಗೆ ಉತ್ತರಾಖಂಡದಲ್ಲಿ ನಡೆಯುವ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್-2026ರಲ್ಲಿ ಪಾಲ್ಗೊಳ್ಳಲಿದ್ದಾಳೆ. ಪ್ರಸಕ್ತ ಯಲ್ಲಟ್ಟಿಯ ಕೊಣ್ಣೂರ ಆಂಗ್ಲ ಮಾಧ್ಯಮ ಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ 15 ವರ್ಷದ ಬಾಲಕಿ ಮಹತ್ಸಾಧನೆ ಮಾಡಿರುವುದಕ್ಕೆ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೊಣ್ಣೂರ ಹರ್ಷ ವ್ಯಕ್ತಪಡಿಸಿದ್ದಾರೆ.



ಯಾಣ ಪ್ರವಾಸಿಗರಿಗೆ ತಾತ್ಕಾಲಿಕ ನಿರ್ಬಂಧ

ಅಂಕೋಲಾ: ಮುಂಗಾರು ಚುರುಕುಗೊಂಡು ಚಂಡಿಕಾ ನದಿ ತುಂಬಿ ಹರಿಯುತ್ತಿರುವುದರಿಂದ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಪ್ರಸಿದ್ಧ ಪ್ರವಾಸಿ ತಾಣ ಯಾಣಕ್ಕೆ ಪ್ರವಾಸಿಗರ ಪ್ರವೇಶವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಯಾವುದೇ ರೀತಿಯ ಪ್ರಾಕೃತಿಕ ವಿಕೋಪದಿಂದ ಪ್ರವಾಸಿಗರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಅರಣ್ಯ ಇಲಾಖೆ ಮತ್ತು ಯಾಣದ ಗ್ರಾಮ ಅರಣ್ಯ ಸಮಿತಿಯ ವತಿಯಿಂದ ಮುನ್ನೆಚ್ಚರಿಕೆಕ್ರಮವಾಗಿ ಯಾಣ ಪ್ರವೇಶಕ್ಕೆ ಸಾರ್ವಜನಿಕರಿಗೆ ನಿರ್ಬಂಧ ಹೇರಲಾಗಿದ್ದು, ಯಾಣಕ್ಕೆ ಭೇಟಿ ನೀಡದಂತೆ ಅಧಿಕಾರಿಗಳು ಮನವಿ ಮಾಡಿದ್ದು ನಿಷೇಧಿತ ಅವಧಿಯಲ್ಲಿ ಅಕ್ರಮ ಪ್ರವೇಶ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ.



ಸಾರ್ವಜನಿಕರು ಸೂಚನೆಗಳನ್ನು ಪಾಲಿಸಿ ಸಹಕರಿಸುವಂತೆ ಕತಗಾಲ ವಲಯ ಅರಣ್ಯಾಧಿಕಾರಿಗಳು ಮತ್ತು ಯಾಣದ ಶ್ರೀ ಮಹಾಗಣಪತಿ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮನವಿ ಮಾಡಿದ್ದಾರೆ.

ಬಾಲಕಿ ಲವ್ ಜಿಹಾದ್-ಆತ್ಮಹತ್ಯೆ ಪ್ರಕರಣ

ಸಿಪಿಐ ಲೋಹಾರ್ ಅಮಾನತು

ಧಾರವಾಡ: ಜಿಲ್ಲೆಯಲ್ಲಿ ತೀವ್ರ ಸಂಚಲನ ಮೂಡಿಸಿದ್ದ ಅಪ್ರಾಪ್ತ ಬಾಲಕಿಯ ಲವ್ ಜಿಹಾದ್ ಹಾಗೂ ಆತ್ಮಹತ್ಯೆ ಪ್ರಕರಣದಲ್ಲಿ ಕರ್ತವ್ಯ ಲೋಪದ ಹಿನ್ನೆಲೆ ಗರಗ ಪೊಲೀಸ್ ಠಾಣೆಯ ಸಿಪಿಐ ಶಿವಯೋಗಿ ಲೋಹಾರ್ ಅವರನ್ನು ಅಮಾನತು ಮಾಡಲಾಗಿದೆ.



ಧಾರವಾಡ ತಾಲೂಕಿನ ಗರಗ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಅಪ್ರಾಪ್ತ ಬಾಲಕಿಯ ಆತ್ಮಹತ್ಯೆ ಪ್ರಕರಣವು ಲವ್ ಜಿಹಾದ್ ಸ್ವರೂಪ ಪಡೆದುಕೊಂಡು, ಸಾರ್ವಜನಿಕ ವಲಯದಲ್ಲಿ ಪೊಲೀಸ್ ಇಲಾಖೆ ವಿರುದ್ಧ ತೀವ್ರವಾದ ಆಕ್ರೋಶಕ್ಕೆ ಕಾರಣವಾಗಿತ್ತು.

ಈ ಸೂಕ್ಷ್ಮ ಪ್ರಕರಣವನ್ನು ತನಿಖೆ ನಡೆಸುವಲ್ಲಿ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪ ಎಸಗಿದ್ದಾರೆ ಎಂಬ ಗಂಭೀರ ಆರೋಪ ಸಿಪಿಐ ಶಿವಯೋಗಿ ಲೋಹಾರ್ ಅವರ ಮೇಲಿತ್ತು. ಹೀಗಾಗಿ ಅವರ ವಿರುದ್ಧ ಜಿಲ್ಲಾ ಪೊಲೀಸ್ ಇಲಾಖೆ ಅಮಾನತು ಕ್ರಮ ಕೈಗೊಂಡಿದೆ.

> **ಗಂಭೀರ ಆರೋಪ**
> ಸೂಕ್ಷ್ಮ ಪ್ರಕರಣವನ್ನು ತನಿಖೆ ನಡೆಸುವಲ್ಲಿ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪ ಎಸಗಿದ್ದಾರೆ ಎಂಬ ಗಂಭೀರ ಆರೋಪ ಸಿಪಿಐ ಶಿವಯೋಗಿ ಲೋಹಾರ್ ಅವರ ಮೇಲಿತ್ತು.

ಅಧಿಕೃತ ಆದೇಶ: ಪ್ರಕರಣದ ಗಾಂಭೀರ್ಯತೆ ಪರಿಗಣಿಸಿ, ಇಲಾಖಾ ತನಿಖೆಗೆ ಬಾಕಿ ಇರಿಸಿ ಸಿಪಿಐ ಶಿವ ಯೋಗಿ ಲೋಹಾರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಗೊಳಿಸಿ ಧಾರವಾಡ ಜಿಲ್ಲಾ ಪೊಲೀಸ್ ಅಧೀಕ್ಷಕರು ಅಧಿಕೃತ ಆದೇಶ ಹೊರಡಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಗರಗ ಠಾಣೆ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕಿ ಇತ್ತೀಚೆಗೆ ಆತ್ಮಹತ್ಯೆಗೆ ಶರಣಾಗಿದ್ದು, ಆಕೆಯನ್ನು ಪ್ರೇಮಪಾಶಕ್ಕೆ ಸಿಲು ಕಿಸಿ, ಕಿರುಕುಳ ನೀಡಿ ಆತ್ಮಹತ್ಯೆಗೆ ಪ್ರೇರೇಪಿಸಿದ ಬಗ್ಗೆ ಆಕೆಯ ಕುಟುಂ ಬಸ್ಥರು, ಹಿಂದುಪರ ಸಂಘಟನೆ 'ಲವ್ ಜಿಹಾದ್' ಆರೋಪ ಮಾಡಿದ್ದವು.

ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಪೊಲೀಸರು ಸೂಕ್ತ ತನಿಖೆ ನಡೆಸುತ್ತಿಲ್ಲ ಎಂದು ಆಗ್ರಹಿಸಿ ಜಿಲ್ಲಾದ್ಯಂತವ್ಯಾಪಕಆಕ್ರೋಶವ್ಯಕ್ತವಾಗಿತ್ತು. ಹೀಗಾಗಿ ಈ ಪ್ರಕರಣದಲ್ಲಿ ಸಿಪಿಐ ತಲೆದಂಡ ಆದಂತಾಗಿದೆ.

ರಸ್ತೆ ಡಿವೈಡರ್ ಮಧ್ಯದಲ್ಲಿ ಮೂರಿನಕಟ್ಟೆ ನಿರ್ಮಾಣ

ಹಿಂದೂ ಸಂಘಟನೆಗಳ ಕಾರ್ಯಕರ್ತರ ಅಸಮಾಧಾನ

ಭಟ್ಕಳ: ಕಳೆದ ಮೇ 24ರಂದು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ನಿರ್ಮಾಣ ಮಾಡಲಾದ ನೂತನ ಮೂರಿನಕಟ್ಟೆ ಮೇಲೆ ಧ್ವಂಸ ಪ್ರಕರಣದ ನಂತರ ಉಂಟಾದ ಹಲವು ಗೊಂದಲಗಳಿಗೆ ತೆರೆ ಎಳೆಯುವುದಾಗಿ ಹೇಳಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಸಂಸದರು ಹಿಂದೂ ಕಾರ್ಯಕರ್ತರನ್ನು ಸಮಾಧಾನಗೊಳಿಸಿದ್ದು ಈಗ ಮತ್ತೆ ವಿವಾದಕ್ಕೆ ಕಾರಣವಾಗಿದೆ.

ಸಂಸದರು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹೆದ್ದಾರಿಯ ಇಲಾಖೆಯವರೊಂದಿಗೆ ಮಾತನಾಡಿ ಮೂರಿನಕಟ್ಟೆಯನ್ನು ಈ ಹಿಂದೆ ಇದ್ದಲ್ಲಿಯೇ ಕಟ್ಟಿಕೊಡುವುದಾಗಿ ತಿಳಿಸಿ ಹಿಂದೂ ಕಾರ್ಯಕರ್ತರನ್ನು ಸಮಾಧಾನಗೊಳಿಸಿದ್ದರೆ ಇಂದು ಮೂರಿನಕಟ್ಟೆಯನ್ನು ರಸ್ತೆ ಡಿವೈಡರ್ ಮಧ್ಯದಲ್ಲಿ ನಿರ್ಮಾಣ ಮಾಡಿ ಆಳೆತ್ತರದ ಗ್ರಿಲ್ಸ್ ಹಾಕಿದ್ದು ಮಾರಿ ಹೊರೆಯನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಕೂಗು ಹಿಂದೂ ಸಂಘಟನೆಗಳ ಕಾರ್ಯಕರ್ತರಿಂದ ಕೇಳಿ ಬಂದಿದೆ.

ಈ ಹಿಂದೆ ಜಿಲ್ಲಾಡಳಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಇಲಾಖೆ ತಮಗೆ 10 ಅಡಿ ಅಗಲಿ 10 ಅಡಿ ಉದ್ದದ ಕಟ್ಟೆಯನ್ನು ಹೆದ್ದಾರಿಯಂಚಿನಲ್ಲಿ ಕಟ್ಟಿಕೊಡುವುದಾಗಿ ಭರವಸೆ ನೀಡಿದಂತೆಯೇ ಕಟ್ಟಿಕೊಡಬೇಕು. ಯಾವುದೇ ತ್ಯಾಗಕ್ಕೂ ನಾವು ಸಿದ್ಧರಿದ್ದು ಹಾಲಿ ಕಟ್ಟಲಾದ ಕಟ್ಟೆಯನ್ನು ಒಪ್ಪಿಕೊಳ್ಳು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಕಾರ್ಯಕರ್ತರು ತಿರುಗಿ ಬಿದ್ದಿರುವ ಸಂಗತಿ ಬಯಲಾಗಿದೆ.



> ಮೂರಿನಕಟ್ಟೆಯನ್ನು ನಿರ್ಮಾಣ ಮಾಡಿರುವುದು ಅರಣ್ಯ ಇಲಾಖೆಯ ಜಾಗಾ ಆಗಿದ್ದು ಇದು ಯಾವುದೇ ಮುಸ್ಲಿಮರಿಗೆ ಸಂಬಂಧ ಪಟ್ಟ ಜಾಗಾ ಅಲ್ಲ. ಮುಸ್ಲಿಂ ಮುಖಂಡರ ಭಾವನೆ ಭಟ್ಕಳದ ಶಾಂತಿಗೆ ಧಕ್ಕೆಯಾಗಿದೆ. ಹಾಲಿ ನಿರ್ಮಾಣ ಮಾಡಿದ ಕಟ್ಟೆಗೆ ನಮ್ಮ ಯಾವುದೇ ಸಮ್ಮತಿ ಇಲ್ಲ.
> ■ ಶ್ರೀಕಾಂತ ನಾಯ್ಕ, ಮಾಜಿ ಸೈನಿಕ

ಅಂದು ನಾವು ಕಟ್ಟಿದ ನೂತನ ಕಟ್ಟೆಯನ್ನು ಮೂರುಸಾವಿರಕ್ಕೂಹೆಚ್ಚುಮತಾಂಧಮುಸ್ಲಿಮರು ಧ್ವಂಸ ಮಾಡಿದ್ದು ಎಷ್ಟೇ ಬೆಲೆ ತೆತ್ತಾದರೂ ನಾವು ಕಟ್ಟೆಯನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ, ಈ ಹಿಂದೆ ಅಧಿಕಾರಿಗಳು ಹೇಳಿದ ಮಾತಿಗೆ ಒಂದು ಊರಿನ ಅಭಿವೃದ್ಧಿಯಾದರೆ ನಾವು ಸಹಕಾರ ನೀಡಬೇಕೆಂದು ಒಪ್ಪಿಗೆ ನೀಡಿದ್ದೇವು ಎಂದು ಆಸರಕೇರಿಯ ಕೃಷ್ಣಾ ನಾಯ್ಕ ಹೇಳಿದರು.

> ಜಿಲ್ಲಾಧಿಕಾರಿ, ತಹಶೀಲ್ದಾರ್, ಪೊಲೀಸ್ ಇಲಾಖೆ ಇವರೆಲ್ಲರ ಸಹಕಾರದಿಂದ ಮೇ24ರಂದು ನೂತನ ಕಟ್ಟೆ ಕಟ್ಟಿದ್ದೇವು. ಆದರೆ, ಅಂದೇ ಶಿರಾಲಿಯಲ್ಲೊಂದು ದೊಡ್ಡ ದುರಂತ ಸಂಭವಿಸಿ 11 ಜನ ನಮ್ಮವರನ್ನು ಕಳೆದುಕೊಂಡೆವು. ನಾವು ಸಂಕಷ್ಟದಲ್ಲಿರುವುದನ್ನು ತಿಳಿದುಕೊಂಡು 2ರಿಂದ 3 ಸಾವಿರ ಮುಸ್ಲಿಮರು ಬಂದು ನಾವು ಕಟ್ಟಿದ್ದ ಕಟ್ಟೆ ಒಡೆದು ಹಾಕಿ, ಪೊಲೀಸರನ್ನು ದೂಡಿ ಹಾಕಿ ದಾಂಧಲೆ ಮಾಡಿದರು. ಈಗ ಕಟ್ಟಿದ ಕಟ್ಟೆಯು ನಮಗೆ ಸಮಾಧಾನವಾಗಿಲ್ಲ.
> ■ ಶ್ರೀನಿವಾಸ ನಾಯ್ಕ

ಇಂದು ಉಳವಿಯಲ್ಲಿ ಸಂಕಲ್ಪ ಸಭೆ: ಶ್ರೀಗಳು

ಕಲಘಟಗಿ: ಉಳವಿಯಲ್ಲಿ ಜೂನ್ 14ರಂದು 2ಎ ಮೀಸಲಾತಿಯ ರಾಜ್ಯಮಟ್ಟದ ಮೂರನೇ ವರ್ಷದ ಸಂಕಲ್ಪ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ ಮಾತನಾಡಿ, ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿಯೇ ಒಂದು ಹಂತಕ್ಕೆ ತಲುಪಿದ್ದು ನಮ್ಮ ಹೋರಾಟದ ಹಾದಿ ಹಾಗೆ ಉಳಿದುಕೊಂಡಿದೆ.



ಸಮಾಜದ ಶೈಕ್ಷಣಿಕ, ಆರ್ಥಿಕ, ಮೂಲಭೂತ ಸೌಕರ್ಯ ಒದಗಿಸುವದು ಹೋರಾಟದ ಉದ್ದೇಶವಾಗಿದೆ ಎಂದರು.

ಹಲವು ವರ್ಷಗಳಿಂದ ಪಂಚಮಸಾಲಿ ಸಮಾಜದ 2ಎ ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದರು ಸರ್ಕಾರದವರು ಎಚ್ಚೆತ್ತುಕೊಳ್ಳುತ್ತಿಲ್ಲ. ನಮ್ಮ ಹೋರಾಟ ನಿರಂತರವಾಗಿದೆ ಎಂದರು.

ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ನಮ್ಮ ಬೇಡಿಕೆಗಳನ್ನು ಈಡೇರಿಸುತ್ತಾರೆ ಎಂಬ ಭರವಸೆ ನಮಗಿದೆ. ಸಮಾಜದ ಬಾಂಧವರು ಒಂದಾಗಬೇಕು ನಿಮ್ಮ ಜೊತೆ ನಾವಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಕೆಸಿಸಿ ಬ್ಯಾಂಕ್ ನಿರ್ದೇಶಕ ಮಂಜುನಾಥಗೌಡ ಮುರಳ್ಳಿ, ಹಿರಿಯರಾದ ಸಿ.ಬಿ.ಹೊನ್ನಳ್ಳಿ, ಯಲ್ಲಪ್ಪ ಚವರಗಿ, ಎಫ್.ಕೆ.ನಿಗದಿ, ಮಹದೇವಪ್ಪ ಆಲದಕಟ್ಟಿ, ವಿ.ಎಸ್. ಬೆಣ್ಣಿ, ಬಿ.ಬಿ.ಕಿಚಡಿ, ಸುರೇಶ ಕುಮಾರ, ಶ್ರೀಕಾಂತ ಹೊನ್ನಳ್ಳಿ, ಡಾ.ಮಹೇಶ ತಿಪ್ಪಣ್ಣವರ, ಶಿಕ್ಷಕ ಚಂದ್ರಶೇಖರ್ ಬಿಸರಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

> **ಟೂರ್ನಿಗಳ ದಿನ ಶೀಘ್ರ ನಿಗದಿ**
> ಮಹಾರಾಣಿ ಟ್ರೋಫಿ ಟೂರ್ನಿ ನಡೆಸಲು ಸಕಲ ಸಿದ್ಧತೆ ನಡೆದಿದೆ. ಆದಷ್ಟು ಬೇಗ ದಿನ ನಿಗದಿ ಮಾಡಲಾಗುವುದು. ಈ ಟೂರ್ನಿ ಬೆಂಗಳೂರಿನಲ್ಲಿ ಮಾತ್ರ ನಡೆಯಲಿದೆ. ಮುಂದಿನ ದಿನಗಳಲ್ಲಿ ತಂಡಗಳು ಹೆಚ್ಚಾದರೆ 2ನೇ ಹಂತದ ನಗರಗಳಲ್ಲಿ ಆಡಿಸಲಾಗುವುದು. ಇಂಪ್ಯಾಕ್ಟ್ ಪ್ಲೇಯರ್ ನಿಯಮಾವಳಿ ಎಲ್ಲ ರಾಜ್ಯಗಳ ಟೂರ್ನಿಗಳಲ್ಲಿ ಅನುಸರಿಸಲಾಗುತ್ತಿದೆ. ನಾವು ಇಲ್ಲಿ ಬದಲಿಸಿದರೆ ಸರಿ ಇರಲ್ಲ. ಆದ್ದರಿಂದ ಮಹಾರಾಜ ಟ್ರೋಫಿಯಲ್ಲಿ ಈ ನಿಯಮ ಮುಂದುವರಿಯಲಿದೆ ಎಂದು ಮಹಾರಾಜ ಟ್ರೋಫಿ ಟೂರ್ನಿಯ ಆಡಳಿತ ಸಮಿತಿ ಚೇರಮನ್ ಕೇಶವ್ ತಿಳಿಸಿದರು.

ಜೂ.27ರಿಂದ ಮಹಾರಾಜ ಟ್ರೋಫಿ-2026 | ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ ಪ್ರಸಾದ ಮಾಹಿತಿ

ನಾಲ್ಕು ಪಂದ್ಯ ಆಡಲಿರುವ ಹುಬ್ಬಳ್ಳಿ ಟೈಗರ್ಸ್ ತಂಡ

ಹುಬ್ಬಳ್ಳಿ: ನಗರಗಳಲ್ಲಿ ಎರಡನೇ ಹಂತದ ಪ್ರತಿಷ್ಠಿತ ಪಂದ್ಯಗಳು ನಡೆಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದೇವು. ಅದರಂತೆ ಮಹಾರಾಜ ಟ್ರೋಫಿ-2026 ಟಿ-20 ಟೂರ್ನಿಯ 2ನೇ ಹಂತದ ಪಂದ್ಯಗಳನ್ನು ಹುಬ್ಬಳ್ಳಿಯಲ್ಲಿ ಜೂ.27 ರಿಂದ ಜುಲೈ 3ರ ವರೆಗೆ ನಡೆಸಲಾಗುತ್ತದೆ ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ ಪ್ರಸಾದ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಸಿಸಿಐ, ಪ್ರಥಮ ದರ್ಜೆಯ ಪಂದ್ಯಗಳನ್ನು ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ , ಬೆಳಗಾವಿ ಸೇರಿದಂತೆ ಉಳಿದ ಕಡೆ ಆಡಿಸಲು ಮೊದಲ ಆದ್ಯತೆ ನೀಡಲಾಗುತ್ತಿದೆ. ಈ ಹಿನ್ನೆಲೆ ಹುಬ್ಬಳ್ಳಿಯಲ್ಲಿ ಒಟ್ಟು 12 ಮಹಾರಾಜ ಟ್ರೋಫಿಯ ಪಂದ್ಯಗಳು ನಡೆಯಲಿವೆ. ಅದರಲ್ಲಿ 4 ಪಂದ್ಯಗಳು ಹುಬ್ಬಳ್ಳಿ ಟೈಗರ್ಸ್ ತಂಡದಾಗಿರುತ್ತವೆ ಎಂದರು.

ಟೂರ್ನಿ ನಡೆಸಲು ಅಗತ್ಯ ಸೌಲಭ್ಯಗಳ ಒದಗಿಸಲಾಗುತ್ತಿದ್ದು, ಈಗಾಗಲೇ ಕೆಲಸಗಳ ಆರಂಭವಾಗಿವೆ. ಹುಬ್ಬಳ್ಳಿ ಕೆಎಸ್‌ಸಿಎಯ ಕ್ಲಬ್ ಹೌಸ್‌ನ ಕಾಮಗಾರಿ ನಡೆಯುತ್ತಿದೆ. ಮೈದಾನದಲ್ಲಿ ಪ್ರಕರವಾಗಿ ಬೆಳಕು ಬೀಳುವ ಉದ್ದೇಶದಿಂದ ಎಲ್‌ಇಡಿ ದೀಪಗಳ (ಫ್ಲಡ್‌ಲೈಟ್) ಅಳವಡಿಸಲಾಗುತ್ತಿದೆ. ಮೈಸೂರು ಹಾಗೂ ಬೆಂಗಳೂರಿನ ಮೈದಾನಗಳಿಗೂ ಎಲ್‌ಇಡಿ ದೀಪಗಳ ಅಳವಡಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.




ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಪ್ರಥಮ ದರ್ಜೆ ಹಾಗೂ ಬಿಸಿಸಿಐ ಪಂದ್ಯಗಳು ನಡೆಯುವುದರಿಂದ ಹಿರಿಯ ಆಟಗಾರರು ಈ ಟ್ರೋಫಿಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಈಗ ಎಲ್ಲ ಹಿರಿಯ ಆಟಗಾರರು ಭಾಗವಹಿಸುತ್ತಿದ್ದು, ಕಿರಿಯ ಆಟಗಾರರಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದೆ. ಇದರಿಂದ ಬಹಳಷ್ಟು ಅನುಭವ ಪಡೆಯುತ್ತಾರೆ ಎಂದು ತಿಳಿಸಿದರು.

ಮಹಾರಾಜ ಟ್ರೋಫಿ ಟೂರ್ನಿಯ ಆಡಳಿತ ಸಮಿತಿ ಚೇರಮನ್ ಕೇಶವ್, ಏಳು ವರ್ಷದ ಬಳಿಕ ದೊಡ್ಡ ಮಟ್ಟದ ಟೂರ್ನಿಯೂ ಇಲ್ಲಿ ನಡೆಯುತ್ತಿದೆ. ಅದಕ್ಕೆ ಸಕಲ ಸಿದ್ಧತೆ ಮಾಡಲಾಗುತ್ತಿದೆ. ಒಟ್ಟು ಆರುತಂಡಗಳು ಭಾಗವಹಿಸುತ್ತಿದ್ದು, 150 ಆಡಗಾರರು ಭಾಗವಹಿಸುತ್ತಿದ್ದಾರೆ. ಪಂದ್ಯ ವೀಕ್ಷಣೆಗೆ 100-500 ರೂ.ವರೆಗೆ ಟಿಕೆಟ್ ದರ ನಿಗದಿ ಪಡಿಸಲಾಗಿದೆ. ಹುಬ್ಬಳ್ಳಿಯಲ್ಲಿ ಪಂದ್ಯ ವೀಕ್ಷಣೆ ಮಾಡುವವರು ಜೂ.16ರ ಬಳಿಕ ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯಬಹುದು ಎಂದು ತಿಳಿಸಿದರು.

ಕೆಎಸ್‌ಸಿಎ ಧಾರವಾಡ ವಲಯದ ನಿಮಂತ್ರಕ ವೀರಣ್ಣ ಸವಡಿ, ಚೇರಮನ್ ಅಲ್ತಾಫ್ ಕಿತ್ತೂರ, ವೀರೇಶ ಹುಂಡಿ ಇದ್ದರು.

> **ಕೆಲವು ನಿಯಮಗಳ ಪರಿಷ್ಕರಣೆ**
> ಮೊದಲನೇಯದಾಗಿ ಟಾಸ್ ಹಾಕುವ ಮುನ್ನವೇ ತಂಡಗಳು ತಮ್ಮ ತಂಡದಿಂದ ಕಣಕ್ಕಿಳಿಯುವ 11 ಆಟಗಾರರ ಯಾದಿಯನ್ನು ಸಲ್ಲಿಸುವುದು ಕಡ್ಡಾಯ. ಇದಕ್ಕೆ ಪೂರಕವಾಗಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವು ಮುಂದುವರಿಯಲಿದೆ. ಎರಡನೇಯದಾಗಿ ಬ್ಯಾಟರ್ ಫ್ರೀ ಹಿಟ್ ಎಸೆತದಲ್ಲಿ ಔಟಾದರೆ (ರನ್ ಔಟ್/ಸ್ಟಂಪಿಂಗ್) ಯಾವುದೇ ರನ್ ನೀಡುವುದಿಲ್ಲ. ಮೂರನೇಯದಾಗಿ ಆನ್ ಫೀಲ್ಡ್ ಅಂಪೈರ್ ಔಟ್ ತೀರ್ಮಾನವನ್ನು ಅಪೀಲ್‌ನಲ್ಲಿ ಅನೂರ್ಜಿತಗೊಂಡರೆ ಆ ಎಸೆತದಲ್ಲಿ ಗಳಿಕೆಯಾಗಿರುವ ರನ್ ಬ್ಯಾಟರ್‌ಗೆ ನೀಡಲಾಗುತ್ತದೆ ಎಂದು ಮಹಾರಾಜ ಟ್ರೋಫಿ ಟೂರ್ನಿಯ ಆಡಳಿತ ಸಮಿತಿ ಸದಸ್ಯ ಎ.ವಿ.ಶಶಿಧರ ತಿಳಿಸಿದರು.

ಹಿಪ್ಪರಗಿ ಬ್ಯಾರೇಜ್‌ನಲ್ಲಿ 1 ಟಿಎಂಸಿ ನೀರು ಸಂಗ್ರಹ



ರಬಕವಿ-ಬನಹಟ್ಟಿ: ಮಹಾರಾಷ್ಟ್ರದ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ರಾಜಾಪೂರ ಬ್ಯಾರೇಜ್‌ನಿಂದ ಬಿಡುಗಡೆಗೊಂಡಿರುವ ನೀರು ಹಿಪ್ಪರಗಿ ಬ್ಯಾರೇಜ್ ತಲುಪುತ್ತಿದೆ.

ಸಂಪೂರ್ಣ ಖಾಲಿಯಾಗುವ ಸ್ಥಿತಿಯಲ್ಲಿದ್ದ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಶನಿವಾರ 1 ಟಿಎಂಸಿಯಷ್ಟು ನೀರು ಸಂಗ್ರಹಗೊಂಡಿದೆ. ಶುಕ್ರವಾರದಂದು ಎಲ್ಲ 22 ಗೇಟ್‌ಗಳ ಪೈಕಿ 6 ಗೇಟ್‌ಗಳನ್ನು ತಾತ್ಕಾಲಿಕ ತೆರೆಯಲಾಗಿತ್ತು. ಇದೀಗ ಡೆಡ್ ಸ್ಟೋರೇಜ್ ಮೇಲೆ ನೀರು ಸಂಗ್ರಹವಾಗುತ್ತಿರುವುದರಿಂದ ಎಲ್ಲ ಗೇಟ್‌ಗಳನ್ನು ಮುಚ್ಚಲಾಗಿದ್ದು, ನೀರು ಸಂಗ್ರಹವಾಗುತ್ತಿದೆ.

ಬೇಸಿಗೆ ದಿನಗಳ ಲೆಕ್ಕಾಚಾರದಲ್ಲಿದ್ದ ಈ ಭಾಗದ ಜನ-ಜಾನುವಾರು ಹಾಗೂ ರೈತರು ನಿಟ್ಟುಸಿರು ಬಿಡುವಲ್ಲಿ ಕಾರಣವಾಗಿದೆ. ಇದೀಗ ಭರ್ತಿಯಾಗುತ್ತಿರುವ ನೀರಿನಿಂದ ರೈತರ ಬೆಳೆ ಹಾಗೂ ಸುತ್ತಲಿನ ಗ್ರಾಮಗಳಿಗೆ ಸಮರ್ಪಕ ನೀರು ಪೂರೈಕೆಯಾಗುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಉಕ ಅಭಿವೃದ್ಧಿಗೆ 59.5 ಕೋಟಿ ರೂ. ಮಂಜೂರು

• **ಶಿರಸಿ:** ಕೇಂದ್ರ ರಸ್ತೆ ಅಭಿವೃದ್ಧಿ ನಿಧಿ (ಸಿಆರ್‌ಐಎಫ್) 2026–27ನೇ ಸಾಲಿನ ಯೋಜನೆಯಡಿ, ಉತ್ತರ ಕನ್ನಡ ಲೋಕಸಭಾ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಆಯ್ದ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒಟ್ಟು 59.5 ಕೋಟಿ ರೂ. ಅನುದಾನ ಮಂಜೂರಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.ಜಿಲ್ಲೆಯ ಪ್ರಮುಖ ರಸ್ತೆಗಳ ಸುಧಾರಣೆಗೆ ಈ ಅನುದಾನವನ್ನು ಬಿಡುಗಡೆ ಮಾಡಿರುವ ಕೇಂದ್ರ ಸರ್ಕಾರಕ್ಕೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಸಂಸದರು ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಿದ್ದಾರೆ.

ಕನ್ನಡ ಭಾಷೆ ಗೌರವಿಸಿ



• **ಮುಂಡಗೋಡ:** ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಉಳಿವು ಮತ್ತು ಬೆಳವಣಿಗೆಗಾಗಿ ನಿರಂತರವಾಗಿ ಉತ್ತಮ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದು, ಕನ್ನಡ ಸಂಸ್ಕೃತಿಯ ಸಂರಕ್ಷಣೆಗೆ ಮಹತ್ವದ ಕೊಡುಗೆ ನೀಡುತ್ತಿದೆ.ಕನ್ನಡವು ಪ್ರತಿಯೊಬ್ಬರಿಗೂ ಅನ್ನ ನೀಡುವ ಭಾಷೆಯಾಗಿದ್ದು, ಎಲ್ಲರೂ ಕನ್ನಡವನ್ನು ಗೌರವಿಸಿ ಪ್ರೀತಿಸಬೇಕೆಂದು ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲ ಶ್ರೀ ಜಿ.ಟಿ. ಕಡೆಮನಿ ಹೇಳಿದರು. ಅವರು ಶುಕ್ರವಾರ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ 2025–26ನೇ ಸಾಲಿನ ಎಸೆಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಶೇ.100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು, ಇಂತಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಸಮಾಜಕ್ಕೆ ಮಾದರಿಯಾಗಿದ್ದು, ವಿದ್ಯಾರ್ಥಿಗಳ ಸಾಧನೆಗೆ ಕಾರಣರಾದ ಶಿಕ್ಷಕರನ್ನು ಹಾಗೂ ಕಾರ್ಯಕ್ರಮ ಆಯೋಜಿಸಿದ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳನ್ನು ಅಭಿನಂದಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ.ಕೆ. ಕರವಿನಕೊಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್ ವಾಸರೆ ಮಾತನಾಡಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಸಂತ ಎಸ್. ಕೊಣಸಾಲಿ, ಡಾ. ಪಿ.ಪಿ. ಚಬ್ಬಿ ಹಾಗೂ ಅರವಿಂದ ಗುಡಿಗೆ ಮಾತನಾಡಿದರು.

ಕನ್ನಡ ವಿಷಯದಲ್ಲಿ ಶೇ.100ಅಂಕ ಪಡೆದ 20 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.ಎಸ್.ಡಿ. ಮುಡೆಣ್ಣವರ, ಡಾ. ರಮೇಶ್ ಅಂಬಿಗರ ಸುಭಾಷ್ ಡೋರಿ, ಪಿ.ಸಿ. ಕೇಶಪ್ಪನ್ನಟ್ಟಿ ಅಶೋಕ್ ಶಂಕರಿಕೊಪ್ಪ, ನಾಗರಾಜ ಅರ್ಕಸಾಲಿ, ಎಂ.ಎಚ್. ಕಲಾಲ, ಎಸ್.ಬಿ. ಹೂಗಾರ್, ಚಿದಾನಂದ ಪಾಟೀಲ್, ದಿನೇಶ್ ವರ್ಣೇಕರ್, ಶಿವಾನಂದ ವಾಲಿಶೆಟ್ಟರ್, ಗಿರೀಶ್ ಕುಲಕರ್ಣಿ, ಎಸ್.ಕೆ. ಬೋರ್ಕರ್, ಆರ್.ಎಸ್. ಕಲಾಲ, ಸುಭಾಷ್ ವಡ್ಡರ್ ಸೇರಿದಂತೆ ಇತರರಿದ್ದರು. ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಎಸ್.ಡಿ. ಮುಡೆಣ್ಣವರ ಸ್ವಾಗತಿಸಿದರು. ನಾಗರಾಜ ಅರ್ಕಸಾಲಿ ವಂದಿಸಿದರು ಹಾಗೂ ರಮೇಶ್ ಪವಾರ ನಿರೂಪಿಸಿದರು.ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸನ್ಮಾನಿಸಲಾಯಿತು. ಅಲ್ಲದೆ ಹಿರಿಯ ಸಾಹಿತಿ ಅರವಿಂದ ಗುಡಿಮಳಗಿ ಅವರನ್ನು ಜಿಲ್ಲಾ ಘಟಕದ ವತಿಯಿಂದ ಗೌರವಿಸಲಾಯಿತು.

ಇಂದು ಸಂಗೀತ ಮಹೋತ್ಸವ, ಸನ್ಮಾನ


• **ಸಿದ್ದಾಪುರ:** ತಾಲೂಕಿನ ಕ್ಷೇತ್ರ ಭುವನಗಿರಿಯ ಭುವನೇಶ್ವರಿ ದೇವಾಲಯದಲ್ಲಿ ಸುಷಿರ ಸಂಗೀತ ಪರಿವಾರದ ಸಂಯೋಜನೆಯಲ್ಲಿ 24 ನೇ ಭುವನೇಶ್ವರಿ ಸಂಗೀತ ಮಹೋತ್ಸವ ಮತ್ತು ಸನ್ಮಾನ ಕಾರ್ಯಕ್ರಮ ಜೂನ್ 14ರ ಭಾನುವಾರ ಸಂಜೆ 6 ಗಂಟೆಯಿಂದ ಹಮ್ಮಿಕೊಳ್ಳಲಾಗಿದೆ. ಖ್ಯಾತ ಗಾಯಕಿ ವಸುಧಾ ಶರ್ಮಾ ಹಳ್ಳಿಕೇರಿ ಮತ್ತು ಮನೋವೈದ್ಯೆ ಡಾ. ಮೇಘನಾ ಕಶ್ಯಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅಭ್ಯಾಗತರಾಗಿ ಇನ್ವೆಸ್ಟ್‌ಮೆಂಟ್ ಅಡ್ವೈಸರ್ ಅಶೋಕ ಶ್ರೀಕೃ ರಾವ್ ವಡ್ಡಿನಕೊಪ್ಪ, ಹೆಸರಾಂತ ಮದ್ದಲೆ ವಾದಕರಾದ ನರಸಿಂಹಮೂರ್ತಿ ಹಳ್ಳಿಕೇರಿ ಭಾಗಿಯಾಗಲಿದ್ದಾರೆ. ದೇವಾಲಯದ ಅಧ್ಯಕ್ಷ ಶ್ರೀಕಾಂತ ಹೆಗಡೆ ಗುಂಜಗೋಡ ಅಧ್ಯಕ್ಷತೆ ವಹಿಸುವರು. ನಾಣಿ ಕಟ್ಟಾಸ.ಪ.ಪೂ. ಮಹಾವಿದ್ಯಾಲಯದ ಪ್ರಾಚಾರ್ಯ ಎಂ.ಕೆ. ನಾಯ್ಕ ಹೊಸಳ್ಳಿ ಅಭಿನಂದನಾ ನುಡಿಗಳನ್ನಾಡುವರು.ಕಾರ್ಯಕ್ರಮದಲ್ಲಿ ನಾಡಿನ ಹೆಸರಾಂತ ಗಾಯಕ ಪಂಡಿತ ಪರಮೇಶ್ವರ ಹೆಗಡೆಯವರನ್ನು ಸನ್ಮಾನಿಸಿ ಗೌರವಿಸಲಾಗುವುದು. ಸಂಜೆ 7.30 ರಿಂದ ಪರಮೇಶ್ವರ ಹೆಗಡೆ ಕಲಭಾಗ ಅವರಿಂದ ಗಾಯನ ನಡೆಯಲಿದ್ದು, ರವೀಂದ್ರ ಕಾಟೋಟಿ ಹಾರ್ಮೋನಿಯಂನಲ್ಲಿ ಮತ್ತು ಗೋಪಾಲಕೃಷ್ಣಹೆಗಡೆ ಕಲಭಾಗ ತಬಲಾದಲ್ಲಿ ಸಹಕರಿಸಲಿದ್ದಾರೆ. ಕಲಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದು ಸುಷಿರ ಸಂಗೀತ ಪರಿವಾರದ ಸಂಯೋಜಕ ನಾರಾಯಣ ಹೆಗಡೆ ಕಲ್ಲಾರೆಮನೆ ಪ್ರಕಟಣೆಯಲ್ಲಿ ಕೋರಿದ್ದಾರೆ.



ಮುಂಡಗೋಡ: ಸರ್ಕಾರದಿಂದ ನೀಡುವ ಉಚಿತ ಸಮವಸ್ತ್ರಗಳನ್ನು ತಾಲೂಕಿನ ಸನವಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಟ್ಟು 71 ಮಕ್ಕಳಿಗೆ ಶನಿವಾರ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಗುಬ್ಬಕ್ಕನವರ, ಉಪಾಧ್ಯಕ್ಷೆ ಮಧು ಕೆರಿಹೊಲದವರ, ಸದಸ್ಯ ದಿನೇಶ ಕೆರಿಹೊಲದವರ, ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ದೇವೇಂದ್ರಪ್ಪ ದೊಡ್ಡಗೌಡ್ರ, ಶಿಕ್ಷಕಿ ಸುವರ್ಣಾ ಬಿರಾದಾರ, ನೇತ್ರಾವತಿ ಗೌಡ ಮತ್ತು ಶಕುಂತಲಾ ಬಿಸಗಣ್ಣವರ ಉಪಸ್ಥಿತರಿದ್ದರು.

ಐಇಇಇ ಪವರ್ ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿ ಘಟಕ ಉದ್ಘಾಟನೆ

• **ಹಳಿಯಾಳ :** ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಐಇಇಇ ಪವರ್ ಎಲೆಕ್ಟ್ರಾನಿಕ್ಸ್ (ಪಿ ಇಎಲ್‌ಎಸ್) ವಿದ್ಯಾರ್ಥಿ ಘಟಕ ಜೂನ್ 13ರಂದು ಉದ್ಘಾಟನೆಗೊಂಡಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಐಇಇಇ ಬೆಂಗಳೂರು ವಿಭಾಗದ ವಿದ್ಯಾರ್ಥಿ ಚಟುವಟಿಕೆ ಮುಖ್ಯಸ್ಥ ಪ್ರೊ.ದೇವೇಂದ್ರಗೌಡ ಪಾಟೀಲ್, ವಿದ್ಯಾರ್ಥಿಗಳಿಗೆ ಪಿಇಎಲ್ ಎಸ್ ನ ಬಹುಪಯೋಗ ತಿಳಿಸಿದರು. ನೂತನ ಆವಿಷ್ಕಾರ, ತಂತ್ರಜ್ಞಾನದ ಮಾಹಿತಿ ಪಡೆಯಲು ವಿದ್ಯಾರ್ಥಿಗಳು ಐಇಇಇ ಪಿಇಎಲ್‌ಎಸ್‌ಗೆ ನೋಂದಣಿ ಮಾಡಿಕೊಳ್ಳುವಂತೆ ತಿಳಿಸಿದರು. ಐಇಇಇ ಯು ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆಯನ್ನು ಹೊರತರಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಅವುಗಳಲ್ಲಿ ಭಾಗವಹಿಸಬೇಕೆಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಪಿಇಎಲ್‌ಎಸ್ ಆಯೋಜಿಸುವ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ತಾಂತ್ರಿಕ ಜ್ಞಾನವನ್ನು ಉನ್ನತೀಕರಿಸಿಕೊಳ್ಳಬೇಕೆಂದು ಹೇಳಿದರು. ಐಇಇಇ ಹಾಗೂ ಮಹಾವಿದ್ಯಾಲಯದ ಜಂಟಿ ಸಹಯೋಗದಲ್ಲಿ ಮುಂಬರುವ ದಿನಗಳಲ್ಲಿ ನಾವಿನ್ಯತೆಯ ಕುರಿತಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು. ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ವಿಭಾಗ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್ ಸ್ವಾಗತಿಸಿದರು. ಪ್ರೊ.ಪ್ರಕಾಶ್ ಚೌಹಾನ್ ಕಾರ್ಯಕ್ರಮ ಸಂಯೋಜಿಸಿದ್ದರು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 50 ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹಳಿಯಾಳ : ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಐಇಇಇ ಪವರ್ ಎಲೆಕ್ಟ್ರಾನಿಕ್ಸ್ (ಪಿ ಇಎಲ್‌ಎಸ್) ವಿದ್ಯಾರ್ಥಿ ಘಟಕ ಜೂನ್ 13ರಂದು ಉದ್ಘಾಟನೆಗೊಂಡಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಐಇಇಇ ಬೆಂಗಳೂರು ವಿಭಾಗದ ವಿದ್ಯಾರ್ಥಿ ಚಟುವಟಿಕೆ ಮುಖ್ಯಸ್ಥ ಪ್ರೊ.ದೇವೇಂದ್ರಗೌಡ ಪಾಟೀಲ್, ವಿದ್ಯಾರ್ಥಿಗಳಿಗೆ ಪಿಇಎಲ್ ಎಸ್ ನ ಬಹುಪಯೋಗ ತಿಳಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಟೀಕೆ

ಸಚಿವ ಸಂಪುಟ ವಿಸ್ತರಣೆಯಲ್ಲೇ ಕಾಲಹರಣ

• **ಶಿರಸಿ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಗಿದ್ದಾರೆಯೇ ಹೊರತು ಆಡಳಿತ ವ್ಯವಸ್ಥೆ ಸುಧಾರಿಸಿಲ್ಲ. ಸಚಿವ ಸಂಪುಟ ವಿಸ್ತರಣೆಯಲ್ಲೇ ಕಾಲಹರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿ ಸಂಪೂರ್ಣ ಶೂನ್ಯವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಕರ್ಕಿ ಟೀಕಿಸಿದರು.

ನಗರದ ದೀನದಯಾಳ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವ ಸರ್ಕಾರ, ಉಚಿತ ವಿದ್ಯುತ್ ಭರವಸೆ ನೀಡಿ ಈಗ ದರವನ್ನು ಮೂರು ಪಟ್ಟು ಹೆಚ್ಚಿಸಿದೆ. ಸರ್ಕಾರದ ಈ ಜನವಿರೋಧಿ ನೀತಿಗಳ ವಿರುದ್ಧ ಜಿಲ್ಲಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತಾವಧಿಯ ಗೌರವಾರ್ಥವಾಗಿ ಜಿಲ್ಲೆಯಲ್ಲಿ ಜೂ. 5 ರಿಂದ ವೃಕ್ಷಾರೋಪಣ ನಡೆಯುತ್ತಿದ್ದು, ಜೂ. 20ರಂದು ಕುಮಟಾದ ಅಂತ್ರವಳ್ಳಿಯಲ್ಲಿ ಕೃಷಿ ಕಾರ್ಯಾಗಾರ ಹಾಗೂ ಜೂ.21ರಂದು ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದರು.



▸▸ ಗ್ಯಾರಂಟಿ ಹೆಸರಿನಲ್ಲಿ ಜನರನ್ನು ವಂಚನೆ

▸▸ ಉಚಿತ ವಿದ್ಯುತ್ ಭರವಸೆ ನೀಡಿ ಈಗ ದರವನ್ನು ಮೂರು ಪಟ್ಟು ಹೆಚ್ಚಳ

ಜಿಲ್ಲೆಯ ಪರಿಸರಕ್ಕೆ ಮಾರಕವಾಗುವ ಬೇಡ್ತಿ–ಅಘನಾಶಿನಿ ಮತ್ತು ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ಜಾರಿಗೊಳಿಸಲು ಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರಕ್ಕೆ ಮನವಿ ಮಾಡಿರುವುದನ್ನು ಖಂಡಿಸಿದ ಅವರು, ಯೋಜನೆಗಳನ್ನು ತಕ್ಷಣ ಕೈಬಿಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಸದಾನಂದ ಭಟ್ಟ ನಿಡಗೋಡ, ಮಾಜಿ ಸಚಿವ ಶಿವಾನಂದ ನಾಯ್ಕ, ಗೋವಿಂದ ನಾಯ್ಕ, ಪ್ರೇಮಕುಮಾರ ನಾಯ್ಕ, ರಮೇಶ ನಾಯ್ಕ ಕುಪ್ಪಳ್ಳಿ, ಗುರುಪ್ರಸಾದ ಹೆಗಡೆ ಹರ್ತೆಬೈಲ್, ಪ್ರಶಾಂತ ನಾಯ್ಕ, ಶಿವಾಜಿ ನರಸಾನಿ, ಶಿವಾನಿ ಶಾಂತಾರಾಮ, ಆನಂದ ಸಾಲೇರ, ಶ್ರೀಕಾಂತ ನಾಯ್ಕ, ಸುಬ್ರಾಯ ದೇವಾಡಿಗ, ಭಾಸ್ಕರ ದೈಮನೆ, ರವಿಕುಮಾರ ಶೆಟ್ಟಿ ಹಾಗೂ ಶ್ರೀರಾಮ ನಾಯ್ಕ ಉಪಸ್ಥಿತರಿದ್ದರು.



ಸಿದ್ದಾಪುರ: ಅವರು ಕೇಂದ್ರ ಸರ್ಕಾರದ ತೈಲ ಮತ್ತು ಅನಿಲ ನಿಗಮ (ಒಎನ್‌ಜಿಸಿ) ಸಿಎಸ್‌ಆರ್ ನಿಧಿಯಲ್ಲಿ ಜನಶ್ರೀ ಫೌಂಡೇಶನ್ ಸಹಕಾರದೊಂದಿಗೆ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಕಲಿಸುವಂತಹ ಟ್ಯಾಬ್‌ಗಳನ್ನು ತಾಲೂಕಿನ ಶಿರಳಗಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ವಿದ್ಯಾರ್ಥಿಗಳಿಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಟ್ಯಾಬ್ ವಿತರಿಸಿದರು.

ಮರಗಳ ತೆರವಿಗೆ ಕ್ರಮ ಕೈಗೊಳ್ಳಲು ಆಗ್ರಹ

• **ಅಂಕೋಲಾ:** ತಾಲೂಕಿನ ಶಿರಕುಳಿಯ ಹಳ್ಳದಲ್ಲಿ ಬುಡ ಸಮೇತ ಮರಗಳು ಉರುಳಿ ಬಿದ್ದಿದ್ದು ಮರಗಳ ತೆರವು ಕಾರ್ಯ ನಡೆಯದಿದ್ದರೆ ಈ ಮರಗಳು ಚೆಕ್ ಡ್ಯಾಮಿಗೆ ಅಡ್ಡವಾಗಿ ಸಿಲುಕಿ ಶಿರಕುಳಿ ಮತ್ತು ಅಸ್ಲಿಗದ್ದೆ ಭಾಗದಲ್ಲಿ ಪ್ರವಾಹ ಸೃಷ್ಟಿಯಾಗಲಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಮಳೆ ತೀವ್ರಗೊಂಡರೆ ಹಳ್ಳದ ಸುತ್ತ ಮುತ್ತಲಿನ ಪರಿಸರದಲ್ಲಿ ನೀರು ನುಗ್ಗಿ ಮನೆಗಳಿಗೂ ನೀರು ಪ್ರವೇಶಿಸಿರುವ ಘಟನೆಗಳು ಈ ಹಿಂದಿನ ಮಳೆಗಾಲಗಳಲ್ಲಿ ನಡೆದಿದ್ದು ನೀರು ಹರಿದು ಹೋಗುವ ಸಂದರ್ಭದಲ್ಲೇ ಈ ರೀತಿಯ ಪರಿಸ್ಥಿತಿ ಇರುವಾಗ ನೀರಿನ ಹರಿವಿಗೆ ಹಳ್ಳದಲ್ಲಿ ಬಿದ್ದ ಮರಗಳು ಅಡ್ಡಿಯಾದರೆ ಪರಿಸ್ಥಿತಿ ಗಂಭೀರವಾಗಲಿದೆ ಎನ್ನುವುದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಹಳ್ಳದಲ್ಲಿ ಬಿದ್ದ ಮರಗಳನ್ನು ತೆರವು ಮಾಡುವಂತೆ ಪುರಸಭೆಯ ಗಮನಕ್ಕೆ ತಂದಾಗಇದುತಮ್ಮವ್ಯಾಪ್ತಿಗೆಬರುವುದಿಲ್ಲ ಎಂದು ಹೇಳಿರುವುದಾಗಿ ತಿಳಿದು ಬಂದಿದೆ. ತಾಲೂಕಿನಲ್ಲಿ ಇದುವರೆಗೆ ತೀರಾ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದ್ದು ಭಾರೀ ಪ್ರಮಾಣದ ಮಳೆ ಸುರಿದಲ್ಲಿ ಶಿರಕುಳಿ ಹಳ್ಳಕ್ಕೆ ವ್ಯಾಪಕ ಪ್ರಮಾಣದಲ್ಲಿ ನೀರು ಹರಿದು ಬರಲಿದ್ದು ನೀರಿನ ಹರಿವಿನ ತೀವ್ರತೆಗೆ ಮರಗಳು ಚೆಕ್ ಡ್ಯಾಮ್‌ಗೆ ಹೋಗಿ ಸಿಲುಕಿ ನೀರಿನ ಹರಿವಿಗೆ ಅಡ್ಡಿಯಾಗಲಿದೆ. ಇದರಿಂದ ಶಿರಕುಳಿ, ಅಸ್ಲಿಗದ್ದೆ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಕೃತಕ ಪ್ರವಾಹ ಪರಿಸ್ಥಿತಿ ಎದುರಾಗಿ ಸಮಸ್ಯೆ ಆಗಲಿದೆ ಎಂಬ ಅಭಿಪ್ರಾಯ ಸ್ಥಳೀಯ ಜನರಿಂದ ಕೇಳಿ ಬಂದಿದ್ದು ತಾಲೂಕು ಆಡಳಿತ ಹಳ್ಳದಲ್ಲಿ ಬಿದ್ದ ಮರಗಳ ತೆರುವಿಗೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

ಸಮಸ್ಯೆ ಪರಿಹರಿಸಿ
ಶಿರಕುಳಿ, ಅಸ್ಲಿಗದ್ದೆ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಕೃತಕ ಪ್ರವಾಹ ಪರಿಸ್ಥಿತಿ ಎದುರಾಗಿ ಸಮಸ್ಯೆ ಆಗಲಿದೆ ಎಂಬ ಅಭಿಪ್ರಾಯ ಸ್ಥಳೀಯ ಜನರಿಂದ ಕೇಳಿ ಬಂದಿದ್ದು ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಆಗ್ರಹ.



ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಿ

• **ಶಿರಸಿ:** ಬೀದಿ ನಾಟಕಗಳಿಂದ ಸಾಮಾಜಿಕ ಪಿಡುಗುಗಳಾದ ಮದ್ಯಪಾನ, ವರದಕ್ಷಿಣೆ, ಬಾಲ್ಯ ವಿವಾಹಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬಹುದು ಎಂದು ಹುಲೇಕಲ್ ಗ್ರಾಪಂ ಮಾಜಿ ಅಧ್ಯಕ್ಷ ಖಾಸಿಂ ಸಾಬ್ ಹೇಳಿದರು.

ತಾಲೂಕಿನ ಹುಲೇಕಲ್ ಗ್ರಾಪಂಯಲ್ಲಿ ಸಭಾಂಗಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕೇಂದ್ರದ ಆಶ್ರಯದಲ್ಲಿ ನಡೆದ ಬೀದಿ ನಾಟಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣಕ್ಕಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳನ್ನು ತಳಮಟ್ಟದವರೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಬೀದಿ ನಾಟಕದಂತಹ ಪ್ರಯೋಗಗಳಿಂದ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಹುಲೇಕಲ್ ಒಕ್ಕೂಟದ ಅಧ್ಯಕ್ಷ ವಿಜಯ್ ಫೆರ್ನಾಂಡೀಸ್ ಮಾತನಾಡಿ, ಬೀದಿ ನಾಟಕದ ಉದ್ದೇಶ ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಸರಳವಾಗಿ ಅರಿವು ಮೂಡಿಸುವುದಾಗಿದೆ. ಈ ಕಾರ್ಯಕ್ರಮದ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು. ಮಹಿಳೆಯರು ಸಬಲರಾಗಬೇಕು, ಸಮಾಜದಲ್ಲಿ ಅರಿವು ಮೂಡಬೇಕು ಎಂಬುದೇ ಗ್ರಾಮಾಭಿವೃದ್ಧಿ ಯೋಜನೆಯ ಗುರಿ ಎಂದರು.

ಕಾರವಾರದ ಬಂಟದೇವ ಯುವಕ ಸಂಘದ ಕಲಾವಿದರು ಬಾಲ್ಯ ವಿವಾಹ, ಹಸಿ ಕಸ–ಒಣ ಕಸ ವಿಂಗಡಣೆ, ಹೆಲ್ಮೆಟ್ ಬಳಕೆಯ ಮಹತ್ವ, ನೀರಿನ ಸಮರ್ಪಕ ಬಳಕೆ, ದುಶ್ಚಟಗಳ ನಿರ್ಮೂಲನೆ ಕುರಿತು ಜಾಗೃತಿ ಮೂಡಿಸುವ ಬೀದಿ ನಾಟಕವನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಕಾರ್ಯದರ್ಶಿ ಅಣ್ಣಪ್ಪ, ಮಹಿಳಾ ಜ್ಞಾನ ವಿಕಾಸ ಕೇಂದ್ರದ ತಾಲ್ಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ, ವಲಯ ಮೇಲ್ವಿಚಾರಕ ಡಿ.ಸಿ. ಗಣಪತಿ, ಕಲಾ ತಂಡದ ಮುಖ್ಯಸ್ಥರಾದ ಪುರುಷೋತ್ತಮ ಗೌಡ, ಒಕ್ಕೂಟದ ಉಪಾಧ್ಯಕ್ಷೆ ಲಲಿತಾ ಫೆರ್ನಾಂಡೀಸ್, ಸಹ ಕಾರ್ಯದರ್ಶಿ ನಾರಾಯಣ ಮರಾಠಿ, ಸೇವಾ ಪ್ರತಿನಿಧಿ ಪಾರ್ವತಿ ಹಾಗೂ ಒಕ್ಕೂಟದ ಪದಾಧಿಕಾರಿಗಳು, ಗ್ರಾಪಂ ಸಿಬ್ಬಂದಿ, ಮಹಿಳಾ ಜ್ಞಾನ ವಿಕಾಸದ ಸದಸ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.



ಪ್ರವಾಸಿ ತಾಣಗಳಿಗೆ ನಿರ್ಬಂಧ : ಪ್ರವಾಸೋದ್ಯಮಕ್ಕೆ ಮಾರಕ

• **ಯಲ್ಲಾಪುರ:** ಪ್ರವಾಸಿಗರ ಸುರಕ್ಷತೆಯ ನೆಪ ಒಡ್ಡಿ ಜಿಲ್ಲೆಯ ಪ್ರವಾಸಿ ತಾಣಗಳಿಗೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಿರುವುದು ಪ್ರವಾಸೋದ್ಯಮಕ್ಕೆ ಮಾರಕವಾಗಿದೆ ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಅಧ್ಯಯನ ಸಮಿತಿಯ ಅಧ್ಯಕ್ಷ ಬೀರಣ್ಣ ನಾಯಕ ಮೊಗಟಾ ಕಳವಳ ವ್ಯಕ್ತಪಡಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಜಲಪಾತಗಳ ಜಿಲ್ಲೆಯೆಂದೇ ಜನಪ್ರಿಯವಾಗಿದ್ದು ಜಿಲ್ಲೆಯ ದೊಡ್ಡ ಜಲಪಾತಗಳ ಜೊತೆಗೆ ಸಣ್ಣ–ಪುಟ್ಟ ಆಕರ್ಷಕ ಜಲಪಾತಗಳನ್ನು ಲೆಕ್ಕ ಮಾಡುತ್ತ ಸಾಗಿದರೆ ಜಿಲ್ಲೆಯಲ್ಲಿ ನೂರಾರು ಜಲಪಾತಗಳನ್ನು ನೋಡಿ ಪ್ರವಾಸಿಗರು ಆನಂದಿಸಬಹುದಾಗಿದ್ದು, ಈ ಜಲಪಾತಗಳ ನೋಟವನ್ನು ಸವಿಯಲು ಮಳೆಗಾಲವೇ ಸೂಕ್ತವಾಗಿದ್ದು, ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಪ್ರವೇಶ ನಿಷೇಧ ಮಾಡಿರುವುದು ಜಿಲ್ಲೆಯ ಪ್ರವಾಸೋದ್ಯಮದ ಮೇಲೆ ಕರಿ ನೆರಳು ಆವರಿಸಿದಂತಾಗಿದೆ.



ಜಿಲ್ಲೆಯಲ್ಲಿ ಈ ವರುಷ ಇಲ್ಲಿಯವರೆಗೆ ವಾಡಿಕೆ ಮಳೆಗಿಂತ ತೀರಾ ಕಡಿಮೆ ಮಳೆಯಾಗಿದ್ದು ಈಗಾಗಲೇ ಮಾಗೋಡ ಜಲಪಾತ, ಸಾತೊಡ್ಡಿ ಜಲಪಾತ, ಕುಳಿಮಾಗೋಡು ಜಲಪಾತ, ಲಾಲಗುಳಿಜಲಪಾತ, ಶಿರಲೆಜಲಪಾತ, ಸೂರ್ಯ ಕಲ್ಯಾಣಿಗುಡ್ಡ, ಜೇನುಕಲ್ಲುಗುಡ್ಡ, ಕಾಳಿತೂಗುಸೇತುವೆ ಮೊದಲಾದವುಗಳಿಗೆ ಪ್ರವೇಶ ನಿರ್ಬಂಧ ಹೇರಿ ಫಲಕನೆತು ಹಾಕಿದ್ದು ದೇಶದ ನಾನಾ ಕಡೆಗಳಿಂದ ಜಿಲ್ಲೆಗೆ ಬರುವ ಪ್ರವಾಸಿಗರಿಗೆ ಸಂಬಂಧಪಟ್ಟ ಇಲಾಖೆ ಅನ್ಯಾಯ ಮಾಡಿದಂತಾಗಿದೆ.ಜಿಲ್ಲೆಯ ಅನೇಕ ಹೊಟೆಲ್ಲುಗಳು, ರೆಸಾರ್ಟಗಳು, ವಸತಿ ಗೃಹಗಳು, ಹೋಮ್ಸ್ಟೇಗಳು, ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟು ಅನೇಕ ಬಗೆಯ ಚಟುವಟಿಕೆ ಹಾಗೂ ಉಪಉದ್ಯೋಗ ನಡೆಸುವವರಿಗೆ ಈರೀತಿಯ ನಿರ್ಬಂಧ ನುಂಗಲಾರದ ತುತ್ತಾಗಿದ್ದು ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ ನಿರ್ಬಂಧ ತೆಗೆಯುವಂತೆ ಮಾಡಬೇಕೆಂದು ವಿನಂತಿಸಿದ್ದಾರೆ.

ಈ ರೀತಿಯ ನಿರ್ಬಂಧ ಜಿಲ್ಲೆಯ ಆರ್ಥಿಕ ಚಟುವಟಿಕೆಗಳ ಮೇಲೆ ಕೋಟಿ ಕೋಟಿ ಲೆಕ್ಕದಲ್ಲಿ ದುಷ್ಪರಿಣಾಮ ಬೀರುತ್ತಿದೆ.

ಜಾನಪದ ಸಂಸ್ಕೃತಿ ಉಳಿಸಿ: ನಾಟಿ ವೈದ್ಯ ಹನುಮಂತಗೌಡ

• **ಅಂಕೋಲಾ:** ಜಾನಪದ, ನಾಟಿ ವೈದ್ಯಕೀಯ ಪದ್ಧತಿಯಲ್ಲಿ ಪ್ರತಿಯೊಂದು ಆರೋಗ್ಯ ಸಮಸ್ಯೆಗಳಿಗೂ ಪರಿಹಾರವಿದ್ದು,ಅತ್ಯಂತ ಕಡಿಮೆ ವೆಚ್ಚದ ನಾಟಿ ವೈದ್ಯಕೀಯ ಚಿಕಿತ್ಸೆ ಕುರಿತಂತೆ ಜನರು ವಿಶ್ವಾಸವಿಟ್ಟು ಜಾನಪದ ಸಂಸ್ಕೃತಿಯನ್ನು ಉಳಿಸಬೇಕು ಎಂದು ರಾಜ್ಯ ಪ್ರಶಸ್ತಿ ಪುರಸ್ಕೃತ ಬೆಳಂಬಾರದ ನಾಟಿ ವೈದ್ಯ ಹನುಮಂತ ಗೌಡ ಹೇಳಿದರು.ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ಜಾನಪದ ಪರಿಷತ್ತಿನ ತಾಲೂಕು ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪರಂಪರೆಯಿಂದ ಬಂದ ಜಾನಪದ ಔಷಧೀಯ ಪದ್ಧತಿ, ಗಿಡಮೂಲಿಕೆಗಳ ಚಿಕಿತ್ಸಾ ಪದ್ಧತಿಯನ್ನು ಉಳಿಸಿಕೊಂಡು ಹೋಗುವ ಕೆಲಸ ಆಗಬೇಕಿದೆ ಎಂದರು.ವೈದ್ಯಕೀಯ ರಂಗದಲ್ಲಿ ಇಂದು ತಾಳ್ಮೆ ಇಲ್ಲದಂತಾಗಿದ್ದು ಚಿಕಿತ್ಸೆಯ ವೆಚ್ಚ ದುಬಾರಿಯಾಗಿ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ ಜನರಲ್ಲಿ ತಾಳ್ಮೆಯಿದ್ದರೆ ಬಹಳಷ್ಟು ಕಾಯಿಲೆಗಳನ್ನು ಜಾನಪದೀಯ ಚಿಕಿತ್ಸೆಯ ಮೂಲಕ ಅತ್ಯಂತ ಕಡಿಮೆ ವೆಚ್ಚದಲ್ಲಿ ಗುಣಪಡಿಸಬಹುದಾಗಿದೆ ಎಂದು ತಿಳಿಸಿದರು. ನಿವೃತ್ತ ಅಧಿಕಾರಿ ಎನ್.ಜಿ.ನಾಯಕ ಮಾತನಾಡಿ, ನಾಟಿ ವೈದ್ಯಕೀಯ ರಂಗಕ್ಕೆ ಬೆಳಂಬಾರದ ಗೌಡರ ಮನೆತನದ ಕೊಡುಗೆ ಅಪಾರ ಎಂದರು. ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕ ಮಹೇಶ ನಾಯಕ ಮಾತನಾಡಿದರು. ಔಷಧೀಯ ಸಸ್ಯಗಳ ರಕ್ಷಣೆಗೆ ರಾಜ್ಯ ಅರಣ್ಯ ಇಲಾಖೆ ವತಿಯಿಂದ ಜೀವ ವೈವಿಧ್ಯ ಪ್ರಶಸ್ತಿಯ ಪಡೆದ ಹನುಮಂತ ಗೌಡ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.ಕನ್ನಡ ಸಾಹಿತ್ಯ ಪರಿಷತ್ ಅಂಕೋಲಾ ಘಟಕದ ಅಧ್ಯಕ್ಷ ಗೋಪಾಲಕೃಷ್ಣ ನಾಯಕ, ಉಪನ್ಯಾಸಕಿ ನಾಗರತ್ನ ಶೆಟ್ಟಿ, ಜ್ಞಾನೇಶ್ ಉಪಸ್ಥಿತರಿದ್ದರು. ನಿವೃತ್ತ ಉಪನ್ಯಾಸಕ ರಾಮಮೂರ್ತಿ ನಾಯಕ ಸ್ವಾಗತಿಸಿದರು. ಸಾಹಿತಿ ಜೆ.ಪ್ರೇಮಾನಂದ ಅಭಿನಂದನಾ ನುಡಿಗಳನ್ನಾಡಿದರು. ಉಲ್ಲಾಸ ಹುದ್ದಾರ್ ಸನ್ಮಾನ ಪತ್ರ ವಾಚಿಸಿದರು. ನಾಗರಾಜ ದಿವಗಿ ನಿರ್ವಹಿಸಿದರು. ಜ್ಯೋತಿ ನಾಯ್ಕ ವಂದಿಸಿದರು.



ಮಂಜಗುಣಿ ರಸ್ತೆ ದುರಸ್ತಿಗೆ ಒತ್ತಾಯ



• **ಅಂಕೋಲಾ:** ತಾಲೂಕಿನ ಮಂಜಗುಣಿ ಗ್ರಾಮಕ್ಕೆ ತೆರಳುವ ಸಂಪರ್ಕ ರಸ್ತೆ ಸಂಪೂರ್ಣ ಕೆಟ್ಟು ಹೋಗಿದ್ದು ಬಸ್ ಸಂಚಾರ ಸ್ಥಗಿತಗೊಂಡಿದ್ದು ರಸ್ತೆಯನ್ನು ದುರುಸ್ತಿಪಡಿಸಿ ಬಸ್ ಸಂಚಾರಕ್ಕೆ ಅನುಕೂಲ ಒದಗಿಸುವಂತೆ ಮಂಜಗುಣಿಯ ಗ್ರಾಮಸ್ಥರು ಶಾಸಕ ಸತೀಶ ಸೈಲ್ ಅವರಿಗೆ ಮನವಿ ಸಲ್ಲಿಸಿದರು.

ಮಂಜಗುಣಿಯಲ್ಲಿ ಗಂಗಾವಳಿ ನದಿಗೆ ಸೇತುವೆ ನಿರ್ಮಾಣಗೊಂಡ ನಂತರ ಪ್ರತ್ಯೇಕ ಸರ್ವಿಸ್ ರಸ್ತೆ ನಿರ್ಮಾಣಗೊಂಡಿಲ್ಲ ಈಗ ಲಭ್ಯವಿರುವ ತಾತ್ಕಾಲಿಕ ರಸ್ತೆ ಮನೆಯಿಂದ ಕೊರಕಲಾಗಿದ್ದು, ಸಾರಿಗೆ ಸಂಸ್ಥೆಯವರು ಬಸ್ ಸಂಚಾರ ಸ್ಥಗಿತಗೊಳಿಸಿದ್ದಾರೆ ಗ್ರಾಮಸ್ಥರ ಅನುಕೂಲಕ್ಕೆ ರಸ್ತೆ ಸರಿಪಡಿಸಿ ವಾಹನಗಳ ಸಂಚಾರಕ್ಕೆ ಅನುಕೂಲ ಒದಗಿಸಬೇಕು. ಸೇತುವೆಯ ಸಮೀಪ ನಿರ್ಮಾಣ ಮಾಡಲಾಗಿರುವ ಶೆಡ್ಡನ್ನು ತೆರುವುಗೊಳಿಸುವ ಕಾರ್ಯ ನಡೆಯಬೇಕು ಎಂದು ಶಾಸಕರಿಗೆ ಮನವಿ ಮಾಡಲಾಗಿದೆ.

ಈಗ ಇರುವ ರಸ್ತೆಯನ್ನು ಸರಿಪಡಿಸಿ ಬಸ್ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಮತ್ತು ಸೇತುವೆಯ ಸಮೀಪದಲ್ಲಿ ನಿರ್ಮಾಣ ಮಾಡಲಾಗಿರುವ ಶೆಡ್ಡನ್ನು ತೆರುವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಸಕರು ತಹಶೀಲ್ದಾರರಿಗೆ ಸೂಚಿಸಿದರು.

ಹೊನ್ನೆಬೈಲ್ ಗ್ರಾಪಂ ಮಾಜಿ ಅಧ್ಯಕ್ಷ ವೆಂಕಟ್ರಮಣ ನಾಯ್ಕ, ಗ್ರಾಮಸ್ಥರುಗಳಾದ ಲೀಲಾವತಿ ನಾಯ್ಕ, ಮಂಜುನಾಥ ನಾಯ್ಕ, ಮಹಾಬಲೇಶ್ವರ ನಾಯ್ಕ, ಅಶೋಕ ಡಿ ನಾಯ್ಕ, ಕೆ.ಡಿ ನಾಯ್ಕ, ಮೋಹನ ನಾಯ್ಕ, ಅಶೋಕ ವಿ ನಾಯ್ಕ, ಗಣಪತಿ ನಾಯ್ಕ, ಪ್ರಶಾಂತ ನಾಯ್ಕ, ನಾರಾಯಣ ನಾಯ್ಕ ಸೇರಿದಂತೆ ಮಂಜಗುಣಿ ಗ್ರಾಮಸ್ಥರು ಇದ್ದರು.

ಪರಸ್ಪರ ಒಪ್ಪಂದ ಪತ್ರಕ್ಕೆ ಸಹಿ

• **ಹಳಿಯಾಳ :** ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟಿ, ಹಳಿಯಾಳ ಹಾಗೂ ಟಾಟಾ ಮೋಟಾರ್ಸ್ ಕಮರ್ಷಿಯಲ್ ವೆಹಿಕಲ್ಸ್, ಧಾರವಾಡ ನಡುವಿನ ದೀರ್ಘಕಾಲೀನ ಸಹಭಾಗಿತ್ವವನ್ನು 2026–27ನೇ ಹಣಕಾಸು ವರ್ಷದ ಅವಧಿಗೆ ಮುಂದುವರಿಸುವ ಉದ್ದೇಶದಿಂದ ಪರಸ್ಪರ ಒಪ್ಪಂದ ಪತ್ರಕ್ಕೆ (ಎಮ್‌ಒಯುವ) ಸಹಿ ಹಾಕಲಾಯಿತು.

ಈ ನವೀಕೃತ ಸಹಭಾಗಿತ್ವವು ಕೌಶಲ್ಯಾಭಿವೃದ್ಧಿ, ಉದ್ಯೋಗ ಸೃಷ್ಟಿ ಹಾಗೂ ಯುವಜನರ ಸಬಲೀಕರಣದತ್ತ ಎರಡೂ ಸಂಸ್ಥೆಗಳ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಿದೆ. ಈ ಸಂದರ್ಭದಲ್ಲಿ ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ನೀಡಿದ ಅಮೂಲ್ಯ ಕೊಡುಗೆ ಹಾಗೂ ನಿರಂತರ ಸಹಕಾರವನ್ನು ಗುರುತಿಸಿ, ಟಾಟಾ ಮೋಟಾರ್ಸ್ ಕಮರ್ಷಿಯಲ್ ವೆಹಿಕಲ್ಸ್ ಧಾರವಾಡ ವತಿಯಿಂದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟಿ ಸಂಸ್ಥೆಯನ್ನು ಸನ್ಮಾನಿಸಲಾಯಿತು. ಒಪ್ಪಂದ ಪತ್ರಕ್ಕೆ ಸಹಿ ಹಾಕುವ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಟಾಟಾ ಮೋಟಾರ್ಸ್ ಕಮರ್ಷಿಯಲ್ ವೆಹಿಕಲ್ಸ್ ಧಾರವಾಡದ ಪ್ಲಾಂಟ್ ಹೆಡ್ ಆಪರೇಷನ್ಸ್ ವಿಜಯಕುಮಾರ ಬಟ್ಟು, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಸಾಗರ್ ರಾಜೆ ಹಾಗೂ ವಿಭಾಗೀಯ ವ್ಯವಸ್ಥಾಪಕ (ಮಾನವ ಸಂಪನ್ಮೂಲ) ಶರಣಗೌಡ ದೇಸಾಯಿ, ಮತ್ತು ಆಶಾ ಶಿಂದೆ ಉಪಸ್ಥಿತರಿದ್ದರು. ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟಿ ಹಳಿಯಾಳದ ಪರವಾಗಿ ನಿರ್ದೇಶಕ ಕಿರಣಕುಮಾರ ಎ. ಬಗಾಡೆ ಹಾಗೂ ಯೋಜನಾ ಸಂಯೋಜಕ ವಿನಾಯಕ ಚವ್ಹಾಣ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸ್ಥೆಯನ್ನು ಪ್ರತಿನಿಧಿಸಿದರು.



ಪ್ರಶಾಂತ ನಾಯ್ಕಗೆ ಧನಸಹಾಯ



• **ಅಂಕೋಲಾ:** ಇತ್ತೀಚೆಗೆ ಅನಾರೋಗ್ಯದಿಂದ ನಿಧನರಾದ ಫೋಟೋಗ್ರಾಫರ್ ತಾಲೂಕಿನ ಲಕ್ಷ್ಮೇಶ್ವರ ಕುಂಬಾರ ಕೇರಿಯ ಪ್ರಶಾಂತ ಕಾಮೇಶ್ವರ ನಾಯ್ಕ ಅವರ ಕುಟುಂಬಕ್ಕೆ ಕರ್ನಾಟಕ ರಾಜ್ಯ ಛಾಯಾಗ್ರಾಹಕರ ಸಂಘ, ಉತ್ತರ ಕನ್ನಡ ಜಿಲ್ಲಾ ಛಾಯಾಗ್ರಾಹಕರ ಸಂಘ ಮತ್ತು ಅಂಕೋಲಾ ತಾಲೂಕು ಛಾಯಾಗ್ರಾಹಕರ ಸಂಘಗಳ ವತಿಯಿಂದ ಮಾನವೀಯ ನೆಲೆಯಲ್ಲಿ ಧನಸಹಾಯ ನೀಡಲಾಯಿತು.ಮೃತ ಪ್ರಶಾಂತ ನಾಯ್ಕ ಅವರ ಮನೆಗೆ ಭೇಟಿ ನೀಡಿದ ಸಂಘದ ಅಧ್ಯಕ್ಷ ನಾಗೇಶ್ ರಾಜ್ಯಾಧ್ಯಕ್ಷ ನಾಗೇಶ್ ಮೃತ ಪಚ್ಚುವಿನ ಅನಾರೋಗ್ಯ ಪೀಡಿತ ತಂದೆ ಮತ್ತು ತಾಯಿಯ ಪರಿಸ್ಥಿತಿ ಕಂಡು ಮರುಗಿ ಛಾಯಾಗ್ರಾಹಕರ ಸಂಘಟನೆಗಳ ವತಿಯಿಂದ 101212 ರೂಪಾಯಿಗಳ ಚೆಕ್ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಅತ್ಯಂತ ಬಡ ಕುಟುಂಬದ ಛಾಯಾಗ್ರಾಹಕ ಅಕಾಲಿಕ ಮರಣ ಹೊಂದಿದ್ದು ಅವರ ಅವಲಂಬಿತ ತಂದೆ ತಾಯಿಗೆ ಆದಷ್ಟು ಸಹಾಯ ಮಾಡುವ ಕೆಲಸ ಸಂಘಟನೆ ಮಾಡಲಿದೆ ಎಂದರು.ರಾಜ್ಯ ಉಪಾಧ್ಯಕ್ಷ ಲಕ್ಷ್ಮೀನಾರಾಯಣ ಭಟ್ಟ, ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಸುರೇಶ ಹೊನ್ನಾವರ, ಕಾರ್ಯದರ್ಶಿ ಕಿರಣ ಶಾನಭಾಗ, ಅಂಕೋಲಾ ತಾಲೂಕು ಅಧ್ಯಕ್ಷ ಶ್ರೀನಿವಾಸ ರಾಮನಾಥಕರ್, ಕಾರ್ಯದರ್ಶಿ ಹರೀಶ ನೇರಳಕಟ್ಟೆ, ಕುಮಟಾ ತಾಲೂಕು ಅಧ್ಯಕ್ಷ ಪ್ರಶಾಂತ ನಾಯ್ಕ, ಕಾರ್ಯದರ್ಶಿ ವಿನಾಯಕ ನಾಯ್ಕ ರಾಜ್ಯ, ಜಿಲ್ಲಾ ಮತ್ತು ವಿವಿಧ ತಾಲೂಕು ಘಟಕಗಳ ಪದಾಧಿಕಾರಿ ಸದಸ್ಯರು ಉಪಸ್ಥಿತರಿದ್ದರು.

ತಂಬಾಕು ಮಾರಾಟ: ಅಧಿಕಾರಿಗಳ ದಾಳಿ

• **ಮುಂಡಗೋಡ:** ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ತಹಶೀಲ್ದಾರ ನೇತೃತ್ವದ ತಂಡ ಪಟ್ಟಣದಲ್ಲಿ ಎಂಬಂತೆ ತಂಬಾಕು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ನಡೆಸಿ 4 ಪ್ರಕರಣ ಮತ್ತು 1100. ರೂ ದಂಡವನ್ನು ವಸೂಲಿ ಮಾಡಿದರು.

ಅಪರ ಜಿಲ್ಲಾಧಿಕಾರಿಗಳು ಅವರ ನಿರ್ದೇಶನದಂತೆ ಜಿಲ್ಲೆಯಲ್ಲಿ ಏಕಕಾಲದಲ್ಲಿ ತಂಬಾಕು ಉತ್ಪನ್ನಗಳ ಮೇಲೆ ದಾಳಿ ಮಾಡುವಂತೆ ಸೂಚಿಸಿದ್ದರು. ಅದರಂತೆ ತಹಶೀಲ್ದಾರ ಪ್ರಸಾದ ಎಸ್.ಎನ್ ನೇತೃತ್ವದಲ್ಲಿ ದಾಳಿ ನಡೆಸಿ ಜಾಗೃತಿ ಮೂಡಿಸಿದರು. 4. 6ಎ, ಕಾಯ್ದೆ ಅಡಿ ನಾಮಫಲಕವನ್ನು ಅಳವಡಿಸುವಂತೆ ಸೂಚಿಸಿದರು. ನಾಮಫಲಕ ಅಳವಡಸದೇ ಇರುವ 4 ಅಂಗಡಿಕಾರ ಮೇಲೆ ಪ್ರಕರಣ ದಾಖಲಿಸಿ 1100ರೂ ದಂಡ ವಸೂಲಿ ಮಾಡಿದರು.ಸಿಡಿಪಿಒ ಸಂಜೀವಕುಮಾರ ಸದಲಗಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಕೆ.ಎಂ ನಾಯ್ಕ, ಪಂ.ಯ ಕುಮಾರ ನಾಯ್ಕ, ಶಿಕ್ಷಣ ಇಲಾಖೆಯ ರಮೇಶ ಅಂಬಿಗೇರ, ಕಂದಾಯ ಇಲಾಖೆಯ ಶ್ರೀಕಾಂತ ಹೊಸಮನಿ, ಪೊಲೀಸ ಸಿಬ್ಬಂದಿ ಅರುಣಕುಮಾರ ಬಾಗೇವಾಡಿ, ಕ್ಷೇತ್ರ ಶಿಕ್ಷಣ ಆರೋಗ್ಯಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಪ್ರಸಾದ ಎ. ಅಶೋಕ ಎ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಕಿರುಸುದ್ದಿ

ಪತ್ರಕರ್ತರ ಸಂಘದ ರಾಜ್ಯ ಸಮಿತಿಗೆ ಆಯ್ಕೆ



ಬ್ಯಾಡಗಿ: ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಹಿರಿಯ ಪತ್ರಕರ್ತ ಹಾಗೂ ಹಾವೇರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಮಾಜಿ ಜಿಲ್ಲಾಧ್ಯಕ್ಷ ಬಸವಂತಪ್ಪ ಹುಲ್ಲತ್ತಿ ಇವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್ ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶಿಸಿ ಪ್ರಕಟಣೆ ನೀಡಿ ಪತ್ರಕರ್ತರ ಸಂಘಟಿಸುವ ಜೊತೆಗೆ ಅವರ ಮೂಲಭೂತ ಹಕ್ಕುಗಳಿಗೆ ಎದುರಾಗುವ ಸಮಸ್ಯೆಗಳಿಗೆ ಧ್ವನಿಯಾಗಬೇಕೆಂದು ತಿಳಿಸಿದ್ದಾರೆ.

ವಿಶಿಷ್ಟ ಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಹಾವೇರಿ : ರಾಜ್ಯ ಸರ್ಕಾರದ ಸ್ಕಾಲರ್‌ಶಿಫ್ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವದ ಹಾಗೂ ಪೋಸ್ಟ್ ಮೆಟ್ರಿಕ್ 2026-27ನೇ ಸಾಲಿಗೆ ವಿದ್ಯಾರ್ಥಿ ವೇತನಕ್ಕಾಗಿ ಎಸ್ ಎಸ್‌ಪಿ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು SSP Homepage URL:https:ssp:postmatric.karanatak.gov.in/ Postmatric Application Submission URL: :https:ssp:postmatric.karanatak.gov.in/ post sa 2627/loginನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಜಿಲ್ಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಕಲಚೇತನರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಸಲ್ಲಿಸಿ ಸ್ವಿಕೃತಿ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ತಾಲೂಕಿನಲ್ಲಿ ಎಂ.ಆರ್. ಡಬ್ಲ್ಯೂ, ಗಳಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಲ್ಲಿಸಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಽಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ಅನಾರೋಗ್ಯದಿಂದ ಬೇಸತ್ತ ಯುವತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಗುಡಿಸಲಗೇರಿ ಓಣಿಯಲ್ಲಿ ನಡೆದಿದೆ. ಗುಡಿಸಲಗೇರಿ ಓಣಿ ನಿವಾಸಿ ನೇತ್ರಾ ಕರಬಸಪ್ಪ ಹಲಗಣ್ಣನವರ (23) ಆತ್ಮಹತ್ಯೆ ಮಾಡಿಕೊಂಡವರು. ಇವರು ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದು, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗೆ ತೋರಿಸಿದರೂ ಗುಣಮುಖ ಆಗದೆ ಇರುವ ಕಾರಣ ಮನನೊಂದು ಅನಾರೋಗ್ಯಕ್ಕೀಡಾಗಿದ್ದರು. ಇದನ್ನೇ ಮನಸ್ಸಿಗೆ ಹಚ್ಚಿಕೊಂಡು ಗುರುವಾರ ಸಂಜೆ ತಮ್ಮ ವಾಸದ ಮನೆಯ ಕಬ್ಬಿಣದ ತೊಲೆಗೆ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತಳ ತಂದೆ ಕರಬಸಪ್ಪ ಹಲಗಣ್ಣವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಕಾಣೆ

ಹಾವೇರಿ: ಶಿಗ್ಗಾಂವ ತಾಲೂಕು ಇಬ್ರಾಹಿಂಪೂರ ಗ್ರಾಮದ 56 ವರ್ಷದ ಜಾಪರಸಾಬ್ ಹಜರೇಸಾಬ ವದಿ ಎಂಬಾತ 27 ಫೆಬ್ರವರಿ 2026 ರಂದು ಮನೆಯಿಂದ ಹೋದವನು ಮರಳಿ ಬಾರದೆ ಕಾಣೆಯಾಗಿರುವುದಾಗಿ ಬಂಕಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಕಾಣೆಯಾದ ವ್ಯಕ್ತಿ 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಸಾದಗಪ್ಪು ಮೈಬಣ್ಣ ಹೊಂದಿದ್ದು, ಹಳದಿ ಬಣ್ಣದ ಟೀ ಶರ್ಟ್, ಕಪ್ಪು ಬಣ್ಣ ನೈಟ್ ಪ್ಯಾಂಟ್ ಧರಿಸಿದ್ದಾನೆ. ಈ ವ್ಯಕ್ತಿಯ ಮಾಹಿತಿ ದೊರೆತಲ್ಲಿ ಬಂಕಾಪೂರ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಬಂಕಾಪುರ ಪೊಲೀಸ್ ಠಾಣೆ ಪೊಲೀಸ್ ಇನ್ಸಪೆಕ್ಟರ್ ಅವರು ತಿಳಿಸಿದ್ದಾರೆ.

ನಿಧನ ಸುದ್ದಿ

ಕರಬಸಪ್ಪ ಕಡೂರ



ರಾಣೇಬೆನ್ನೂರ: ಇಲ್ಲಿಯ ಚಿದಂಬರ ನಗರದ ನಿವಾಸಿ ಕರಬಸಪ್ಪ ಬಸನಗೌಡ ಕಡೂರ(80) ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಶಿರಹಟ್ಟಿ: ಪಟ್ಟಣದ ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಭಾರತೀಯ ಸೇನೆಯ ಅಗ್ನಿವೀರ ವಿಭಾಗಕ್ಕೆ ಆಯ್ಕೆಯಾಗಿದ್ದು, ಅವರನ್ನು ಸನ್ಮಾನಿಸಲಾಯಿತು. ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿ ಚೆನ್ನವೀರ ಮಲ್ಲಿಗವಾಡ ಮತ್ತು ಬಿ.ಕಾಂ. ದ್ವಿತೀಯ ವರ್ಷದ ವಿದ್ಯಾರ್ಥಿ ಅನ್ವರ ಮಂಜಲಾಪುರ ಅವರನ್ನು ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ ಅರಹುಣಸಿ ಹಾಗೂ ಉಪನ್ಯಾಸಕ ವೃಂದ, ಸಿ.ಡಿ.ಸಿ. ಅಧ್ಯಕ್ಷರು, ಸದಸ್ಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಗ್ರಾಮ ಸ್ಥಾಪನೆಯ ಕನಸು ನನಸು: ಶಾಸಕ

ಹಾನಗಲ್ಲ: ಹೊಸ ಕಂದಾಯ ಗ್ರಾಮ, ಉಪ ಗ್ರಾಮಗಳ ಸ್ಥಾಪನೆಯ ಕನಸು ತಾಲೂಕಿನ ಜನರ ದೀರ್ಘ ಕಾಲದ ಕನಸಾಗಿತ್ತು. ಇದೀಗ ಆ ಕನಸು ನನಸಾಗಿದೆ. ಹೊಸ ಕಂದಾಯ ಗ್ರಾಮ ಮತ್ತು ಉಪ ಗ್ರಾಮಗಳನ್ನು ರಚಿಸಿ ಅಗತ್ಯ ದಾಖಲೆ ಲಭಿಸುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹುಡೆ ನೂತನ ಕಂದಾಯ ಗ್ರಾಮ ಉದ್ಘಾಟಿಸಿದ ಅವರು ಇನ್ನು ಮುಂದೆ ಭೂ ದಾಖಲೆಗಳು, ಕಂದಾಯ ಸೇವೆಗಳು ಹಾಗೂ ವಿವಿಧ ಸರ್ಕಾರಿ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಗ್ರಾಮಸ್ಥರಿಗೆ ಅನುಕೂಲವಾಗಲಿದೆ. ಗ್ರಾಮೀಣ ಭಾಗದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಮೂಲಸೌಲಭ್ಯ ಕಲ್ಪಿಸಲು ಆದ್ಯತೆ ನೀಡಲಾಗುವುದು ಎಂದರು.

ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹನುಮಂತಪ್ಪ ಮರಗಡಿ, ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ತಹಶೀಲ್ದಾರ್ ವಿಠ್ಠಲ ಚೌಗಲಾ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಪ್ರಮುಖರಾದ ಮಕ್ಬೂಲ್‌ಅಹ್ಮದ್ ಬಡಗಿ, ಮಹ್ಮದ್ ಯುಸೂಫ್ ಶಿಗ್ಗಾಂವಿ, ಜಲೀಲ್‌ಅಹ್ಮದ್ ಮುಲ್ಲಾ, ಇಸ್ಮೈಲ್ ಬಡಗಿ, ಮೆಹಬೂಬಅಲಿ ಬಡಗಿ, ಶಿವಾನಂದ ರಾವಳ, ಮರ್ದಾನಸಾಬ ಯಳವಟ್ಟಿ, ನೂರ್‌ಅಹ್ಮದ್ ಹುಲ್ಲತ್ತಿ, ಹಸನಸಾಬ ಹುರುಳಿಕುಪ್ಪಿ, ಮದನಿ ಮಕಾನದಾರ, ರಮೇಶ ರಾವಳ ಸೇರಿದಂತೆ ಇನ್ನೂ ಹಲವರು ಇದ್ದರು.



ಹಾನಗಲ್ಲ: ತಾಲೂಕಿನ ಹುಡೆ ನೂತನ ಕಂದಾಯ ಗ್ರಾಮ ಶಾಸಕ ಶ್ರೀನಿವಾಸ ಮಾನೆ ಉದ್ಘಾಟಿಸಿದರು. ತಹಶೀಲ್ದಾರ್ ವಿಠ್ಠಲ ಚೌಗಲಾ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಪ್ರಮುಖರಾದ ಮಕ್ಬೂಲ್‌ಅಹ್ಮದ್ ಬಡಗಿ, ಮಹ್ಮದ್‌ಯುಸೂಫ್ ಶಿಗ್ಗಾಂವಿ ಮತ್ತಿತರರಿದ್ದರು.

ಪೊಲೀಸ್ ವರಿಷ್ಠಾಧಿಕಾರಿ ಗಿರಿಮಲ್ ತಳಕಟ್ಟಿ ಹೇಳಿಕೆ

ಚಾಲಕರಿಗೆ ವ್ಯಕ್ತಿಗತ, ಸಂಚಾರಿ ಶಿಸ್ತು ಅಗತ್ಯ

ಹಾವೇರಿ: ತಾಲೂಕಿನ ದೇವಿ ಹೊಸೂರು ರಸ್ತೆಯಲ್ಲಿ ಇರುವ ರಾಷ್ಟ್ರೋತ್ಥಾನ ವಿದ್ಯಾರ್ಥಿ ಕೇಂದ್ರದಲ್ಲಿ ನಶೆಮುಕ್ತ ಚಾಲಕರ ತರಬೇತಿ ಶಿಬಿರವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಾವೇರಿ ಜಿಲ್ಲಾ ಉಪ ಪೊಲೀಸ್ ವರಿಷ್ಠಾಧಿಕಾರಿಯಾದ ಶ್ರೀ ಗಿರಿಮಲ್ ತಳಕಟ್ಟಿ ಅವರು ಚಾಲಕರಾದವರಿಗೆ ವ್ಯಕ್ತಿಗತ ಶಿಸ್ತು ಹಾಗೂ ಸಂಚಾರಿ ಶಿಸ್ತು ಅತಿ ಮುಖ್ಯ. ಅವನ್ನು ಚಾಚೂ ತಪ್ಪದೇ ಪಾಲಿಸಬೇಕು. ಸಂಚಾರಿ ಸುರಕ್ಷತೆಯ ಸೂಚನೆ ಮತ್ತು ಮಹತ್ವದ ಬಗ್ಗೆ ತಿಳುವಳಿಕೆಯನ್ನು ಮೂಡಿಸಿದರು. ಅಷ್ಟೇ ಅಲ್ಲದೆ ಆಯಾ ಮಾತಾಜಿಯವರಿಗೆ ಮಕ್ಕಳೊಂದಿಗೆ ಬಾಂಧವ್ಯದಿಂದ ಇರಬೇಕೆಂದು, ಅದು ಬಹಳ ಮಹತ್ವದ ವಿಷಯ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಹಾವೇರಿಯ ಸಂಚಾರಿ ಪೊಲೀಸ್ ನಿರೀಕ್ಷಕರಾದ ಶೈಲಜಾ ಎಸ್. ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯಾಡಿದ ವಿನಾಯಕ ಭಟ್ಟ ರಾಷ್ಟ್ರೋತ್ಥಾನ ಪರಿಷತ್ತಿನ ಸ್ಥಾಪನೆ ಅದರ ಕಾರ್ಯ ಚಟುವಟಿಕೆ ಕುರಿತು ತಿಳಿಸಿದರು. ಪ್ರತಿಯೊಬ್ಬ ಕಾರ್ಯಕರ್ತನೂ ಮುಖ್ಯ, ಎಲ್ಲರ ಕೆಲಸವು ಮಹತ್ವವಾದದ್ದು, ಅದರ ಮೂಲಕವೇ ಸ್ವಸ್ಥ ಸುಸ್ಥಿರ ಸಮಾಜ-ನಿರ್ಮಾಣದ ಧ್ಯೇಯವು ನನಸಾಗಲು ಸಾಧ್ಯ ಎಂದು ತಿಳಿಸಿದರು.



» ಚಾಲಕರು , ಮಕ್ಕಳು, ಶಿಕ್ಷಕರು ಹಾಗೂ ಪೋಷಕರ ಜೊತೆ ಸೂಕ್ಷ್ಮತೆಯಿಂದ ಒಳ್ಳೆಯ ನಡವಳಿಕೆಯಿಂದ ವರ್ತಿಸಿ

» ಮೊಬೈಲ್ ಬಳಕೆಯಿಂದ ದೂರವಿರಿ

ಶ್ರೀ ಸತೀಶ ಜೀ ಅವರು ಬಸ್ಸಿನ ಚಾಲನೆ ಹಾಗೂ ವೇಗ, ದುರಂತ ಕುರಿತು ವಿವರಿಸಿದರು. ನಂತರ ಉತ್ತಮ ಚಾಲಕ ಗುಣಗಳನ್ನು ತಿಳಿಯಪಡಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಪ್ರಧಾನಾಚಾರ್ಯರಾದ ಶ್ಯಾಮಲಾ ಮಾತಾಜಿ ಚಾಲಕರ ಮತ್ತು ನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರನ್ನು ಕುರಿತು ಕೆಲವು ಮಾರ್ಗದರ್ಶನವನ್ನು ನೀಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಅತಿಥಿಗಳಿಗೂ ಧನ್ಯವಾದವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಸಾರಿಗೆ ವಿಭಾಗದ ಮುಖ್ಯಸ್ಥರಾದ ಜಯರಾಮ, ಉದ್ಯಮಿ ಶ್ರೀ ಪವನ ಬಹಾದ್ದೂರ ದೇಸಾಯಿ ಹಾವೇರಿ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕನ್ನಡ ವಿಷಯ ಮಾರ್ಗದರ್ಶಕರಾದ ಶ್ರೀರಂಗನಾಥ ಕುಲಕರ್ಣಿ ಗಣಕಯಂತ್ರ ವಿಷಯ ಮಾರ್ಗದರ್ಶಕರಾದ ಶ್ರೀ ರಾಘವೇಂದ್ರ ಪಾಟೀಲರು ಭಾಗವಹಿಸಿದ್ದರು. ರಶ್ಮಿ ತುಪ್ಪದವರು ಸ್ವಾಗತಿಸಿ ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು. ಗೀತಾ ಮಾತಾಜಿ ವಂದಿಸಿದರು. ಗಿರಿಜಾ ಮಾತಾಜಿಯವರು ದೇಶಭಕ್ತಿ ಗೀತೆಯನ್ನು ಹಾಡಿದರು.

ಅರಣ್ಯ ಒತ್ತುವರಿ ತೆರವು : ವಾಗ್ವಾದ

ಶಿಗ್ಗಾಂವಿ : ತಾಲೂಕಿನ ಶಿವಪುರ ತಾಂಡಾ ಬಳಿ ಅರಣ್ಯ ಮತ್ತು ಕಂದಾಯ ಭೂಮಿ ಒತ್ತುವರಿಯಾಗಿದ್ದು, ಅದನ್ನು ತಡೆಯಲು ಮುಂದಾದ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ರೈತರ ನಡುವೆ ವಾಗ್ವಾದ ನಡೆದು, ನೂಕಾಟ ತಳ್ಳಾಟ ಆಗಿರುವ ಘಟನೆ ನಡೆದಿದೆ. ಈ ಕುರಿತ ವಿಡಿಯೋ ವೈರಲ್ ಆಗಿದೆ.

ಶಿಗ್ಗಾಂವಿ ತಾಲೂಕಿನ ನೀರಲಕಟ್ಟಿ, ಶಿವಪುರ ತಾಂಡಾ ಹಾಗೂ ಸುತ್ತಮುತ್ತ 87 ಎಕರೆ 20 ಗುಂಟೆ ಡೀಮ್ಡ್ ಅರಣ್ಯ ಪ್ರದೇಶವಿದೆ. ಇದಕ್ಕೆ ಹೊಂದಿಕೊಂಡು ಕಂದಾಯ ಇಲಾಖೆ ಹಾಗೂ ವಾಸಕ್ಕೆ ಮೀಸಲಿಟ್ಟ ಜಾಗವಿದೆ. ಈ ಜಾಗದಲ್ಲಿಯೇ ಈರಪ್ಪ ಸೇರಿದಂತೆ ಹಲವು ಕುಟುಂಬಗಳು ಉಳುಮೆ ಮಾಡುತ್ತಿವೆ. ತಮ್ಮ ಜಮೀನಿಗೆ ಹೊಂದಿಕೊಂಡಿರುವ ಅರಣ್ಯ ಇಲಾಖೆ ಜಮೀನಿನಲ್ಲಿ ಪ್ರತಿ ವರ್ಷವೂ ಮರಗಳನ್ನು ಕಡಿದು ಅರಣ್ಯ ಜಾಗವನ್ನು ಒತ್ತುವರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದ ಅರಣ್ಯ ಇಲಾಖೆ ಅಧಿಕಾರಿಗಳು, ಕಾವಲಿಗೆ ಸಿಬ್ಬಂದಿ ನಿಯೋಜಿಸಿದ್ದರು.

ಮಂಗಳವಾರ ಹಾಗೂ ಬುಧವಾರ ಕೆಲ ರೈತರು, ಅರಣ್ಯ ಪ್ರದೇಶದ ಮರಗಳನ್ನು ಕಡಿದು ಹಾಕಿದ್ದರು. ಇದನ್ನು ಗಮನಿಸಿದ್ದ ಅಧಿಕಾರಿಗಳು, ಎರಡು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಒತ್ತುವರಿ ತೆರವು ಮಾಡಲು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿದ್ದ ಈರಪ್ಪ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಆಗ ರೈತ ಈರಪ್ಪ ನಾನು ಜಮೀನು ಬಿಟ್ಟು ಹೋಗುವುದಿಲ್ಲ ಎಂದು ಪಟ್ಟು ಹಿಡಿದು ಅಲ್ಲಿಯೇ ಕುಳಿತಿದ್ದಾನೆ. ವಿಷ ಕುಡಿಯಲು ಮುಂದಾದ ರೈತನನ್ನು ಅರಣ್ಯ ಸಿಬ್ಬಂದಿ ತಡೆದು, ಕೈಕಾಲುಗಳನ್ನು ಹಿಡಿದು ಹೊತ್ತುಕೊಂಡು ಹೋಗಿದ್ದಾರೆ. ಇಷ್ಟೆಲ್ಲ ನಡೆದಾಗ ರೈತ ಕುಟುಂಬದ ಕೆಲ ಮಹಿಳೆಯರು ಆಗಮಿಸಿ ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಮಣ್ಣು ಎಸೆದಿದ್ದಾರೆ. ಈ ಎಲ್ಲ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿದೆ. ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

> ಅರಣ್ಯ ಇಲಾಖೆ ಜಾಗ ಒತ್ತುವರಿ ಮಾಡಿದ್ದಾರೆ. ಜಂಟಿ ಸಮೀಕ್ಷೆ ಮಾಡಿ, ಅರಣ್ಯ ಜಾಗ ಗುರುತಿಸಲಾಗಿದೆ. ಒತ್ತುವರಿ ತೆರವಿಗೆ ಮುಂದಾಗಿದ್ದಕ್ಕೆ ರೈತರು ಸುಖಾಸುಮ್ಮನೇ ಆರೋಪ ಮಾಡುತ್ತಿದ್ದಾರೆ. ಅರಣ್ಯ ಜಾಗ ಉಳಿಸಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.
> ■ ಅಕ್ಷಯ ಪ್ರಕಾಶಕರ, ಡಿಎಫ್‌ಒ ಹಾವೇರಿ

ಇಂದು ವಿದ್ಯುತ್ ವ್ಯತ್ಯಯ

ಹಾವೇರಿ: ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಜೂನ್ 14 ರಂದು ಹಾವೇರಿ 110ಕೆ.ವ್ಹಿ ವಿದ್ಯುತ್ ವಿತರಣಾ ಕೇಂದ್ರದಿಂದ ಹುಕ್ಕೇರಿಮಠ 11 ಕೆವಿ ಫೀಡರ್‌ನಲ್ಲಿ ಬೆಳಗ್ಗೆ 10 ರಿಂದ ಸಾಯಂಕಾಲ 5 ಗಂಟೆ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರದವ್ಯಾಪ್ತಿಗೆ ಬರುವ, ಕಾಗಿನೆಲೆ ರೋಡ, ಜಿಲ್ಲಾ ಸರ್ಕಾರಿ ಆಸ್ಪತ್ರೆ ವಸತಿ ಗೃಹಗಳು, ಮುರುಘರಾಜೇಂದ್ರ ನಗರ, ಗುಡಗೇರಿ ಲೇಔಟ್, ಬಿಜೆಪಿ ಆಫೀಸ್ ಹತ್ತಿರ ಈ ಫೀಡರನ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗುವುದು. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮ ಸಡಕ್ ಯೋಜನೆ ಕಾಮಗಾರಿ ಪರಿವೀಕ್ಷಣೆ

ಹಾವೇರಿ: ಹಾವೇರಿ ಜಿಲ್ಲೆಗೆ ಸಂಬಂಧಿಸಿದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ-3ರ ಕಾಮಗಾರಿಗಳನ್ನು ನ್ಯಾಷನಲ್ ಕ್ವಾಲಿಟಿ ಮಾನೀಟರ್ ಅಧಿಕಾರಿ ಗುಪ್ತಾ ಸಂಜೀವ್ ಅವರು ಜೂನ್ 17 ರಿಂದ ಪರಿವೀಕ್ಷಣೆ ಮಾಡಲಿದ್ದಾರೆ ಎಂದು ಯೋಜನಾ ಅನುಷ್ಠಾನ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಕ್ರೀಡೆಯ ಮೂಲಕ ನಾಯಕತ್ವ ಬೆಳೆಸಿಕೊಳ್ಳಿ

ಬ್ಯಾಡಗಿ: ಯುವಜನತೆಯಲ್ಲಿ ಶಿಸ್ತು, ನಾಯಕತ್ವ ಹಾಗೂ ಸಂಘಟನೆ ಮುಖ್ಯ. ಓದಿನೊಂದಿಗೆ ಕ್ರೀಡೆಯಲ್ಲೂ ತೊಡಗಿಸಿಕೊಳ್ಳುವುದರಿಂದ ಇವುಗಳು ಬೆಳೆಯಲು ಸಾಧ್ಯ. ಶಿಕ್ಷಣದ ಜೊತೆ ಕ್ರೀಡೆಗೂ ಒತ್ತು ನೀಡಿದಾಗ ನಾಯಕತ್ವ ಗುಣ ಬರಲು ಸಾಧ್ಯವಾಗಲಿದೆ ಎಂದು ತಾಪಂ ಕಾರ್ಯನಿರ್ವಾಹ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಹೇಳಿದರು.

ಶನಿವಾರ ಪಟ್ಟಣದ ತಾಲೂಕಾ ಕ್ರಿಡಾಂಗಣದಲ್ಲಿ ಲವ್ ಬರ್ಡ್ಸ್ ಸ್ಪೋರ್ಟ್ಸ್ ಕ್ಲಬ್ ಬ್ಯಾಡಗಿ ಇವರ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಲೀಗ ಕ್ರಿಕೆಟ್ ಕ್ರೀಡಾಕೂಟದ ಉದ್ಘಾಟನೆ ನೆರವೇರಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಯುವಜನತೆಯನ್ನು ಸಂಘಟಿಸುವ ಕಾರ್ಯ ಇಂದಿನ ಬಹಳ ದೊಡ್ಡ ಅಗತ್ಯವಾಗಿದೆ. ಕ್ರೀಡೆ ಎಂಬುದು ಬಹಳ ಮಹತ್ವದ್ದಾಗಿದ್ದು, ಇದು ದೈಹಿಕ, ಮಾನಸಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆಯಲು ಸಹಕಾರಿಯಾಗಿದೆ.

ಹೊಸ ಶಿಕ್ಷಣ ನೀತಿಯಲ್ಲಿ ಕ್ರೀಡೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಅಧ್ಯಯನದ ಪ್ರಕಾರ ಕ್ರೀಡೆ ಎಂಬುದು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರದೆ ಮನುಷ್ಯನ ಮಾನಸಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೂ ಸಾಕಷ್ಟು ಪ್ರಯೋಜನಕಾರಿಯಾಗಿದೆ ಎಂದರು.

ತಾಲೂಕಾ ಶಿಶು ಅಭಿವೃದ್ಧಿ ಅಧಿಕಾರಿ ಚಂದ್ರಶೇಖರ ಮಾತನಾಡಿ, ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುದರಿಂದ ದೈಹಿಕ ಮಾನಸಿಕವಾಗಿ ಸದೃಢರಾಗಲು ಸಾಧ್ಯ.

ಇಂದಿನ ಯುವ ಜನಾಂಗ ಕ್ರೀಡಾ ಮನೋಭಾವನೆ ಬೆಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅಕ್ಷರ ದಾಸೋಹ ಅಧಿಕಾರಿ ವಸಂತ್ ಬೀರಣ್ಣನವರ್, ಕೃಷ್ಣ ಜಾದವ್ ಬಸವರಾಜ್ ಮಾಸಣಗಿ, ಕೃಷ್ಣ ಮಾಳಗಿ, ಮಂಜುನಾಥ್ ಚಿಕ್ಕಣ್ಣನವರ, ನಾಗರಾಜ್ ಚಿಕ್ಕಣ್ಣನವರ, ಷರೀಫ್ ಗೋಣಮ್ಮನವರ, ಇಸ್ಮಾಯಿಲ್ ಹಾಗೂ ಆಸಿಫ್ ಇತರರು ಉಪಸ್ಥಿತರಿದ್ದರು.



ಸಾಹಿತ್ಯ ರಚನೆಗೆ ಭೋಜರಾಜರ ಕೊಡುಗೆ ಅಪಾರ

ಹಾವೇರಿ: ಸಂಶೋಧನೆ ಎಂಬುದು ಅಪಾರ ಪರಿಶ್ರಮ, ತಾಳ್ಮೆ ಮತ್ತು ಸತ್ಯ ಸಂಧತೆಯನ್ನು ಬಯಸುತ್ತದೆ. ಸವಾಲನ್ನು ಸಮರ್ಥವಾಗಿ ಎದುರಿಸಿ, ಸಂಶೋಧನೆಗೆ ಅನ್ವರ್ಥವಾಗಿ ಬದುಕಿದವರು ದಿ.ಡಾ.ಭೋಜರಾಜ ಪಾಟೀಲ ಎಂದು ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಕಾಲೇಜಿನ ನಿವೃತ್ತ ಪ್ರಾ. ಡಾ. ವಿಜಯಕುಮಾರ ಕಟಗಿಹಳ್ಳಿಮಠ ಹೇಳಿದರು.

ನಗರದ ಗೆಳೆಯರ ಬಳಗದ ಮಣಿಭಾಯಿ ಲೋಡಾಯಿ ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ಖ್ಯಾತ ಸಂಶೋಧಕ ದಿ. ಡಾ. ಭೋಜರಾಜ ಪಾಟೀಲ ಇವರದತ್ತಿ ನಿಧಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಹಾವೇರಿ ಜಾನಪದ ವಿ.ವಿ ಪ್ರಕಟಿಸಿದ ಹಾವೇರಿ ಗ್ರಾಮ ಚರಿತ್ರೆ ಕೋಶ ಗ್ರಂಥವು ಇವರ ಕತೃತ್ವ ಶಕ್ತಿಗೆ ಉತ್ತಮ ಉದಾರಹಣೆಯಾಗಿದೆ. ಕೇವಲ ಸಂಶೋಧನೆಗೆ ಮಾತ್ರವಲ್ಲದೇ ನಾಟಕ, ಕಥೆ, ಧಾರ್ಮಿಕ ಸಾಹಿತ್ಯದಲ್ಲಿಯೂ ಅವರ ಸಾಹಿತ್ಯ ರಚನೆ ಗಮನಾರ್ಹವಾದುದು ಎಂದು ಹೇಳಿದರು. ಚಿತ್ರದುರ್ಗದ ಸಂಶೋಧಕ, ಸಾಹಿತಿ ರಾಜಶೇಖರಪ್ಪ, ರಟ್ಟಿಹಳ್ಳಿ ಪ್ರಿಯದರ್ಶಿನಿ ಕಾಲೇಜಿನ ಉಪನ್ಯಾಸಕ ಚಾಮರಾಜಕಮ್ಮಾರ ಮಾಡಿನಾಡಿದರು. ತಾಲೂಕು ಕಸಾಪ ಅಧ್ಯಕ್ಷ ವಾಯ್.ಬಿ. ಆಲದಕಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಕ ಸಾಪದಕೋಶಾಧ್ಯಕ್ಷ ಎಸ. ಎನ್. ದೊಡ್ಡಗೌಡರ ಮಾತನಾಡಿದರು. ದತ್ತಿದಾನಿ ಲೀಲಾವತಿ ಭೋಜರಾಜ ಪಾಟೀಲ ಮಾತನಾಡಿದರು. ಸಾಹಿತಿ ಸತೀಶಕುಲಕರ್ಣಿ ದತ್ತಿದಾನಿಗಳನ್ನು ಪರಿಚಯಿಸಿದರು. ಗಾಯತ್ರಿ ನಾಯಕ ಅತಿಥಿಗಳ ಪರಿಚಯ ಮಾಡಿದರು. ಸಮಾರಂಭದಲ್ಲಿ ಡಾ.ಗುಹೇಶ್ವರ ಪಾಟೀಲ, ಪರಶುರಾಮಕರ್ಜಗಿ, ಸಿ.ಎಸ್. ಮರಳಿಹಳ್ಳಿ, ಶಂಕರ ಸುತಾರ, ಮಾಲತೇಶಕರ್ಜಗಿ, ನಾಗರಾಜ ಹುಡೇದ, ಪೃಥ್ವಿರಾಜ ಬೆಟಗೇರಿ, ರೇಣುಕಾಗುಡಿಮನಿ, ಅಕ್ಕಮಹಾದೇವಿ ಹಾನಗಲ್ಲ, ಮಾಲತೇಶ ಮರಿಗೂಳಪ್ಪನವರ, ಈರಣ್ಣ ಬೆಳವಡಿ, ಶಿವಬಸವ ಮರಳಿಹಳ್ಳಿ, ಜೆ.ಎಂ.ಓಂಕರಣ್ಣನವರ, ಜೆ.ಬಿ. ಸಾವಿರಮಠ, ವಿ.ಎಂ ಪತ್ರಿ, ಮುರುಗೆಪ್ಪ ಶೆಟ್ಟರ, ಶಿವಯೋಗಿ ಬೆನ್ನೂರ, ಮತ್ತಿತರರು ಉಪಸ್ಥಿತರಿದ್ದರು. ಅಕ್ಕಮ್ಮ ಹಾನಗಲ್ಲ ಪ್ರಾರ್ಥಿಸಿದರು. ಎಸ್.ಆರ್.ಹಿರೇಮಠ ಸ್ವಾಗತಿಸಿದರು. ಪುಷ್ಪಾ ಶಲವಡಿಮಠ ನಿರೂಪಿಸಿದರು. ಡಾ.ಅಶ್ವಿನಿ ಪಾಟೀಲ ವಂದಿಸಿದರು.



ಅಧಿಕ ಮಾಸ ಪವಿತ್ರವಾದದ್ದು

ಹಾವೇರಿ: ಹಿಂದೂ ಧರ್ಮದಲ್ಲಿ ವಿಶೇಷ ಮಹತ್ವ ಪಡೆದಿರುವ ಅಧಿಕ ಮಾಸವು ಭಕ್ತಿ, ಧರ್ಮ ಮತ್ತು ಸತ್ಕಾರ್ಯಗಳಿಗೆ ಮೀಸಲಾದ ಪವಿತ್ರ ಕಾಲವಾಗಿದೆ. ಸುಮಾರು ಮೂರು ವರ್ಷಗಳಿಗೊಮ್ಮೆ ಬರುವ ಈ ಮಾಸವನ್ನು ಪುರುಷೋತ್ತಮ ಮಾಸ ಎಂತಲೂ ಕರೆಯಲಾಗುತ್ತದೆ. ಸೂರ್ಯ ಮತ್ತು ಚಂದ್ರಮಾನ ಪಂಚಾಂಗಗಳ ಸಮನ್ವಯಕ್ಕಾಗಿ ಅಧಿಕ ಮಾಸವನ್ನು ಸೇರಿಸಲಾಗುತ್ತದೆ ಎಂದು ಹರಸೂರು ಬಣ್ಣದಮಠದ ಅಭಿನವರುದ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಇಲ್ಲಿನ ಬಸವೇಶ್ವರನಗರ ಮಹಿಳಾ ನಾಗರಿಕ ವೇದಿಕೆ ವತಿಯಿಂದ ಜರುಗಿದ ದ್ವಾದಶ ಜ್ಯೋತಿರ್ಲಿಂಗ, ಗಣೇಶ ಹಾಗೂ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಧಿಕಮಾಸದ ಪ್ರಯುಕ್ತ ಮಹಿಳೆಯರಿಗೆ ಉಡಿ ತುಂಬುವ ಮತ್ತು ಬಾಗಿನ ಅರ್ಪಿಸುವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಅಧಿಕ ಮಾಸದಲ್ಲಿ ಭಕ್ತರು ದೇವರ ಆರಾಧನೆ, ಜಪ, ತಪ, ಧ್ಯಾನ, ಪಾರಾಯಣ ಹಾಗೂ ದಾನ-ಧರ್ಮಗಳಲ್ಲಿ ತೊಡಗಿಸಿಕೊಳ್ಳಬೇಕು. ಈ ಮಾಸದಲ್ಲಿ ಪುರಾಣ, ಪುಣ್ಯಕಥೆಗಳ ಪಠಣಕ್ಕೆ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ ಎಂದರು. ಹರಸೂರ ಬಣ್ಣದ ಮಠದ ಮಹಿಳಾ ವೇದಿಕೆ ಅಧ್ಯಕ್ಷೆ ಪುಷ್ಪಾವತಿ ಹೊಸೂರ ಮಹಿಳೆಯರಿಗೆ ಬಾಗೀನ ಅರ್ಪಿಸಿದರು. ಶಶಿಕಲಾ ಮಠದ ಅಧ್ಯಕ್ಷತೆ ವಹಿಸಿದ್ದರು. ಶೋಭಾತಾಯಿ ಮಾಗಾವಿ, ಸರೋಜಿನಿ ಬನ್ನೂರ ಮಮತಾ ಹಿಂಚಿಗೇರಿ, ಲತಾ ಹಳಕೊಪ್ಪ, ಸರೋಜಾ ಬಣಕಾರ ವಂದಿಸಿದರು. ವೇದಿಕೆಯ ಎಲ್ಲ ಸದಸ್ಯರು, ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಭಕ್ತರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ನಂತರ ಪ್ರಸಾದ ವಿತರಿಸಲಾಯಿತು.



ಎಂಆರ್‌ಪಿ ಬೆಲೆಗೆ ರಸಗೊಬ್ಬರ ಮಾರಾಟ ಮಾಡಿ: ಬಾರ್ಕಿ

ಹಾವೇರಿ: ಜಿಲ್ಲೆಯಲ್ಲಿ ರಸಗೊಬ್ಬರ ಮಾರಾಟಗಾರರು ಯೂರಿಯಾ, ಡಿಎಪಿ ಹಾಗೂ ಕಾಂಪ್ಲೆಕ್ಸ್ ರಸಗೊಬ್ಬರವನ್ನು ನಿಗದಿತ ಎಂಆರ್‌ಪಿ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದು, ರೈತರಿಗೆ ಆರ್ಥಿಕ ಹೊರೆ ಮಾಡುತ್ತಿದ್ದಾರೆ. ಕೃಷಿ ಇಲಾಖೆ ಅಧಿಕಾರಿಗಳು ಅಂತಹ ಡೀಲರ್‌ಗಳ ಪರವಾನಿಗೆ ರದ್ದುಪಡಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೆಆರ್‌ಎಸ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಈರಣ್ಣ ಬಾರ್ಕಿ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಸಗೊಬ್ಬರ ಮಾರಾಟಗಾರರು ಗೊಬ್ಬರ ಪೂರೈಕೆಯಲ್ಲಿ ಕೃತಕ ಅಭಾವ ಸೃಷ್ಟಿಸಿ, ರೈತರಿಗೆ ನಿರಂತರವಾಗಿ ಮೋಸ ಮಾಡುತ್ತಿದ್ದಾರೆ. ಎಂಆರ್‌ಪಿಗಿಂತ ಹೆಚ್ಚಿನ ಬೆಲೆಗೆ ಗೊಬ್ಬರ ಮಾರಾಟ ಮಾಡುತ್ತಿದ್ದರೂ, ಕೃಷಿ ಇಲಾಖೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ರಸಗೊಬ್ಬರ ವಿತರಕರು 45 ಕೆಜಿ ತೂಕದ ಒಂದು ಚೀಲ ಯೂರಿಯಾಗೆ ಸಬ್ಸಿಡಿ 266 ರೂ.ಇದ್ದು, 320 ರೂ.ಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. 50ಕೆಜಿ ತೂಕದ ಡಿಎಪಿಗೆ 1,350 ರೂ. ಇದ್ದರೆ, 1,450 ರೂ.ಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಏತನ್ಮಧ್ಯೆ, ಅನವಶ್ಯಕ ಲಿಂಕ್ ಪ್ರಾಡೆಕ್ಟ್‌ನ್ನು ಖರೀದಿಸುವಂತೆ ರೈತರಿಗೆ ಒತ್ತಡ ಹಾಕಿ, ಹಣ ಸುಲಿಗೆ ಮಾಡುತ್ತಿದ್ದಾರೆಂದು ಆರೋಪಿಸಿದರು.

ಕೃಷಿ ಇಲಾಖೆ ಹಾಗೂ ಜಿಲ್ಲಾಡಳಿತ ಪ್ರಸ್ತುತ ಮುಂಗಾರಿನಲ್ಲಿ ಅಗತ್ಯವಿರುವಷ್ಟು ಗೊಬ್ಬರವನ್ನು ರೈತರಿಗೆ ಪೂರೈಸಬೇಕು. ಎಲ್ಲ ರಸಗೊಬ್ಬರ ಮಾರಾಟಗಾರರು ಅಂಗಡಿಗಳಲ್ಲಿ ಗೊಬ್ಬರದ ದರಪಟ್ಟಿ, ದಾಸ್ತಾನು ವಿವರದ ಫಲಕಗಳನ್ನು ಅಳವಡಿಸಬೇಕು. ರಸಗೊಬ್ಬರ ಜತೆಗೆ ಲಿಂಕ್ ಖರೀದಿಸಲು ಒತ್ತಡ ಹೇರುವ ಪ್ರಕ್ರಿಯೆ ನಿಲ್ಲಿಸಬೇಕು. ನಿಯಮ ಮೀರಿ ಮಾರಾಟ ಮಾಡುವವರ ಲೈಸೆನ್ಸ್ ರದ್ದುಪಡಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಧರ್ಮಣ್ಣ ಉಪ್ಪಾರ, ಜಿಲ್ಲಾಕಾರ್ಯದರ್ಶಿ ಚರಣರಾಜರೊಡ್ಡನವರ, ಹನುಮಂತಪ್ಪ ದುಗ್ಗತ್ತಿ, ಕರಬಸಪ್ಪ ಕುಸಗೂರ, ಶಬ್ಬೀರ ಅಹ್ಮದ್, ಉಮೇಶ ಉಪಸ್ಥಿತರಿದ್ದರು.



ರೈತರಿಗೆ ಸಹಾಯವಾಣಿ

ದೇಶದ ಬೆನ್ನೆಲುಬು ಆಗಿರುವ ರೈತರ ಸಹಾಯಕ್ಕೆ ಕೆಆರ್‌ಪಕ್ಷ ನಿಂತಿದ್ದು, ರೈತರಿಗೆ ರಸಗೊಬ್ಬರ ಪೂರೈಕೆಯಲ್ಲಾಗುವ ಮೋಸ, ಅಕ್ರಮವನ್ನು ನಿಲ್ಲಿಸಲು ನಿರಂತರ ಹೋರಾಡುತ್ತದೆ. ಆಸಕ್ತ ರೈತರು ಬಿತ್ತನೆ ಬೀಜ, ರಸಗೊಬ್ಬರದ ಅಕ್ರಮ ಕಂಡುಬಂದರೆ ಪಕ್ಷದ ಸಹಾಯವಾಣಿ ಸಂಖ್ಯೆ 73495 77130ಕ್ಕೆ ಕಾಲ್ ಮಾಡಿ ಮಾಹಿತಿ ನೀಡಬೇಕು. ಆಗ ಅಕ್ರಮ ತಡೆಗಟ್ಟಿ ರೈತರಿಗೆ ಗೊಬ್ಬರ ಪೂರೈಸಲು ಕೆಆರ್‌ಎಸ್ ಸಹಾಯ ಮಾಡುತ್ತದೆ ಎಂದು ಈರಣ್ಣ ಬಾರ್ಕಿ ತಿಳಿಸಿದರು.

ವಿದ್ಯೆ ಸರ್ವಶ್ರೇಷ್ಠ ಸಂಪತ್ತು: ಶ್ರೀಗಳು

ಹಾವೇರಿ: ಕಳ್ಳರಿಂದ ವಿದ್ಯೆಗೆ ಆಪತ್ತಿಲ್ಲ, ಅಣ್ಣ ತಮ್ಮಂದಿರು ಹಾಗೂ ಅಕ್ಕತಂಗಿಯರಲ್ಲಿ ಹಂಚಲ್ಪಡುವುದಿಲ್ಲ ಬಳಸಿದಂತೆ ವೃದ್ಧಿಯಾಗುತ್ತದೆ. ತೆರಿಗೆ ರಹಿತ ಸಂಪತ್ತು ಯಾವುದಾದರೂ ಇದ್ದರೆ ಅದು ವಿದ್ಯೆ ಮಾತ್ರ. ಆದ್ದರಿಂದ ವಿದ್ಯೆಯು ಸರ್ವ ಶ್ರೇಷ್ಠ ಸಂಪತ್ತು. ಅಂತಹ ವಿದ್ಯೆಯನ್ನು ಪೋಷಕರು ತಮ್ಮ ಮಕ್ಕಳಿಗೆ ಕೊಡಿಸಬೇಕು ಎಂದು ಗೌರಿಮಠದ ಶಿವಯೋಗಿ ಶಿವಾಚಾರ್ಯ ಶ್ರೀಗಳು ಹೇಳಿದರು.

ನಗರದ ಗೌರಿಮಠದ ಮಲ್ಲಿಕಾರ್ಜುನ ಆಂಗ್ಲ -ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಮತ್ತು ಸರಸ್ವತಿ ಪೂಜಾ ಸಂಭ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕಾರಕ್ಕೆ ಬಹಳ ಮಹತ್ವವಿದೆ. ಸಂಸ್ಕಾರದಿಂದ ವ್ಯಕ್ತಿಗೆ ಅಥವಾ ವಸ್ತುವಿಗೆ ಶ್ರೇಷ್ಠತೆ ಬರುತ್ತದೆ. ಬತ್ತಕ್ಕೆ ಸಂಸ್ಕಾರ ಕೊಟ್ಟರೆ, ಅಕ್ಕಿಯಾಗುತ್ತದೆ, ಅಕ್ಕಿಗೆ ಸಂಸ್ಕಾರ ಕೊಟ್ಟರೆ ಅನ್ನವಾಗುತ್ತದೆ. ಅನ್ನಕ್ಕೆ ಸಂಸ್ಕಾರ ಕೊಟ್ಟರೆ ಪ್ರಸಾದವಾಗುತ್ತದೆ. ಪ್ರಸಾದ ಸ್ವೀಕರಿಸಿದರೆ ಮನಸ್ಸು ಪ್ರಸನ್ನವಾಗುತ್ತದೆ ಎಂದು ಸಂಸ್ಕಾರದ ಮಹತ್ವ ತಿಳಿಸಿದ ಅವರು ವಿದ್ಯೆಯು ರೂಪವನ್ನು, ಭೋಗ ಯಶಸ್ಸನ್ನು ಕರುಣಿಸುತ್ತದೆ. ಅದು ಗುಪ್ತ ಧನವಿದ್ದಂತೆ ಆದ್ದರಿಂದ ವಿದ್ಯೆಯು ಗುರುವಿಗೆ ಗುರು ಇದ್ದಂತೆ ಎಂದರು.

ಚುಟುಕು ಸಾಹಿತ್ಯ ಪರಿತ್ತಿನ ಜಿಲ್ಲಾ ಪ್ರದಾನ ಕಾರ್ಯದರ್ಶಿ ಡಾ.ಗಂಗಯ್ಯ ಕುಲಕರ್ಣಿ ಮಾತನಾಡಿದರು.

ಶಂಕ್ರಯ್ಯ ಶಾಸ್ತ್ರಿಗಳಿಂದ ಗಣಪತಿ ಹಾಗೂ ವಿದ್ಯಾದೇವತೆ ಸರಸ್ವತಿಯ ಪೂಜೆ ಜರುಗಿತು. ನಂತರ ಶ್ರೀಗಳಿಂದ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು. ತದನಂತರ ಎಲ್ಲ ಪಾಲಕರು ತಮ್ಮ ಮಕ್ಕಳಿಗೆ ಅಮ್ಮ -ಅಪ್ಪ ಎಂದು ಬರೆಸುವುದರೊಂದಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು.

ಮುಖ್ಯೋಪಾಧ್ಯಾಯರಾದ ಶಂಕರ ಅಕ್ಕಸಾಲಿ ಅವರು ಸ್ವಾಗತಿಸಿದರು. ಶಿಕ್ಷಕಿ ರಶ್ಮಿ ಕುಲಕರ್ಣಿ ಪ್ರಾರ್ಥಿಸಿದರು. ಶಿಕ್ಷಕಿ ಪೂಜಾ ಮಹಾರಾಜಪೇಟ ನಿರೂಪಿಸಿದರು. ಶಿಕ್ಷಕಿ ಗೌರಮ್ಮ ಲೋಕಾಪುರ ವಂದಿಸಿದರು. ಪಾಲಕರು, ಮಕ್ಕಳು ಹಾಗೂ ಶಿಕ್ಷಕ ಬಳಗ ಕಾರ್ಯಕ್ರಮ ನೋಡಿ ಸಂತಸಪಟ್ಟರು. ಮಕ್ಕಳಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು.



ಕಿರುಸುದ್ದಿ

ಕಾಂಗ್ರೆಸ್ ನಡೆ - ನಿಮ್ಮ ಮತ ರಕ್ಷಣೆ ಕಡೆ ಅಭಿಯಾನ



•**ಬೆಳಗಾವಿ:** ನಗರದಲ್ಲಿರುವ ಕಾಂಗ್ರೆಸ್ ಭವನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿ (ನಗರ/ಗ್ರಾಮೀಣ/ಚಿಕ್ಕೋಡಿ) ಸಂಯುಕ್ತ ಆಶ್ರಯದಲ್ಲಿ ನಡೆದ ಕಾಂಗ್ರೆಸ್ ನಡೆ - ನಿಮ್ಮ ಮತ ರಕ್ಷಣೆ ಕಡೆ ಅಭಿಯಾನದಲ್ಲಿ ಶಾಸಕ ಲಕ್ಷ್ಮೀ ಹೆಬ್ಬಾಳ್ಕರ್ ಪಾಲ್ಗೊಂಡಿದ್ದರು. ಈ ಅಭಿಯಾನದ ಅಂಗವಾಗಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಈ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮತ ಹಕ್ಕು ರಕ್ಷಣೆ, ಸಂವಿಧಾನದ ಸಮರ ಹಾಗೂ ಪ್ರತಿ ಮತವನ್ನು ಉಳಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ಈ ಆಂದೋಲನವನ್ನು ಯಶಸ್ವಿಗೊಳಿಸಲು ಮತ್ತು ಪ್ರತಿಯೊಬ್ಬ ಅರ್ಹ ಮತದಾರರ ಹಕ್ಕನ್ನು ಖಾತ್ರಿಪಡಿಸಲು ಕಾರ್ಯಕರ್ತರು ಸನ್ನದ್ಧರಾಗಬೇಕೆಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರಿಗೆ ತರಬೇತಿ ಕಾರ್ಯಾಗಾರ



•**ಬೆಳಗಾವಿ:** ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಅರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸುವುದು ಹಾಗೂ ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ರಾಹುಲ್ ಜಾರಕಿಹೊಳಿ ಹೇಳಿದರು. ಬೆಳಗಾವಿ ನಗರದ ಕಾಂಗ್ರೆಸ್ ಭವನದಲ್ಲಿ ಬೆಳಗಾವಿ ಗ್ರಾಮೀಣ, ನಗರ ಹಾಗೂ ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಜಾಗೃತಿ ಮತ್ತು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಕಾರ್ಯಕರ್ತರಿಗೆ ಪ್ರಮುಖ ನಿರ್ದೇಶನಗಳನ್ನು ನೀಡಿದರು. ವಿಜಯ ಮಂಡಳ ಮತ್ತು ತರಬೇತಿ: ಕಾರ್ಯಾಗಾರದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಎಡ. ಡಾ. ವಾಸು.ಎಚ್ ವಿ. ಅವರು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯ ನಿಯಮಗಳು ಹಾಗೂ ಪ್ರಕ್ರಿಯೆಗಳ ಕುರಿತು ಸಮಗ್ರವಾಗಿ ವಿವರಿಸಿದರು. ಈ ವೇಳೆ ಜಿಲ್ಲೆಯ ಹಲವು ಪ್ರಮುಖ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಕಾರ್ಯಕರ್ತರು, ನೂರಾರು ಕಾರ್ಯಕರ್ತರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅಪರಿಚಿತ ವ್ಯಕ್ತಿ ಸಾವು

•**ಬೆಳಗಾವಿ:** ತಿಲಕವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ 1ನೇ ರೈಲ್ವೆಗೇಟ್ ಹತ್ತಿರ ಜೂನ್ 10 ರಂದು ರಾತ್ರಿ 1 ಗಂಟೆ ಸುಮಾರಿಗೆ ಅಪರಿಚಿತ ವ್ಯಕ್ತಿಯು ಅಸ್ವಸ್ಥನಾಗಿದ್ದಂದ ಸಾರ್ವಜನಿಕರು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಸದರಿ ವ್ಯಕ್ತಿಯು ಜೂನ್ 11ರಂದು ಉಪಚಾರ ಫಲಿಸದೆ ತೀರಿಕೊಂಡಿರುತ್ತಾನೆ. ಸದರಿ ಮೃತನ ಶವವು ಬೆಳಗಾವಿ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇರುತ್ತದೆ. ಮೃತ ವ್ಯಕ್ತಿಯ ಚಹರೆ: ವಯಸ್ಸು ಅಂದಾಜು 50 ವರ್ಷ, ಗೋಧಿಗೆಂಪು ಮೈ ಬಣ್ಣ, ಕೋಲು ಮುಖ, ಉದ್ದ ಮೂಗು, ಕಪ್ಪು ಬಿಳಿ ಬಣ್ಣ ಮಿಶ್ರಿತ ಕೂದಲು ಮತ್ತು ಕಪ್ಪು ಬಿಳಿ ಬಣ್ಣ ಮಿಶ್ರಿತ ಕುರುಚಲು ಗಡ್ಡ ಮೈಯಿಂದ ಸದಾಹಾರಣ, ಮೈ ಮೇಲೆ ಬಿಳಿ ಬಣ್ಣದ ಹಾಪ್ ತೋಳಿನ ಬನಿಯಾನ ಮತ್ತು ಕಪ್ಪು ಬಣ್ಣದ ಪಾರ್ಮಲ್ ಪ್ಯಾಂಟ್ ಧರಿಸಿರುತ್ತಾನೆ. ಈ ಪ್ರಕಾರ ಚಹರೆಯುಳ್ಳ ಅಪರಿಚಿತ ವ್ಯಕ್ತಿಯ ಶವವು ಬೆಳಗಾವಿ ಜಿಲ್ಲಾ ಆಸ್ಪತ್ರೆ ಶೈತ್ಯಾಗಾರದಲ್ಲಿ ಇದ್ದು ಸದರಿ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ತಿಲಕವಾಡಿ ಪೊಲೀಸ ಠಾಣೆ ಅಥವಾ ಬೆಳಗಾವಿ ನಗರ ಪೊಲೀಸ ಕಂಟ್ರೋಲ ರೂಮ ಸಂಪರ್ಕಿಸಲು ತಿಲಕವಾಡಿ ಪೊಲೀಸ್ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಸಿಪಿಐ ರೊಟ್ಟಿ ನಿಧನ

•**ನೇಸರಗಿ:** ನಿವೃತ್ತ ಸೈನಿಕ, ನಿವೃತ್ತ ಪೊಲೀಸ್ ಇಲಾಖೆಯ ಸಿಪಿಐ ಬಸವಣ್ಣೆಪ್ಪ ಯಲ್ಲಪ್ಪ ರೊಟ್ಟಿ ನಿಧನರಾಗಿದ್ದಾರೆ. ಮೃತರು ಮಾಜಿ ಗ್ರಾಪಂ ಅಧ್ಯಕ್ಷರಾದ ಅನ್ನಪೂರ್ಣ ರೊಟ್ಟಿ ಸೇರಿದಂತೆ ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಬೆಳಗಾವಿ : ಇಲ್ಲಿನ ಕ್ಯಾಂಪ್ ಪ್ರದೇಶದ ಸೇಂಟ್ ಆಂತೋಣಿಯವರ ಚರ್ಚ್‌ನಲ್ಲಿ ನೂತನವಾಗಿ ನಿರ್ಮಿಸಲಾದ 'ಆಡೋರೇಶನ್ ಚಾಪೆಲ್' ನ ಉದ್ಘಾಟನೆ ಮತ್ತು ಆಶೀರ್ವಚನ ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭಾಗವಹಿಸಿದ್ದರು. ಬಿಷಪ್ ಡಾ. ಡೆರೆಕ್ ಫರ್ನಾಂಡಿಸ್ ಅವರ ಹಸ್ತದಿಂದ ಹಾಗೂ ಧರ್ಮಗುರುಗಳಾದ ಫಾದರ್ ವಿಜಯ್ ಮೆಂಡಿಸ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಯಿತು. ಈ ವೇಳೆ ಕ್ರಿಶ್ಚಿಯನ್ ಸಮುದಾಯದ ಮುಖಂಡರು ಸೇರಿದಂತೆ ಹಲವರು ಭಾಗಿಯಾಗಿದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

•**ಬೆಳಗಾವಿ:** ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ ಹಾಗೂ ಅರಣ್ಯ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸುಭಾಸ ಸಂಕದ ಅವರು ಪರಿಸರ ದಿನಾಚರಣೆ ಇಂದಿನ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ನಗರದ ಕೋರ್ಟ್ ಆವರಣದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ಪರಿಸರ ರಕ್ಷಣೆ ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗದೇ, ಪ್ರತಿಯೊಬ್ಬರೂ ವರ್ಷಪೂರ್ತಿ ಪರಿಸರದ ಕಾಳಜಿ ವಹಿಸಬೇಕು ಎಂದು ಅವರು ಕರೆ ನೀಡಿದರು. ಆಧುನಿಕ ತಂತ್ರಜ್ಞಾನ ಮತ್ತು ಅಭಿವೃದ್ಧಿಯ ಪರಿಣಾಮವಾಗಿ ನೈಸರ್ಗಿಕ ಸಂಪನ್ಮೂಲಗಳು ನಾಶವಾಗುತ್ತಿದ್ದು, ಇದು ಮನುಕುಲದ ಭವಿಷ್ಯಕ್ಕೆ ಗಂಭೀರ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಕ್ರಾಂತಿ ಎನ್. ಇ. ಮಾತನಾಡಿ, ಅರಣ್ಯ ಇಲಾಖೆ ವಿವಿಧ ಯೋಜನೆಗಳ ಮೂಲಕ ವರ್ಷಪೂರ್ತಿ ಪರಿಸರ ಸಂರಕ್ಷಣೆಯ ಕಾರ್ಯ ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ಶಾಲೆಗಳು, ಕಾಲೇಜುಗಳು ಹಾಗೂ ರಕ್ಷಣೆ ವ್ಯವಸ್ಥೆ ಇರುವ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ಅವುಗಳ ಸಮರ್ಪಕ ಪಾಲನೆ ಅಗತ್ಯತೆ ನೀಡಲಾಗುತ್ತಿದೆ ಎಂದರು. ಈ ವೇಳೆ ವಕೀಲರ ಸಂಘದ ಉಪಾಧ್ಯಕ್ಷ ಪವನ ಪಾಟೀಲ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಬಾಳೆಹೊಸೂರ, ವಲಯ ಅರಣ್ಯಾಧಿಕಾರಿ ಪ್ರಶಾಂತ ಗೌರಾಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಇದ್ದರು.



ಬೆಳಗಾವಿ: ನಗರದ ಕೋರ್ಟ್ ಆವರಣದಲ್ಲಿ ಪರಿಸರ ದಿನ ಆಚರಣೆ ಮಾಡಲಾಯಿತು.

ಮಳೆ ಹಾನಿ ಪ್ರದೇಶಗಳಿಗೆ ಸಂಸದ ಜಗದೀಶ ಶೆಟ್ಟರ್ ಭೇಟಿ

ಸಂತ್ರಸ್ತರಿಗೆ ಶೀಘ್ರ ಪರಿಹಾರಕ್ಕೆ ಸೂಚನೆ

•**ಬೈಲಹೊಂಗಲ:** ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಹಾನಿಗೊಳಗಾದ ಬೈಲಹೊಂಗಲ ಪಟ್ಟಣದ ವಿವಿಧ ಪ್ರದೇಶಗಳಿಗೆ ಬೆಳಗಾವಿ ಸಂಸದ ಜಗದೀಶ ಶೆಟ್ಟರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಗರದ ಕಲ್ಮಠಗಲ್ಲಿ, ಚನ್ನಸಮಾಧಿ ಸಮೀಪ ಕುಸಿದು ಬಿದ್ದಿರುವ ಮನೆಗಳು ಹಾಗೂ ಬಜಾರ್ ರೋಡ್ ಮತ್ತು ಬಸ್ ನಿಲ್ದಾಣದ ಹತ್ತಿರ ಮಳೆ ನೀರಿನಿಂದ ಹಾನಿಗೊಳಗಾದ ಅಂಗಡಿಗಳನ್ನು ವೀಕ್ಷಿಸಿ ಸಂತ್ರಸ್ತರ ಅಹವಾಲು ಆಲಿಸಿದರು.

ಹಾನಿಗೊಳಗಾದ ಪ್ರದೇಶಗಳ ಪರಿಶೀಲನೆ ವೇಳೆ ತಹಶೀಲ್ದಾರ್ ಸದಾಶಿವ ಮಕ್ಕೋಜಿ ಹಾಗೂ ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಅವರೊಂದಿಗೆ ಚರ್ಚಿಸಿ, ಸಂತ್ರಸ್ತರಿಗೆ ಶೀಘ್ರ ಪರಿಹಾರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ವೇಳೆ ಪತ್ರಕರ್ತ ಹಾಗೂ ಹೋರಾಟಗಾರ ಈಶ್ವರ ಶಿಲ್ಲೇದಾರ ಅವರು ಸಂಸದರಿಗೆ ಮನವಿ ಸಲ್ಲಿಸಿ, ನಗರದ 4ನೇ ಹಾಗೂ 8ನೇ ವಾರ್ಡ್ ನಿವಾಸಿಗಳು ಪ್ರತಿ ಮಳೆಗಾಲದಲ್ಲೂ ತೀವ್ರ ಸಂಕಷ್ಟ ಅನುಭವಿಸುತ್ತಿರುವ ಬಗ್ಗೆ ಗಮನ ಸೆಳೆದರು. ಮೌನೇಶ್ವರ ನಗರ ಮತ್ತು ವಿದ್ಯಾನಗರ ಭಾಗಗಳಿಂದ ಹರಿದುಬರುವ ಮಳೆ ನೀರು ಹಿಂದೆ ದೊಡ್ಡ ಕೆರೆಯಲ್ಲಿ ಸೇರುತ್ತಿದ್ದರೂ, ಕೆರೆ ಅಭಿವೃದ್ಧಿ ಕಾಮಗಾರಿ ಹಾಗೂ ಬಸ್ ನಿಲ್ದಾಣದ ಹಿಂಭಾಗದ ಪ್ರದೇಶ ಅಭಿವೃದ್ಧಿಗೊಂಡಿರುವ ಕಾರಣ ನೀರು ಸರಾಗವಾಗಿ ಹರಿಯದೆ ಮನೆಗಳಿಗೆ ನುಗ್ಗುತ್ತಿದೆ ಎಂದು ವಿವರಿಸಿದರು.

ಮಳೆ ಬಂದಾಗಲೆಲ್ಲ ಕಲುಷಿತ ನೀರು ಮನೆಗಳಿಗೆ ನುಗ್ಗಿ ದಿನಬಳಕೆ ವಸ್ತುಗಳು ಹಾಳಾಗುವುದಲ್ಲದೆ, ವಿಷಜಂತುಗಳು ಮನೆಗಳಿಗೆ ಪ್ರವೇಶಿಸುತ್ತಿದ್ದು ಮಕ್ಕಳು, ವೃದ್ಧರು ಹಾಗೂ ಗರ್ಭಿಣಿಯರು ಭಯದ ವಾತಾವರಣದಲ್ಲಿ ಬದುಕುವಂತಾಗಿದೆ. ಆದ್ದರಿಂದ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿ ಸ್ಥಳೀಯ ನಿವಾಸಿಗಳಿಗೆ ನೆಮ್ಮದಿಯ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ, ಮಾಜಿ ಶಾಸಕ ಜಗದೀಶ್ ಮೆಟಗುಡ್ಡ, ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ಬಿಜೆಪಿ ಮುಖಂಡ ವಿಜಯ ಮೆಟಗುಡ್ಡ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಗುರು ಮೆಟಗುಡ್ಡ, ಮಂಡಲ ಅಧ್ಯಕ್ಷ ಸುಭಾಷ್ ತುರಮರಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಜಗದೀಶ್ ಬೂದಿಹಾಳ, ಬಿಜೆಪಿ ಜಿಲ್ಲಾ ಮಾಧ್ಯಮ ಪ್ರಮುಖ್ ಸಚಿನ್ ಕಡಿ, ಗುರುಪಾದ ಕಳ್ಳಿ, ಶ್ರೀಶೈಲ ಯಡಳ್ಳಿ, ಮಡಿವಾಳಪ್ಪ ಹೋಟಿ, ಸುನೀಲ್ ಮರಕುಂಬಿ, ಪ್ರಫುಲ್ ಪಾಟೀಲ, ಸಂತೋಷ ಹಡಪದ, ಲಕ್ಕಪ್ಪ ಕಾರಗಿ, ವಿಶಾಲ ಬೋಗುರ, ಪ್ರಶಾಂತ್ ಅಮ್ಮಿನಭಾವಿ, ಚಂದನ ಕೌಜಲಗಿ, ಬಸವರಾಜ ನೇಸರಗಿ, ಗುರುಪಾದ ಅಂಗಡಿ, ಸದಾಶಿವ ಪಾಟೀಲ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.



ಗಂಭೀರವಾಗಿ ಪರಿಗಣಿಸಿ

ಸ್ಥಳೀಯರ ಸಮಸ್ಯೆಗಳಿಗೆ ಸ್ಪಂದಿಸಬೇಕೆಂಬ ಉದ್ದೇಶದಿಂದ ಕಲುಷಿತ ನೀರಿನಲ್ಲಿ ಮೂರು ಗಂಟೆಗಳ ಕಾಲ ಧರಣಿ ನಡೆಸಿದ್ದ ಯುವ ಪತ್ರಕರ್ತ ಈಶ್ವರ ಶಿಲ್ಲೇದಾರ ಅವರ ಹೋರಾಟವನ್ನು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಕೆಆರ್‌ಎಸ್ ಪಕ್ಷದ ಜಿಲ್ಲಾಧ್ಯಕ್ಷ ಸಿದ್ದು ಕಣಬರಗಿ ಆಗ್ರಹಿಸಿದರು.

> **ರಾಜ್ಯ ಸರ್ಕಾರದ ಸಚಿವರೊಂದಿಗೆ ಚರ್ಚಿಸಿ ಹೆಚ್ಚಿನ ಪರಿಹಾರ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ.**
> ■ **ಜಗದೀಶ ಶೆಟ್ಟರ,** ಸಂಸದ

ಜ್ಞಾನ, ಅನುಭವಕ್ಕೆ ಬೆಲೆ ಕಟ್ಟಲಾಗದು

•**ರಾಮದುರ್ಗ:** ಮನುಷ್ಯ ತಾನು ಗಳಿಸಿಟ್ಟ ದುಡ್ಡು, ಆಸ್ತಿ-ಪಾಸ್ತಿಯನ್ನು ಕಳೆದುಕೊಳ್ಳಬಹುದು. ಆದರೆ ಪಡೆದ ಜ್ಞಾನ, ಸಂಪಾದಿಸಿದ ಅನುಭವವನ್ನು ಎಂದಿಗೂ ಕಳೆದುಕೊಳ್ಳಲಾರ ಎಂದು ನೇಕಾರ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಬಿ.ಎಸ್. ಸೋಮಶೇಖರ ಹೇಳಿದರು.

ನಗರದ ಬಾಣಕಾರ ಪೇಟೆಯ ಬನಶಂಕರಿ ಸಮುದಾಯ ಭವನದಲ್ಲಿ ತಾಲೂಕು ನೇಕಾರ ಸಮುದಾಯಗಳ ಒಕ್ಕೂಟದ ನೇತೃತ್ವದಲ್ಲಿ ನಡೆದ ಎಸ್ ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಐಪಿಎಸ್, ಐಎಎಸ್ ನಂತಹ ಪರೀಕ್ಷೆ ಎದುರಿಸಲು ಸನ್ನದ್ಧರಾದಲ್ಲಿ ಅಂತವರಿಗೆ ಸಮಾಜದಿಂದ ಆರ್ಥಿಕ ಸಹಾಯ ಮಾಡಿ, ಪ್ರೋತ್ಸಾಹಿಸಲಾಗುವುದು ಎಂದು ಭರವಸೆ ನೀಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ ಮಾತನಾಡಿ, ಪ್ರತಿ ವರ್ಷ ನಡೆಯುವ ಪ್ರತಿಭಾ ಪುರಸ್ಕಾರ ಸಮಾರಂಭಕ್ಕೆ ಶ್ರೀಮತಿ ಈರಮ್ಮ ಯಾದವಾಡ ಟ್ರಸ್ಟ್ ವತಿಯಿಂದ ಆರ್ಥಿಕ ಸಹಾಯ ನೀಡುವುದಾಗಿ ಈ ವೇಳೆ ಘೋಷಿಸಿದರು.

▸▸ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ 76ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸತ್ಕರಿಸಿ ಗೌರವಿಸಲಾಯಿತು.

ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಶಂಕ್ರಣ್ಣ ಮುರುಡಿ, ನೇಕಾರ ಸಮುದಾಯಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಗಜಾನನ ಗುಂಜೇರಿ, ಉಪಾಧ್ಯಕ್ಷ ಗೋಪಾಲ ಪಾತಾಳಿ, ಭಾರತೀಯ ಜ್ಞಾನ ಪರಂಪರೆಯ ಹೃಷಿಕೇಶ ಕುಲಕರ್ಣಿ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ತಾಲೂಕು ಅಧ್ಯಕ್ಷ ನಾರಾಯಣ ಹೂಲಿ ಮಾತನಾಡಿದರು.

ಜಿಲ್ಲಾ ಕಾರ್ಯದರ್ಶಿ ರಾಜು ಕೋಪರ್ಡೆ, ಬನಶಂಕರಿ ದೇವಸ್ಥಾನ ಜೀರ್ಣೋದ್ಧಾರ ಕಮಿಟಿ ಅಧ್ಯಕ್ಷ ಏಕನಾಥ ಕೊಣ್ಣೂರ, ದಿನೇಶ ಗಿಡ್ನಂದಿ, ವಿನಾಯಕ ಕಾಮಕರ, ಲೋಹಿತ ಮೋರಕರ, ಬಸವರಾಜ ಡವಳಿ ಸೇರಿದಂತೆ ಇತರರು ವೇದಿಕೆಯಲ್ಲಿದ್ದರು.

ವಿನೋದ ಕರದಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಎ. ಮುನವಳ್ಳಿ ಸ್ವಾಗತಿಸಿದರು. ಟಿ.ಜಿ. ಕರದಿನ ಕಾರ್ಯಕ್ರಮ ನಿರೂಪಿಸಿದರು. ಸುರೇಶ ಬಲಕುಂದಿ ವಂದಿಸಿದರು.



ದೇವಾಂಗ ಸಮಾಜದ ಕಲ್ಯಾಣ ಮಂಟಪ ಕಾಮಗಾರಿ ಪರಿಶೀಲನೆ

•**ಬೆಳಗಾವಿ:** ಗ್ರಾಮೀಣ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಶನಿವಾರ ಮಾರಿಹಾಳ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ದೇವಾಂಗ ಸಮಾಜದ ಕಲ್ಯಾಣ ಮಂಟಪದ ಕಟ್ಟಡದ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಪ್ರಗತಿಯನ್ನು ಪರಿಶೀಲನೆ ನಡೆಸಿದರು.

ಕಲ್ಯಾಣ ಮಂಟಪ ನಿರ್ಮಾಣವು ದೇವಾಂಗ ಸಮಾಜದ ಬಹುಕಾಲದ ಕನಸಾಗಿದ್ದು, ಈ ಕಟ್ಟಡ ಪೂರ್ಣಗೊಂಡ ಬಳಿಕ ಸಮಾಜದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುಕೂಲಕರ ವೇದಿಕೆ ದೊರೆಯಲಿದೆ. ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವ ಕುರಿತು ಅವರು ಸಂಬಂಧಪಟ್ಟವರೊಂದಿಗೆ ಚರ್ಚಿಸಿದರು.

ಇದೇ ಸಂದರ್ಭದಲ್ಲಿ ಮಾರಿಹಾಳ ಗ್ರಾಮದ ಇತರೆ ಪ್ರಮುಖ ಅಭಿವೃದ್ಧಿ ಕೆಲಸಗಳ ಬಗ್ಗೆಯೂ ಚರ್ಚೆ ನಡೆಯಿತು. ಗ್ರಾಮದಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಸಮುದಾಯ ಸೌಲಭ್ಯಗಳು ಸೇರಿದಂತೆ ಜನರಿಗೆ ಅಗತ್ಯವಾಗಿರುವ ವಿವಿಧ ಮೂಲಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ಥಳೀಯರು ತಮ್ಮ ಬೇಡಿಕೆಗಳು ಮತ್ತು ಸಲಹೆಗಳನ್ನು ಸಲ್ಲಿಸಿದರು.

ಈ ವೇಳೆ ದೇವಾಂಗ ಸಮಾಜದ ಹಿರಿಯರು, ಗ್ರಾಮದ ಪ್ರಮುಖರು, ಸ್ಥಳೀಯ ಜನಪ್ರತಿನಿಧಿಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಹಲವರು ಇದ್ದರು.

> **ಬೆಳಗಾವಿ ಗ್ರಾಮೀಣ ಕ್ಷೇತ್ರದ ಎಲ್ಲ ಸಮುದಾಯಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಲಾಗುತ್ತಿದ್ದು, ಜನರ ಅಗತ್ಯಗಳಿಗೆ ಸ್ಪಂದಿಸುವ ಕೆಲಸಗಳನ್ನು ನಿರಂತರವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ. ಸಮಾಜದ ವಿವಿಧ ವರ್ಗಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಸಾಮಾಜಿಕ ಸೌಹಾರ್ದತೆ ಮತ್ತು ಸಮಗ್ರ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶ ನಮ್ಮದಾಗಿದೆ.**
> ■ **ಲಕ್ಷ್ಮೀ ಹೆಬ್ಬಾಳ್ಕರ್,** ಶಾಸಕಿ



ಸರ್ಕಾರದ ನಿರ್ಧಾರ ಸ್ವಾಗತಿಸಿದ ಸಂಘಟನೆ

•**ಗೋಕಾಕ:** ಕಂಪನಿ ಜೊತೆಗೆ ಒಪ್ಪಂದ ಮಾಡಿಕೊಂಡು ಮಾಂಸದ ಕೋಳಿ ಸಾಕಾಣಿಕೆ ಮಾಡುತ್ತಿರುವ ಸಂಘಟನೆಯ ಹೋರಾಟದ ಫಲವಾಗಿ ಕನಿಷ್ಠ ಪ್ರತಿ ಕೆ ಜಿ ಗೆ 10 ರೂ. ಸರ್ಕಾರ ನಿಗದಿ ಮಾಡಿದ್ದು, ಸ್ವಾಗತಾರ್ಹ ಎಂದು ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಸಹ ಕಾರ್ಯದರ್ಶಿ ಅಡಿವೆಪ್ಪ ಬಿಲಕುಂದಿ ತಿಳಿಸಿದ್ದಾರೆ.

ಅವರು, ನಗರದಲ್ಲಿ ಕರೆದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಂಪನಿ ಒಪ್ಪಂದದ ಮಾಂಸದ ಕೋಳಿ ಸಾಕಾಣಿಕೆ ನಿರ್ವಹಣಾ ವೆಚ್ಚ ದುಬಾರಿಯಾಗಿದ್ದು, ಲಾಭವಿಲ್ಲದೆ ಸಾವಿರಾರು ರೈತ ಕುಟುಂಬಗಳು ಹತ್ತಾರು ವರ್ಷದಿಂದ ಪ್ರತಿ ಕೆ ಜಿ ಗೆ 6ರೂ. 25 ಪೈಸೆ ಕಂಪನಿಗಳಿಂದ ಪಡೆದು ನಷ್ಟ ಅನುಭವಿಸಿದ್ದರು. ರೈತರ ಒಕ್ಕಟ್ಟು ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ಹೋರಾಟಕ್ಕೆ ಜಯ ದೊರೆತಂತಾಗಿದೆ ಎಂದು ಹರ್ಷ ವ್ಯಕ್ತ ಪಡಿಸಿದರು.

ಇನ್ನೂ ಕೆಲವು ಬೇಡಿಕೆಗೆ ಒತ್ತಾಯಿಸಿ ಪಶುಪಾಲನಾ ಇಲಾಖೆ ಆಯುಕ್ತರಾದ ಶಿಲ್ಪಾ ನಾಗ ಅವರಿಗೆ ಮನವಿ ಸಲ್ಲಿಸಲಾಗುತ್ತಿದೆ ಹಾಗಾಗಿ ಕೋಳಿ ಸಾಕಾಣಿಕೆ ರೈತರು ಒಟ್ಟಾಗಿ ಸಂಘಟನೆಯ ಮುಖಾಂತರ ಬೇಡಿಕೆಗಳನ್ನು ಈಡೇರಿಸಿ ಕೊಳ್ಳಬೇಕಿದೆ.

ಕೋಳಿ ಸಾಕಾಣಿಕೆ ಕೃಷಿಯ ಒಂದು ಅಂಗವಾಗಿದ್ದರಿಂದ ವಿದ್ಯುತ್‌ನ್ನು ಉಚಿತವಾಗಿ ಪೂರೈಸಬೇಕು. ಕೋಳಿ ಸಾಕಾಣಿಕೆ ರೈತರಿಗೆ ನೀಡುತ್ತಿರುವ ಕೆಸಿಸಿ 3 ಲಕ್ಷದ ಸಾಲದ ಮಿತಿಯನ್ನು 10 ಲಕ್ಷಕ್ಕೆ ಏರಿಸಬೇಕೆಂದರು.

ಈ ಸಂದರ್ಭದಲ್ಲಿ ಮಲ್ಲಪ್ಪ ಇಂಗಳಿ, ರಾಮಪ್ಪ ದಬಾಡಿ, ಸುರೇಶ ಬಡ್ಲಿ, ಶಿವಬಸು ಹಾದರಗಿ ಸೇರಿದಂತೆ ಇತರರು ಇದ್ದರು.



ಆರೋಗ್ಯಯುತ ಜೀವನ ಶೈಲಿಗೆ ಒತ್ತು ನೀಡಿ: ಮುನ್ನವಳ್ಳಿ

•**ಗೋಕಾಕ:** ದೇಶದಲ್ಲಿ ಅತ್ಯಂತ ದೊಡ್ಡ ಆಸ್ಪತ್ರೆಯಾಗಿ ಕೆಎಲ್‌ಇ ಆಸ್ಪತ್ರೆ ಬೆಳೆದು ನಿಂತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಆರೋಗ್ಯವಂತರಾಗಿ ಎಂದು ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಜಯಾನಂದ ಮುನ್ನವಳ್ಳಿ ಹೇಳಿದರು.

ಶನಿವಾರದಂದು ಘೋಡಗೇರಿ ಗ್ರಾಮದ ಶ್ರೀ ಶಿವಾನಂದ ಮಠದಲ್ಲಿ ಕೆಎಲ್‌ಇ ಸಂಸ್ಥೆಯ ಆಸ್ಪತ್ರೆ ಐ.ಸಿ.ಯು ಗೋಕಾಕ ಹಾಗೂ ಮಲ್ಲಯ್ಯ ಮಹಾಸ್ವಾಮಿಗಳು ಘೋಡಗೇರಿ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧಿ ವಿತರಣೆ ಶಿಬಿರದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಆಧುನಿಕ ಯುಗದಲ್ಲಿ ಪರಿಸರ ಹಾಳಾಗುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರು ಕಾಳಜಿ ವಹಿಸಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸಬೇಕು ಅಂದಾಗ ಆರೋಗ್ಯವಂತ ಜೀವನ ನಡೆಸಲು ಸಾಧ್ಯ ಎಂದು ಹೇಳಿದರು.

ಸಾನಿಧ್ಯವಹಿಸಿ ಮಾತನಾಡಿದ ಮಲ್ಲಯ್ಯ ಮಹಾಸ್ವಾಮಿಗಳು, ಇಂದು ಆರೋಗ್ಯ ಸೇವೆಗಳು ದುಬಾರಿ ಆಗಿದ್ದು, ಇಂತಹ ಉಚಿತ ಆರೋಗ್ಯ ಶಿಬಿರಗಳ ಸದುಪಯೋಗ ಪಡೆದುಕೊಂಡು ಆರೋಗ್ಯವಂತರಾಗಬೇಕು ಕೆಎಲ್‌ಇ ಗೋಕಾಕ ಆಸ್ಪತ್ರೆಯಲ್ಲಿ ಅನುಭವಿ ವೈದ್ಯರ ತಂಡ ಕಾರ್ಯನಿರ್ವಹಿಸುತ್ತಿದ್ದಾರೆ ಇವರ ಸೇವೆ ಈ ಭಾಗದ ಎಲ್ಲರೂ ಪಡೆಯಬೇಕು ಎಂದರು.

ಈ ವೇಳೆ ಡಾ.ಧರೆಪ್ಪ ಚೌಗಲಾ, ಡಾ.ಶುಭಂ ಹುಕ್ಕೇರಿ, ಡಾ.ಅರುಣ ವಣ್ಣೂರ, ಡಾ.ಜ್ಯೋತಿ ಚೌಗಲಾ, ಡಾ.ಅಂಜನಾಬಾಯಿ ಓಸೇಕರ, ರೋಟರಿ ಸಂಸ್ಥೆಯ ಸೋಮಶೇಖರ್ ಮಗದುಮ್ಮ ಅನೇಕರಿದ್ದರು.



ಉದ್ಯಮಗಳ ವಿದ್ಯುತ್ ಸಮಸ್ಯೆಗಳಿಗೆ ಶೀಘ್ರ ಪರಿಹಾರ

•**ಬೆಳಗಾವಿ:** ವಿದ್ಯುತ್ ಕೊರತೆ, ಪದೇ ಪದೇ ವಿದ್ಯುತ್ ನಿಲುಗಡೆ ಸೇರಿದಂತೆ ಬೆಳಗಾವಿಯ ಕೈಗಾರಿಕೆಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ ಒದಗಿಸಲಾಗುವುದು ಎಂದು ಕೆಪಿಟಿಸಿಎಲ್ ಹಾಗೂ ಹೆಸ್ಕಾಂ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಬೆಳಗಾವಿ ನಗರದ ಚೆಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಸಭಾಭವನದಲ್ಲಿ ಆಯೋಜಿಸಿದ್ದ ಕೈಗಾರಿಕೋದ್ಯಮಿಗಳ ಅಹವಾಲು ಸಭೆಯಲ್ಲಿ ಭಾಗವಹಿಸಿ ಅಧಿಕಾರಿಗಳು ಈ ಭರವಸೆ ನೀಡಿದರು.

ಸಭೆಯಲ್ಲಿ ಮಾತನಾಡಿದ ಚೆಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಅಧ್ಯಕ್ಷ ಪ್ರಭಾಕರ ನಾಗರಮುನೋಳಿ, ವಿದ್ಯುತ್ ಕೈಗಾರಿಕೆಗಳ ಬೆನ್ನೆಲುಬಾಗಿದೆ. ಆದರೆ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳು ಮುಂದುವರಿದಿವೆ. ಪ್ರತಿ ಬಾರಿ ಕೆಪಿಟಿಸಿಎಲ್ ಮತ್ತು ಹೆಸ್ಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಆದರೆ ಅದರ ಫಲಿತಾಂಶ ಮಾತ್ರ ಶೂನ್ಯವಾಗಬಾರದು. ಈ ಬಾರಿ ಅಧಿಕಾರಿಗಳು ನೀಡಿರುವ ಭರವಸೆಗಳನ್ನು ಕಾರ್ಯರೂಪಕ್ಕೆ ತರಬೇಕು ಎಂದು ಆಗ್ರಹಿಸಿದರು.

ಮಚ್ಚೆ 230 ಕೆವಿ ವಿದ್ಯುತ್ ಕೇಂದ್ರಕ್ಕೆ ಸಂಬಂಧಿಸಿದಂತೆ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಕೆಗೆ ಸುಮಾರು 80 ಕೋಟಿ ವೆಚ್ಚವಾಗಲಿದ್ದು, ಅದರ ಬದಲು ಓವರ್‌ಹೆಡ್ ಕೇಬಲ್ ಅಳವಡಿಸಿದರೆ ಸುಮಾರು 70 ಕೋಟಿ ಉಳಿತಾಯವಾಗುತ್ತದೆ. ಈ ಹಣವನ್ನು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಹೆಸ್ಕಾಂ ಸೂಪರಿಂಟೆಂಡೆಂಟ್ ಎಂಜಿನಿಯರ್ ಪ್ರವೀಣ ಚಿಕ್ಕಾಡೆ ಮಾತನಾಡಿ, ಲಭ್ಯವಿರುವ ಸಂಪನ್ಮೂಲಗಳಲ್ಲಿಯೇ ಹೆಸ್ಕಾಂ ಸಿಬ್ಬಂದಿ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ. ಮುಂದಿನ 25 ವರ್ಷಗಳ ವಿದ್ಯುತ್ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

ಕೆಪಿಟಿಸಿಎಲ್ ಸೂಪರಿಂಟೆಂಡೆಂಟ್ ಎಂಜಿನಿಯರ್ ಕೃಷ್ಣಪ್ಪ ಮಾತನಾಡಿದರು.

ಈ ವೇಳೆ ಚೆಂಬರ್ ಆಫ್ ಕಾಮರ್ಸ್, ಸಣ್ಣ ಕೈಗಾರಿಕೆಗಳ ಸಂಘ, ಮೈಕ್ರೋ ಇಂಡಸ್ಟ್ರೀಸ್ ಅಸೋಸಿಯೇಷನ್, ಲಘು ಉದ್ಯೋಗ ಭಾರತಿ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು. ಹೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಅರವಿಂದ ಗದಗರ್ಕ, ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ದಂಡೆಪ್ಪನವರ್ ಹಾಗೂ ಕೆಪಿಟಿಸಿಎಲ್ ಹೆಸ್ಕಾಂ ಸಿಬ್ಬಂದಿ ಸೇರಿದಂತೆ ಇತರರು ಇದ್ದರು.

ಹೆಸ್ಕಾಂ ಅಧಿಕಾರಿಗಳ ಭರವಸೆ

ಖೇತ ಬಚಾವ್ ಅಭಿಯಾನ



•**ಸವದತ್ತಿ:** ತಾಲೂಕು ಮುನವಳ್ಳಿ ಹೋಬಳಿಯ ಗೊಂದಿ ಗ್ರಾಮದ ಹಿರೇಮಠ ಅವರ ಸಾವಯವ ಕೃಷಿ ತೋಟದಲ್ಲಿ ಕೃಷಿ ಇಲಾಖೆ ಮತ್ತು ದ್ರಾವಿಡ ಪರಮಾರ್ಸ್ ಕಂ. ಸಹಯೋಗದೊಂದಿಗೆ ಖೇತ ಬಚಾವ್ ಅಭಿಯಾನ ಕಾರ್ಯಕ್ರಮ ನಡೆಯಿತು. ಸಾನ್ನಿಧ್ಯವನ್ನು ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ವಹಿಸಿದ್ದರು. ಕೃಷಿ ಇಲಾಖೆ ಯ ಜಂಟಿ ನಿರ್ದೇಶಕ ಎಚ್.ಡಿ.ಕೊಳಕರ, ಕೃಷಿ ತಾಲೂಕಾಧಿಕಾರಿ ಶಿವಪ್ರಕಾಶ್ ಪಾಟೀಲ, ಕರ್ನಾಟಕ ವಿಜ್ಞಾನ ಕೇಂದ್ರ ಮತ್ತಿಕೊಪ್ಪದ ವಿಜ್ಞಾನಿಗಳಾದ ಜವರಡ್ಡಿ ಮಣ್ಣು ಪರೀಕ್ಷೆ ವಿದ್ಯಾಲಯ ಮಾಳಗಿ ಜವರಡ್ಡಿ, ಸಾವಯವ ಕೃಷಿ ಪ್ರಗತಿಪರ ರೈತರು, ಕೃಷಿ ಇಲಾಖೆ ಅಧಿಕಾರಿ ದೇಸಾಯಿ ಕೃಷಿ ಸಖಿಯರು ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರರ ತ್ಯಾಗ ಸ್ಮರಣೀಯ

•**ಬೆಳಗಾವಿ:** ಶೋಷಿತವರ್ಗದವರಿಗೆ ಸಮಾಜದ ಋಣ ತೀರಿಸುವ ಅವಕಾಶ ಬಂದಾಗ ಯಾವಾಗಲೂ ಬಾಬಾಸಾಹೇಬ ಅಂಬೇಡ್ಕರ್ ಅವರ ತ್ಯಾಗದ ಬದುಕು ಕಣ್ಣೆದುರು ಬಂದು ನಿಲ್ಲಬೇಕು ಎಂದು ಬಂಡಾಯ ಸಾಹಿತಿ ಡಾ. ಯಲ್ಲಪ್ಪ ಹಿಮ್ಮಡಿ ಹೇಳಿದರು.

ಗುರುವಾರ ನಗರದ ಡಾ. ಬಿ. ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಚೆನ್ನದಾಸರ ನೌಕರರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ನ್ಯಾಯವಾದಿ ವಸಂತ ಅಕ್ಕೆನ್ನವರ ಅವರಿಗೆ ಅಭಿನಂದನೆ ಸಮರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಜಗತ್ತೇ ನಿಬ್ಬೆರಗಾಗುವ ಶೈಕ್ಷಣಿಕ ಪದವಿಗಳನ್ನು ಗಳಿಸಿಕೊಂಡಿದ್ದ ಬಾಬಾಸಾಹೇಬರು ಅವುಗಳಿಂದ ದೊರಕುವ ಐಷಾರಾಮಿ ಹುದ್ದೆಗಳನ್ನು ತ್ಯಜಿಸಿ, ಆರ್ಥಿಕ ಮುಗ್ಗಟ್ಟನ್ನೆದುರಿಸಿ ಶೋಷಿತ ಜನರ ವಿಮೋಚನೆಗಾಗಿ ಹೋರಾಡಿದ ತ್ಯಾಗಮಯ ಬದುಕನ್ನು ಆದರ್ಶವಾಗಿಟ್ಟುಕೊಂಡು ಮುನ್ನಡೆಯಬೇಕು, ಕಟ್ಟ ಕಡೆಯ ಸಮುದಾಯಗಳ ಹಕ್ಕುಗಳಿಗಾಗಿ ದುಡಿಯಬೇಕು ಎಂದು ಡಾ. ಹಿಮ್ಮಡಿ ಹೇಳಿದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ನ್ಯಾಯವಾದಿ ವಸಂತ ಅಕ್ಕೆನ್ನವರ ಬಡತನದಿಂದ ಬಂದ ನಾನು ರಾತ್ರಿ ಕೆಲಸಗಳನ್ನು ಮಾಡಿ ಶಿಕ್ಷಣ ಪೂರೈಸಿ ಈ ಹಂತಕ್ಕೆ ಬರಲು ಬಾಬಾಸಾಹೇಬ ಅಂಬೇಡ್ಕರ್ ಅವರ ಹೋರಾಟಮಯ ಬದುಕೇ ಕಾರಣವಾಗಿದ್ದು, ಅವರ ಪ್ರತಿಮೆಯೆದುರು ಸನ್ಮಾನ ಸ್ವೀಕರಿಸುತ್ತಿರುವುದು ನನ್ನ ಭಾಗ್ಯ ಎಂದು ಧನ್ಯತೆ ವ್ಯಕ್ತ ಪಡಿಸಿದರು.

ನಗರ ಸಾರಿಗೆ ಸಂಸ್ಥೆಯ ಬಾಳಾಸಾಹೇಬ ಅಕ್ಕೆನ್ನವರ, ರೈಲ್ವೆ ಆರಕ್ಷಕ ಬಸವರಾಜ ಹುಲ್ಲೆನ್ನವರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾಜಿ ಮಾಳಗೆನ್ನವರ, ವಿದ್ಯಾರ್ಥಿ ಪ್ರತಿನಿಧಿಗಳಾದ ಶಿವರಾಜ ಕಾಮಶೆಟ್ಟಿ, ವಿಶಾಲ ಅಕ್ಕೆನ್ನವರ ಮತ್ತಿತರರು ಉಪಸ್ಥಿತರಿದ್ದರು.

ಸಂಘದ ಅಧ್ಯಕ್ಷ ಮಾರುತಿ ಅಕ್ಕೆನ್ನವರ ಅಧ್ಯಕ್ಷತೆ ವಹಿಸಿದ್ದರು. ವಿಠ್ಠಲ ಗೊಳಸಂಗಿ ಸ್ವಾಗತಿಸಿದರು, ಸತೀಶ ಅಕ್ಕೆನ್ನವರ ವಂದಿಸಿದರು. ಸಂತೋಷ ಅಕ್ಕೆನ್ನವರ ನಿರೂಪಿಸಿದರು.



ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ : 2026-27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿಬಿಎ ದೃಶ್ಯ ಕಲೆಯಲ್ಲಿ ಸ್ನಾತಕ ಪದವಿ ಪ್ರವೇಶಾತಿಗಾಗಿ ದ್ವಿತೀಯ ಪಿ.ಯು.ಸಿ/ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಜೂನ್ 12ರ ವರೆಗೆ http://uucms.karnataka.gov.in ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸದರಿ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್, ಅಚ್ಚುಕಲೆ, ಅನ್ವಯಕಲೆ,ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜೂನ್ 15, 2026 ರಂದು ನಡೆಸಲಾಗುವುದು.ಹೆಚ್ಚಿನ ಮಾಹಿತಿಗಾಗಿ ಮೈಸೂರು ಚಾಮರಾಜನಗರ ಸರ್ಕಾರಿ ದೃಶ್ಯಕಲಾ ಕಾಲೇಜು ಕಾರ್ಯಾಲಯ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಳಗಾವಿ : 2026-27 ನೇ ಸಾಲಿಗೆ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಅರಿವು ವಿದ್ಯಾಭ್ಯಾಸ ಸಾಲಕ್ಕೆ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಂದ ಆನಲೈನ ಮೂಲಕ ಅರ್ಜಿ ಆಹ್ವಾನಿಸಿದೆ.2026-27ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗುವ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಆಯ್ಕೆಯಾಗುವ ಎಂಬಿಬಿಎಸ್, ಬಿಡಿಎಸ್, ಬಿಇ, ಬಿಆರ್ಕ್, ಬಿ.ಟೆಕ್ ಮತ್ತು ಬಿ.ಆಯುಷ್ ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ CET/NEET/JEE MBA/MCA/LLB BSC IN, HORTICULTURE AGRICULTURE, DAIRY TECHNOLOY-FORESTERY, VETERINARY, AND ANIMAL SCIENCE, FOOD NUTRITION & DIETRICS, BPHARMA, MPHARMA, D.PHARMA

ಇಂತಹ ಕೋರ್ಸುಗಳಿಗೆ ಅರಿವು ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ಪಡೆಯಲು ಅವಕಾಶ ವಿರುತ್ತದೆ. ಆಸಕ್ತ ವಿದ್ಯಾರ್ಥಿಗಳು ಸದರಿ ಯೋಜನೆಯಲ್ಲಿ ಸಾಲ ಸೌಲಭ್ಯ ಪಡೆಯಲು ಈ https://kccdclonline.karnataka.gov.in/ ವೆಬ್ ಸೈಟ್ನಲ್ಲಿ ಆನ್ಲೈನ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಮೌಲಾನಾ ಆಝಾದ ಅಲ್ಪಸಂಖ್ಯಾತರ ಭವನ, ಕೆ.ಎಸ್.ಸಿ.ಎ. ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ, ರಾಮತೀರ್ಥ ನಗರ, ಬೆಳಗಾವಿ ಸಂಪರ್ಕಿಸಬಹುದು ಎಂದು ಕರ್ನಾಟಕ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ನಿಗಮ (ನಿ), ಬೆಳಗಾವಿ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ : 2026-27ನೇ ಸಾಲಿಗೆ ಇಲಾಖೆಯಿಂದ ವಿಕಲಚೇತನ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನ ಯೋಜನೆಯಡಿ ಪ್ರೀ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನಕ್ಕಾಗಿ ಎಸ್.ಎಸ್.ಪಿ. ತಂತ್ರಾಂಶದಡಿ ಆನ್ಲೈನ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿಕಲಚೇತನ ವಿದ್ಯಾರ್ಥಿಗಳು, ಶಾಲಾ ಕಾಲೇಜುಗಳು/ಶಿಕ್ಷಣ ಸಂಸ್ಥೆಗಳ ಮುಖಾಂತರ ಸದರಿ ಯೋಜನೆಯಡಿ ವಿದ್ಯಾರ್ಥಿವೇತನ ಸೌಲಭ್ಯಕ್ಕಾಗಿ ಪ್ರೀ ಮೆಟ್ರಿಕ್ ವಿದ್ಯಾರ್ಥಿಗಳು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳು https://ssp.postmatric.karnataka.gov.in/gA:https://ssp.postmatric.karnataka. gov.in/post_sa_2627/login ಮೂಲಕ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಜಿಲ್ಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ಈ ಸೌಲಭ್ಯದೊಂದಿಗೆ ಉನ್ನತ ಶಿಕ್ಷಣವನ್ನು ಪಡೆದು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಸಲ್ಲಿಸಿ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಬಹುದು.ಹೆಚ್ಚಿನ ಮಾಹಿತಿಗಾಗಿ ಕಛೇರಿ ಅಥವಾ ತಮ್ಮ ತಾಲೂಕಿನ(ಎಂ.ಆರ್.ಡಬ್ಲ್ಯು.) ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಡಚಿ: ಪಟ್ಟಣದ ಅಮೀನ ವಾಟೆ ಅವರ ಮಾಲೀಕತ್ವದ ನೂತನ ಎಜಿ ಫಿಟ್ನೆಸ್ ಜಿಮ್' ಅನ್ನು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಉದ್ಘಾಟಿಸಿದರು. ಅಮೀನ ವಾಟೆ, ಮೈದಿನಸಾಯ ವಾಟೆ, ಹಮಿದೋದಿನ ರೋಹಿಲೆ, ಇಮಾಮುದೀನ ಸಜ್ಜನ, ಜಯಕುಮಾರ ಸನದಿ, ದಸ್ತಗೀರ ಕಾಗವಾಡೆ, ಎಜಾಜ್ ಬಿಚ್ಚು, ಅಬ್ದುಲಖಾದರ್ ರೋಹಿಲೆ, ಸಾದೀಕ ರೋಹಿಲೆ, ಮಹಿಬುಬಪಾಶಾ ಚಮನಶೇಖ, ಸಯೀದಹಮ್ಮದ ದೇಸಾಯಿ, ಮುದಸೀರ ಅಲಾಲಖಾನ, ಬೀರಪ್ಪಾ ನರಟ್ಟಿ, ರಾಜು ಶಿಂಧೆ, ತರಬೇತುದಾರ ಅಫ್ತಾಬ್ ವಾಟೆ, ಶ್ರೀಮಾನ್ ನಾಯಿಕ, ಶ್ರೀಮಂತ ಗಸ್ತಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅಪ್ರಾಪ್ತರಿಗೆ ಮದ್ಯ, ಬಾರ್‌ಗಳಿಗೆ ಪ್ರವೇಶ ನಿಷೇಧ

ಚನ್ನಮ್ಮನ ಕಿತ್ತೂರು: ಸರ್ಕಾರದ ನಿಯಮಾವಳಿಗಳ ಪ್ರಕಾರ 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಿಗೆ ಮದ್ಯವನ್ನು ಮಾರಾಟ ಮಾಡುವಂತಿಲ್ಲ ಅಂತವರಿಗೆ ಮದ್ಯದ ಅಂಗಡಿ, ಬಾರ್‌ಗಳ ಪ್ರವೇಶವನ್ನು ನಿಷೇಧಿಸಿಲಾಗಿದೆ ಎಂದು ಸಿಪಿಐ ಶಿವಾನಂದ ಗುಡಗನಟ್ಟಿ ಹೇಳಿದರು.ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ ರಾಮರಾಜನ್ ಅವರ ಆದೇಶದ ಮೇರೆಗೆ ನಡೆದ ಮದ್ಯದ ಅಂಗಡಿ, ದಾಬಾ, ಬಾರ್ ಮತ್ತು ರಸ್ಟೋರೆಂಟ್ ಮಾಲಿಕರ ಸಭೆಯಲ್ಲಿ ಮಾತನಾಡಿ. ಮದ್ಯದ ಅಂಗಡಿಯವರು ಗ್ರಾಹಕರಿಗೆ ಮದ್ಯ ಪೂರೈಸುವ ಮುನ್ನ ಅವರ ವಯಸ್ಸಿನ ಗುರುತಿನ ಚೀಟಿಯನ್ನು ಗಮನಿಸಬೇಕು, ಮತ್ತು ಮದ್ಯದ ಅಂಗಡಿಗಳಿಗೆ ಗ್ರಾಹಕರು ಪ್ರವೇಶಿಸುವ ದ್ವಾರಗಳಲ್ಲಿ ಸಿಸಿ ಟಿವಿ ದೃಶ್ಯಾವಳಿಗಳ ಬ್ಯಾಕಪ್‌ನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಮತ್ತು ಅಬಕಾರಿ 1967 ರ ನಿಯಮ 10 ರಪ್ರಕಾರ ಮಾನಸಿಕವಾಗಿ ಅಸ್ವಸ್ಥರಾದವರಿಗೆ, ಗಲಭೆ ಶಾಂತಿ ಭಂಗ ತರುವ ಶಂಕಿತರಿಗೆ ಹಾಗೂ ಕರ್ತವ್ಯದಲ್ಲಿರುವ ಅಬಕಾರಿ, ಪೊಲೀಸ್, ರೇಲ್ವೆ ನೌಕರರು ಮತ್ತು ಸಮವಸ್ತ್ರದಲ್ಲಿರುವ ಚಾಲಕರಿಗೆ ಮದ್ಯ ಮಾರಾಟ ಮಾಡುವಂತಿಲ್ಲ. ಕಾನೂನು ಉಲ್ಲಂಘನೆಯಾದರೆ ಮಾಲಿಕರೇ ಹೊಣೆಗಾರರಾಗುತ್ತಾರೆ ಆದ್ದರಿಂದ ಸರಕಾರದ ನಿಯಮಗಳ ಪ್ರಕಾರ ಮದ್ಯವನ್ನು ಮಾರಾಟ ಮಾಡಬೇಕೆಂದು ಎಚ್ಚರಿಕೆ ನೀಡಿದರು.ಪಿಎಸ್ಐ ಭರತ್ ಎಸ್ ಸೇರಿದಂತೆ ಎಲ್ಲ ಬಾರ್ ಮತ್ತು ರೆಸ್ಟೋರೆಂಟ್‌ಗಳ, ಮದ್ಯದ ಅಂಗಡಿಗಳ, ದಾಬಾ ಮಾಲಿಕರು ಉಪಸ್ಥಿತರಿದ್ದರು.



ಚನ್ನಮ್ಮನ ಕಿತ್ತೂರು:ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ ರಾಮರಾಜನ್ ಅವರ ಆದೇಶದ ಮೇರೆಗೆ ಮದ್ಯದ ಅಂಗಡಿ, ದಾಬಾ, ಬಾರ್ ಮತ್ತು ರಸ್ಟೋರೆಂಟ್ ಮಾಲಿಕರ ಸಭೆ ನಡೆಯಿತು.

ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿಕೆ

2029ರಲ್ಲಿ ಮತ್ತೊಮ್ಮೆ ಬಿಜೆಪಿ

ಗೋಕಾಕ: ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿಯೇ ಅತೀ ದೀರ್ಘಕಾಲದ ಪ್ರಧಾನಿಯಾಗಿ ಸೇವೆ ಸಲ್ಲಿಸಿರುವ ಪ್ರೀತಿಗೆ ಪಾತ್ರರಾಗಿದ್ದು, ಸತತ 12 ವರ್ಷಗಳ ಕಾಲ ಅಧಿಕಾರದಲ್ಲಿ ಮುಂದುವರೆದಿದ್ದು, ಮುಂದಿನ 2028ರಲ್ಲಿ ನಡೆಯುವ ವಿಧಾನಸಭಾ ಹಾಗೂ 2029ರಲ್ಲಿ ಜರುಗುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿನ ಎನ್ಎಸ್ಎಫ್ ಕಚೇರಿಯಲ್ಲಿ ಅರಭಾವಿ ಬಿಜೆಪಿ ಮಂಡಲವು ಪ್ರಧಾನಿಗಳ 12 ವರ್ಷಗಳ ಸಂಭ್ರಮಾಚರಣೆ ಕಾರ್ಯಕ್ರಮದ ನಿಮಿತ್ತ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ಸಮರ್ಥ ನೇತೃತ್ವದಲ್ಲಿ ಭಾರತವು ಜಗತ್ತಿನಲ್ಲಿಯೇ ಪ್ರಗತಿಶೀಲ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದರು.

ಮುಂದೆ 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಚುಕ್ಕಾಣಿ ಹಿಡಿಯಲಿದೆ. ಅದರಂತೆ ಕೇಂದ್ರದಲ್ಲಿಯೂ ನರೇಂದ್ರ ಮೋದಿಯವರ ಮುಂದಾಳತ್ವದಲ್ಲಿ ದೇಶದಲ್ಲಿ ಸತತ ಮೂರನೇ ಅವಧಿಗೆ ಕಮಲ ಅರಳಿದೆ. ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರವು ಆಡಳಿತದಲ್ಲಿದ್ದರೆ ಅಭಿವೃದ್ಧಿಗೆ ಅನುಕೂಲವಾಗಲಿದೆ. ಇದರಿಂದ ಮತ್ತಷ್ಟು ಶರವೇಗದಲ್ಲಿ ಪ್ರಗತಿ ಸಾಧಿಸಲು ನೆರವಾಗುತ್ತದೆ. ಬಿಜೆಪಿ ಗೆಲುವಿನಲ್ಲಿ ಕಾರ್ಯಕರ್ತರ ಪಾತ್ರ ಮುಖ್ಯವಾಗಿದೆ. ಕಾರ್ಯಕರ್ತರಿಂದ ಮಾತ್ರ ಪಕ್ಷವು ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ದೀರ್ಘಾವಧಿ ಪ್ರಧಾನಿಯಾಗುವ ಮೂಲಕ ಈ ಹಿಂದಿನ ಪಂಡಿತ ಜವಾಹರಲಾಲ್ ನೆಹರೂ ಅವರ ದಾಖಲೆಯನ್ನು ಅಳಿಸಿ ಹಾಕಿದ್ದಾರೆ ಎಂದರು.

12 ವರ್ಷ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುತ್ತಿರುವದರಿಂದ ನಮ್ಮ ಎನ್ಎಸ್ಎಫ್ ಮೈದಾನದಲ್ಲಿ 12 ಸಸಿಗಳನ್ನು ನೆಡಲಾಗಿದೆ. ಇಂದಿನ ಸಸಿಗಳು ನಾಳೆ ದೊಡ್ಡ ಮರಗಳಾಗಿ ಜನರಿಗೆ ನೆರಳು ನೀಡುತ್ತವೆ. ನಮ್ಮ ಮುಂದಿನ ಪೀಳಿಗೆಗೂ ಗಿಡ-ಮರಗಳು ಹೆಮ್ಮರವಾಗಿ ಬೆಳೆದು ನಿಸರ್ಗದ ರಸದೌತನ ನೀಡುತ್ತವೆ ಎಂದು ಅವರು ತಿಳಿಸಿದರು.



> ನಮ್ಮ ದೇಶಕ್ಕೆ ಮೋದಿಯವರಂತಹ ದಕ್ಷ, ಪಾರದರ್ಶಕ ಪ್ರಧಾನಿಗಳು ಬೇಕು. ಇನ್ನಷ್ಟು ಕಾಲ ಈ ದೇಶದ ಆಡಳಿತ ಚುಕ್ಕಾಣಿ ಹಿಡಿಯಲು ಮೋದಿಯವರಿಗೆ ದೇವರು ಇನ್ನಷ್ಟು ಅಧಿಕಾರ, ಆಯುಸ್ಸು, ಶಕ್ತಿ ನೀಡಲಿ.
> ■ ಬಾಲಚಂದ್ರ ಜಾರಕಿಹೊಳಿ, ಶಾಸಕ ಮತ್ತು ಬೆಮುಲ್ ಅಧ್ಯಕ್ಷ

ಪ್ರತಿಯೊಬ್ಬ ರೈತರು ನೈಸರ್ಗಿಕ ಕೃಷಿಯನ್ನು ಅನುಸರಿಸಬೇಕು. ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆ ಮಾಡದೇ ಸಾವಯವ ಕೃಷಿ ಪದ್ಧತಿಗೆ ಆದ್ಯತೆ ನೀಡಬೇಕು. ಇದರಿಂದ ಗೊಬ್ಬರ ಹಾಗೂ ಔಷಧಿಗಳ ಖರ್ಚು ಸಹ ಉಳಿತಾಯವಾಗುತ್ತದೆ. ಕೃಷಿ ಉಳಿದರೆ ದೇಶವು ಉಳಿಯುತ್ತದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ನೈಸರ್ಗಿಕ ಕೃಷಿ ಕುರಿತು ಮಾರ್ಮಿಕವಾಗಿ ಮಾತನಾಡಿದರು.

ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಅರಭಾವಿ ಮಂಡಲವು ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಅಧ್ಯಕ್ಷತೆಯನ್ನು ಅರಭಾವಿ ಬಿಜೆಪಿ ಮಂಡಲ ಅಧ್ಯಕ್ಷ ಮಹಾದೇವ ಶೆಕ್ಕಿ ವಹಿಸಿದ್ದರು.

ಬೆಳಗಾವಿ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಸ ಪಾಟೀಲ, ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ, ಮುತ್ತೆಪ್ಪ ಮನ್ನಾಪೂರ, ಪರಸಪ್ಪ ಬಬಲಿ, ಪ್ರಮೋದ ನುಗ್ಗಾನಟ್ಟಿ, ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ ಬೃಹತ್ ಸೈಕಲ್ ರ‍್ಯಾಲಿ

ಬೆಳಗಾವಿ: ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನಶೈಲಿ ಮತ್ತು ಸೈಕಲ್ ಬಳಕೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಶನಿವಾರ ಬೆಳಗಾವಿಯಲ್ಲಿ ಬೃಹತ್ ಸೈಕಲ್ ರ‍್ಯಾಲಿ ನಡೆಯಿತು.

'ಅಸ್ಮಿತಾ ಸೈಕಲ್ ಲೀಗ್' ವತಿಯಿಂದ ಹಮ್ಮಿಕೊಳ್ಳಲಾದ ಈ ರ‍್ಯಾಲಿಗೆ ಸೈಕಲ್ ಪ್ರೇಮಿಗಳಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ನೂರಾರು ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡರು.

ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ ನಡೆದ ಈ ಜಾಗೃತಿ ರ‍್ಯಾಲಿಯು ನಗರದ ಹನುಮಾನ್ ನಗರ ಸರ್ಕಲ್‌ನಿಂದ ಆರಂಭವಾಗಿ ಕುವೆಂಪು ನಗರದವರೆಗೆ ಸಾಗಿತು. ರ‍್ಯಾಲಿಗೆ ಅನಿಲ್ ಪೋತದಾರ, ಮಾಜಿ ವಿಧಾನ ಪರಿಷತ್ ಸದಸ್ಯ ವಿವೇಕರಾವ್ ಪಾಟೀಲ್ ಹಾಗೂ ಡಿಡಿಪಿಐ ಲೀಲಾವತಿ ಹಿರೇಮಠ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿವೇಕರಾವ್ ಪಾಟೀಲ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಯೋಗ ದಿನವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ

ವಿಶ್ವ ಬೈಸಿಕಲ್ ದಿನಾಚರಣೆ

ಜನಪ್ರಿಯಗೊಳಿಸಿದಂತೆ, ವಿಶ್ವ ಬೈಸಿಕಲ್ ದಿನಾಚರಣೆಯೂ ಜನರಲ್ಲಿ ಆರೋಗ್ಯ ಹಾಗೂ ಪರಿಸರ ಜಾಗೃತಿಯನ್ನು ಮೂಡಿಸುವ ವೇದಿಕೆಯಾಗುತ್ತಿದೆ ಎಂದು ಹೇಳಿದರು. ಸುಮಾರು 300ಕ್ಕೂ ಹೆಚ್ಚು ಸೈಕಲ್ ಸವಾರರು ಭಾಗವಹಿಸಿದ್ದರೆ, ಅವರಲ್ಲಿ 100ಕ್ಕೂ ಹೆಚ್ಚು ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡಿರುವುದು ವಿಶೇಷವಾಗಿದೆ ಎಂದು ತಿಳಿಸಿದರು.

ಈ ವಿಶೇಷ ದಿನದ ಅಂಗವಾಗಿ ಕೋಕೋ ಬ್ಯಾಂಡ್ ಟೀಂ 24 ಕನ್ಸೂಮರ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಸೈಕಲ್ ಸವಾರರಿಗೆ ಆರೋಗ್ಯಕರ ಪಾನೀಯವನ್ನು ಪ್ರಾಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಮಾರು 500ಕ್ಕೂ ಹೆಚ್ಚು ಜನರಿಗೆ ಹೆಲ್ತ್ ಡ್ರಿಂಕ್ ವಿತರಿಸಲಾಯಿತು.

ಕುಂದಾನಗರಿಯ ರಸ್ತೆಗಳಲ್ಲಿ ಸೈಕಲ್ ಸವಾರರ ದಂಡು ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಫಿಟ್ನೆಸ್ ಕುರಿತು ಜಾಗೃತಿ ಮೂಡಿಸುತ್ತಾ ಸಾಗಿದ್ದು, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.



ಜಾಗತಿಕ ಮಟ್ಟದಲ್ಲಿ ಭಾರತಕ್ಕೆ 4ನೇ ಸ್ಥಾನ: ಶೆಟ್ಟರ

ಬೆಳಗಾವಿ : ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕಳೆದ 12 ವರ್ಷದ ಆಡಳಿತದಿಂದ ಭಾರತ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದು, ದೇಶದ ಅಭಿವೃದ್ಧಿಗೆ ಹೊಸ ದಿಕ್ಕು ದೊರೆತಿದೆ ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.

ಶನಿವಾರ ನಗರದ ಖಾಸಗಿ ಹೋಟೆಲ್ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರ ಆಡಳಿತಾವಧಿಯಲ್ಲಿ ದೇಶದ ಮೂಲಸೌಕರ್ಯ, ರಕ್ಷಣಾ ಕ್ಷೇತ್ರ, ವಿಮಾನಯಾನ ಹಾಗೂ ರೈಲ್ವೆ ಸೇವೆಗಳಲ್ಲಿ ಗಮನಾರ್ಹ ಪ್ರಗತಿ ಸಾಧನೆಯಾಗಿದೆ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ಹೊಸ ವಿಮಾನ ನಿಲ್ದಾಣ ಟರ್ಮಿನಲ್ ಶೀಘ್ರದಲ್ಲೇ ಉದ್ಘಾಟನೆಗೊಳ್ಳಲಿದ್ದು, ಕೈಗಾರಿಕಾ ಕಾರಿಡಾರ್ಗಳ ನಿರ್ಮಾಣಕ್ಕೂ ಪೂರಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ರಕ್ಷಣಾ ಉತ್ಪನ್ನಗಳ ರಫ್ತು ಪ್ರಮಾಣವೂ ಗಣನೀಯವಾಗಿ ಹೆಚ್ಚಿದೆ ಎಂದರು.

ಕರ್ನಾಟಕದ ಏಳು ಮಹಾನಗರ ಪಾಲಿಕೆಗಳ ಪೈಕಿ ಬೆಳಗಾವಿಗೆ ಸ್ವಚ್ಛತೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 135 ಕೋಟಿ ಅನುದಾನ ಮಂಜೂರಾಗಿದೆ. 15ನೇ ಹಣಕಾಸು ಆಯೋಗದಡಿ 18 ಕೋಟಿ ಹಾಗೂ 16ನೇ ಹಣಕಾಸು ಆಯೋಗದಡಿ 34 ಕೋಟಿ ಅನುದಾನ ದೊರೆಯಲಿದೆ ಎಂದು ಮಾಹಿತಿ ನೀಡಿದರು. ಅಲಾರವಾಡದಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ ಹಾಗೂ ಗೇಲ್ ಗ್ಯಾಸ್ ಯೋಜನೆಗೆ ಭೂಮಿ ಒದಗಿಸುವ ಕಾರ್ಯವೂ ಪ್ರಗತಿಯಲ್ಲಿದೆ ಎಂದು ಹೇಳಿದರು.

ಪ್ರಧಾನಿ ಮೋದಿ ಅಧಿಕಾರ ಸ್ವೀಕರಿಸಿದಾಗ ಭಾರತ ಜಾಗತಿಕ ಆರ್ಥಿಕತೆಯಲ್ಲಿ 10ನೇ ಸ್ಥಾನದಲ್ಲಿತ್ತು. ಇಂದು ನಾಲ್ಕನೇ ಸ್ಥಾನಕ್ಕೇರಿದ್ದು, ಅವರ ಬಲಿಷ್ಠ ನಾಯಕತ್ವ ದೇಶದ ಸುರಕ್ಷತೆ ಹಾಗೂ ಅಭಿವೃದ್ಧಿಗೆ ಕಾರಣವಾಗಿದೆ ಎಂದು ಶೆಟ್ಟರ್ ಅಭಿಪ್ರಾಯಪಟ್ಟರು.

ಈ ವೇಳೆ ಮಾಜಿ ರಾಜ್ಯಸಭಾ ಸದಸ್ಯ ಈರಣ್ಣಾ ಕಡಾಡಿ, ಮುರುಘೇಂದ್ರಗೌಡ ಪಾಟೀಲ, ಶಾಸಕ ವಿಠಲ್ ಹಲಗೇಕರ್, ಮಾಜಿ ಶಾಸಕ ಸಂಜಯ್ ಪಾಟೀಲ, ಮಾಜಿ ಶಾಸಕ ಅರವಿಂದ್ ಪಾಟೀಲ, ಮಾಜಿ ಸಂಸದೆ ಮಂಗಲಾ ಅಂಗಡಿ, ನ್ಯಾಯವಾದಿ ಎಂ.ಬಿ. ಝಿರಳಿ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಇತರರು ಇದ್ದರು.



ಪುರಸಭೆಗೆ ಮನವಿ ಸಲ್ಲಿಸಿದ್ದ ಮಹಿಳೆಯರು | ಪುರಸಭೆ ಮುಖ್ಯಾಧಿಕಾರಿ ಭೇಟಿ

ತಡೆಗೋಡೆ ತೆರವುಗೊಳಿಸಿದ ಪ್ರದೇಶ ಪರಿಶೀಲನೆ

ಮುಗಳಖೋಡ: ಪಟ್ಟಣದ ವಾರ್ಡ್ 1 ಮತ್ತು 2ರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿ ಹತ್ತಿರ ಬಲಬಾಜು ಇರುವ ಗಾಯರಾಣ ಜಾಗದಲ್ಲಿ ಮಹಿಳೆಯರಿಗಾಗಿ ನಿರ್ಮಿಸಲಾದ ಬಯಲು ಶೌಚಾಲಯದ ಗೋಡೆ ತೆರವುಗೊಳಿಸಿದ ಸ್ಥಳಕ್ಕೆ ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಪವಾಡಿಶೆಟ್ಟಿ ಹಾಗೂ ಸಿಬ್ಬಂದಿ ವರ್ಗ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದರು.

ಪಟ್ಟಣದ ಕೆಲವು ಮುಖಂಡರು ಒತ್ತುವರಿ ಮಾಡಿ ತೆರವುಗೊಳಿಸಿದ್ದಾರೆಂದು ಆಕ್ರೋಶಗೊಂಡ ಮಹಿಳೆಯರು ಕೆಲವು ದಿನಗಳ ಹಿಂದೆ ಮುಗಳಖೋಡ ಪುರಸಭೆಗೆ ಮುತ್ತಿಗೆ ಹಾಕಿ ನಮಗೆ ಮೊದಲಿನಂತೆ ಬಯಲು ಶೌಚಕ್ಕೆ ಹೋಗಲು ವ್ಯವಸ್ಥೆ ಮಾಡಿಕೊಡಬೇಕೆಂದು ಪುರಸಭೆಗೆ ಮಹಿಳೆಯರು ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆ ತೆರವುಗೊಳಿಸಿದ ತಡೆಗೋಡೆ ಘಟನಾಸ್ಥಳಕ್ಕೆ ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಪವಾಡಿಶೆಟ್ಟಿ ಹಾಗೂ ಸಿಬ್ಬಂದಿ ವರ್ಗ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದರು.

ನಂತರ ಮಾತನಾಡಿದ ಅವರು ಸಂಬಂಧಪಟ್ಟವರನ್ನು ಪುರಸಭೆಗೆ ಕರೆಯಿಸಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದರು. ಮಹಿಳೆಯರು ನೀಡಿದ ಕೆಲವು ದಾಖಲೆಗಳು , ತಡೆಗೋಡೆಯ ಭಾವಚಿತ್ರ ಹಾಗೂ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು. ನಂತರ ಮಂಗಳವಾರ ಪುರಸಭೆ ಸದಸ್ಯರು ಹಾಗೂ ಉನ್ನತಮಟ್ಟದ ಅಧಿಕಾರಿಗಳ ತುರ್ತು ಸಭೆ ಕರೆದು ಚರ್ಚಿಸುತ್ತೇನೆ ಎಂದರು.

ನಂತರ ಪುರಸಭೆ ವಾರ್ಡ್ ನಂಬರ 2ರ ಸದಸ್ಯ ಪರಪ್ಪಗೌಡ ಖೇತಗೌಡರ ಮಾತನಾಡಿ, ತೆರವುಗೊಳಿಸಿದ ತಡೆಗೋಡೆಯ ಅಕ್ಕ ಪಕ್ಕದಲ್ಲಿ ಸಾರ್ವಜನಿಕ ಪುರಾತನ ಬಾವಿ ಇಲ್ಲಿಯೇ ಇತ್ತು. 1 ಮತ್ತು 2 ನೇಯ ವಾರ್ಡಿನ ಮಹಿಳೆಯರು ಶೌಚಕ್ಕೆ ಹೋಗಲು ಮರ್ಯಾದೆಗಾಗಿ 2013-14ರಲ್ಲಿ 13ನೇ ಹಣಕಾಸು ಯೋಜನೆ ಅಡಿಯಲ್ಲಿ ತಡೆಗೋಡೆ ಮತ್ತು ಸಾರ್ವಜನಿಕ ಶೌಚಾಲಯ ಅಂದು ನಿರ್ಮಿಸಲಾಗಿತ್ತು ಎಂದು ಮುಖ್ಯಾಧಿಕಾರಿಗಳಿಗೆ ಜಾಗೆಯ ಹಳೆ ಮಾಹಿತಿ ಸಮಜಾಯಿಸಿ ಹೇಳಿದರು.



> ಕೆಲವರು ಇಲ್ಲ ಸಲ್ಲದ ಆರೋಪ ಮಾಡುತ್ತಾ 1 ಮತ್ತು 2ನೆಯ ವಾರ್ಡ್ ನ ಬಡ ಸಾರ್ವಜನಿಕರನ್ನು ಹೆದರಿಸಿ , ಬೆದರಿಸಿ, ದಬ್ಬಾಳಿಕೆ ನಡೆಸಿ ಸರಕಾರಿ ಗಾಯರಾಣ ಜಾಗೆಯನ್ನು ಕಬಳಿಸಲು ಹುನ್ನಾರ ನಡೆಸಿದ್ದಾರೆ. ಈ ಬಗ್ಗೆ ರಾಯಬಾಗ ತಹಶಿಲ್ದಾರ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು.
> ■ ಪರಪ್ಪ ಖೇತಗೌಡರ ಪುರಸಭೆ ಸದಸ್ಯರು ಮುಗಳಖೋಡ.

ತಡೆಗೋಡೆ ನಿರ್ಮಿಸಿ

ವಾರ್ಡ್ 1,2 ರಲ್ಲಿ ವಾಸಿಸುವ ಮಹಿಳೆಯರಿಗೆ, ವೃದ್ದರಿಗೆ ಇಲ್ಲಿ ಯಾವ ಶೌಚಾಲಯವು ಇಲ್ಲ. ಬಯಲು ಶೌಚಕ್ಕೆ ಅಡ್ಡಲಾಗಿ ತಡೆಗೋಡೆ ನಿರ್ಮಿಸಿ ಕೊಟ್ಟಿದ್ದರು. ಈಗ ಅದನ್ನು ಕೆಲವರು ತೆರವುಗೊಳಿಸಿದ್ದಾರೆ. ಮೊದಲಿನಂತೆ ನಮಗೆ ಬಯಲು ಶೌಚಕ್ಕೆ ಹೋಗಲು ತಡೆಗೋಡೆ ನಿರ್ಮಿಸಿ ಅನುವು ಮಾಡಿ ಕೊಡಬೇಕು ಎಂದು ಸ್ಥಳೀಯ ಮಹಿಳಾ ನಿವಾಸಿಗಳು ಒತ್ತಾಯಿಸಿದ್ದಾರೆ.

ಇದು ನಿಜವಾಗಿಯೂ ಗಾಯರಾಣ ಜಾಗವೇ, ಹಾಗಾದರೆ ಮಂಜೂರಾಗಿ ನಿರ್ಮಾಣಗೊಂಡ ತಡೆಗೋಡೆ ತೆರವುಗೊಳಿಸಲು ಎಲ್ಲರಿಗೂ ಅವಕಾಶ ವಿದೆಯೇ, ತಡೆಗೋಡೆ ತೆರವುಗೊಳಿಸಿದವರ ಮೇಲೆ ಕ್ರಮ ಜರುಗುವುದೆ. ಸಾರ್ವಜನಿಕರಿಗೆ, ಮಹಿಳೆಯರಿಗೆ ನ್ಯಾಯ ಸಿಗುತ್ತಾ? ಎಂಬುದು ಪಟ್ಟಣದ ಜನರ ಪ್ರಶ್ನೆಗಳಾಗಿವೆ.

ಈ ಸಂದರ್ಭದಲ್ಲಿ ಇಲ್ಲಿಯ ನೂರಾರು ಮಹಿಳೆಯರು, ಸಾರ್ವಜನಿಕರು, ಪುರಸಭೆ ಸಿಬ್ಬಂದಿ ವರ್ಗದವರು ಇದ್ದರು.

ಖಾಸಗೀಕರಣಕ್ಕೆ ಹೆಸ್ಕಾಂ ನೌಕರರ ವಿರೋಧ

ಹಾರೂಗೇರಿ: ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಯಾವುದೇ ಕಾರಣಕ್ಕೂ ಖಾಸಗೀಕರಣಗೊಳಿಸಬಾರದು ಎಂದು ಆಗ್ರಹಿಸಿ, ಹಾರೂಗೇರಿ, ರಾಯಬಾಗ ಹಾಗೂ ಕುಡಚಿ ಭಾಗದ ಹೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿ ಒಕ್ಕೂಟವು ಕುಡಚಿ ಮತಕ್ಷೇತ್ರದ ಶಾಸಕ ಮಹೇಂದ್ರ ತಮ್ಮಣ್ಣವರ ಅವರಿಗೆ ಮನವಿ ಸಲ್ಲಿಸಿತು.

ಪಟ್ಟಣದ ಸಮೀಪದ ಕುರುಬಗೋಡಿಯ ಬೀರಪ್ಪನ ಮಡ್ಡಿಯಲ್ಲಿರುವ ಶಾಸಕರ ಕಾರ್ಯಾಲಯಕ್ಕೆ ಭೇಟಿ ನೀಡಿದ ನಿಯೋಗವು, ಈ ಕುರಿತು ಕರ್ನಾಟಕ ಸರ್ಕಾರದ ಗಮನ ಸೆಳೆದು ಖಾಸಗೀಕರಣ ಪ್ರಕ್ರಿಯೆಯನ್ನು ತಡೆಯುವಂತೆ ಶಾಸಕರಲ್ಲಿ ವಿನಂತಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಹೆಸ್ಕಾಂ ಪ್ರಾಥಮಿಕ ಸಮಿತಿಯ ಅಧ್ಯಕ್ಷ ಬಸವರಾಜ ಕುಳ್ಳೊಳ್ಳಿ, ಖಾಸಗಿ ಸಂಸ್ಥೆಯಾದ ಟಾಟಾ ಪವರ್ ಕಂಪನಿ ಲಿಮಿಟೆಡ್, ಕರ್ನಾಟಕದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳ (ಹೆಸ್ಕಾಂ) ವ್ಯಾಪ್ತಿಯ ಆಯ್ದ ಲಾಭದಾಯಕ ಪ್ರದೇಶಗಳಲ್ಲಿ ಸಮಾನಾಂತರ ವಿದ್ಯುತ್ ವಿತರಣಾ ಜಾಲವನ್ನು ಆರಂಭಿಸಲು ಪರವಾನಗಿ ಕೋರಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದೆ. ಖಾಸಗಿ ಸಂಸ್ಥೆಯ ಈ ನಡೆ ಸರ್ಕಾರಿ ಸ್ವಾಮ್ಯದ ಕಂಪನಿಗಳ ಅಸ್ತಿತ್ವಕ್ಕೆ ಧಕ್ಕೆ ತರಲಿದ್ದು, ನೌಕರರಲ್ಲಿ ಆತಂಕ ಮೂಡಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಖಾಸಗೀಕರಣದಿಂದಾಗಿ ಭವಿಷ್ಯದಲ್ಲಿ ಸಾಮಾನ್ಯ ಗ್ರಾಹಕರ ಹಿತಾಸಕ್ತಿಗೆ ಧಕ್ಕೆಯಾಗುವ ಸಾಧ್ಯತೆ ದಟ್ಟವಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ಸರ್ಕಾರದ ಹಿತದೃಷ್ಟಿಯಿಂದ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ತಕ್ಷಣವೇ ತಿರಸ್ಕರಿಸಬೇಕು ಎಂದು ಮನವಿಯ ಮೂಲಕ ಒತ್ತಾಯಿಸಲಾಯಿತು. ನೌಕರರ ಅಹವಾಲು ಆಲಿಸಿದ ಶಾಸಕ ಮಹೇಂದ್ರ ತಮ್ಮಣ್ಣವರ ಈ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದರು.

ರಾಯಬಾಗ ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಭಿಯಂತರ ವೈ.ಎಸ್. ಸನ್ನನಿ, ಹಾರೂಗೇರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಚ್.ವಿ. ಕಡಾರಕೊಪ್ಪ, ಕೇಂದ್ರ ಸಮಿತಿಯ ಸದಸ್ಯ ಎಲ್.ವಿ. ಪಾಟೀಲ, ಚಿಕ್ಕೋಡಿ ಎಸ್ಸಿ/ಎಸ್ಟಿ ಸಂಘಟನಾ ಕಾರ್ಯದರ್ಶಿ ಸದಾಶಿವ ಕಾಂಬಳೆ, ಪ್ರಾಥಮಿಕ ಸಮಿತಿಯ ಕಾರ್ಯದರ್ಶಿ ಶ್ರೀಕಾಂತ ಗೂಳಪ್ಪನವರ, ಕೆ.ಕೆ. ಕಾಂಬಳೆ ಹಾಗೂ ಶಾಖಾಧಿಕಾರಿಗಳಾದ ಪಿ.ಎಚ್. ಕೇತಗೌಡರ, ಮಾಂತೇಶ್ ಜಾಮಗೌರ್ಡ, ಸೋಮಶೇಖರ ಕಾಂಬಳೆ, ಎಸ್.ಎಸ್. ಕಳಸದ, ಎಸ್.ಎಸ್. ಕಂಬಳಿ, ಎಂ.ಕೆ. ಕುರಿಯಣ್ಣನವರ ಸೇರಿದಂತೆ ಮೂರೂ ಭಾಗಗಳ ಹೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಪ್ರಾಥಮಿಕ ಶಾಲಾ ಶಿಕ್ಷಕರ ಎರಡು ಗುಂಪುಗಳ ಮಧ್ಯೆ ಮಾತಿನ ಚಕಮಕಿ

ಚನ್ನಮ್ಮನ ಕಿತ್ತೂರು: ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕು ಘಟಕದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಅವಿರೋಧ ಆಯ್ಕೆಯಾಗಿದ್ದಾರೆಂದು ಎಂದು ಒಂದು ಗುಂಪು ಸನ್ಮಾನಕ್ಕೆ ಸಜ್ಜಾಗಿದ್ದ ವೇಳೆ ಇನ್ನೊಂದು ಗುಂಪು ಚುನಾವಣೆಯೇ ನಡೆದಿಲ್ಲ ಪದಾಧಿಕಾರಿಗಳ ಆಯ್ಕೆ ಹೇಗೆ ಆಯಿತೆಂದು ಪ್ರಶ್ನಿಸ ತೊಡಗಿತು. ಸಭೆ ನಡೆದ ಸ್ಥಳದಲ್ಲಿ ಶಿಕ್ಷಕರ ಗುಂಪುಗಳ ಮಧ್ಯ ಮಾತಿನ ಚಕಮಕಿ ನಡೆದು ಚುನಾವಣೆ ನಡೆಯಬೇಕು ಎಂದು ಒಂದು ಗುಂಪು ಒತ್ತಾಯಿಸಿತು. ಇನ್ನೊಂದು ಗುಂಪು ನೂತನ ಪದಾಧಿಕಾರಿಗಳಿಗೆ ಜೈಘೋಷ ಕೂಗಿದರು.

ಸ್ಥಳೀಯ ಗುರುಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದ ಸಂದರ್ಭದಲ್ಲಿ ಚುನಾವಣೆಯ ಪ್ರಕ್ರಿಯೆ, ಶಿಕ್ಷಕ ಮತದಾರ ಪಟ್ಟಿ, ಚುನಾವಣೆ ನಡೆಯುವ ಸ್ಥಳ ಮುಂತಾದ ಯಾವದೇ ಮಾಹಿತಿಯೂ ನಮಗೆ ಇಲ್ಲ ಚುನಾವಣೆ ಹೇಗೆ ನಡೆಯಿತು, ಆದ್ದರಿಂದ ಈ ಚುನಾವಣೆ ನಡೆದಿದ್ದು ನಿಯಮದ ಪ್ರಕಾರ ನಡೆದಿರುವದಿಲ್ಲ ಆದಕ್ಕಾಗಿ ಚುನಾವಣೆ ನಡೆಸಿ ಎಂದು ಜಿಲ್ಲಾ ಅಧ್ಯಕ್ಷ ಬಿ ಎಸ್ ಪಕ್ಕೀರಸ್ವಾಮಿಮಠ, ಮಾಜಿ ಅಧ್ಯಕ್ಷ ಎಸ್ ಡಿ ಗಂಗಣ್ಣವರ ಮಾಜಿ ಜಿಲ್ಲಾಧ್ಯಕ್ಷ ಎಮ್ ಎಫ್ ಸಿದ್ದನಗೌಡರ, ತಾಲೂಕಾಧ್ಯಕ್ಷ ಶಿವಾನಂದ ಕುಡಸೋಮಣ್ಣವರ, ಆಸೀಫ್ ಅತ್ತಾರ, ಕೆ ಎ ಜಾಯಕ್ಕನವರ, ವಿ ಎಸ್ ಬರಗಾಲಿ, ಎಸ್ ಎಸ್ ಹುಲಮನಿ ಸೇರಿದಂತೆ ಹಲವಾರು ಶಿಕ್ಷಕರು ಆಗ್ರಹ ಪಡಿಸಿದರು.



ಚುನಾವಣೆ ಪ್ರಕ್ರಿಯೇಯು ನಿಗದಿತ ಸಮಯಕ್ಕೆ ನಿಯಮದ ಪ್ರಕಾರ ನಡೆದಿದೆ ಇದು ಎಲ್ಲರಿಗೂ ಗೊತ್ತಿರುವ ವಿಚಾರ ಇಲ್ಲ ಸಲ್ಲದ ವಿಷಯಗಳನ್ನು ಆರೋಪ ಮಾಡುತ್ತಿರುವದು ಸರಿಯಾದ ಬೆಳವಣಿಗೆಯಲ್ಲ ಈಗಾಗಲೇ ಪದಾಧಿಕಾರಿಗಳ ಅವಿರೋಧ ಆಯ್ಕೆಯಾಗಿದೆ ಎಂದು ರಾಜ್ಯ ಘಟಕದ ಸಹ ಕಾರ್ಯದರ್ಶಿ ವಿಜಯಕುಮಾರ ಹೆಬಳಿ, ಜಿಲ್ಲಾಧ್ಯಕ್ಷ ರಮೇಶ ಗೋಣಿ, ತಾಲೂಕಾ ಕಾರ್ಯದರ್ಶಿ ಎಮ್ ಎಸ್ ಗುರವೈನವರ ಇನ್ನೂ ಹಲವಾರು ಪದಾಧಿಕಾರಿಗಳು, ಸದಸ್ಯರು ತಿಳಿಸಿದರು.

> ನ್ಯಾಯಾಲಯವು ಚುನಾವಣೆಯ ಪ್ರಕ್ರಿಯೆಯ ದಿನಾಂಕವನ್ನು ನಿಗದಿಗೊಳಿಸಿದ ನಂತರ ಪ್ರಜಾಪ್ರಭುತ್ವ ಮಾದರಿಯಲ್ಲಿಯೇ ಚುನಾವಣೆ ನಡೆದಿದೆ. ಸಭೆ ಸಮಾರಂಭಗಳಲ್ಲಿ ಮಾಡುವ ಇಂತಹ ಕೃತ್ಯವನ್ನು ನಾವು ಖಂಡಿಸುತ್ತೇವೆ. ಒಳ್ಳೆಯ ರೀತಿಯಿಂದ ಸಂಘಟನೆ ಮಾಡುವವರನ್ನು ಬೆಂಬಲಿಸಬೇಕು.
> ■ ಜಯಕುಮಾರ ಹೆಬಳಿ, ಶಿಕ್ಷಕ ಸಂಘದ ರಾಜ್ಯ ಘಟಕದ ಸಹ ಕಾರ್ಯದರ್ಶಿ

> ಚುನಾವಣೆಯನ್ನು ನಿಯಮಾನುಸಾರ ಮಾಡದೇ ಸೋಲಿನ ಭೀತಿಯಿಂದ ಮತದಾನ ಪ್ರಕ್ರಿಯೆಯನ್ನು ಮುಚ್ಚಿಟ್ಟು ಅವಿರೋಧ ಆಯ್ಕೆಯಾಗಿದೆ ಎಂದು ಹೇಳಲಾಗಿದೆ. ಚುನಾವಣೆ ನಡೆಯುವವರೆಗೂ ಪ್ರತಿಭಟನೆ ನಡೆಸುತ್ತೇವೆ.
> ■ ಎಸ್ ಡಿ ಗಂಗಣ್ಣವರ, ಶಿಕ್ಷಕ ಸಂಘದ ಮಾಜಿ ಜಿಲ್ಲಾಧ್ಯಕ್ಷ

ಕಿರುಸುದ್ದಿ

ಜಾನಪದ ಸಂಭ್ರಮ ನಾಳೆ

ಗುಳೇದಗುಡ್ಡ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಸ್ಥಳೀಯ ಗಜಾನನ ಸಾಂಸ್ಕೃತಿಕ ಹಾಗೂ ಕ್ರೀಡಾ ಯುವಕ ಮಂಡಳಿವತಿಯಿಂದ ಜಾನಪದ ಸಂಭ್ರಮ ಜೂ.15ರಂದು ಸಂಜೆ 7 ಗಂಟೆಗೆ ಪಟ್ಟಣದ ಶಿವಪ್ಪಯ್ಯನವರ ಮಠದ ಆವರಣದಲ್ಲಿ ನಡೆಯಲಿದೆ. ಪಟ್ಟಣದ ಗುರುಸಿದ್ಧೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು, ಸಂಗಯ್ಯನವರು ಶಿವಪ್ಪಯನಮಠ ಸಾನ್ನಿಧ್ಯ ವಹಿಸುವರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಂಡಳಿಯ ಅಧ್ಯಕ್ಷ ಕೂಡ್ಲೆಪ್ಪ ಕಲ್ಯಾಣಿ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಸಾಲೇಶ್ವರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಚಂದ್ರಕಾಂತ ಶೇಖಾ, ಡಾ.ಎಚ್.ಎಸ್.ಘಂಟಿ, ವಿನೋದ ಅಂಬೇಕರ, ಶಿವಾನಂದ ಎಣ್ಣಿ, ಸಿದ್ದಪ್ಪ ಸಾರಂಗಿ, ಮುತ್ತಣ್ಣ ತಾಂಡೂರ, ಸಿದಬಸಪ್ಪ ಕಲೂಡಿ ಉಪಸ್ಥಿತರಿರಲಿದ್ದಾರೆ.

ಪದಗ್ರಹಣ ಸಮಾರಂಭ ಇಂದು

ತೇರದಾಳ: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ಬಾಗಲಕೋಟೆ ಸಹಯೋಗದಲ್ಲಿ ತೇರದಾಳ ತಾಲೂಕಿನ ನೂತನವಾಗಿ ತಾಲೂಕ ಘಟಕ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜೂ.14ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ಅಲ್ಲಮಪ್ರಭು ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಜರುಗಲಿದೆ. ಪಟ್ಟಣದ ಪ.ಪೂ.ಗಂಗಾಧರ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸುವರು. ಪ್ರವೀಣ ನಾಡಗೌಡ ಅಧ್ಯಕ್ಷತೆ ಹಾಗೂ ಅ.ಬಾ.ಸಾ.ಪ. ದ ರಾಜ್ಯಾಧ್ಯಕ್ಷ ಎಸ್.ಜಿ.ಕೋಟೆ ಉದ್ಘಾಟಕರಾಗಿ ಆಗಮಿಸುವರು. ಎಮ್.ಸಿ.ಕುಂಚಗನೂರ, ಈಶ್ವರ ಯಲ್ಲಟ್ಟಿ, ಬಸವರಯ್ಯ ಭಾಂವಿ ಉಪಸ್ಥಿತರಿರುವರು. ಮುಖ್ಯಅತಿಥಿಗಳಾಗಿ ಡಾ.ಗೀತಾ ಜಿ.ದಾನಶೆಟ್ಟಿ, ಡಾ.ವಿಕ್ರಮ ಬಸನಗೌಡರ, ಶಿವಾನಂದ ನೇಗಿನಾಳ, ಮ.ಕೃ.ಮೇಗಾಡಿ, ಗಂಗಾಧರ ಮೋಪಗಾರ, ಅಶೋಕ ಮಹಾಲಿಂಗಪೂರ, ರಾಯಪ್ಪಣ್ಣ ಕುಂಬಾರ, ಬಸವರಾಜ ಕರ್ಲಟ್ಟಿ, ಎಸ್.ಆರ್.ರಾವಳ ಆಗಮಿಸುವರು. ಸಾಹಿತ್ಯಾಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ತೇರದಾಳ ಘಟಕದ ನೂತನ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ತಿಳಿಸಿದ್ದಾರೆ.

ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಜಮಖಂಡಿ: ಗಾಣಿಗ ಸಮಾಜ ಹಾಗೂ ಗಾಣಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಶೇ.90ಕ್ಕಿಂತ ಹೆಚ್ಚು ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಪಡೆದ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಜೂ.26ರಂದು ಶುಕ್ರವಾರ ನಗರದ ನಂದಿಕೇಶ್ವರ ಮಂಗಲ ಕಾರ್ಯಾಲಯದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಗಾಣಿಗ ಸಮಾಜದ ಅಧ್ಯಕ್ಷ ಕೆ.ಕೆ.ತುಪ್ಪದ ತಿಳಿಸಿದ್ದಾರೆ. ಜೂ.20 ರ ಒಳಗಾಗಿ ಜ್ಯೋತಿ ಕೋ-ಆಪ್ ಕ್ರೇಡಿಟ್ ಸೊಸೈಯಿಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗಾಗಿ 9448229675 9945780844 ಸಂಪರ್ಕಿಸಲು ತಿಳಿಸಿದ್ದಾರೆ.

ಸೈಕ್ಲಿಂಗ್ ಸ್ಪರ್ಧೆಗೆ ಚಾಲನೆ

ಜಮಖಂಡಿ: ಸಮೀಪದ ಆಲಗೂರ ಪುನರ್ವಸತಿ ಕೇಂದ್ರದ ಹೆಲಿಪ್ಯಾಡ್ ರಸ್ತೆಯಲ್ಲಿ ವರ್ಲ್ಡ್ ಬೈಸಿಕಲ್ ಡೇ ಆಚರಣೆ ಅಂಗವಾಗಿ ಕೇಂದ್ರ ಯುವ ಸಂಪನ್ಮೂಲ-ಕ್ರೀಡಾ ಸಚಿವಾಲಯ ಭಾರತೀಯ ಕ್ರೀಡಾ ಪ್ರಾಧಿಕಾರ, ಭಾರತೀಯ ಸೈಕ್ಲಿಂಗ್ ಫೆಡರೇಶನ್ ನವದೆಹಲಿ ನಿರ್ದೇಶನದಂತೆ ಕರ್ನಾಟಕ ಅಮೇಚ್ಯೂರ್ ಸೈಕ್ಲಿಂಗ್ ಅಸೋಶಿಯೇಷನ್ ಹಾಗೂ ಜಿಲ್ಲಾ ಅಮೇಚ್ಯೂರ್ ಸೈಕ್ಲಿಂಗ್ ಅಸೋಶಿಯೇಷನ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಅಸ್ಮಿತಾ ಖೇಲೋ ಇಂಡಿಯಾ ವುಮೆನ್ಸ್ ಸಿಟಿ ಲೀಗ್(ರೋಡ್ ಸೈಕ್ಲಿಂಗ್) ಸ್ಪರ್ಧೆಗಳನ್ನು ಶಾಸಕ ಜಗದೀಶ ಗುಡಗುಂಟಿ, ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಸ್ಪರ್ಧೆಗೆ ಚಾಲನೆ ಚಾಲನೆ ನೀಡಿದರು. ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಕ್ರೀಡೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು, ಪ್ರೋತ್ಸಾಹಿಸುವದರೊಂದಿಗೆ ಫಿಟ್ ಇಂಡಿಯಾ ಧ್ಯೇಯದೊಂದಿಗೆ ಸಮಾಜದಲ್ಲಿ ಉತ್ತಮ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುವುದೇ ಈ ಕಾರ್ಯಕ್ರಮದ ಸದುದ್ದೇಶ. ಇಂತಹ ಕಾರ್ಯಕ್ರಮಗಳನ್ನು ನಗರದಲ್ಲಿ ಜರುಗಿಸುವುದರಿಂದ ಸದೃಢ ಯುವ ಪೀಳಿಗೆಯನ್ನು ಸಮಾಜಕ್ಕೆ ನೀಡಬಹುದೆಂದು ಎಂದು ಹೇಳಿದರು. ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮಾತನಾಡಿದರು. ಜಿಲ್ಲಾ ಸೈಕ್ಲಿಂಗ್ ಸಂಸ್ಥೆಯ ಪದಾಧಿಕಾರಿಗಳಾದ ಪಿ.ಬಿ.ಗುದಗಿಯವರ, ಭೀಮಸಿ ಮಧುರಖಂಡಿ, ಸಿದ್ದು ಕುರಣಿ, ಬಸವರಾಜ ಗುಳೇದ, ಜಿನ್ನಪ್ಪ ಆಲಗೂರ, ಮಹಾದೇವ ಕುರಣಿ, ಗಿರೀಶ ಬುದಿಹಾಳ, ರಾಜು ಎಂಟೆತ್ತ, ಮಂಜು ಹಾರೂಗೇರಿ, ದಶರಥ ಹಿರೇಕುರಬರ, ಸದಾಶಿವ ಗೊಂಗಗೋಳ, ಸಿದ್ದಪ್ಪ ಚಿಕ್ಕಲಕಿ ಉಪಸ್ಥಿತರಿದ್ದರು.



ಮುದ್ದೇಬಿಹಾಳ: ನಗರಕ್ಕೆ ಶುಕ್ರವಾರ ಆಗಮಿಸಿದ ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಸಮಾಜದ ಉಪೇಕ್ಷಿತ ವರ್ಗಗಳ ಮನೆಗಳಿಗೆ ಸೌಹಾರ್ದಯುತವಾಗಿ ಭೇಟಿ ನೀಡಿ ಅವರಿಗೆ ಆಶೀರ್ವಾದ ನೀಡಿದರು. ರಥ ಶಿಲ್ಪಿ ಪರಶುರಾಮ ಪವಾರ, ಪ್ರಭು ಕಡಿ, ನ್ಯಾಯವಾದಿ ವಿಜಯಮಹಾಂತೇಶ ಸಾಲಿಮಠ, ವಿಜಯ ಬಡಿಗೇರ, ಮಾಣಿಕ್ ದಂಡಾವತಿ, ಸುಭಾಷ್ ಕುಲಕರ್ಣಿ, ವಿನೋದ ಪಟಗಾರ, ಮಹಿಳೆಯರು ಶ್ರೀಗಳನ್ನು ಸತ್ಕರಿಸಿದರು.

ತಿಮ್ಮಾಪುರಗೆ ಡಿಸಿಎಂ ನೀಡಲು ಒತ್ತಾಯ

ಮಹಾಲಿಂಗಪುರ: ಉತ್ತರಕರ್ನಾಟಕದಪ್ರಭಾವಿ ದಲಿತನಾಯಕರು, ಅಹಿಂದಸಮುದಾಯಗಳ ಪರವಾಗಿ ಹೋರಾಟ ಮಾಡಿರುವ ಧೀಮಂತ ನಾಯಕರಾದ ಆರ್.ಬಿ.ತಿಮ್ಮಾಪುರ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಡಿಸಿಎಂ ಹುದ್ದೆ ನೀಡಬೇಕೆಂದು ಮಹಾಲಿಂಗಪುರ ಭಾಗದ ಅಹಿಂದ ಯುವ ಮುಖಂಡ ಪ್ರಲ್ಹಾದ ಸಣ್ಣಕ್ಕಿ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಆರ್.ಬಿ.ತಿಮ್ಮಾಪೂರ ಅವರು ದಲಿತ ಪಂಗಡದ ಪ್ರಭಾವಿ ನಾಯಕರಾಗಿದ್ದು ಅವರನ್ನು ಡಿಸಿಎಂ ಮಾಡುವದರಿಂದ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ. ಇತ್ತೀಚೆಗೆ ನಡೆದ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ವೈ.ಮೇಟಿ ಅವರನ್ನು ಅತಿ ಅಂತರದಿಂದ ಗೆಲ್ಲಿಸಿಕೊಂಡು ಬಂದಿರುವ ಕೀರ್ತಿ ಆರ್.ಬಿ.ತಿಮ್ಮಾಪೂರ ಅವರಿಗೆ ಸಲ್ಲುತ್ತದೆ. ಕಳೆದ ಮೂರು ವರ್ಷಗಳಿಂದ ತಿಮ್ಮಾಪೂರ ಅವರು ಮಾಡಿರುವ ಕೆಲಸಗಳನ್ನು ಪರಿಗಣಿಸಿ, ಸಿಎಂ ಡಿ.ಕೆ.ಶಿವಕುಮಾರ ಅವರು ದಲಿತ ನಾಯಕ ಆರ್.ಬಿ.ತಿಮ್ಮಾಪೂರ ಅವರಿಗೆ ಡಿಸಿಎಂ ಹುದ್ದೆ ನೀಡಬೇಕೆಂದು ಒತ್ತಾಯಿಸಿದರು. ಕಾಂಗ್ರೆಸ್ ನಗರ ಘಟಕ ಅಧ್ಯಕ್ಷ ಮಹಾಲಿಂಗ ಮಾಳಿ, ಮುಖಂಡರಾದ ನಾರಾಯಣ ಜೋಷಿ ಮಾತನಾಡಿ, 2023ರ ಚುನಾವಣೆಯಲ್ಲಿ ಸೋತರೂ ಸಹ ಕಳೆದ ಮೂರು ವರ್ಷಗಳಿಂದ ಕ್ರಿಯಾಶೀಲರಾಗಿ ಜನಗಳ ಕೆಲಸ ಮಾಡುತ್ತಿರುವ ತೇರದಾಳ ಮತಕ್ಷೇತ್ರದ ಮುಖಂಡ ಸಿದ್ದು ಕೊಣ್ಣೂರ ಅವರಿಗೆ ನೂತನ ಸರ್ಕಾರದಲ್ಲಿ ನಿಗಮವೊಂದಕ್ಕೆ ಅಧ್ಯಕ್ಷರನ್ನಾಗಿ ನೇಮಕಗೊಳಿಸಬೇಕೆಂದು ಒತ್ತಾಯಿಸಿದರು. ಹಣಮಂತ ಅಳ್ಳಿಮಟ್ಟಿ, ಸುರೇಶ ಸಣ್ಣಕ್ಕಿ, ಬಸವರಾಜ ಚಮಕೇರಿ, ಚನ್ನಪ್ಪ ರಾಮೋಜಿ, ವಿನೋದ ಸಿಂಪಿ, ಶಿವಾನಂದ ಹುಣಶ್ಯಾಳ ಸೇರಿದಂತೆ ಹಲವರು ಇದ್ದರು.



ಮಹಾಲಿಂಗಪುರ: ಉತ್ತರ ಕರ್ನಾಟಕದ ಪ್ರಭಾವಿ ದಲಿತ ನಾಯಕರು, ಅಹಿಂದ ಸಮುದಾಯಗಳ ಪರವಾಗಿ ಹೋರಾಟ ಮಾಡಿರುವ ಧೀಮಂತ ನಾಯಕರಾದ ಆರ್.ಬಿ.ತಿಮ್ಮಾಪುರ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಡಿಸಿಎಂ ಹುದ್ದೆ ನೀಡಬೇಕೆಂದು ಮಹಾಲಿಂಗಪುರ ಭಾಗದ ಅಹಿಂದ ಯುವ ಮುಖಂಡ ಪ್ರಲ್ಹಾದ ಸಣ್ಣಕ್ಕಿ ಒತ್ತಾಯಿಸಿದರು.

ಪ್ರಶಿಕ್ಷಣ ವರ್ಗ ಅಭಿಯಾನ | ಮುರುಗೇಶ ನಿರಾಣಿ ಹೇಳಿಕೆ

ನರೇಂದ್ರ ಮೋದಿಯಿಂದ ಜನಪರ ಆಡಳಿತ

ಬೀಳಗಿ: ದೇಶದಲ್ಲಿ ಬಿಜೆಪಿ ಪಕ್ಷ 10 ಕೋಟಿ ಸದಸ್ಯರನ್ನು ಹೊಂದಿದ್ದು, ಜಗತ್ತಿನಲ್ಲಿ ಯಾವ ಪಕ್ಷವು ಇಷ್ಟೊಂದು ಸದಸ್ಯರನ್ನು ಹೊಂದಿಲ್ಲ, ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಆಡಳಿತ ಇದಕ್ಕೆ ಸಾಕ್ಷಿಯಾಗಿದೆ. ಮೋದಿಯವರು 12 ವರ್ಷದ ಆಡಳಿತದಲ್ಲಿ ಕಾಂಗ್ರೆಸ್‌ಗಿಂತ ಅತಿ ಹೆಚ್ಚು ಅಭಿವೃದ್ಧಿ ಮಾಡಿರುವರು ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ, ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

ಬೀಳಗಿ ಕ್ರಾಸ್ ಹತ್ತಿರದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಶನಿವಾರ ನಡೆದ ಪಂ. ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಬೀಳಗಿ ವಿಧಾನ ಸಭಾ ಕ್ಷೇತ್ರದ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕೇವಲ ಎಂಪಿ, ಎಂಎಲ್‌ಎಗಳನ್ನು ಗೆಲ್ಲಿಸಿದರೆ ಸಾಲದು. ಗ್ರಾಪಂ, ತಾಪಂ, ಜಿಪಂ ಹಾಗೂ ನಗರಸಭೆ, ಪಟ್ಟಣ ಪಂಚಾಯತ ಚುನಾವಣೆಗಳನ್ನು ಗೆಲ್ಲುವುದು ಬಹುಮುಖ್ಯವಾಗಿದೆ. ಜಿಪಿ ಟು ಎಂಪಿ ವರೆಗೆ ನಮ್ಮ ಪಕ್ಷದವರೇ ಆಡಳಿತದಲ್ಲಿದ್ದರೆ ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಅನುದಾನ ಕೊಡಲು ಸುಲಭ ಸಾಧ್ಯವಾಗಲಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ದೇಶಾಭಿಮಾನದ ಬದ್ಧತೆ, ದೇಶ ಮೊದಲು ಎಂಬ ವೈಚಾರಿಕ ದೃಷ್ಟಿಕೋನವನ್ನು ಬಿಜೆಪಿ ಪಕ್ಷ ಹೊಂದಿದೆ. ಸಾಮಾಜಿಕ ಪರಿವರ್ತನೆ, ರಾಷ್ಟ್ರಕಟ್ಟುವ ಜವಾಬ್ದಾರಿಯ ವಿಚಾರಧಾರೆಗಳನ್ನು ಪ್ರತಿಯೊಬ್ಬರ ಮನದಲ್ಲಿ ತುಂಬುವುದು ಬಿಜೆಪಿಯ ಮುಖ್ಯ ಉದ್ದೇಶ. ದೇಶಕ್ಕಾಗಿ ಅಟಲ್ ಬಿಹಾರಿ ವಾಜಪೇಯಿ, ಲಾಲ್‌ಕೃಷ್ಣ ಅಡ್ವಾಣಿ, ನರೇಂದ್ರ ಮೋದಿ ಅವರು ಸಂಪೂರ್ಣ ಸಮರ್ಪಣಾಭಾವದಿಂದ



> ಬಿಜೆಪಿ ಕಾರ್ಯಕರ್ತರು ಮತ್ತು ಬೂತ ಮಟ್ಟದ ಪ್ರಮುಖರು ತಮಗೆ ನೀಡಿದ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಬೂತ ಮಟ್ಟದಲ್ಲಿ ಬಿಜೆಪಿ ಗೆದ್ದರೆ ಮಾತ್ರ ಮುಂದಿನ ಎಲ್ಲ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಾಗಲಿದೆ. ಬಿಜೆಪಿ ಪಕ್ಷದ ಸರ್ಕಾರದಲ್ಲಿ ರಾಜ್ಯ ಮತ್ತು ಕೇಂದ್ರದಲ್ಲಿ ಯಾವೆಲ್ಲಾ ಅಭಿವೃದ್ಧಿ ಯೋಜನೆಗಳು ನಡೆದಿವೆ ಎಂಬುದನ್ನು ಪ್ರತಿಯೊಂದು ಮನೆಗಳಿಗೆ ತಿಳಿಸುವ ಕೆಲಸ ಮಾಡಬೇಕು.
>
> ■ ಮುರುಗೇಶ ನಿರಾಣಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ

ಕೆಲಸ ಮಾಡಿದ್ದಾರೆ. ಅತಿಹೆಚ್ಚು ಕಾಲ ಪ್ರಧಾನಿಯಾಗಿ ಮೋದಿ ಸೇವೆ ಸಲ್ಲಿಸಿದ್ದು, ಅವರು ವಿಶ್ವದಲ್ಲೇ ಸಂಪದ್ಭರಿತ ದೇಶವನ್ನು ಮಾಡುವ ಪರಿಕಲ್ಪನೆ ಹೊಂದಿರುವರು ಎಂದರು.

ಪ್ರಶಿಕ್ಷಣದ ಜಿಲ್ಲಾ ಸಂಯೋಜಕ ಶಂಕರ ಹುನ್ನೂರ ಮಾತನಾಡಿ, ನಮ್ಮ ಜವಾಬ್ದಾರಿ ಅರಿತುಕೊಳ್ಳುವ, ತಿಳಿದುಕೊಳ್ಳುವುದು ಅಭ್ಯಾಸ ವರ್ಗದ ಮುಖ್ಯ ಉದ್ದೇಶ. ಬೂತ ಮಟ್ಟದ ಕಾರ್ಯಕರ್ತರಿಗೆ ನಿರ್ಧಿಷ್ಟವಾದ ಗುರಿ ಇರಬೇಕು. ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು 7 ವಿಷಯಗಳನ್ನು ಇಟ್ಟುಕೊಂಡು ಅಭ್ಯಾಸ ವರ್ಗ ಮಾಡಲಾಗುತ್ತಿದೆ. ತಾವು ವಹಿಸಿಕೊಂಡು ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದಾಗ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಬಿಜೆಪಿ ತಾಲೂಕಾಧ್ಯಕ್ಷ ಹೊಳಬಸು ಬಾಳಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಪ ಸದಸ್ಯ ಎಚ್.ಆರ್.ನಿರಾಣಿ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಜಿಪಂ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ, ಕೆಎಂಎಫ್ ನಿರ್ದೇಶಕ ಸಿದ್ದಪ್ಪ ಕಡಪಟ್ಟಿ, ಮುಖಂಡರಾದ ಮಲ್ಲಿಕಾರ್ಜುನ ಅಂಗಡಿ, ಎಸ್.ಎಂ.ಕಟಗೇರಿ, ಎಂ.ಎಂ.ಶಂಭೋಜಿ, ಮೋಹನ ಜಾಧವ, ರಾಮಣ್ಣ ಕಾಳಪ್ಪಗೋಳ, ಶ್ರೀಶೈಲ ಗೌರಿ, ಮಹಾಂತೇಶ ಕೋಲಕಾರ, ಎಂ.ಬಿ.ಬೂಸರಡ್ಡಿ, ಮಿಥುನ ನಾಯಕ, ಬಸವಂತಪ್ಪ ಸಂಕಾನಟ್ಟಿ, ಕೆ.ಎಲ್.ಬಿಲ್‌ಕೇರಿ, ವಿಜಯಲಕ್ಷ್ಮಿ ಪಾಟೀಲ, ಸುನಂದಾ ಪಾಟೀಲ, ಚಂದ್ರಕಾಂತ ಕೇಸನೂರ, ಈರಣ್ಣ ತೋಟದ, ಶೇಖರ ಗೊಳಸಂಗಿ, ಗಂಗಾಧರ ಬಿಂಗಿ, ಸತೀಶ ಹಿರೇಮಠ ಇದ್ದರು.

ಬಿಟಿಡಿಎ ಮುಳಗಡೆ ಸಂತ್ರಸ್ತರ ಧ್ವನಿಯಾಗಲಿದೆ

ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿಪ್ರಾಧಿಕಾರದಲ್ಲಿನಿರೀಕ್ಷಿತಮಟ್ಟದಲ್ಲಿ ಕೆಲಸ ಮಾಡುವ ನಿಟ್ಟಿನಲ್ಲಿ ಎಲ್ಲ ರೀತಿಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹೇಳಿದರು.

ಬಿಟಿಡಿಎ ಕಚೇರಿ ಆವರಣದಲ್ಲಿ ಶನಿವಾರ ಮುಳುಗಡೆ ವಿವಿಧ ಸಂತ್ರಸ್ತರಿಗೆ ಹಕ್ಕು ಪತ್ರ ಹಾಗೂ ಇ-ಖಾತಾ ಉತಾರಗಳನ್ನು ವಿತರಿಸಿ ಮಾತನಾಡಿದ ಅವರು, ಮುಳುಗಡೆ ಸಂತ್ರಸ್ತರಿಗೆ ಧ್ವನಿಯಾಗುವ ನಿಟ್ಟಿನಲ್ಲಿ ಪ್ರಾಧಿಕಾರದಲ್ಲಿಸಾಕಷ್ಟು ಕೆಲಸಗಳು ಉಳಿಸಿದೆ. ಅವೆಲ್ಲವೂಗಳನ್ನು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಕಾರ್ಯಗಳು ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಕಚೇರಿಯ ಅಧಿಕಾರಿ ಹಾಗೂ ಸಿಬ್ಬಂದಿಗಳಪ್ರತಿ ದಿನದಕೆಲಸಕಾರ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು.

ಕಚೇರಿ ಆಗಮಿಸಿದ ಪ್ರತಿಯೊಬ್ಬ ಸಂತ್ರಸ್ತರ ದೂರುಗಳಿಗೆ ಸ್ಪಂದಿಸುವ ಮೂಲಕ ತ್ವರಿತಗತಿಯಲ್ಲಿ ಬಗೆಹರಿಸುವ ಕೆಲಸವಾಗಬೇಕು. ಪ್ರಾಧಿಕಾರದ ಸಭೆಯಲ್ಲಿ ಆಗಬೇಕಾದ ಕೆಲಸ, ಯೋಜನೆ ಯಾವ ರೀತಿ ಹಾಕಿಕೊಳ್ಳಬೇಕು ಹಾಗೂ ಇರುವಂತಹ ಕೆಲಸಗಳನ್ನು ಪೂರ್ಣಗೊಳಿಸುವ ಕುರಿತು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಬಾಗಲಕೋಟೆ ಶಾಸಕ ಉಮೇಶ ಮೇಟಿ ಮಾತನಾಡಿ, ಸಂತ್ರಸ್ತರ ನೋವಿಗೆ ಸ್ಪಂದಿಸುವ ಕೆಲಸವಾಗಬೇಕು. ಸಂತ್ರಸ್ತರು ಕಚೇರಿ ಬಂದಾಗ ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸಿ ಕೆಲಸಗಳನ್ನು ಮಾಡಿಕೊಡಬೇಕು ಎಂದು ತಿಳಿಸಿದರು.

ನವನಗರದ ವ್ಯಾಪ್ತಿಯಲ್ಲಿ ನೂತನ ಮಾರುಕಟ್ಟೆನಿರ್ಮಾಣಕ್ಕೆಕ್ರಮಕೈಗೊಳ್ಳುವಂತೆ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಅವರು ಶಾಸಕರಲ್ಲಿ ಕೇಳಿಕೊಂಡಾಗ ಈಗಾಗಲೇ ನವನಗರದವ್ಯಾಪ್ತಿಯ 200 ಎಕರೆ ಜಾಗೆಯಲ್ಲಿ ಸುಸಜ್ಜಿತವಾದ ನೂತನ ಮಾರುಕಟ್ಟೆ ನಿರ್ಮಾಣ ಕುರಿತಂತೆ ಮುಖ್ಯಮಂತ್ರಿ ಹಾಗೂ ಸಚಿವರು ಗಮನಕ್ಕೆತರಲಾಗಿದ್ದು, ಈ ಕಾರ್ಯ ಕೈಗೂಡಲು ಎಲ್ಲ ರೀತಿಯ ಕ್ರಮಕೈಗೊಳ್ಳಲಾಗುವುದೆಂದರು. 15 ಸಂತ್ರಸ್ತರಿಗೆ ಹಕ್ಕುಪತ್ರ ಹಾಗೂ 46 ಜನರಿಗೆ ಇ-ಖಾತಾ ಉತಾರ ವಿತರಣೆ ಮಾಡಲಾಯಿತು. ಬುಡಾದ ಅಧ್ಯಕ್ಷ ಅಬ್ದುಲ್‌ರಜಾಜ ಬೇನೂರ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲ ದಡ್ಡಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಅಭಿಯಂತರ ಚಂದ್ರಹಾಸ ಬಂಡಿ, ಜಂಟಿ ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಪುನರ್ವಸತಿ ಅಧಿಕಾರಿ ಆಗಿರುವ ಪ್ರಶಾಂತ ಬಾರಿಗಿಡದ ಉಪಸ್ಥಿತರಿದ್ದರು.




ಸಂಪೂರ್ಣ ಮಾಹಿತಿ ಜೊತೆ ಸಭೆಗೆ ಹಾಜರಾಗಿ

ಬಾದಾಮಿ: ತಾಲೂಕುಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಯ ಕನಿಷ್ಠ ಅಂಕಿ ಸಂಖ್ಯೆಯ ಮಾಹಿತಿನೂ ಇಲ್ಲದಿರುವುದು ಬೇಸರದ ಸಂಗತಿ. ಅಧಿಕಾರಿಗಳು ತಮ್ಮ ಕರ್ತವ್ಯಕ್ಕೆ ಮಾಹಿತಿ ಇಲ್ಲವೆಂದರೆ ಅವಮಾನ ಮಾಡಿದಂತೆ. ಮುಂದಿನ ಸಭೆಗೆ ಎಲ್ಲರೂ ಕನಿಷ್ಟ ಜತೆಗೆ ಇಲಾಖೆಯ ಸಂಪೂರ್ಣ ಮಾಹಿತಿ ಒಳಗೊಂಡು ಸಭೆಗೆ ಹಾಜರಾಗಬೇಕು ಎಂದು ಜಿಪಂ ಉಪ ಕಾರ್ಯದರ್ಶಿ, ತಾಪಂ ಆಡಳಿತಾಧಿಕಾರಿ ಎನ್.ವೈ.ಬಸರಿಗಿಡದ ಎಚ್ಚರಿಕೆ ನೀಡಿದರು.

ಇಲ್ಲಿನ ತಾಲೂಕು ಪಂಚಾಯತಿ ಸಭಾಭವನದಲ್ಲಿ ಕರೆದಿದ್ದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು ಶಿಶು ಅಭಿವೃದ್ಧಿ, ಕೃಷಿ, ಕುಡಿಯುವ ನೀರು ಸರಬರಾಜು, ಪಿಡಬ್ಲುಡಿ, ಆರೋಗ್ಯ ಸೇರಿದಂತೆ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಕಟುವಾಗಿ ಸೂಚಿಸಿದರು.

114 ಎಂಎಂ ಮಳೆಯಾಗಬೇಕಿತ್ತು. 191 ಎಂಎಂ ಮಳೆಯಾಗಿದೆ. ತಾಲೂಕಿನಲ್ಲಿ 55 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಮೆಕ್ಕೆಜೋಳ, ಸೂರ್ಯಕಾಂತಿ, ತೊಗರಿ, ಕಡಲೆ, ಬಿತ್ತನೆಯಾಗಿದೆ. ಇದರಲ್ಲಿ 8800 ಹೆಕ್ಟರ್ ಪ್ರದೇಶ ಕಬ್ಬು ಬೆಳೆ ಒಳಗೊಂಡಿದೆ. ರೈತರಿಗೆ ಬಿತ್ತನೆ ಬೀಜಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಯುರಿಯಾ ಗೊಬ್ಬರದ ಸಮಸ್ಯೆ ಬಹಳಷ್ಟಿದೆ. 1590 ಟನ್ ಯುರೀಯಾ ಗೊಬ್ಬರದ ಬೇಡಿಕೆ ಸಲ್ಲಿಸಲಾಗಿತ್ತು. ಆದರೆ 800 ಟನ್ ಮಾತ್ರ ನೀಡಿದ್ದು, ಇದರಲ್ಲಿ 790 ಟನ್ ಈಗಾಗಲೆ ಪಿಕೆಪಿಎಸ್‌ಗಳ ಮೂಲಕ ಹಂಚಿಕೆ ಮಾಡಲಾಗಿದೆ ಎಂದಾಗ ರೈತರ ಸಂಖ್ಯೆ ಜಮೀನು ಸಂಖ್ಯೆ ಕೇಳಿದಾಗ ತಬ್ಬಿಬ್ಬಾದ ಅಧಿಕಾರಿಗೆ ಇಲಾಖೆ ಕನಿಷ್ಟ ಮಾಹಿತಿ ತಕ್ಷಣ ಹೇಳುವಂತಾಗಬೇಕು ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ ಮಾತನಾಡಿ, ಜಿಲ್ಲೆಯಲ್ಲಿ ಬಾದಾಮಿ ಶೈಕ್ಷಣಿಕ ಫಲಿತಾಂಶದಲ್ಲಿ ಶೇ 96 ರಷ್ಟು ಅಂಕದಲ್ಲಿ ಪ್ರಥಮವಾಗಿದ್ದೇವೆ ಎಂದಾಗ ಬಸರಿಗಿಡದ ಅವರು ಪ್ರಸಕ್ತ ವರ್ಷದಲ್ಲಿಯೂ ನಿಮ್ಮ ಶ್ರಮ ಮುಂದುವರೆಯಲಿ ಅದು 100ಕ್ಕೆ ನೂರು ಆಗಬೇಕು ಎಂದರು.

ತಾಲೂಕಿನ ಶಾಲೆಗಳಲ್ಲಿನ 164 ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಕೆಲವು ಕೊಠಡಿಗಳ ನಿರ್ಮಾಣ ಕಾರ್ಯ ನಡೆದಿದೆ ಎಂದ ಅವರು ಪೆಟ್ಲೂರ ತಿಳಿಸಿದರು. 30 ಮಕ್ಕಳಿಗೆ ಒಂದು ಶೌಚಾಲಯ ಎಂಬ ನಿಯಮದಂತೆ ಶಾಲಾ ಕಾಲೇಜುಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಲು ಸೂಚಿಸಿದರು. ತಾಪಂ ಇಒ ಸತೀಶ ಮಾಕೊಂಡ ಸೇರಿದಂತೆ ಎಲ್ಲ ಅಧಿಕಾರಿಗಳು ಉಪಸ್ಥಿತರಿದ್ದರು.



ಶಿಕ್ಷಕ ನಾಗರಾಜ ಹೊಸೂರ ವರ್ಗಾವಣೆ: ಗ್ರಾಮಸ್ಥರಿಂದ ಬೀಳ್ಕೊಡುಗೆ

ಬಾದಾಮಿ: ತಾಲೂಕಿನ ಕಾತರಕಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಶಿಕ್ಷಕ ನಾಗರಾಜ ಹೊಸೂರ ವರ್ಗಾವಣೆಯಾದ ಪ್ರಯುಕ್ತ ಬೀಳ್ಕೊಡುವ ಸಮಾರಂಭ ಶುಕ್ರವಾರ ಜರುಗಿತು.

ಕುಟಕನಕೇರಿ ಶಾಲೆಯ ಮುಖ್ಯಶಿಕ್ಷಕ ಎಚ್.ಎನ್.ನರಸಾಪುರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಿಕ್ಷಕ ನಾಗರಾಜ ಹೊಸೂರ ಅವರು ಉತ್ತಮ ಶಿಕ್ಷಣ ಮಕ್ಕಳಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಸನ್ಮಾನ ಸ್ವೀಕರಿಸಿದ ನಾಗರಾಜ ಹೊಸೂರ ಮಾತನಾಡಿ, ಈ ಗ್ರಾಮ ನನಗೆ ಅವಿಸ್ಮರಣೀಯವಾದಂತ ನೆನಪುಗಳನ್ನು ಕೊಟ್ಟಿದೆ. ನನ್ನ ಶಿಕ್ಷಕ ವೃತ್ತಿ ಜೀವನದಲ್ಲಿ ಈ ಶಾಲೆ ಮತ್ತು ಇಲ್ಲಿರುವ ಸಿಬ್ಬಂದಿ ನಾನು ಮರೆಯುವುದಿಲ್ಲ ಎಂದು ಹೇಳಿದರು.

ಶಾಲೆಯ ಮುಖ್ಯಶಿಕ್ಷಕ ಆರ್.ಎಂ.ಸಾರವಾಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕ ಎಂದರೆ ಕೇವಲ ಜ್ಞಾನ ಕೊಡುವವನಲ್ಲ, ಅವನು ಜೀವನದ ಮೌಲ್ಯ ಹಾಗೂ ಕೌಶಲ್ಯ ಕೊಡತಕ್ಕಂಥವನಾಗಿರುತ್ತಾನೆ. ಇವುಗಳನ್ನು ಕೊಡಬೇಕಾದರೆ ಸ್ವತ: ಕೌಶಲ್ಯ, ಜ್ಞಾನ ಹೊಂದಿದವನಾಗಿರಬೇಕು. ಅದನ್ನು ನಾಗರಾಜ ಗುರುಗಳು ಹೊಂದಿದ್ದರು. ವಿದ್ಯಾರ್ಥಿಗಳಿಗೆ ಶಿಕ್ಷಣ ಧಾರೆ ಎರೆದಿದ್ದಾರೆ ಎಂದು ಹೇಳಿದರು. ರಂಗನಾಥ ಪ್ರೌಢಶಾಲೆಯ ಮುಖ್ಯಶಿಕ್ಷಕ ಆರ್.ಎಸ್.ಬೂದಣ್ಣವರ, ತಮಿನಾಳ ಶಾಲೆಯ ಮುಖ್ಯಶಿಕ್ಷಕ ಕೆ.ಚ್.ಹಲಕುರ್ಕಿ, ಚೊಳಚಗುಡ್ಡ ಶಾಲೆಯ ಮುಖ್ಯಶಿಕ್ಷಕಿ ಎಸ್.ಎಸ್.ಕಲಾದಗಿ, ಶಿಕ್ಷಕಿಯರಾದ ಆರ್.ಬಿ.ಹುಂಬಿ, ಎಲ್.ಎಸ್.ಗುಮಾಸ್ತೆ, ಬಿ.ಎಸ್.ಮಾನ್ವಿ ಎಸ್.ಆರ್.ಕಾತರಿಕಿ, ಐ.ಎ.ಸೋಲಾಪುರ, ಎಸ್.ಎಸ್.ಲೋಣಿ, ಕೃನಾಲ ಮಣ್ಣೂರ, ಶಂಕ್ರಮ್ಮ ಮಂಗಳೂರು, ಯಲ್ಲಮ್ಮ ಕರಿಯಣ್ಣವರ. ಸಾವಿತ್ರಿ ಬಡಿಗೇರ. ಗಿರಿಜಾ ದಳವಾಯಿ. ಸುವರ್ಣ ಹೂಗಾರ. ಪದ್ಮಾವತಿ ಕೋಳಿವಾಡ, ಲಕ್ಷ್ಮಿ ಮಾದರ, ಐಶ್ವರ್ಯ ಐಹೊಳ್ಳಿ, ವಿದ್ಯಾರ್ಥಿನಿ ಯಲ್ಲಮ್ಮ ಕಟ್ಟೆನ್ನವರ, ಕಿಶೋರ ಮಾದರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಾರ್ವಜನಿಕರ ಸಮಸ್ಯೆ ಆಲಿಸಿದ ಪುರಸಭೆ ಮುಖ್ಯಾಧಿಕಾರಿ

ತೇರದಾಳ: ದೇವರಾಜ ನಗರದ ಹಲವಾರು ವಾರ್ಡ್‌ಗಳಲ್ಲಿ ಪುರಸಭೆಯ ಮುಖ್ಯಾಧಿಕಾರಿ ಐ.ಬಿ.ಝಾರೆ ಸಂಚರಿಸಿ ಸಾರ್ವಜನಿಕರಿಂದ ಸಮಸ್ಯೆ ಆಲಿಸಿದರು. ಪ್ರತಿ ವಾರ್ಡ್‌ಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿಯ ಸಾರ್ವಜನಿಕರೊಂದಿಗೆ ಸಮಾಲೋಚಿಸಿ ಮಾತನಾಡಿದ ಅವರು, ದೇವರಾಜ ನಗರವು ಪಟ್ಟಣಕ್ಕಿಂತಲೂ ಹೆಚ್ಚಿನ ವಿಸ್ತಾರ ಹೊಂದಿರುವ ಎಲ್ಲಾ ಸಮಾಜದ ಕಡು ಬಡವರ, ಕೂಲಿ ಕಾರ್ಮಿಕರ ಜನವಸತಿ ಪ್ರದೇಶವಾಗಿದ್ದು, ಇದು ಗುಡ್ಡದ ಪ್ರದೇಶವಾಗಿರುವುದರಿಂದ ಆಗಾಗ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿರುತ್ತದೆ. ಇದನ್ನರಿತ ಪುರಸಭೆಯ ಅಧಿಕಾರಿಗಳು ಪಟ್ಟಣಕ್ಕಿಂತ ಹೆಚ್ಚಿನ ಆದ್ಯತೆಯನ್ನು ಈ ಪ್ರದೇಶಕ್ಕೆ ನೀಡಿ ಜನಸಾಮಾನ್ಯರ ಮೂಲ ಸೌಕರ್ಯ ಒದಗಿಸುವಲ್ಲಿ ನಿರತವಾಗಿದೆ. ಜಲಮೂಲವಿದ್ದಲ್ಲಿ ಸಾಕಷ್ಟು ಬೋರವೆಲ್‌ಗಳನ್ನು ಕೊರೆಯಿಸಿ ಅವುಗಳ ಮುಖಾಂತರ ನೀರು ಸರಬರಾಜು ಮಾಡುತ್ತಲಿದೆ ಎಂದರು.

ದೇವರಾಜ ನಗರದ ಸಾರ್ವಜನಿಕರು ಮಾತನಾಡಿ, ನಮ್ಮ ಸಮಸ್ಯೆಗಳಿಗಾಗಿ ನಾವು ಪುರಸಭೆಗೆ ಅಲೆದಾಡಬೇಕಿತ್ತು. ಆದರೆ ಸ್ವತಃ ಮುಖ್ಯಾಧಿಕಾರಿಗಳೇ ನಮ್ಮ ಸಮಸ್ಯೆ ಕೇಳಲು ನಮ್ಮ ವಾರ್ಡಗೆ ಬಂದಿದ್ದು ನಮಗೆ ಸಂತೋಷವಾಗಿದೆ ಎಂದು ಅಲ್ತಾಪ ಹನಗಂಡಿ, ಮೌಲಾಅಲಿ ಚತ್ರಬಾನುಕೋಟೆ, ತಿಮ್ಮಣ್ಣ ಗಾಡಿವಡ್ಡರ ಹೇಳಿದರು. ಮುಖ್ಯಾಧಿಕಾರಿ ಐ.ಬಿ.ಝಾರೆ ಮಾತನಾಡಿ, ಜನರ ಸೇವೆ ಮಾಡಲು ಸರ್ಕಾರ ನನಗೊಂದು ಅವಕಾಶ ಕಲ್ಪಿಸಿದೆ. ನಾನು ಪ್ರಾಮಾಣಿಕತೆಯಿಂದ ಹಾಗೂ ಸಾರ್ವಜನಿಕರ ಹಿತ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತೇನೆ. ಪುರಸಭೆಯ ಆಡಳಿತಾಧಿಕಾರಿ ಶ್ವೇತಾ ಬೀಡಿಕರ ಪ್ರತಿಯೊಂದು ಹೆಜ್ಜೆಗೂ ನಿರಂತರವಾಗಿ ಮಾರ್ಗದರ್ಶನ ನೀಡುತ್ತಿದ್ದು, ಕಾರಣ ಅವರ ನಿರ್ದೇಶನ ಪಾಲಿಸಿ ಸಾರ್ವಜನಿಕರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಸೇವೆ ಮಾಡುತ್ತೇನೆ ಎಂದರು.

ಪಟ್ಟಣದ ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಧಕ ಬಾಧಕರ ಚರ್ಚಿಸಿ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿ ಕಾರ್ಯ ನಿರ್ವಹಿಸುತ್ತೇನೆ. ಇದರಲ್ಲಿ ಸಾರ್ವಜನಿಕರ ಪಾತ್ರ ತುಂಬಾ ಪ್ರಮುಖವಾಗಿದೆ ಎಂದರು.



ಗುಣಮಟ್ಟದ ಕಾಮಗಾರಿಗೆ ಸೂಚನೆ

ಬಾಗಲಕೋಟೆ: ಬಾಗಲಕೋಟೆ ನವನಗರದ ಬಸ್ ನಿಲ್ದಾಣ ಆವರಣದ ಪೂರ್ವ ಹಾಗೂ ದಕ್ಷಿಣ ಭಾಗದಲ್ಲಿ 105 ಲಕ್ಷ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ಡಾಂಬರೀಕರಣ ಕಾಮಗಾರಿಗೆ ಶಾಸಹ ಉಮೇಶ ಮೇಟಿ ಶನಿವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಹ ಉಮೇಶ ಮೇಟಿ, ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದ ಶಾಸಕ ಮೇಟಿ ಸಾರ್ವಜನಿಕರ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ಶಾಶ್ವತ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು ಎಂದು ತಿಳಿಸಿದರು. ಬಸ್ ನಿಲ್ದಾಣ ಆವರಣ ಅಭಿವೃದ್ಧಿಯಿಂದ ಪ್ರಯಾಣಿಕರಿಗೆ ಸ್ವಚ್ಛ ಹಾಗೂ ಸುರಕ್ಷಿತ ವಾತಾವರಣ ನಿರ್ಮಾಣವಾಗಲಿದ್ದು, ಮಳೆಗಾಲದಲ್ಲಿ ಉಂಟಾಗುವ ನೀರು ನಿಲ್ಲುವ ಸಮಸ್ಯೆಗೂ ಪರಿಹಾರ ದೊರೆಯಲಿದೆ ಎಂದು ತಿಳಿಸಿದರು. ಅಭಿವೃದ್ಧಿ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ನವನಗರದ ಬಸ್ ನಿಲ್ದಾಣಕ್ಕೆ ಪ್ರತಿದಿನ ಸಾವಿರಾರು ಪ್ರಯಾಣಿಕರು ಆಗಮಿಸುತ್ತಿದ್ದು, ಆವರಣದಲ್ಲಿ ಮಳೆಯಾದರೆ ನೀರು ಆವರಿಸುತ್ತಿತ್ತು. ಇದರಿಂದ ಪ್ರಯಾಣಿಕರು ಹಾಗೂ ವಾಹನ ಚಾಲಕರು ತೊಂದರೆ ಅನುಭವಿಸುತ್ತಿದ್ದರು. ಈಗ 105 ಲಕ್ಷ ರೂ.ಗಳ ವೆಚ್ಚದ ಡಾಂಬರೀಕರಣ ಕಾಮಗಾರಿಗೆ ಕೈಗೊಳ್ಳುತ್ತಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ ಎಂದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರು ಡಾಂಬರೀಕರಣ ಕಾಮಗಾರಿ ನಿಗದಿತ ಅವಧಿಯಲ್ಲಿ ಗುಣಮಟ್ಟದಿಂದ ಕೂಡಿರಬೇಕು. ಬಹಳ ದಿನಗಳ ಕಾಲ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನೀಕ ದಡ್ಡಿ, ಬುಡಾದ ಅಧ್ಯಕ್ಷ ಅಬ್ದುಲರಜಾಕ ಬೇನೂರ ಸೇರಿದಂತೆ ಮಾಜಿ ಸಚಿವ ಎಸ್.ಆರ್.ಪಾಟೀಲ, ಜಿಪಂ ಮಾಜಿ ಅಧ್ಯಕ್ಷಬಸವಂತಪ್ಪ ಮೇಟಿ, ಎಸ್.ಎಂ.ರಾಂಪೂರ, ಮಲ್ಲಣ್ಣ ಚರಂತಿಮಠ, ಸಂತೋಷ ಹೊಕ್ರಾಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮಲ್ಲಿಕಾರ್ಜುನ ಮಂದಿರಕ್ಕೆ ದೇಣಿಗೆ

ಜಮಖಂಡಿ: ತಾಲೂಕಿನ ಹುಲ್ಯಾಳ ಗುರುದೇವಾಶ್ರಮದ ಆವರಣದಲ್ಲಿ ನಿರ್ಮಾಣಗೊಳ್ಳುತ್ತಿರುವ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಮಂದಿರಕ್ಕೆಹುನ್ನೂರಿನಗ್ರಾಮದೇವಿ ನಿತ್ಯ ಸತ್ಸಂಗ ಬಳಗದವತಿಯಿಂದ ರೂ.2,14,800 ದೇಣಿಗೆಯನ್ನು ಹರ್ಷಾನಂದ ಶ್ರೀಗಳಿಗೆ ನೀಡಲಾಯಿತು.

ಗ್ರಾಮದೇವಿ ನಿತ್ಯ ಸತ್ಸಂಗ ಬಳಗದಿಂದ ಸುಮಾರು 60 ವರ್ಷಗಳಿಂದ ಪ್ರತಿನಿತ್ಯ ಸಂಜೆ ಸತ್ಸಂಗ ಕಾರ್ಯಕ್ರಮ ಜರುಗಿಸುತ್ತ ಬರಲಾಗಿದೆ. ಅದರ ಅಂಗವಾಗಿ ಶುಕ್ರವಾರ ನಡೆದ ಸತ್ಸಂಗಕ್ಕೆ ಹರ್ಷಾನಂದ ಶ್ರೀಗಳನ್ನು ಆಹ್ವಾನಿಸಿ ದೇಣಿಗೆ ಹಣ ಸಮರ್ಪಿಸಿ ಅವರನ್ನು ಸನ್ಮಾನಿಸಲಾಗಿದೆ. ಮೊದಲ ಬಾರಿಗೆ 1950ರಲ್ಲಿ, ಎರಡನೆ ಬಾರಿಗೆ 1953ರಲ್ಲಿ ತಲಾ ಮೂರು ತಿಂಗಳುಗಳ ಕಾಲ ಮಲ್ಲಿಕಾರ್ಜುನ ಶಿವಯೋಗಿಗಳು ಪ್ರವಚನ ನೀಡಿದ್ದರು. ನಂತರ 1969ರಲ್ಲಿ ಮೂರನೆ ಬಾರಿ ಒಂದು ತಿಂಗಳು ಪ್ರವಚನ ನೀಡಿದ್ದರು. ಮಲ್ಲಿಕಾರ್ಜುನ ಶಿವಯೋಗಿಗಳಿಂದ ದೀಕ್ಷೆಯನ್ನು ಹಲವರು ಪಡೆದಿದ್ದಾರೆ.

ಶಿವಪುತ್ರ ಸ್ವಾಮಿಗಳು, ದಯಾನಂದ ಕೊಣ್ಣೂರ, ಚನ್ನಪ್ಪ ಬಿರಾದಾರ, ಶೇಖರ ಸಾವಳಗಿ, ನರಸಪ್ಪ ತೇಲಿ, ಬಸವಂತಪ್ಪ ಹನಗಂಡಿ, ಸಂಗಣ್ಣ ಕಡಪಟ್ಟಿ, ಗುರಪ್ಪ ಕಲಾಜಗೋಳ, ಶಿವಪ್ಪ ಕಡಪಟ್ಟಿ, ಮಲ್ಲಪ್ಪ ಯಲಗುದ್ರಿ, ಅಂಬಿ ಸರ್ ಇದ್ದರು.



ಶಾಸಕ ಜೆ.ಟಿ.ಪಾಟೀಲಗೆ ಸಚಿವ ಸ್ಥಾನ ನೀಡಿ

ಬಾಗಲಕೋಟೆ: ಬೀಳಗಿ ಮತಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಪ್ರಾಮಾಣಿಕವಾಗಿ ಹಾಗೂ ಕ್ರಿಯಾಶೀಲವಾಗಿರುವ ಶಾಸಕ ಜೆ.ಟಿ.ಪಾಟೀಲಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಅಭಿವೃದ್ಧಿಗೆ ಮತ್ತಷ್ಟು ಶ್ರಮ ಹಾಕಲಿದ್ದಾರೆ ಎಂದು ಕೆಪಿಸಿಸಿ ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡರ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರಾಗಿ ರೈತರ ಸಮಸ್ಯೆಗಳ ಬಗ್ಗೆ ಸದನದಲ್ಲಿ ಗಮನ ಸೆಳೆಯುವ ಮೂಲಕ ಪರಿಹಾರ ಕಂಡುಕೊಂಡಿರುವ ಜತೆಗೆ ಜಿಲ್ಲೆಯಲ್ಲಿ ಹಿರಿಯ ಶಾಸಕರು ಕೂಡ ಆಗಿರುವುದರಿಂದ ಅವರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ಎಂ.ಎಲ್.ಕೆಂಪಲಿಂಗಣ್ಣವರ ಮಾತನಾಡಿ, ಜಿಲ್ಲೆಯಲ್ಲಿ ಹಿರಿಯ ಶಾಸಕರಾಗಿರುವ ಜೆ.ಟಿ.ಪಾಟೀಲರು ಪಾರದರ್ಶಕ ಆಡಳಿತವನ್ನು ನೀಡುತ್ತಿದ್ದಾರೆ. ಸಮಯಕ್ಕೆ ಬದ್ಧತೆ ತೋರಿಸುತ್ತಾರೆ. ಇವರ ಚುನಾವಣೆಯನ್ನು ಕಾರ್ಯಕರ್ತರೆ ಮುಂದೆ ನಿಂತು ಮಾಡುವ ಮೂಲಕ ಅವರನ್ನು ನಾಲ್ಕು ಬಾರಿ ಗೆಲ್ಲಿಸಿದ್ದಾರೆ ಎಂದರು.

ಶಾಸಕರು ಕ್ಷೇತ್ರದಲ್ಲಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸಿ ಜನರ ಸಮಸ್ಯೆಗಳನ್ನು ಆಲಿಸುವುದು, ಬೆಂಗಳೂರಿಗೆ ಹೋದರೆ ಕ್ಷೇತ್ರದ ಅಭಿವೃದ್ಧಿ ಕೆಲಸ ತೆಗೆದುಕೊಂಡು ಹೋಗಿ ಅವುಗಳಿಗೆ ಪರಿಹಾರ ಕಾಣುತ್ತಾರೆ. ಇಂತಹ ಪ್ರಾಮಾಣಿಕ ಆಡಳಿತಗಾರನಿಗೆ ಮಂತ್ರಿಸ್ಥಾನ ನೀಡಬೇಕೆಂದರು.

ಮಹಾದೇವ ಹಾದಿಮನಿ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರಿಗೆ ಯೋಗ್ಯ ಪರಿಹಾರವನ್ನು ಕೊಡಿಸಲು ಸಾಕಷ್ಟು ಹೋರಾಟವನ್ನು ಮಾಡಿದ್ದಾರೆ. ಬಿಎಸ್ಸಿ ಅಗ್ರಿ ಓದಿರುವ ಶಾಸಕ ಜೆ.ಟಿ.ಪಾಟೀಲರಿಗೆ ಕೃಷಿ ಸಚಿವ ಸ್ಥಾನವನ್ನು ನೀಡಿದರೆ ರೈತರ ಅನೇಕ ಯೋಜನೆಗಳಿಗೆ ಸಹಾಯವಾಗಲಿದೆ ಎಂದು ಹೇಳಿದರು.

ಶ್ರೀಶೈಲ ಅಂಟಿನ್ ಮಾತನಾಡಿ, ಜಿಲ್ಲೆಯಲ್ಲಿ ಹೆಚ್ಚು ಕಾಂಗ್ರೆಸ್ ಪಕ್ಷ ಗೆದ್ದಿದ್ದು ಬೀಳಗಿ ಮತಕ್ಷೇತ್ರ ಇದರಿಂದ ಕಾಂಗ್ರೆಸ್ ಪಕ್ಷಕ್ಕೂ ಶಕ್ತಿ ಬಂದಿದೆ. ನಾಲ್ಕು ಬಾರಿ ಶಾಸಕರಾಗಿರುವ ಜೆ.ಟಿ.ಪಾಟೀಲರಿಗೆ ಮಂತ್ರಿ ಸ್ಥಾನ ನೀಡುವ ಮೂಲಕ ಒಮ್ಮೆಯೂ ಒದಗಿ ಬರದ ಬೀಳಗಿಗೆ ಅವಕಾಶ ಕೊಡಬೇಕು ಎಂದು ಹೇಳಿದರು. ಬಿ.ಎಸ್.ಮೊಕಾಶಿ, ಶಿವಾನಂದ ಮಾದರ ಇದ್ದರು.



ವಿಜಯಪುರ

ಗರಿಷ್ಠ 40° ಕನಿಷ್ಠ 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಕಿರುಸುದ್ದಿ

ಇಂದು ಪ್ರತಿಭಾ ಪುರಸ್ಕಾರ

ಬಸವನಬಾಗೇವಾಡಿ: ಹಂಗರಗಿಯ ಚನ್ನಬಸವೇಶ್ವರ ಪ್ರತಿಷ್ಠಾನ, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆಯ ನೇತೃತ್ವದಲ್ಲಿ ಜೂ.14ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ವಿರಕ್ತಮಠದಲ್ಲಿ ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ ಹಾಗೂ ಉಪನ್ಯಾಸ ನಡೆಯಲಿದೆ. ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಚನ್ನಬಸವೇಶ್ವರ ಪ್ರತಿಷ್ಠಾನದ ಅಧ್ಯಕ್ಷ ವಿವೇಕಾನಂದ ಕಲ್ಯಾಣಶೆಟ್ಟಿ ಅಧ್ಯಕ್ಷತೆ ವಹಿಸುವರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಜಂಬುನಾಥ ಕಂಬ್ಳಾಣಿ, ವೈದ್ಯ ಡಾ.ಎನ್.ಬಿ.ವಜೀರಕರ, ಸ್ಥಳೀಯ ಎಸ್‌ಬಿಐ ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ ಕಟ್ಟಿ, ನಿವೃತ್ತ ಶಿಕ್ಷಕರಾದ ಸಿ.ಸಿ.ಮೂಕಾರ್ತಿಹಾಳ, ನಾಗರಾಜ ಹೊಸಮನಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ತಳೇವಾಡದ ಸರ್ಕಾರಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯ ಸಂಗಮೇಶ ಪೂಜಾರಿ ಉಪನ್ಯಾಸ ನೀಡುವರು. ಬಸವನಬಾಗೇವಾಡಿ, ನಿಡಗುಂದಿ, ಕೊಲ್ಹಾರ ತಾಲೂಕಿನಲ್ಲಿ ಕನ್ನಡ, ಆಂಗ್ಲ ಮಾಧ್ಯಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಅಖಂಡ ತಾಲೂಕಿನಲ್ಲಿ ಉರ್ದು ಮಾಧ್ಯಮದಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ, ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗ, ವಾಣಿಜ್ಯ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಜೆಇಇ ಪರೀಕ್ಷೆಯಲ್ಲಿ ಎಸ್.ಸಿ ಕೋಟಾದಲ್ಲಿ 57ನೇ ರ್‍ಯಾಂಕ್ ಪಡೆದ ಪ್ರದೀಪ ಮೂರಮಾನವರಿಗೆ ತಾಲೂಕಿನಲ್ಲಿ ವೈದ್ಯಕೀಯ ಪದವಿ ಪಡೆದವರಿಗೆ ವಿಶೇಷ ಸನ್ಮಾನ, ನಿವೃತ್ತ ನೌಕರರಿಗೆ ಗೌರವ ಸನ್ಮಾನ ಮಾಡಲಾಗುವುದು ಎಂದು ಕದಳಿ ವೇದಿಕೆಯ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಮರ್ತೂರ, ಚನ್ನಬಸವೇಶ್ವರ ಪ್ರತಿಷ್ಠಾನ ಕಾರ್ಯದರ್ಶಿ ಮುತ್ತು ಪತ್ತಾರ ತಿಳಿಸಿದ್ದಾರೆ.

ಇಂದು ಕುಂದುಕೊರತೆ ಸಭೆ

ಬಸವನಬಾಗೇವಾಡಿ: ಪಟ್ಟಣದ ಆರಳಿ ಕಟ್ಟಿ ವಿಠ್ಠಲ ಮಂದಿರ ಹತ್ತಿರದ ಯಾತ್ರಿ ನಿವಾಸದಲ್ಲಿ ಜೂ.14ರಂದು ಬೆಳಗ್ಗೆ 10.30ಗಂಟೆಗೆ ಬಸವನ ಬಾಗೇವಾಡಿ ಪೊಲೀಸ್ ಉಪವಿಭಾಗ ಅಧೀಕ್ಷಕರ(ಡಿವೈಎಸ್ಪಿ) ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ (ಪಿ.ಐ) ನೇತೃತ್ವದಲ್ಲಿ ಬಸವನಬಾಗೇವಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಂದು ಕೊರತೆ ಸಭೆಯನ್ನು ಏರ್ಪಡಿಸಲಾಗಿದ್ದು ಎಲ್ಲಾ ದಲಿತ ಮುಖಂಡರು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗುವಂತೆ ಜನಸ್ನೇಹಿ ಪೊಲೀಸ್ ಠಾಣೆ ಸಿಬ್ಬಂದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

3 ಕೋಟಿ 4 ಲಕ್ಷ ರೂ. ಅನುದಾನ ಮಂಜೂರು

ಸಿಂದಗಿ: ನಗರದ ಕೆರೆಯ ಸೌಂದರ್ಯೀಕರಣಕ ಮಾಡುವ ಉದ್ದೇಶದಿಂದ ಅತ 2 ಯೋಜನೆ



ಅಡಿಯಲ್ಲಿ 3 ಕೋಟಿ 4ಲಕ್ಷ ರೂ. ಅನುದಾನವು ರಾಜ್ಯ ಸರಕಾರದಿಂದ ಮಂಜೂರಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಪತ್ರಿಕೆಗೆ ತಿಳಿಸಿದ್ದಾರೆ. ಈ ಅನುದಾನವನ್ನು ಸಾರ್ವಜನಿಕ ಮೂಲ ಸೌಕರ್ಯಗಳ ಉನ್ನತೀಕರಣ ಹಾಗೂ ನಾಗರಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ವಿವಿಧ ಕಾಮಗಾರಿಗಳಿಗೆ ಬಳಸಲಾಗುವುದು. ಅಮೃತ 2 ಯೋಜನೆಯಡಿ ಬಿಡುಗಡೆಯಾದ ಅನುದಾನದಿಂದ ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ಸಿಗಲಿದ್ದು, ಸಾರ್ವಜನಿಕರ ಬಹುಕಾಲದ ಬೇಡಿಕೆಗಳಿಗೆ ಸ್ಪಂದನೆ ದೊರೆಯಲಿದೆ. ಕಾಮಗಾರಿ ಶೀಘ್ರ ಆರಂಭಿಸಿ ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಅಶೋಕ ಮನಗೂಳಿ ತಿಳಿಸಿದ್ದಾರೆ.

ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಿ

ಇಂಡಿ: ನಿಂಬೆ ನಾಡಿನ ಧ್ವನಿ ವಿಧಾನಸೌಧದಲ್ಲಿ ಮುಳುಗಬೇಕಾದರೆ ಇಂಡಿ ಶಾಸಕ ಯಶವಂತರಾಯಗೌಡ



ಪಾಟೀಲಗೆ ಸಚಿವ ಸ್ಥಾನ ನೀಡ ನೀಡಬೇಕೆಂದು ಇಂಡಿ ತಾಲೂಕ ಕನಕ ಸೇನೆಯ ಅಧ್ಯಕ್ಷ ಲಕ್ಷ್ಮಣ ಹಿರೇಕುರಬರ ಆಗ್ರಹಿಸಿದ್ದಾರೆ. ಗ್ರಾಮದಲ್ಲಿ ನಡೆದ ಪತ್ರಿಕಾ ಘೋಷ್ಠಿಯಲ್ಲಿ ಮಾತನಾಡಿದ ಅವರು ಇಂಡಿ ಮತಕ್ಷೇತ್ರಕ್ಕೆ ಸ್ವಾತಂತ್ರ್ಯ ನಂತರ ಇಲ್ಲಿಯವರೆಗೆ ಸಚಿವಸ್ಥಾನ ಸಿಕ್ಕಿಲ್ಲಾ. ಶಾಸಕ ಯಶವಂತರಾಯಗೌಡ ಪಾಟೀಲ ಸಾತ್ವಿಕ ರಾಜಕಾರಣಿ ಬಡವರ, ದುರ್ಬಲರ, ಬಗ್ಗೆ ಅನುಕಂಪ ಹೊಂದಿದ್ದು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ, 3ಭಾರಿ ಶಾಸಕರಾಗಿ, ಆಡಳಿತ ಅನುಭವ ಹೊಂದಿದ್ದಾರೆ. ಈ ಕ್ಷೇತ್ರವು ನೀರಾವರಿ ಶಿಕ್ಷಣ, ಉದ್ಯೋಗದ ಸಮಸ್ಯೆಗಳು ಬಗೆ ಹರಿಯಬೇಕಾದರೆ ಸಚಿವಸ್ಥಾನ ನೀಡಲೇಬೇಕು. ಯಶವಂತರಾಯಗೌಡರು ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ನಿವೃತ್ತ ಪಾಚಾರ್ಯ ಎಸ್.ಎಸ್.ಕನಾಳ, ಸಿದ್ದಗೊಂಡ ಹಿರೇಕುರುಬರ, ಅರ್ಜುನ ಚಟ್ಟರಕಿ, ಆರ್.ಎಚ್.ಶಿವಣಗಿ ಇದ್ದರು.



ವಿಜಯಪುರ: ಇಲ್ಲಿನ ವಜ್ರ ಹನುಮಾನ ನಗರ ಮಹಿಳಾ ಮಂಡಳಿ ವತಿಯಿಂದ ಅಧಿಕ ಮಾಸದ ನಿಮಿತ್ತ ಅವ್ಯಾಹತವಾಗಿ ಒಂದು ತಿಂಗಳು ಕಾಲ ಹಮ್ಮಿಕೊಂಡ ಗೌರಿ ಪೂಜೆ, ಹಾಡುಗಳ ಭಜನಾ ಕಾರ್ಯಕ್ರಮದ ಮಂಗಳ ಜರುಗಿತು.

ಯೂನಾನಿಯಲ್ಲಿ ವಿದ್ಯಾರ್ಥಿಗಳ ಸಾಧನೆ

ವಿಜಯಪುರ: ಕಳೆದ ತಿಂಗಳು ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಡೆಸಿದ ಯುನಾನಿ ಸ್ನಾತಕೋತ್ತರ ಕೋರ್ಸಿನ ಅಂತಿಮ ವರ್ಷದ ಫಲಿತಾಂಶವು ಪ್ರಕಟಗೊಂಡಿದ್ದು, ವಿಜಯಪುರದ ಸಿಕ್ಯಾಬ ಸಂಸ್ಥೆಯ ಲುಕ್ಮಾನ್ ಯುನಾನಿ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಂತಿಮ ವರ್ಷದ ವಿದ್ಯಾರ್ಥಿಗಳು ಅನೇಕ ರ್‍ಯಾಂಕ್‌ಗಳಿಗೆ ಭಾಜನರಾಗಿದ್ದಾರೆ.

ಮೆಡಿಸಿನ್ ವಿಭಾಗದಲ್ಲಿ ಡಾ.ಮೊಹ್ಮದ್ ಸಂಜೀತ್ (71.92)ಅಂಕ ಪಡೆದು ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್, ಡಾ.ಮೆಹ್ನದಿ ಬೇಗಮ್. ಕೆ (71.75) ಪಡೆದು ವಿ.ವಿ.ಗೆ ಎರಡನೇಯ ರ್‍ಯಾಂಕ್ ಹಾಗೂ ಡಾ.ಶಿಬಾ ಫಾತೀಮಾ (69.25) ಅಂಕ ಪಡೆದು ವಿ.ವಿ.ಗೆ 5 ನೇಯ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದಲ್ಲಿ ಡಾ.ಶೇಕ್ ಸಟನಾಜ ನಾಸೀರ್ ಅಹ್ಮದ್ (69.18) ವಿ.ವಿ.ಗೆ 5 ನೇ ರ್‍ಯಾಂಕ್ ಹಾಗೂ ಡಾ.ಶಫಾ ಆರಾ ಅಂಜುಮ್ (67.64) – ವಿ.ವಿ.ಗೆ 6ನೇಯ ರ್‍ಯಾಂಕ್ ಪಡೆದುಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಸ್.ಪುಣೇಕರ್, ಪ್ರಧಾನ ಕಾರ್ಯದರ್ಶಿ ಎ.ಎಸ್.ಪಾಟೀಲ, ಪ್ರಾಚಾರ್ಯೆ ಡಾ.ಶಹನಾಜ್ ಬಾನು, ಡೀನ್ ಡಾ.ಅಕೀಲ್ ಖಾದ್ರಿ ಹರ್ಷ ವ್ಯಕ್ತಪಡಿಸಿದ್ದಾರೆ.



ವಿಜಯಪುರ: ನಾಗಠಾಣ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ ಸಮಗ್ರ ಪರೀಕ್ಷರಣೆ (ಎಸ್‌ಐಆರ್) ಕುರಿತು ರಾಜಕೀಯ ಪಕ್ಷಗಳ ಮುಖಂಡರ ಸಭೆ ನಾಗಠಾಣ ಮತಕ್ಷೇತ್ರದ ಮತದಾರ ನೋಂದಣಾಧಿಕಾರಿ, ಬಿಡಿಎ ಕಮಿಷನರ್ ರಾಜಶೇಖರ್ ಡಂಬಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯಾಗಲಿ

ವಿಜಯಪುರ: ಸಮಾಜದಲ್ಲಿನ ಅನಿಷ್ಠ ಪಿಡುಗಾಗಿರುವ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕರು ಕೈಜೋಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹರೀಶ ಎ. ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ ಆಶ್ರಯದಲ್ಲಿ ಆಚರಿಸಲಾದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯ ವಿವಾಹದ ಕುರಿತು ಜನರಲ್ಲಿ ಸೂಕ್ತ ತಿಳಿವಳಿಕೆ ಹಾಗೂ ಕಾನೂನಿನ ಜಾಗೃತಿ ಹೊಂದುವುದು ಅಗತ್ಯವಾವಾಗಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಮಕ್ಕಳ ಹಕ್ಕುಗಳ ಕುರಿತಾಗಿ ಸೂಕ್ತ ಅರಿವು ಮೂಡಿಸಬೇಕು. ಈ ಬಗ್ಗೆ ಜಾಗೃತಿ ಹಾಗೂ ಸಹಕಾರ ನೀಡಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಾ ಸಿದ್ಧವಾಗಿದೆ ಎಂದು ಹೇಳಿದರು.



ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇರುವ ಕಾನೂನಾತ್ಮಕ ಕ್ರಮಗಳ ಕುರಿತು ತಿಳಿಸಿದರು.

ಕಾರ್ಮಿಕ ಅಧಿಕಾರಿ ರಮೇಶ ಸುಂಬಡ ಪ್ರಾಸ್ತಾವಿಕವಾಗಿ ಮಾತನಾಡಿ, ಬಾಲಕಾರ್ಮಿಕ ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016 ರನ್ವಯ ಪ್ರತಿ ತಿಂಗಳು ವಿವಿಧ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಅನಿರೀಕ್ಷಿತ ದಾಳಿ ಕೈಗೊಂಡು ಮಕ್ಕಳನ್ನು ರಕ್ಷಿಸಿ ಪ್ರಕರಣ ದಾಖಲಿಸಿ ತಪ್ಪಿತಸ್ಥ ಮಾಲೀಕರಿಂದ ಕಾರ್ಪಸ್ ನಿಧಿ ವಸೂಲಿ ಮಾಡಲು ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದರು.

ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆಯ ಕುರಿತು ಫಾದರ್ ಸುಮನ್ ಬಾಲು ಉಪನ್ಯಾಸ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವಿರಯ್ಯ ಸಾಲಿಮಠ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾ ಕಾಳೆ, ಕಾರ್ಮಿಕ ನಿರೀಕ್ಷಕ ಜಗದೇವಿ ಸಜ್ಜನ, ಅನೌಪಚಾರಿಕ ಶಿಕ್ಷಣ ಸಂಸ್ಥೆಯ ಮಹಾದೇವಿ ರಾಠೋಡ, ಕಾರ್ಮಿಕ ನಿರೀಕ್ಷಕ ಮಲ್ಲಿಕಾರ್ಜುನ ಇದ್ದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಘೋಷ ವಾಕ್ಯಗಳೊಂದಿಗೆ ಗಾಂಧಿಚೌಕ ಮಾರ್ಗವಾಗಿ ಬಸವೇಶ್ವರ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಕಂದಗಲ್ ಹನುಮಂತರಾಯ ರಂಗಮಂದಿರಕ್ಕೆ ತಲುಪಿತು.

ಪಾರದರ್ಶಕ ತನಿಖೆ; ಭಯ ಬೇಡ: ಶಾಸಕ ನಾಡಗೌಡ

ನಾಲತವಾಡ: ಬಸವನ ಬಾಗೇವಾಡಿ ತಾಲೂಕಿನ ಹಂಗರಗಿ ಗ್ರಾಮದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ರವಿಚಂದ್ರ ಮಾದರ ಹತ್ಯೆಯಾಗಿದೆ ಎನ್ನಲಾದ ಘಟನೆಗೆ ಸಂಭಂದಿಸಿದಂತೆ ಶಾಸಕ ಸಿ.ಎಸ್.ನಾಡಗೌಡ ಅವರು ನಾಗರಬೆಟ್ಟ ಗ್ರಾಮದ ನೊಂದ ಕುಟುಂಬಕ್ಕೆ ಸಾಂತ್ವಾನ ಹೇಳಿ ಕಾನೂನು ಯಾರ ಸ್ವತ್ತಲ್ಲ ಭರವಸೆ ಇಡಿ, ತನಿಖೆ ಮೂಲಕ ಎಲ್ಲಾ ಅಂಶಗಳು ಬೆಳಕಿಗೆ ಬರುತ್ತವೆ ಎಂದರು.

ಹತ್ಯೆ ಕುರಿತು ಪ್ರಾಥಮಿಕ ತನಿಖೆಯ ವರದಿ ಬಂದ ನಂತರವೇ ಗೊತ್ತಾಗುತ್ತದೆ, ನಾನೂ ಸಹ ಜಿಲ್ಲಾ ವರೀಷ್ಠಾಧಿಕಾರಿಗಳಿಂದ ಘಟನೆ ಕುರಿತು ಮಾಹಿತಿ ಪಡೆದುಕೊಳ್ಳುತ್ತೇನೆ ಎಂದರು. ಸ್ಥಳದಲ್ಲಿದ್ದ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಪಂ ಇಒ ಅವರೊಂದಿಗೆ ಚರ್ಚಿಸಿದ ಶಾಸಕರು ನೊಂದ ಕುಟುಂಬಕ್ಕೆ ಸರಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು, ಅವರ ರಕ್ಷಣೆಗೆ ಪೋಲೀಸ್ ಇಲಾಖೆ ಮುಂದು ಬರಬೇಕು, ಜಮೀನಲ್ಲಿ ವಾಸಿಸುತ್ತೀರುವ ಪರಿಣಾಮ ಅವರಿಗೆ ಭಯದ ವಾತಾವರಣ ಇರುತ್ತದೆ ಈಗಾಗಿ ಸಿಸಿ ಕ್ಯಾಮರಾ ಮತ್ತು ಬೆಳಕಿನ ಸೂಕ್ತ ವ್ಯವಸ್ಥೆ ಮಾಡಿ ಎಂದು ಸೂಚಿಸಿದರು.

ಕಾಂಗ್ರೆಸ್ ಮುಖಂಡರಾದ ತಿಪ್ಪಣ್ಣ ದೊಡಮನಿ ಹಾಗೂ ಜಿಲ್ಲಾ ದೌರ್ಜನ್ಯ ಸಮಿತಿಯ ಮಲ್ಲು ತಳವಾರ ಬಿಜ್ಜೂರ ಅವರು ಘಟನೆ ತುಂಬಾ ನೋವು ಉಂಟು ಮಾಡಿದ ದುಡಿದು ತಂದೆ ತಾಯಿಗೆ ಆಸರೆಯಾಗಿದ್ದ ಕುಟುಂಬ ಮಗನನ್ನು ಕಳೆದುಕೊಂಡಿದೆ ನ್ಯಾಯ ಕೊಡಿಸಿ ಎಂದು ಮನವಿ ಮಾಡಿಕೊಂಡರು.

ಸಮಾಜ ಕಲ್ಯಾಣ ಇಲಾಖೆಯ ಬಸಂತಿ ಮಠ, ಸಿಪಿಐ ಮೊಹ್ಮದ ಫಶಿವುದ್ದಿನ್ ,ಪಿಎಸೈ ಸಂಜಯ್ ತಿಪ್ಪಾರಡ್ಡಿ, ರೈತ ಸಂಘದ ಮಲ್ಲನಗೌಡ ಸಿದರಡ್ಡಿ, ಪಿಡಿಓ ನಾರಾಯಣ, ದಲಿತ ಉಖಂಡರಾದ ತಿಪ್ಪಣ್ಣ ದೊಡಮನಿ, ಮಲ್ಲು ತಳವಾರ, ನೊಂದ ಕುಟುಂಬ ಹುಲಗಪ್ಪ ಮಾದರ, ದೇವೇಂದ್ರ ಮಾದರ, ಪ್ರಭು ಚಲವಾದಿ ಇದ್ದರು.



ಜೂ.16, 17ರಂದು ಸಂದರ್ಶನ

ವಿಜಯಪುರ: ನಗರದ ಬಿಎಲ್‌ಡಿಇ ಕೈಗಾರಿಕೆ ತರಬೇತಿ ಸಂಸ್ಥೆಯಲ್ಲಿ ಜೂ. 16 ಮತ್ತು 17 ರಂದು ಅಪ್ರೆಂಟಿಸ್ ತರಬೇತಿಗಾಗಿ ಕ್ಯಾಂಪಸ್ ಸಂದರ್ಶನ ನಡೆಯಲಿದೆ. ಧಾರವಾಡದಲ್ಲಿರುವ ನಿಡೆಕ್ ಇಂಡಿಯಾ ಪ್ರೈ.ಲಿ.ಕಂಪನಿ ತರಬೇತುದಾರ ಮತ್ತು ಅಪ್ರಂಟಿಸ್ ತರಬೇತಿಗಾಗಿ ಈ ಕ್ಯಾಂಪಸ್ ಸಂದರ್ಶನ ನಡೆಸಲಿದೆ. ಐಟಿಐನ ನಾನಾ ಟ್ರೇಡುಗಳಲ್ಲಿ ಪಾಸಾದ ಮತ್ತು ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ 18 ರಿಂದ 25 ವರ್ಷದೊಳಗಿನ ತರಬೇತುದಾರರಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಸಲಾಗುತ್ತದೆ. ಜಿಲ್ಲೆಯ ನಾನಾ ಐಟಿಐ ಕಾಲೇಜಿನ ತರಬೇತಿದಾರರು ಈ ಆವರಣ ಸಂದರ್ಶನದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು. ಮಾಹಿತಿಗಾಗಿ (ಮೊ.9880716694 ಮತ್ತು 9916853605) ಸಂಪರ್ಕಿಸಬಹುದಾಗಿದೆ ಎಂದು ಕೇಂದ್ರದ ಪ್ರಭಾರ ಪ್ರಾಚಾರ್ಯ ಎಸ್.ಜೆ.ಕರಿಗಾರ ತಿಳಿಸಿದ್ದಾರೆ.

ಖರ್ಗೆ ಬೆಂಬಲಕ್ಕೆ ಪಕ್ಷ ಇರಲಿದೆ: ಗಣಿಹಾರ

ವಿಜಯಪುರ: ಸಂಘ ಪರಿವಾರ ಕಾನೂನು ಪ್ರಕಾರ ನೋಂದಣಿಯಾಗಬೇಕು. ಆದರೆ, ನೋಂದಣಿಯಾಗಬೇಕಾದ ಅವಶ್ಯಕತೆ ಇಲ್ಲ ಎಂದು ಬಿಜೆಪಿ ನಾಯಕರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಜನ ದತ್ತಿ ದಾನ ನೀಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಅದರ ಲೆಕ್ಕ ಬೇಕಲ್ಲವೇ? ರಾಜ್ಯ, ಪಕ್ಷ ಪ್ರಿಯಾಂಕ ಖರ್ಗೆ ಅವರ ಪರವಾಗಿ ನಿಲ್ಲಲಿದೆ ಎಂದು ಕಾಂಗ್ರೆಸ್ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಜಿಗಜಿಣಗಿ ಅವರು ಏಕವಚನ ಪದ ಪ್ರಯೋಗಿಸುವುದು ಸರಿಯಲ್ಲ, ನಿಮ್ಮ ಬಗ್ಗೆ ಗೌರವ ಅಪಾರವಿದೆ.




ಮುತ್ಸದ್ದಿ ರಾಜಕಾರಣಿಯಾಗಿರುವ ನೀವು ಟೀಕೆ ಮಾಡಿ ಬಿಜೆಪಿಯವರನ್ನು ಓಲೈಕೆ ಮಾಡಿಕೊಳ್ಳುವ ಪ್ರಯತ್ನ ಬೇಡ ಎಂದರು.

ಮುಖಂಡ ಡಾ.ರವಿಕುಮಾರ ಬಿರಾದಾರ ಮಾತನಾಡಿದರು.

ಫಯಾಜ್ ಕಲಾದಗಿ, ಸುರೇಶ ಬಿಜಾಪೂರ, ವಸಂತ ಹೊನಮೋಡೆ ಇದ್ದರು.

ನನ್ನ ಕೆಲಸಗಳೇ ಪ್ರತ್ಯಕ್ಷ ಸಾಕ್ಷಿ: ಸಂಸದ ಜಿಗಜಿಣಗಿ

ವಿಜಯಪುರ: ಕಳೆದ 10 ವರ್ಷಗಳಲ್ಲಿ ವಿಜಯಪುರ ಲೋಕಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಮೇಲ್ಸೇತುವೆ ಸೇರಿ ವಿವಿಧ 3516.67 ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮೂಲಕ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡಲಾಗಿದೆ. ನಾನು ಏನೂ ಕೆಲಸ ಮಾಡಿಲ್ಲ ಎಂದು ಹೇಳುವವರಿಗೆ ಈ ಕೆಲಸಗಳೇ ಪ್ರತ್ಯಕ್ಷ ಸಾಕ್ಷಿ ಎಂದು ಸಂಸದ ರಮೇಶ ಜಿಗಜಿಣಗಿ ತಿಳಿಸಿದ್ದಾರೆ.



ಈ ಕುರಿತು ತಮ್ಮ ಅವಧಿಯ ಕೈಗೊಂಡ ಕಾಮಗಾರಿಗಳ ಅಂಕಿ–ಅಂಶ ಹಾಗೂ ಅನುದಾನದ ವಿವರವನ್ನು ಬಿಡುಗಡೆಗೊಳಿಸಿ ಟೀಕಾಕಾರರಿಗೆ ಉತ್ತರ ನೀಡಿರುವ ಜಿಗಜಿಣಗಿ, ವಿಜಯಪುರದ ರಾಷ್ಟ್ರೀಯ ಹೆದ್ದಾರಿ ವಿಭಾಗದ ವ್ಯಾಪ್ತಿಯಡಿ 4 ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಅಂದಾಜು 1668.88 ಕೋಟಿ ರೂ.ಅನುದಾನದಡಿ ಒಟ್ಟು 208.04 ಕಿಮೀ ಉದ್ದದಷ್ಟು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಎರಡು ರೈಲ್ವೆ ಸೇತುವೆ ಸಹ ಒಳಗೊಂಡಿದೆ. ಕೇಂದ್ರ ರಸ್ತೆ ಯೋಜನೆಯಡಿ 2023–24 ಸಾಲಿನಲ್ಲಿ ಸುಮಾರು 10 ಕಾಮಗಾರಿಗಳು ಮಂಜುರಾಗಿದ್ದು, ಒಟ್ಟು ಉದ್ದ 81 ಕಿಮೀ ಉದ್ದ ಹಾಗೂ ಅದರ ಮೊತ್ತ 48 ಕೋಟಿ ಇರುತ್ತದೆ. ಕಾಮಗಾರಿಗಳು ಭೌತಿಕವಾಗಿ ಮುಕ್ತಾಯಗೊಂಡಿವೆ. ಕೇಂದ್ರ ರಸ್ತೆ ಯೋಜನೆಯಡಿ 2025–26 ಸಾಲಿನಲ್ಲಿ ಸುಮಾರು 9 ಕಾಮಗಾರಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಈಗಾಗಲೇ ಮಂಜೂರಾತಿ ಸಿಕ್ಕಿದೆ. ಒಟ್ಟು ಉದ್ದ 80.76 ಕಿಮೀ ಹಾಗೂ ಅದರ ಮೊತ್ತ 54 ಕೋಟಿ ರೂ. ಎಂದು ತಿಳಿಸಿದ್ದಾರೆ. ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯಡಿಯಲ್ಲಿ 451.45 ಕಿಮೀ ಉದ್ದ ಹಾಗೂ ಅದರ ಮೊತ್ತ ಕೋಟಿ 27.79 ಕೋಟಿ ರೂ.ಗಳಾಗಿದ್ದು, ಒಟ್ಟಾರೆಯಾಗಿ ವಿಜಯಪುರ ಜಿಲ್ಲೆಯಲ್ಲಿ 1000.69 ಕಿಮೀ ರಸ್ತೆ ಹಾಗೂ 2 ರೈಲ್ವೆ ಮೇಲ್ಸೇತುವೆಗಳನ್ನು, 3516.67 ಕೋಟಿ ರೂ. ಅನುದಾನದಡಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಜಿಗಜಿಣಗಿ ಹೇಳಿದ್ದಾರೆ.

ಎಸ್‌ಐಆರ್ ಕರಾಳತೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಹೇಳಿಕೆ ನಿದರ್ಶನ: ಕಳ್ಳಿಮನಿ

ವಿಜಯಪುರ: ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆದರೆ 50 ವರ್ಷ ಬಿಜೆಪಿಯೇ ಅಧಿಕಾರದಲ್ಲಿರುತ್ತದೆ ಎಂಬ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನೀತಿನ್ ನಬೀನ್ ಹೇಳಿಕೆಯೇ ಎಸ್‌ಐಆರ್ ಕರಾಳತೆಗೆ ಒಂದು ದೊಡ್ಡ ನಿದರ್ಶನವಾಗಿದೆ ಎಂದು ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೇ ಈ ರೀತಿ ಹೇಳಿಕೆ ನೀಡಿದ್ದಾರೆ, ಆ ಮೂಲಕ ಎಸ್‌ಐಆರ್ ಎನ್ನುವುದು ಬಿಜೆಪಿ ಅನುಕೂಲಕರ ಎಂದು ಅವರೇ ಹೇಳಿದ್ದಾರೆ, ಈಗಲಾದರೂ ವಾಸ್ತವಿಕತೆಯನ್ನು ಚುನಾವಣಾ ಆಯೋಗ ಅರಿಯಬೇಕಿದೆ, ಈ ಬಗ್ಗೆ ಬಹಿರಂಗ ಸವಾಲಿಗೆ ಅನೇಕ ಬಾರಿ ಆಹ್ವಾನಿಸಿದರೂ ಸಹ ಚುನಾವಣಾ ಆಯೋಗ ಸವಾಲು ಏಕೆ ಸ್ವೀಕರಿಸುತ್ತಿಲ್ಲ ಎಂದರು.

ಅಲ್ಪಸಂಖ್ಯಾತ ಮುಖಂಡ ಮೊಹ್ಮದ್‌ರಫೀಕ್ ಟಪಾಲ್ ಮಾತನಾಡಿ, ಪಶ್ಚಿಮ ಬಂಗಾಳದ ನಿಕಟಪೂರ್ವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕ್ಷೇತ್ರದಲ್ಲಿಯೇ ಲಕ್ಷಾಂತರ ಮತಗಳನ್ನು ಡಿಲೀಟ್ ಮಾಡಿರುವುದು ಒಂದು ವ್ಯವಸ್ಥಿತ ಹುನ್ನಾರವಲ್ಲದೇ ಮತ್ತೇನು? ಈ ಅಪಾಯ ರಾಜ್ಯದಲ್ಲಿಯೂ ಇದೆ, ಲಕ್ಷಾಂತರ ಮತಗಳನ್ನೇ ಕಡಿತಗೊಳಿಸುವ ನಿಟ್ಟಿನಲ್ಲಿ ದೊಡ್ಡ ಹುನ್ನಾರವಿದ್ದು, ಇದನ್ನು ಪ್ರಬಲವಾಗಿ ಪ್ರತಿಭಟಿಸಬೇಕಿದೆ ಎಂದರು.




ಧುರೀಣ ಯೂಸೂಫ್ ಖಾಜಿ ಮಾತನಾಡಿ, 13 ರಾಜ್ಯಗಳಲ್ಲಿ ಎಸ್‌ಐಆರ್ ಮುಗಿದ್ದು, 6.50 ಕೋಟಿ ಜನರ ಹೆಸರು ತೆಗೆದು ಹಾಕಲಾಗಿದೆ. ಇದರಲ್ಲಿ 372 ಜನ ಮಾತ್ರ ನುಸುಳಿಕೋರರು ಪತ್ತೆಯಾಗಿದ್ದಾರೆ. ಇದರಲ್ಲಿ ಕೇವಲ 7 ಜನ ಮಾತ್ರ ಮುಸ್ಲಿಂರು ಇದ್ದಾರೆ, ಈಗ ರಾಜ್ಯಕ್ಕೂ ಇದು ಕಾಲಿಟ್ಟಿದೆ. ಹೀಗಾಗಿ ಮುಸ್ಲಿಂ, ದಲಿತ, ಪ್ರಗತಿಪರ ಸಂಘಟನೆಗಳ ಸೇರಿ 150 ಸಂಘಟನೆಗಳು ಒಂದಾಗಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಮುಖಂಡರಾದ ಆರೀಫ್ ಮುಲ್ಲಾ ಮಾತನಾಡಿದರು. ಪ್ರಮುಖರಾದ ಬಿ.ಭಗವಾನ ರೆಡ್ಡಿ, ಅಕ್ರಂ ಮಾಶ್ಯಾಳಕರ, ಶ್ರೀನಾಥ ಪೂಜಾರಿ ಇದ್ದರು.

ಪ್ರಾಮಾಣಿಕ ರಾಜಕಾರಣಕ್ಕೆ ಅಪಪ್ರಚಾರ ಮಾಡಿದರೆ ತಕ್ಕಶಾಸ್ತಿ: ನಾಡಗೌಡ

ಮುದ್ದೇಬಿಹಾಳ: ಮಾಧ್ಯಮಗಳಲ್ಲಿ ನಾನು ಕೆಲವು ಗುತ್ತಿಗೆದಾರರನ್ನು ಬೆಳಸಲು ಸಹಾಯ ಮಾಡುತ್ತಿದ್ದೇನೆ. ನೀರಾವರಿ ಯೋಜನೆಗಳಿಗೆ ಹಣ ತಂದಿಲ್ಲ. ತಾಲೂಕಿನ ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಶುದ್ಧಿಕರಣ ಘಟಕಗಳು 20 ವರ್ಷ ಬದಲಾವಣೆ ಆಗಿಲ್ಲ ಎಂದು ದಿನ ಬೆಳಗಾದರೆ ಹಸಿರು ಶಾಲು ಹಾಕಿಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ತಾನು ತಾವು ಯಾವುದೇ ಗುತ್ತಿಗೆದಾರರ ಮುಲಾಜಿಗೆ ಒಳಗಾಗದೇ ಸರಕಾರದ ಹಣಕಾಸು ಕೊರತೆ ನಡುವೆಯೂ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ ಎಂದು ಶಾಸಕ ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ ಹೇಳಿದರು.




ತಮ್ಮ ಸ್ವಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು. ಪತ್ರಿಕೆ ಮತ್ತು ಯುಟ್ಯೂಬ್ ಮೂಲಕ ಕೆಲವು ನಾಯಕರು ತಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ತಾವು ಹೆಚ್ಚು ಸಮಯ ಕ್ಷೇತ್ರದಲ್ಲಿ ಇದ್ದರೂ ಶಾಸಕರನ್ನು ಹುಡುಕಬೇಕಾಗಿದೆ ಎಂದು ಹೇಳಿಕೆ ಕೊಡುತ್ತಾರೆ. ಇಲಾಖೆ ಅಧಿಕಾರಿಗಳು, ಗ್ರಾಮ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕಾರ್ಯವನ್ನು ಮಾಡದೆ, ಕಳಪೆ ಕಾಮಗಾರಿ ಮಾಡಿದರೆ ತಾವು ಹೇಗೆ ಹೊಣೆ ಆಗುತ್ತೇನೆ ಎಂದು ಕೋಪಿಸಿ, ಇನ್ನು ಮುಂದೆ ಸಾಕ್ಷಿ ಇಲ್ಲದೆ ಆಪಾದನೆ ಮಾಡಿದರೆ ಅಂತ ಮಾಧ್ಯಮ ಹಾಗೂ ನಾಯಕರ ವಿರುದ್ಧ ಗಂಭೀರ ಆಲೋಚನೆ ಮಾಡಬೇಕಾಗುತ್ತದೆ ಎಂದರು.

ಗುತ್ತಿಗದಾರರು ಸಂಘ–ಸಂಸ್ಥೆಗಳಿಗೆ ಹಣ ಕೊಡುತ್ತಾರೆ ಆದರೆ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲ. ವಿರೋಧ ಪಕ್ಷದವರು ನೀರಾವರಿ ಯೋಜನೆಗಳು ನಿಂತಿವೆ ಎಂದು ಆಪಾದಿಸುತ್ತಾರೆ ಆದರೆ ಭೂ ಸ್ವಾಧೀನ ಸಮಸ್ಯೆ ಇರುವುದರಿಂದ ಸ್ವಲ್ಪ ವಿಳಂಬವಾಗಿದೆ. ಅವರು ಅಧಿಕಾರದಲ್ಲಿದ್ದಾಗ ಯಾವುದೇ ಯೋಜನೆ ಮಾಡಿಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸರಕಾರದ ಕೆಲಸ ಪ್ರಚಾರ ಮಾಡಿ, ಸಮರ್ಥಿಸಿ. ತಪ್ಪು ಹೇಳಿಕೆಗಳನ್ನು ಕೊಟ್ಟವರ ತರಾಟೆಗೆ ತೆಗೆದುಕೊಳ್ಳಬೇಕು. ಎಲ್ಲರೂ ತಮ್ಮ ಮತಕ್ಷೇತ್ರದ ಹಿತಾಸಕ್ತಿ ಗಮನಿಸುತ್ತಾ ಹೋದರೆ ಜಿಲ್ಲೆಯ ಅಭಿವೃದ್ಧಿ ಆಗಲು ಸಾಧ್ಯವೇ ಎಂದು ಹೇಳಿದರು.

ಲಕ್ಷ್ಮಣ ಸವದಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಚಡಚಣ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವ ಸಂದರ್ಭದಲ್ಲಿ ಗಾಣಿಗ ಸಮಾಜಕ್ಕೆ ನ್ಯಾಯಸಮ್ಮತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು ಹಾಗೂ ಸಮಾಜದ ಹಿರಿಯ ನಾಯಕ, ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚಡಚಣ ತಾಲೂಕು ಗಾಣಿಗ ಸಮಾಜ ಸಂಘದ ವತಿಯಿಂದ ಶುಕ್ರವಾರ ಆಗ್ರಹಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಡಚಣ ತಾಲೂಕ ಗಾಣಿಗ ಸಮಾಜದ ಮುಖಂಡರು ಮಾತನಾಡಿ, ನಾವು ಯಾವುದೇ ವ್ಯಕ್ತಿ ಅಥವಾ ರಾಜಕೀಯ ಪಕ್ಷದ ವಿರುದ್ಧ ಮಾತನಾಡಲು ಇಲ್ಲಿ ಸೇರಿಲ್ಲ, ನಮ್ಮ ಸಮಾಜಕ್ಕೆ ಸಲ್ಲಬೇಕಾದ ರಾಜಕೀಯ ಹಕ್ಕು ಮತ್ತು ಗೌರವ ದೊರಕಬೇಕು ಎಂಬ ಉದ್ದೇಶದಿಂದ ಈ ಮನವಿ ಮಾಡುತ್ತಿದ್ದೇವೆ ಎಂದು ಹೇಳಿದರು.



ನಾಗಠಾಣ ವಿಧಾನಸಭಾ ಕ್ಷೇತ್ರ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಗಾಣಿಗ ಸಮಾಜವು ಕಾಂಗ್ರೆಸ್ ಪಕ್ಷಕ್ಕೆ ಗಣನೀಯ ಬೆಂಬಲ ನೀಡಿದೆ. ಪಕ್ಷದ ಗೆಲುವಿನಲ್ಲಿ ಸಮಾಜದ ಸಾವಿರಾರು ಮತದಾರರ ಪಾತ್ರ ಮಹತ್ವದ್ದಾಗಿದ್ದರೂ, ಸಮಾಜಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ದೊರೆಯದಿರುವುದು ಬೇಸರದ ಸಂಗತಿಯಾಗಿದೆ ಎಂದು ಹೇಳಿದರು.

ಸಮಾಜದ ಪ್ರಮುಖ ಬೇಡಿಕೆಗಳನ್ನು ಮುಂದಿರಿಸಲಾಯಿತು. ಗಾಣಿಗ ಸಮಾಜದ ಮೂವರು ಶಾಸಕರಲ್ಲಿ ಒಬ್ಬರಿಗೆ ತಕ್ಷಣ ಸಚಿವ ಸ್ಥಾನ ನೀಡಬೇಕು, ವಿಶೇಷವಾಗಿ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ಕಲ್ಪಿಸಬೇಕು, ರಾಜ್ಯದ ವಿವಿಧ ನಿಗಮ–ಮಂಡಳಿಗಳಲ್ಲಿ ಸಮಾಜಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಬೇಕು ಹಾಗೂ ಸಮಾಜದ ಮುಖಂಡರೊಂದಿಗೆ ಚರ್ಚಿಸಿ ನ್ಯಾಯಯುತ ನಿರ್ಧಾರ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು ಆಗ್ರಹಿಸಲಾಯಿತು.

ಶ್ರೀಶೈಲ ಅಂಜುಟಗಿ, ರಾಜು ಬಗಲಿ, ಬಸು ಸಾಹುಕಾರ ಬಿರಾದಾರ, ಸತೀಶ ಮೊರುಟಗಿ, ರಮೇಶ ಜಿತ್ತಿ, ಸಿದ್ಧರಾಮ ತೇಲಿ, ಜಟ್ಟೆಪ್ಪ ಮಾಳಾಬಗಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಕಾನೂನು ಅರಿವು ನೆರವು ಕಾರ್ಯಕ್ರಮ

ಇಂಡಿ: ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲ ಕಾರ್ಮಿಕರ ಯೋಜನಾ ಸಂಘ (ರಿ) ವಿಜಯಪುರ ಸಂಯುಕ್ತಾಶ್ರಯದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ –2026 ಪ್ರಯುಕ್ತ ಕಾನೂನು ಅರಿವು ನೆರವು ವೇದಿಕೆ ಕಾರ್ಯಕ್ರಮ ಹಾಗೂ ಪ್ರಮಾಣ ವಚನ ಕಾರ್ಯಕ್ರಮ ಆಯೋಜಿಸಲಾಯಿತು.

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳು ತಾಲೂಕು ಕಾನೂನು ಸೇವೆಗಳ ಸಮಿತಿ ಇಂಡಿ ಸುನೀಲಕುಮಾರ್ ಎಮ್.ಎಸ್ ಕಾರ್ಯಕ್ರಮ ಉದ್ಘಾಟಿಸಿದರು.

ರಮಾಬಾಯಿ ಪ್ರೌಢ ಶಾಲೆ ಇಂಡಿ ಮುಖ್ಯೋಪಾಧ್ಯಾಯ ಎನ್.ಎಂ.ಕಾಳೆ ಅಧ್ಯಕ್ಷತೆ ವಹಿಸುವರು. ವಿಕಾಸ ದಳವಾಯಿ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ, ಎ.ಎ.ಗಜಾಕೋಶ ಉಪಾಧ್ಯಕ್ಷರು ವಕೀಲರ ಸಂಘ ಇಂಡಿ, ಎಸ್.ಆರ್.ಬಿರಾದಾರ ಅಪರ ಸರ್ಕಾರಿ ವಕೀಲರು ಇಂಡಿ, ಐ.ಕೆ. ಗಚ್ಚಿನಮಹಲ ಸಹಾಯಕ ಸರ್ಕಾರಿ ಅಭಿಯೋಜಕರು ಇಂಡಿ, ಮಲ್ಲೇಶಯಂಭತ್ನಾಳ ಸಹಾಯಕ ಸರ್ಕಾರಿ ಅಭಿಯೋಜಕರು ಇಂಡಿ, ದತ್ತು ಎಮ್ ದೇವರಮನಿ ಕಾರ್ಮಿಕ ನಿರೀಕ್ಷಕರು ಇಂಡಿ ಉಪನ್ಯಾಸಕರು, ಡಿ.ವೈ. ಮೆಡೆಗಾರ ವಕೀಲರು ಇಂಡಿ ಹಾಗೂ ಕಾನೂನು ಸೇವೆಗಳ ಸಿಬ್ಬಂದಿ ಸಿದ್ದು ಹವಳಗಿ ಹಾಗೂ ರಮಾಬಾಯಿ, ಇಲಾಖೆ ಸಿಬ್ಬಂದಿ ಇದ್ದರು.




ಕಾಮಗಾರಿಗೆ ಶಾಸಕ ಅಶೋಕ ಮನಗೂಳಿ ಭೂಮಿಪೂಜೆ

ಸಿಂದಗಿ: ಮತಕ್ಷೇತ್ರದಲ್ಲಿ ಸಿಮೆಂಟ್ ಸಿಸಿ ರಸ್ತೆ ಹಾಗೂ ಡಾಂಬರೀಕರಣ ಮೂಲಕ ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಮಾಡುವ ಮಹದಾಸೆಯನ್ನು ಹೊಂದಿದ್ದೇನೆ. ಇನ್ನು ಉಳಿದ ಅವಧಿಯಲ್ಲಿ ಇನ್ನಷ್ಟು ಅನುದಾನ ತಂದು ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಸಾಲುಮರದ ತಿಮ್ಮಕ್ಕ ಟ್ರಿ ಪಾರ್ಕ್ ಬಳಿ ಲೋಕೋಪಯೋಗಿ ಇಲಾಖೆಯ 2025–26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಿಂದಗಿ–ವಿಜಯಪುರ ಮುಖ್ಯ ರಸ್ತೆಯಿಂದ ಸಾಲುಮರದ ತಿಮ್ಮಕ್ಕ ಟ್ರಿ ಪಾರ್ಕ್ ವರೆಗೆ ಡಾಂಬರ ರಸ್ತೆ ನಿರ್ಮಾಣಕ್ಕಾಗಿ ಮಂಜೂರಾದ ರೂ.62 ಲಕ್ಷ ಮೊತ್ತದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಈ ರಸ್ತೆ ನಿರ್ಮಾಣದಿಂದ ಸ್ಥಳೀಯ ನಿವಾಸಿಗಳ ಸುಗಮ ಪ್ರಯಾಣಕ್ಕೆ ನೆರವಾಗಲಿದೆ. ಕಾಮಗಾರಿಯನ್ನು ಗುಣಮಟ್ಟದಿಂದ, ನಿಗದಿತ ಕಾಲಮಿತಿಯೊಳಗೆ



ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಮತಕ್ಷೇತ್ರದ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಸಿಂದಗಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ಅಧ್ಯಕ್ಷ ಶಿವಪ್ಪಗೌಡ ಬಿರಾದಾರ, ಆಲಮೇಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಾದಿಕ್ ಸುಂಬಡ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಷಣ್ಮುಖಪ್ಪ ಆಲ್ಲಾಪುರ, ರಮೇಶ ಬಿರಾದಾರ, ಉಮೇಶ ಪೂಜೇರಿ, ಪ್ರವೀಣ ಕಂಠಿಗೊಂಡ ಸೇರಿದಂತೆ ಹಿರಿಯ ಮುಖಂಡರು, ಕಾರ್ಯಕರ್ತರು, ಸ್ಥಳೀಯರು ಇದ್ದರು.

ಕಿರುಸುದ್ದಿ

ಶ್ರೀನಿವಾಸ್‌ರಿಂದ ನೀರಿನ ಟ್ಯಾಂಕ್ ಉದ್ಘಾಟನೆ

ಶ್ರೀರಾಮನಗರ: ಶನಿವಾರದಂದು ಗ್ರಾಮದ 7ನೇ ವಾರ್ಡ್‌ಗೆ ಸಂಪರ್ಕಿಸುವ ರಸ್ತೆ ಪಕ್ಕದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಅನ್ನು ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಗ್ರಾಮ ಪಂಚಾಯತಿಯ ವಿಶೇಷ ಅನುದಾನದಲ್ಲಿ ನೀರಿನ ಟ್ಯಾಂಕನ್ನ ನಿರ್ಮಾಣ ಮಾಡಿದ್ದು, ಈ ಮಾರ್ಗವಾಗಿ ನಿತ್ಯ ಸಂಚರಿಸುವ ಜನರಿಗೆ ಹಾಗೂ ಪಕ್ಕದಲ್ಲೇ ಇರುವ ವಾರದ ಮಾರುಕಟ್ಟೆಗೆ ಆಗಮಿಸುವ ವ್ಯಾಪಾರಿಗಳಿಗೆ ಕುಡಿಯಲು ಹಾಗೂ ಬಳಕೆಗೆ ಅನುಕೂಲವಾಗಲೆಂದು ನೀರಿನ ಟ್ಯಾಂಕ್ ಅನ್ನು ನಿರ್ಮಾಣ ಮಾಡಲಾಗಿದೆ. ಸಾರ್ವಜನಿಕರು ಇದನ್ನ ಸಮರ್ಪಕವಾಗಿ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಗ್ರಾಪಂ ಸಿಬ್ಬಂದಿ, ಗ್ರಾಮಸ್ಥರಿದ್ದರು.

ಇಂದು ಜಿಲ್ಲಾ ದಸಾಪ ಪದಾಧಿಕಾರಿಗಳ ಆಯ್ಕೆ ಸಭೆ



ಸಿಂಧನೂರು: ರಾಯಚೂರು ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತು ಘಟಕದ ವತಿಯಿಂದ ನಾಳೆ ಜೂ.14ರಂದು ಮಧ್ಯಾಹ್ನ 2.30ಕ್ಕೆ ರಾಯಚೂರಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ದಲಿತ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಆಯ್ಕೆಯನ್ನು ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ.ಹುಸೇನಪ್ಪ ಅಮರಾಪುರ ಅವರ ಅಧ್ಯಕ್ಷತೆಯಲ್ಲಿ ಹಾಗೂ ದಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷರಾದ ತಾಯರಾಜ ಮರ್ಚಟಾಳ್ ಅವರ ಸಮ್ಮುಖದಲ್ಲಿ ಆಯೋಜಿಸಲಾಗಿದೆ. ಈ ಸಭೆಗೆ ದಲಿತ ಸಾಹಿತ್ಯ, ಸಂಸ್ಕೃತಿ ಮತ್ತು ಚಳವಳಿಯನ್ನು ಪ್ರೀತಿಸುವ ಹಾಗೂ ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಆಸಕ್ತರಾಗಿರುವ ಜಿಲ್ಲೆಯ ದಲಿತ ಸಾಹಿತಿಗಳು, ಬರಹಗಾರರು, ಪ್ರಗತಿಪರ ಚಿಂತಕರು, ಬುದ್ಧಿಜೀವಿಗಳು ಮತ್ತು ದಲಿತ ಚಳುವಳಿಯ ಒಡನಾಡಿಗಳು ಸಭೆಗೆ ಆಗಮಿಸಿ ತಮ್ಮ ಸೂಕ್ತವಾದ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ದಸಾಪ ಜಿಲ್ಲಾಧ್ಯಕ್ಷ ಡಾ.ಹುಸೇನಪ್ಪ ಅಮರಾಪುರ ತಿಳಿಸಿದ್ದಾರೆ.

ಪಕ್ಷದ ಒಗ್ಗಟ್ಟು ಒಡೆಯಲು ಷಡ್ಯಂತ್ರ: ರಾಘವೇಂದ್ರ



ಕುಕನೂರು: ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ಹಿತ ಚಿಂತನೆ ಇಟ್ಟುಕೊಂಡು ಕೆಲವರು ಸಮಾಜ ಸೇವೆ ಹೆಸರಿನಲ್ಲಿ ಪಕ್ಷದ ಒಗ್ಗಟ್ಟನ್ನು ಒಡೆಯಲು ಯತ್ನಿಸುತ್ತಿದ್ದಾರೆ ಅಂಥವರಿಗೆ ಕಿವಿಗೊಡಬಾರದೆಂದು ಎಂದು ಕಾಂಗ್ರೆಸ್ ಯುವ ಮುಖಂಡ ರಾಘವೇಂದ್ರ ಕಾತರಕಿ ಹೇಳಿದರು.

ಪಟ್ಟಣದ ಪತ್ರಿಕೆ ಪ್ರಕಟಣೆ ನೀಡಿರುವವರು ಸಮಾಜ ಸೇವಕ ಕಳಕಪ್ಪ ಕಂಬಳಿ ಮತ್ತು ಈರಪ್ಪ ಕುಡುಗುಂಟಿ ಇವರು ಮೊನ್ನೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಕೆ.ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಶುಭಕೋರಿರುತ್ತಾರೆ. ಇದಕ್ಕೆ ನಮ್ಮ ಅಭ್ಯಂತರವೇನಿಲ್ಲ, ಆದರೆ ಇದು ನಿಷ್ಠಾವಂತ ಕಾರ್ಯಕರ್ತರಿಗೆ ಮುಜುಗರವನ್ನುಂಟು ಮಾಡುತ್ತಿದೆ. ಮತ್ತು ಪಕ್ಷದ ಒಗ್ಗಟ್ಟು ಹೊಡೆಯುವ ಕೆಲಸವನ್ನು ನಿರ್ಮಾಣ ಮಾಡಿದ್ದಾರೆ. ಕಳಕಪ್ಪ ಕಂಬಳಿ ಮತ್ತು ಈರಪ್ಪ ಕುಡುಗುಂಟೆ ಇವರು ಈ ಹಿಂದೆ ಕಾಂಗ್ರೆಸ್ ಪಕ್ಷದಿಂದ ಹಾಗೂ ಶಾಸಕರಾದ ಬಸವರಾಜ ರಾಯರಡ್ಡಿಯವರಿಂದ ಎಲ್ಲಾ ಅಧಿಕಾರವನ್ನು ಅನುಭವಿಸಿ 2020 ರಿಂದ ಬಿಜೆಪಿ ಪಕ್ಷದೊಂದಿಗೆ ಗುರುತಿಸಿಕೊಂಡು ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿರುತ್ತಾರೆ ತದನಂತರ ಕಾಂಗ್ರೆಸ್ ಸರ್ಕಾರ ರಚನೆಗೊಂಡ ನಂತರ ಅಧಿಕಾರದ ದುರಾಸೆ ಹಾಗೂ ತಮ್ಮ ಸ್ವಂತ ವ್ಯವಹಾರದ ಲಾಭಕ್ಕೋಸ್ಕರ ಕಾಂಗ್ರೆಸ್ ಪಕ್ಷದ ಕೆಲವು ನಾಯಕರೊಂದಿಗೆ ಗುರುತಿಸಿಕೊಂಡು ಸ್ಥಳೀಯ ಶಾಸಕರ ಬಗ್ಗೆ ಹಾಗೂ ಪಕ್ಷದ ಬಗ್ಗೆ ಅಪಪ್ರಚಾರ ಮಾಡುತ್ತಾ ನಮ್ಮ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮುಜುಗರವನ್ನುಂಟು ಮಾಡುತ್ತಿದ್ದಾರೆ ಎಂದರು.

ಶೇ.50ರಷ್ಟು ರಿಯಾಯಿತಿ

ರಾಯಚೂರು: ಸಾರಿಗೆ ಇಲಾಖೆಯಲ್ಲಿ 1991 ರಿಂದ 20220 ಅವಧಿಯಲ್ಲಿ ಮೋಟಾರು ವಾಹನ ಕಾಯ್ದೆ /ನಿಯಮಗಳ ಉಲ್ಲಂಘನೆ ಸಂಬಂಧ ದಾಖಲಾಗಿ, ಬಾಕಿ ಇರುವ ಡಿಎಸ್‌ಎ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿ ಇದೇ ಜೂ.21ರಿಂದ ಜು.10ರವರೆಗೆ ಕಾಲವಾಕಾಶ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ವಾಹನ ಮಾಲೀಕರುಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ರಾಯಚೂರಿನ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀರಾಮನಗರ: ಶನಿವಾರದಂದು ಗ್ರಾಮದ 7ನೇ ವಾರ್ಡ್‌ಗೆ ಸಂಪರ್ಕಿಸುವ ರಸ್ತೆ ಪಕ್ಕದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಅನ್ನು ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್ ಅವರು ಉದ್ಘಾಟಿಸಿದರು.

ಅಧಿಕ ಮಾಸದಲ್ಲಿ ವಿಷ್ಣು ದೇವರ ಆರಾಧಿಸಿ

ಹನುಮಸಾಗರ: ಪಟ್ಟಣದಲ್ಲಿ ಅಧಿಕ ಮಾಸದ ನಿಮಿತ್ತ ಪಟ್ಟಣದ ಮಹಿಳಾ ಭಜನಾಮಂಡಳಿಗಳ ವತಿಯಿಂದ ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಹಾಗೂ ಶ್ರೀರುಕ್ಮಿಣಿ ಪಾಂಡುರಂಗ ದೇವಸ್ಥಾನದಲ್ಲಿ ಒಂದು ತಿಂಗಳ ಪರ್ಯಂತ ಪ್ರತಿದಿನ 33 ದಾಸರ ಹಾಡುಗಳು, ವಿಶೇಷ ಅರ್ಚನೆ, ಪುಷ್ಪಾರ್ಚನೆ, ಕುಂಕುಮಾರ್ಚನೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ಅಧಿಕಮಾಸದ ಸಮಾರೋಪದ ನಿಮಿತ್ತ ಜೂ.14ರಂದು ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ ಶ್ರೀರಾಯರ ವೃಂದಾವನಕ್ಕೆ 108 ಮಾವಿನ ಹಣ್ಣಿನ ರಸದಿಂದ ಅಭಿಷೇಕ, 11 ಕುಂಡಲದೊಳಗೆ 3 ರಂತೆ ಒಟ್ಟು 33 ಮನ್ಯುಸೂಕ್ತ ಪುನಶ್ಚರಣ ಹೋಮ, ನರಸಿಂಹದೇವರಿಗೆ ಮಧು ಅಭಿಷೇಕ, ಅಧಿಕಮಾಸ ದ್ಯೋತಕವಾಗಿ 33 ತುಳಸಿ ಗಿಡಗಳನ್ನು ನೆಡುವದು, ತೀರ್ಥ ಪ್ರಸಾದ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ಭಜನಾ ಮಂಡಳಿಯವರು ತಿಳಿಸಿದ್ದಾರೆ.ಪಂ.ಪ್ರಹ್ಲಾದಾಚಾರ್ಯ ಪೂಜಾರ ಅಧಿಕಮಾಸದ ಬಗ್ಗೆ ಮಾಹಿತಿ ನೀಡಿ, ಚೈತ್ರಾದಿ 12 ಮಾಸಗಳಲ್ಲಿ ನಿರ್ದಿಷ್ಟವಾದ ಮಾಸಗಳು ಹೆಚ್ಚಾಗಿ ಬಂದಾಗ ಅದಕ್ಕೆ ಅಧಿಕ ಮಾಸ ಎನ್ನುತ್ತೇವೆ. ಈ ಅಧಿಕಮಾಸ 32 ಅಥವಾ 33 ತಿಂಗಳಿಗೆ ಒಮ್ಮೆ ಬರುತ್ತದೆ. ಇದಕ್ಕೆ ಮಲ ಮಾಸ ಎಂದೂ ಕೂಡ ಹೆಸರು ಇದೆ. ಸೌರಮಾನದ ಲೆಕ್ಕಾಚಾರಕ್ಕೆ ಸಮನ್ವಯವನ್ನ ಮಾಡುವುದಕ್ಕೋಸ್ಕರ 33 ತಿಂಗಳಿಗೆ ಒಮ್ಮೆ ಅಧಿಕಮಾಸ ಬರುತ್ತದೆ ಎಂದು ಹೇಳಿದರು.



ಹನುಮಸಾಗರ: ಪಟ್ಟಣದಲ್ಲಿ ಅಧಿಕ ಮಾಸದ ನಿಮಿತ್ತ ಪಟ್ಟಣದ ಮಹಿಳಾ ಭಜನಾಮಂಡಳಿಗಳ ವತಿಯಿಂದ ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಹಾಗೂ ಶ್ರೀರುಕ್ಮಿಣಿ ಪಾಂಡುರಂಗ ದೇವಸ್ಥಾನದಲ್ಲಿ ಒಂದು ತಿಂಗಳ ಪರ್ಯಂತ ಪ್ರತಿದಿನ 33 ದಾಸರ ಹಾಡುಗಳು, ವಿಶೇಷ ಅರ್ಚನೆ, ಪುಷ್ಪಾರ್ಚನೆ, ಕುಂಕುಮಾರ್ಚನೆ ಮುಂತಾದ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಳ್ಳಲು ಅವಕಾಶ

ಜು.11ಕ್ಕೆ ಲೋಕ ಅದಾಲತ್: ದರಗದ

ಕೊಪ್ಪಳ: ಜು.11ರಂದು ರಾಜ್ಯಾದ್ಯಂತ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ತಮ್ಮ-ತಮ್ಮ ಇಲಾಖೆಯಿಂದ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ರಾಷ್ಟ್ರೀಯ ಲೋಕ್ ಅದಾಲತ್ ಉತ್ತಮ ಅವಕಾಶವಾಗಿದ್ದು, ಸಾರ್ವಜನಿಕರು, ಅಧಿಕಾರಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ಎಸ್.ದರಗದ ತಿಳಿಸಿದರು.

ಶುಕ್ರವಾರದಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಜು.11ರಂದು ನಡೆಯುವ ರಾಷ್ಟ್ರೀಯ ಲೋಕ ಅದಾಲತ್‌ನ ಅಂಗವಾಗಿ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕರೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿವಿಲ್ ದಾವೆಗಳು, ಭೂ-ಸ್ವಾಧೀನ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜಿ ಆಗಲು ಅರ್ಹವಿರುವ ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು ಸೇರಿದಂತೆ ಹಲವಾರು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ರಾಜಿ ಸಂಧಾನದಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಪ್ರಕರಣವು ಇಬ್ಬರಿಗೂ ಒಪ್ಪಿಗೆಯಾಗುವಂತೆ ಕೊನೆಗೊಂಡು ನ್ಯಾಯಾಲಯಕ್ಕೆ ತುಂಬಿದ ಶುಲ್ಕವನ್ನು ಸಂಪೂರ್ಣವಾಗಿ ವಾಪಸ್ ನೀಡಲಾಗುವುದು. ಆದ್ದರಿಂದ ಜು.11ರಂದು ರಾಜ್ಯದಾದ್ಯಂತ ನಡೆಯುವ ಲೋಕ್ ಅದಾಲತ್‌ನ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಅವರು ಹೇಳಿದರು.



> ಬಹಳಷ್ಟು ಜನರಿಗೆ ಕಾನೂನಿನ ಅರಿವೇ ಇಲ್ಲ, ಈ ಕುರಿತು ನಾವೆಲ್ಲರೂ ಜನರಿಗೆ ಮಾಹಿತಿ ನೀಡುವ ಕೆಲಸ ಮಾಡಬೇಕು. ಲೋಕ ಅದಾಲತ್ ನಡೆಯುತ್ತಿರುವ ಕುರಿತು ಹೆಚ್ಚಿನ ಪ್ರಚಾರ ನೀಡಿ. ನಗರಸಭೆ ವಾಹನಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಈ ಕುರಿತು ಹೆಚ್ಚು ಪ್ರಚಾರ ಆಗಬೇಕು. ರಾಜಿ ಸಂಧಾನದ ಮೂಲಕ ಪ್ರಕರಣಗಳು ಇತ್ಯರ್ಥವಾದರೆ ಜನರ ಸಮಯ ಮತ್ತು ಅವರ ಸಂಬಧಗಳು ಉಳಿಯುತ್ತವೆ.
> ■ ಮಹಾಂತೇಶ ಎಸ್.ದರಗದ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ಮಾದಕ ವ್ಯಸನ ತಡೆಗಟ್ಟುವ ಕುರಿತು ಕಾರ್ಯಾಗಾರ: ಇದೇ ಸಂದರ್ಭ ಮಾದಕ ವ್ಯಸನ ತಡೆಗಟ್ಟುವ ಕುರಿತು ಎಲ್ಲ ಇಲಾಖೆಗಳ ಸಹಯೋಗದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಕುರಿತು ಚರ್ಚಿಸಲಾಯಿತು.

ಈ ಕುರಿತು ಮಾತನಾಡಿದ ನ್ಯಾ.ಮಹಾಂತೇಶ ದರಗದ ಅವರು, ಅಭಿವೃದ್ಧಿ ಹೊಂದಿದ ನಗರ ಪ್ರದೇಶ ಹಾಗೂ ಅಭಿವೃದ್ಧಿ ಹೊಂದುತ್ತಿರುವ ನಗರ, ಪಟ್ಟಣಗಳಲ್ಲಿ ಸದ್ದಿಲ್ಲದೆ ಮಾದಕ ವ್ಯಸನದ ಜಾಲ ಹರಡುತ್ತಿದೆ. ಚಾಕೋಲೇಟ್, ತಂಪು ಪಾನೀಯ ಮುಂತಾದ ಹಲವಾರು ರೂಪಗಳಲ್ಲಿ ಮಕ್ಕಳು, ಯುವಕರಿಗೆ ತಿಳಿಯದಂತೆ ಮಾದಕ ವಸ್ತುಗಳನ್ನು ಪೂರೈಸಲಾಗುತ್ತಿದೆ. ಇದು ಒಂದು ರೀತಿಯಲ್ಲಿ ನಿಶಬ್ದ ದೇಶದ್ರೋಹಿಕೃತ್ಯವಾಗಿದೆ. ಇದರಿಂದನಮ್ಮ ಮಕ್ಕಳನ್ನು ರಕ್ಷಿಸಬೇಕಿದೆ. ಇಂತಹ ಜಾಲಗಳಿಗೆ ಬಲಿಯಾಗದಂತೆ ಸೂಕ್ತ ತಿಳುವಳಿಕೆ ನೀಡುವ ಅಗತ್ಯವಿದೆ. ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳ ಮೂಲಕ ಮಕ್ಕಳನ್ನು ಎಚ್ಚರಿಸಬೇಕಿದೆ. ಸ್ವಸ್ಥ ಸಮಾಜದ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ್ ಡಿಡಿಪಿಯು ಜಗದೀಶ, ವೈದ್ಯಾಧಿಕಾರಿ ಡಾ.ಪ್ರಕಾಶ, ಜಿಲ್ಲಾ ಕಾರಾಗೃಹ ಅಧಿಕಾರಿ ಅಮರೇಶ ಪೂಜಾರಿ, ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಬಿ.ಹಿರೇಗೌಡರ್ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಲಕಾರ್ಮಿಕ ನಿರ್ಮೂಲನಾ ಜಾಗೃತಿ ಜಾಥಾ

ಕುಷ್ಟಗಿ: ಇಲ್ಲಿನ ಕಾರ್ಮಿಕ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಶುಕ್ರವಾರ ಬೃಹತ್ ಬಾಲಕಾರ್ಮಿಕ ನಿರ್ಮೂಲನಾ ಜಾಗೃತಿ ಜಾಥಾ, ಕಾನೂನು ಅರಿವು-ನೆರವು ಕಾರ್ಯಕ್ರಮ ಹಾಗೂ ಖಾಯಂಲೋಕಅದಾಲತ್‌ಕುರಿತುಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಿದ್ದ ಜಾಗೃತಿ ಜಾಥಾಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಮಂಜುನಾಥ್ ಆರ್. ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಾಲಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿದೆ. ಪ್ರತಿಯೊಂದು ಮಗುವಿಗೂ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷಿತ ಬಾಲ್ಯ ಸಿಗುವುದು ಸಂವಿಧಾನಬದ್ಧ ಹಕ್ಕಾಗಿದೆ. ಮಕ್ಕಳನ್ನು ದುಡಿಮೆಗೆ ತಳ್ಳುವುದು ಅವರ ಭವಿಷ್ಯವನ್ನು ಕತ್ತಲೆಗೆ ದೂಡುವಂತಾಗಿದೆ. ಸಮಾಜದ ಪ್ರತಿಯೊಬ್ಬರೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಬೇಕು ಎಂದು ಹೇಳಿದರು.

ಪ್ರಧಾನಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಎಂ.ಎಲ್. ಪೂಜೇರಿ ಮಾತನಾಡಿ, ''ಖಾಯಂ ಲೋಕ ಅದಾಲತ್ ವ್ಯವಸ್ಥೆಯ ಮೂಲಕ ಸಾರ್ವಜನಿಕರಿಗೆ ತ್ವರಿತ ಹಾಗೂ ಸುಲಭ ನ್ಯಾಯ ದೊರೆಯುತ್ತಿದೆ ಎಂದು ಹೇಳಿದರು. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಮಹಾಂತೇಶ ಚೌವಲಗಿ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ನ್ಯಾಯಾಧೀಶರು, ವಕೀಲರು, ಪೊಲೀಸ್ ಅಧಿಕಾರಿಗಳು, ಕಾರ್ಮಿಕ ಇಲಾಖೆಯ ಸಿಬ್ಬಂದಿ ಹಾಗೂ ಶಾಲಾ ಮಕ್ಕಳು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಕುರಿತು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

ಕಾರ್ಮಿಕ ನಿರೀಕ್ಷಕಿ ನಿವೇದಿತಾ, ವಕೀಲರ ಸಂಘದ ಅಧ್ಯಕ್ಷ ಎಚ್.ಆರ್. ನಾಯಕ, ಕಾರ್ಯದರ್ಶಿ ಶಶಿಧರ ಶೆಟ್ಟರ್, ಸರ್ಕಾರಿ ಸಹಾಯಕ ಅಭಿಯೋಜಕರಾದ ರಾಯನಗೌಡ ಎಲ್., ಇಂದಿರಾ ಸುಹಾಸಿನಿ, ಅಪರ ಸರ್ಕಾರಿ ವಕೀಲ ಟಿ.ಎನ್. ಗುಜಮಾಗಡಿ, ಪಿಎಸ್‌ಐ ಹನುಮಂತಪ್ಪ ತಳವಾರ, ಕ್ರೈಂ ವಿಭಾಗದ ಪಿಎಸ್‌ಐ ಪುಂಡಲೀಕಪ್ಪ, ತಾಲೂಕು ದೈಹಿಕ ಪರಿವೀಕ್ಷಕ ನಾಗಪ್ಪ ಬಿಳಿಯಪ್ಪನವರ್, ಮುಖ್ಯೋಪಾಧ್ಯಾಯರಾದ ಯಮನಪ್ಪ ಚೂರಿ, ಶಿವಪ್ಪ ಮಾಟಲದಿನ್ನಿ, ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೈಲಾ ಪ್ರಕಾರ ಸದಸ್ಯತ್ವ ಪಡೆದು ಅಧ್ಯಕ್ಷನಾಗಿದ್ದೇನೆ: ಶಾಸಕ ಪಾಟೀಲ



ಕುಷ್ಟಗಿ: ತಾಲೂಕಿನ ಶಾಖಾಪೂರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಒಕ್ಕೂಟದ ಬೈಲಾ ಪ್ರಕಾರ ಸದಸ್ಯತ್ವವನ್ನು ಪಡೆದು ಅಧ್ಯಕ್ಷ ಸ್ಥಾನವನ್ನು ಪಡೆದಿದ್ದೇನೆ ಹೊರತು ಬೈಲಾ ನೋಡಲಾರದೆ ಸದಸ್ಯತ್ವ ಪಡೆದಿಲ್ಲ, ಒಬ್ಬ ವ್ಯಕ್ತಿ ಮೂರು ಕಡೆ ಸದಸ್ಯತ್ವ ಪಡೆದು ಎರಡು ಕಡೆ ಮಾತ್ರ ಅಧಿಕಾರವನ್ನು ಮಾಡಲು ಅವಕಾಶವಿದೆ. ಇದರಲ್ಲಿ ನನ್ನ ತಪ್ಪು ಇಲ್ಲ ಯಾರು ಬೇಕಾದರೂ ಬರಲಿ ಯಾರು ಬೇಕಾದರು ನೋಟಿಸ್ ನೀಡಲಿ ಅದಕ್ಕೆ ನಾನು ಉತ್ತರ ಕೊಡಲು ಸಿದ್ದನಿದ್ದೇನೆ ಎಂದು ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು.

ಇಲ್ಲಿನ ತಾಲೂಕು ಪಂಚಾಯತ ಶಾಸಕರ ಕಚೇರಿಯಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು ಒಬ್ಬ ವ್ಯಕ್ತಿ ಮೂರು ಕಡೆ ಸದಸ್ಯತ್ವವನ್ನು ಪಡೆದು ಎರಡು ಅಧಿಕಾರವನ್ನು ಮಾಡಬಹುದು ವಿನಹ ಆದರೆ ಮೂರು ಕಡೆ ಅಧಿಕಾರ ಮಾಡಲು ಸಾಧ್ಯವಿಲ್ಲ ನನ್ನ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ ಬಹುತೇಕ ಬರೆದಿರುವ ಪತ್ರಿಕೆಗೆ ಮಾಹಿತಿ ಕೊರತೆ ಇದೆ. ಆದರೆ ಅವರು ಯಾರದೋ ಮಾತು ಕೇಳಿ ನನ್ನ ಬಗ್ಗೆ ಆರೋಪವನ್ನು ಮಾಡಿ ಬರೆದಿದ್ದಾರೆ.

ಸ್ಪಷ್ಟ ಮಾಹಿತಿ ತೆಗೆದುಕೊಂಡು ತಮ್ಮ ಪತ್ರಿಕೆಯಲ್ಲಿ ಬರೆಯಬೇಕಾಗಿತ್ತು. ನನ್ನನ್ನು ಕೇಳಿದ್ದರೆ ನಾನು ಉತ್ತರ ಕೊಡುತ್ತಿದ್ದೆ ನನ್ನನ್ನು ಕೇಳಿಲ್ಲ ನನ್ನನ್ನು ಸಂಪರ್ಕ ಮಾಡಿಲ್ಲ ಎಂದರು.

ಶಾಖಾಪೂರ ಗ್ರಾಮದ ಹಾಲುಉತ್ಪಾದಕರ ಸಹಕಾರ ಸಂಘದ ಒಕ್ಕೂಟದ ಬೈಲಾ ಪ್ರಕಾರ ಸದಸ್ಯತ್ವ ಪಡೆದು ಅಧ್ಯಕ್ಷ ಸ್ಥಾನದ ಹುದ್ದೆ ಅಲಂಕರಿಸಿದ್ದೇನೆ. ಹೊರತು ಬೈಲಾವನ್ನು ಬಿಟ್ಟು ಬೈಲಾ ನೋಡಲಾರದೆ ಉದ್ಯೋಗ ಪಡೆದಿಲ್ಲ ನನಗೆ ಸಹಕಾರ ಸಂಘದಲ್ಲಿ ಕೆಲಸ ಮಾಡಲು ಇಚ್ಛೆ ಇರುವುದರಿಂದ ಶಾಖಾಪೂರ ಗ್ರಾಮದ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಒಕ್ಕೂಟದಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ ಹೊರತು ಬೇರೆ ಕಾರಣಕ್ಕೆ ಅಲ್ಲ ಅದು ನನ್ನ ಕೊರಡಕೇರಾ ಗ್ರಾಮ ಪಂಚಾಯತ ವ್ಯಾಪ್ತಿಗೆ ಶಾಖಾಪೂರ ಗ್ರಾಮ ಬರುವುದರಿಂದ ನಾನು ಸದಸ್ಯತ್ವ ಪಡೆದಿದ್ದೇನೆ ವಿನಹ ಬೇರೆ ದುರುದ್ದೇಶದಿಂದ ಅಲ್ಲ ನನ್ನ ಸ್ವ ಗ್ರಾಮವಾದ ಕೊರಡಕೇರಾ ಗ್ರಾಮದಲ್ಲಿ ಕೂಡ ಹಾಲು ಉತ್ಪಾದಕರ ಸಹಕಾರ ಸಂಘ ಒಕ್ಕೂಟ ಇದೆ.

ಆದರೆ ನಮ್ಮ ಗ್ರಾಮದಲ್ಲಿ ಇರುವದು ಮಹಿಳೆಯರ ಹಾಲು ಉತ್ಪಾದಕರ ಸಹಕಾರ ಸಂಘ ಒಕ್ಕೂಟ ಅಲ್ಲಿ ನನಗೆ ಸದಸ್ಯತ್ವ ಪಡೆಯಲು ಬರುವದಿಲ್ಲ ನಾನು ಸದಸ್ಯತ್ವ ಪಡೆಯಲು ಆಗುವದಿಲ್ಲ ನಾನು ಸದಸ್ಯತ್ವ ಪಡೆದಿಲ್ಲ ಎಂದರು.

ಕಾಲೇಜಿನ ಮೇಲ್ಚಾವಣಿ ಕುಸಿತ ಖಂಡಿಸಿ ಎಬಿವಿಪಿ ಪ್ರತಿಭಟನೆ

ಕಲಬುರಗಿ: ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ತರಗತಿ ಕೊಠಡಿಯ ಮೇಲ್ಚಾವಣಿ ಕುಸಿದು ವಿದ್ಯಾರ್ಥಿನಿಯರು ಗಾಯಗೊಂಡ ಘಟನೆ ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಲಬುರಗಿ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರು ರಾಜ್ಯ ಸರ್ಕಾರದ ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯ ಹಾಗೂ ಅಧಿಕಾರಿಗಳ ಬೇಜವಾಬ್ದಾರಿತನವನ್ನು ಖಂಡಿಸಿ, ವಿದ್ಯಾರ್ಥಿನಿಯರ ಜೀವದೊಂದಿಗೆ ಚೆಲ್ಲಾಟವಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಬಳಿಕ ಪೊಲೀಸ್ ಇಲಾಖೆ ಮುಖಾಂತರ ಜಿಲ್ಲಾಧಿಕಾರಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಎಬಿವಿಪಿ ಮುಖಂಡರು, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಕಟ್ಟಡ ದುಸ್ಥಿತಿಯಲ್ಲಿದ್ದು, ಸುಮಾರು 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪ್ರತಿದಿನ ಆತಂಕದ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈಗಾಗಲೇ ತರಗತಿ ಕೊಠಡಿಯ ಮೇಲ್ಚಾವಣಿ ಕುಸಿದಿದ್ದು, ಇಡೀ ಕಟ್ಟಡದಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಕಾಲೇಜು ಆಡಳಿತವು ಹಲವು ಬಾರಿ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿದರು.



ಘಟನೆಗೆ ಕಾರಣವಾದ ಕಟ್ಟಡ ನಿರ್ಮಾಣ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಜೊತೆಗೆ ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆ ಜಿಲ್ಲೆಯ ಸರ್ಕಾರಿ ಶಾಲೆ-ಕಾಲೇಜುಗಳ ಕಟ್ಟಡಗಳ ಸಮಗ್ರ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರವಣ, ಸಿದ್ದಲಿಂಗ ತಳವಾರ, ವಿದ್ಯಾರ್ಥಿನಿ ಪ್ರಮುಖೆ ನಂದಾ ನಗರ, ಅವಿನಾಶ ಗುತ್ತೇದಾರ, ಶಿವು ಸಜ್ಜನ, ಅಭಿಷೇಕ ಪಾಟೀಲ, ಸಂದೇಶ, ರಾಚಪ್ಪ ಸೇರಿದಂತೆ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಶಿಕ್ಷಣದ ಜೊತೆಯಲ್ಲಿ ಕೌಶಲ್ಯ ರೂಪಿಸಿಕೊಳ್ಳಿ

ಮಸ್ಕಿ: ಪಟ್ಟಣದ ಹೈಟೆಕ್ ಕಂಪ್ಯೂಟರ್ ಶಿಕ್ಷಣ ತರಬೇತಿ ಕೇಂದ್ರ ಹಾಗೂ ಜನ ಶಿಕ್ಷಣ ಸಂಸ್ಥಾನ ರಾಯಚೂರು ಇವರ ನೇತೃತ್ವದಲ್ಲಿ 'ಅಸಿಸ್ಟೆಂಟ್ ಕಂಪ್ಯೂಟರ್ ಆಪರೇಟರ್' ತರಬೇತಿ ಕಾರ್ಯಕ್ರಮ ಜರುಗಿತು.

ಈ ವೇಳೆ ಪುರಸಭೆ ನಾಮನಿರ್ದೇಶನ ಸದಸ್ಯ ಕೃಷ್ಣ ಚಿಗರಿ ರವರು ಮಾತನಾಡಿ, ಶಿಕ್ಷಣದ ಜೊತೆಯಲ್ಲಿ ಕೌಶಲ್ಯ ಅಳವಡಿಸಿಕೊಳ್ಳಿ ಹಾಗೂ ಶ್ರಮಪಟ್ಟು ಆಸಕ್ತಿಯಿಂದ ಓದಿ ಸ್ವಯಂ ಉದ್ಯೋಗವನ್ನು ಸೃಷ್ಟಿ ಮಾಡಿಕೊಳ್ಳಿ ಹಾಗು ಇನ್ನೊಬ್ಬರಿಗೆ ಉದ್ಯೋಗ ನೀಡುವ ಮಟ್ಟಿಗೆ ನೀವು ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಸುಮಾರು ವರ್ಷಗಳಿಂದ ಹೈಟೆಕ್ ಕಂಪ್ಯೂಟರ್ ಶಿಕ್ಷಣ ಸಂಸ್ಥೆ ಇವರ ಉಚಿತ ಕಂಪ್ಯೂಟರ್ ಮತ್ತು ವಿವಿಧ ರೀತಿಯ ಕೌಶಲ್ಯ ತರಬೇತಿಗಳನ್ನು ನೀಡುತ್ತಾ ವಿದ್ಯಾರ್ಥಿಗಳಿಗೆ ಉತ್ತಮ ಕೌಶಲ್ಯ ನೀಡುವಲ್ಲಿ ಈ ಸಂಸ್ಥೆ ಹೆಸರುವಾಸಿಯಾಗಿದೆ ಎಂದು ಉಪನ್ಯಾಸಕ ಶರಣಯ್ಯ ಗುಡದೂರು ತಿಳಿಸಿದರು.

ರಾಯಚೂರು ಎಸ್‌ಎಸ್ ಮತ್ತು ಟಿಎಸ್‌ಸಿ ನಿರ್ದೇಶಕ ಸದಾನಂದ ಎಂ. ಪೂಜಾರಿ ಅವರು ವಿದ್ಯಾರ್ಥಿಗಳ ಕುರಿತು ಮಾತನಾಡಿದರು.



2024-25ನೇ ಸಾಲಿನ ಹಳೆಯ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿ ಪಡೆದಂತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಪೋಮಣ್ಣ ರಾಯಚೂರು, ಶಿಕ್ಷಕರಾದ ಚಂದ್ರಶೇಖರ್ ಬೋವಿ, ಹೈಟೆಕ್ ಕಂಪ್ಯೂಟರ್ ಶಿಕ್ಷಣ ತರಬೇತಿ ಕೇಂದ್ರದ ವ್ಯವಸ್ಥಾಪಕ ಯಮನೂರು ಕನ್ನಾರಿ, ಸಂಪನ್ಮೂಲ ವ್ಯಕ್ತಿಗಳಾದ ಬಸವರಾಜ್ ಮಾನ್ವಿ ಅಸಿಸ್ಟೆಂಟ್ ಪ್ರೋಗ್ರಾಮ್ ಆಫೀಸರ್ ರಾಯಚೂರ ಸೇರಿದಂತೆ ಕಲಿಕಾರ್ಥಿಗಳು ಇದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಕುಕನೂರು-ಯಲಬುರ್ಗಾ ತಾಲೂಕು ಮುಂಚೂಣಿ

ಯಲಬುರ್ಗಾ: ಇಡೀ ಜಿಲ್ಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಸ್ಎಸ್ ಎಲ್‌ಸಿ ಮತ್ತು ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಕುಕನೂರು-ಯಲಬುರ್ಗಾ ತಾಲೂಕುಗಳು ಮುಂಚೂಣಿಯಲ್ಲಿವೆ ಎಂದು ಬೆಂಗಳೂರಿನ ಆರಾಮ ಫೌಂಡೇಶನ್ ಸಂಚಾಲಕ ಮಮತಾ ರಾಯರೆಡ್ಡಿ ಹೇಳಿದರು.



ಪಟ್ಟಣದ ಬುದ್ಧ, ಬಸವ, ಅಂಬೇಡ್ಕರ್ ಭವನದಲ್ಲಿ ಶನಿವಾರ ಬೆಂಗಳೂರಿನ ಆರಾಮ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಉಭಯ ತಾಲೂಕಿನಲ್ಲಿ 2025-26ನೇ ಶೈಕ್ಷಣಿಕ ವರ್ಷದಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದುಕೊಂಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ತಾಲೂಕಿನಲ್ಲಿ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದಿಂದ ಮಂಜೂರು ಮಾಡಿಸುವ ಮೂಲಕ ಈ ಭಾಗದ ಬಡಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಯ ಪ್ರಗತಿ ಹೊಂದಬೇಕೆನ್ನುವ ದೂರದೃಷ್ಟಿಯಿಂದ ಎಲ್ಲ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚನ್ನಮ್ಮ, ಇಂದಿರಾಗಾಂಧಿ ವಸತಿ ಶಾಲೆಗಳ ವಿದ್ಯಾರ್ಥಿಗಳು ಎಸ್ಎಸ್ ಎಲ್‌ಸಿ ಮತ್ತು ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಅವರ ಕನಸು ನನಸಾಗಿಸಿದ್ದಾರೆ. ಇದಕ್ಕೆ ನಮ್ಮ ತಂದೆಯವರ ಅವಿರತ ಪರಿಶ್ರಮವೇ ಪ್ರಮುಖ ಕಾರಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಡಿಡಿಪಿಐ ಎಸ್.ಡಿ.ಗಾಂಜಿ ಮಾತನಾಡಿ, 224 ವಿಧಾನಸಭಾ ಕ್ಷೇತ್ರಗಳಲ್ಲಿನ ಶಾಸಕರಲ್ಲಿ ಬಸವರಾಜ ರಾಯರೆಡ್ಡಿ ಅವರು ಅಭಿವೃದ್ಧಿಯಲ್ಲಿ ಮೊದಲಿಗರು. ಈ ಕ್ಷೇತ್ರಕ್ಕೆ ಎಂಜನಿಯರಿಂಗ್ ಕಾಲೇಜು, ಐಟಿಐ, ವಸತಿ ಶಾಲೆಗಳು, ಪದವಿಪೂರ್ವ, ಪ್ರೌಢಶಾಲೆಗಳು ಸೇರಿದಂತೆ ಕೌಶಲ್ಯಾಭಿವೃದ್ಧಿ ಕೇಂದ್ರ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಈ ಕ್ಷೇತ್ರದ ಗ್ರಾಮೀಣ ಭಾಗದ ಬಡಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲ ಕಲ್ಪಿಸಿಕೊಡುವ ಜತೆಗೆ ಹಲವಾರು ಜನಪರ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಅನುದಾನವನ್ನು ತಂದು ಮಾದರಿ ಕ್ಷೇತ್ರವನ್ನಾಗಿ ಮಾಡಿದ ಹೆಗ್ಗಳಿಕೆಗೆ ರಾಯರಡ್ಡಿಯವರು ಸಾಕ್ಷಿಯಾಗಿದ್ದಾರೆ. ಇನ್ನೂ ತಾಲೂಕಿನ ಪ್ರತಿಭಾವಂತ 580ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಚಿಂತನೆ ಇಟ್ಟುಕೊಂಡ ಶಾಸಕರ ಪುತ್ರಿಯಾದ ಮಮತಾ ರಾಯರೆಡ್ಡಿಯವರ ಈ ಸಾಮಾಜಿಕ ಕಾರ್ಯ ಎಲ್ಲರಿಗೂ ಅವಿಸ್ಮರಣೀವಾಗಿದೆ ಎಂದು ಹೇಳಿದರು.

ಆರಾಮ ಫೌಂಡೇಶನ ಅಧ್ಯಕ್ಷೆ ಆಶಾ ರಾಯರಡ್ಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡಾ.ನಂದಿತಾ ದಾನರಡ್ಡಿ, ಸಾವಿತ್ರಿ ಗೊಲ್ಲರ್, ಪರೀದಾಬೇಗ, ಜಯಶ್ರೀ ಕಂದಕೂರ, ಗಿರೀಜಾ ಸಂಗಟಿ, ಜಯಶ್ರೀ ಅರಕೇರಿ, ಮಲ್ಲಮ್ಮ ಗೊಂದಿ, ಬಿ.ಎಂ.ಶಿರೂರ, ಯಂಕಣ್ಣ ಯರಾಶಿ, ಹನುಮಂತಗೌಡ ಪಾಟೀಲ, ಖಾಸಿಂಸಾಬ ತಳಕಲ್, ಶರಣಮ್ಮ ಪೂಜಾರ ಮತ್ತಿತರರಿದ್ದರು.

ಎನ್‌ಕೆ ಆಸ್ಪತ್ರೆಯಲ್ಲಿ ಜು.1ಕ್ಕೆ ಉಚಿತ ಮೆಗಾ ಆರೋಗ್ಯ ಶಿಬಿರ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಜನತೆಗೆ ಅತ್ಯಾಧುನಿಕ ಸುಧಾರಿತ ವೈದ್ಯಕೀಯ ಸೇವೆ ಒದಗಿಸುತ್ತಿರುವ ಕಲಬುರಗಿ ನಗರದ ಜಾಫರಾಬಾದ್ ಹತ್ತಿರದ ರಿಂಗ್ ರೋಡ್‌ನಲ್ಲಿರುವ ಪ್ರಮುಖ ಎನ್‌ಕೆ ಆಸ್ಪತ್ರೆಯಲ್ಲಿ ಜು.1ರಂದು ಉಚಿತ ಮೆಗಾ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ಅಧ್ಯಕ್ಷ ಡಾ. ಆರಿಫ್ ರಝಾ ಅಹ್ಮದ್ ತಿಳಿಸಿದರು.



ಶನಿವಾರ ನಗರದ ಜಾಫರಾಬಾದ್ ರಸ್ತೆ ಬಳಿಯ ಎನ್ ಕೆ ಆಸ್ಪತ್ರೆಯ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವೈದ್ಯರ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಈ ಬೃಹತ್ ತಪಾಸಣಾ ಶಿಬಿರವು ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಜರುಗಲಿದೆ. ಕಲ್ಯಾಣ ಕರ್ನಾಟಕ ಭಾಗದ ಸಾರ್ವಜನಿಕರು ಈ ಉಚಿತ ಶಿಬಿರದ ಸದುಪಯೋಗ ಪಡೆದುಕೊಂಡು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕಾಗಿ ಡಾ.ಆರಿಫ್ ರಝಾ ಅಹ್ಮದ್ ವಿನಂತಿಸಿದರು.

ಇದಲ್ಲದೇ, ಅತ್ಯಾಧುನಿಕ 200 ಹಾಸಿಗೆಗಳ ಈ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ರೋಗಿ-ಕೇಂದ್ರಿತ ಸೇವೆ ಹಾಗೂ ನೈತಿಕ ವೈದ್ಯಕೀಯ ಪದ್ಧತಿಗೆ ಹೆಸರಾಗಿದೆ. ಶಿಬಿರದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ನುರಿತ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ವೈದ್ಯಕೀಯ ಸಲಹೆ ಸಿಗಲಿದೆ. ಇದರೊಂದಿಗೆ ಉಚಿತ ಔಷಧ ವಿತರಣೆ ಮಾಡಲಾಗುತ್ತಿದ್ದು, ಅಗತ್ಯವಿರುವ ಪ್ರಯೋಗಾಲಯ (ಲ್ಯಾಬ್) ಪರೀಕ್ಷೆಗಳ ಮೇಲೆ ಶೇ.30ರಷ್ಟು ರಿಯಾಯಿತಿ ನೀಡಲಾಗುವುದು ಎಂದು ತಿಳಿಸಿದರು.ಜೀವರಕ್ಷಕ ಚಿಕಿತ್ಸೆ ನೀಡುವ ಅತ್ಯಾಧುನಿಕ CRRT ಯಂತ್ರದ ಸೌಲಭ್ಯವನ್ನು ಹೊಂದಿದೆ. ಆಸ್ಪತ್ರೆಯಲ್ಲಿ 24★7 ತುರ್ತು ಚಿಕಿತ್ಸಾ ಮತ್ತು ಟ್ರಾಮಾ ಕೇರ್ ವಿಭಾಗ ಲಭ್ಯವಿದ್ದು, ಅಪಘಾತ, ಹೃದಯಾಘಾತ ಹಾಗೂ ಪಾರ್ಶ್ವವಾಯುವಿನಂತಹ ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಪರಿಣಿತ ವೈದ್ಯರ ತಂಡ ದಿನದ 24 ಗಂಟೆಯೂ ಸನ್ನದ್ಧವಾಗಿರುತ್ತದೆ. ಇದಲ್ಲದೆ, ಆಸ್ಪತ್ರೆಯಲ್ಲಿ ಇನ್-ಹೌಸ್ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್, ವೆಂಟಿಲೇಟರ್, ಡಯಾಲಿಸಿಸ್, ರಕ್ತನಿಧಿ ಹಾಗೂ ಐಆರ್‌ಸಿಪಿ ಸೇರಿದಂತೆ ರೋಗನಿರ್ಣಯಕ್ಕೆ ಬೇಕಾದ ಎಲ್ಲಾ ಅತ್ಯಾಧುನಿಕ ಸೌಲಭ್ಯಗಳು ಒಂದೇ ಸೂರಿನಡಿ ಲಭ್ಯವಿದೆ ಎಂದು ಡಾ.ಅರಿಫ್ ಮಾಹಿತಿ ನೀಡಿದರು.

> ಉಚಿತ ಶಿಬಿರದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರಿಗೂ ತಜ್ಞ ವೈದ್ಯರಿಂದ ಉಚಿತ ತಪಾಸಣೆ, ಉಚಿತ ವೈದ್ಯಕೀಯ ಸಲಹೆ ಹಾಗೂ ಉಚಿತವಾಗಿ ಔಷಧಗಳನ್ನು ವಿತರಿಸಲಾಗುವುದು. ಶಿಬಿರದ ದಿನದಂದು ರೋಗಿಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಪ್ರಯೋಗಾಲಯ ಪರೀಕ್ಷೆಗಳ ಒಟ್ಟು ದರದಲ್ಲಿ ಶೇ.30ರಷ್ಟು ವಿಶೇಷ ರಿಯಾಯಿತಿ ಸಿಗಲಿದೆ.
> ■ ಡಾ.ಆರಿಫ್ ರಝಾ ಅಹದ್, ಅಧ್ಯಕ್ಷ ಎನ್‌ಕೆ ಆಸ್ಪತ್ರೆ

ಡಾ.ರಹೇಮಾನ್ ಹೈದರ್, ಡಾ.ಮುಹಮ್ಮದ್ ತೈಫ್, ಬೆಂಗಡಿಗೇರಿ, ಡಾ.ಜಾಫರ್, ಡಾ.ವಿರೇಶ್ ಗೋದಿ, ಡಾ.ಮಹಾಲಿಂಗಂ ಇತರರಿದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ

ಬಳ್ಳಾರಿ: ಪ್ರಸ್ತುತ ಪ್ರತಿಯೊಂದು ಕ್ಷೇತ್ರದಲ್ಲಿ ಸ್ಪರ್ಧೆ ಇದ್ದು, ವಿದ್ಯಾರ್ಥಿಗಳು ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯುಡು ಹೇಳಿದರು.

ಶನಿವಾರ ನಗರದ 34ನೇ ವಾರ್ಡ್‌ನ ಭತ್ರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಸಾಮಗ್ರಿ ವಿತರಿಸಿ ಮಾತನಾಡಿದರು. ಪಾಠದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗಿಯಾಗಿ ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಸರ್ಕಾರಿ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆ ಸವಾಲುಗಳು ಹೆಚ್ಚು, ಎಲ್ಲ ಸವಾಲುಗಳನ್ನು ಎದುರಿಸಲು ನೀವು ಸಜ್ಜಾಗಬೇಕು, ಇದಕ್ಕೆ ಗುರು ಹಿರಿಯರ ಮಾರ್ಗದರ್ಶನ ಅಗತ್ಯ ಎಂದರು.

ಕಾಂಗ್ರೆಸ್ ಮುಖಂಡ ಎಂ.ಸುಬ್ಬರಾಯುಡು ಅವರನ್ನು ಶಾಲೆಯ ಪರವಾಗಿ ಸನ್ಮಾನಿಸಲಾಯಿತು. ಸ್ಥಳೀಯ ಮುಖಂಡ ಯೋಗಾನಂದ ರೆಡ್ಡಿ, ಶಾಲೆಯ ಮುಖ್ಯಗುರು, ಶಿಕ್ಷಕರು ಹಾಗೂ ಸಿಬ್ಬಂದಿಗಳಿದ್ದರು.

ವಿರೇಶ ಬಡಿಗೇರ್ ನೇಮಕ



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ವಿರೇಶ ಬಡಿಗೇರ್ ಅವರನ್ನು ಬಿಜೆಪಿ ಕಂಪ್ಲಿ ವಿಧಾನಸಭಾ ಕ್ಷೇತ್ರದ ಕಂಪ್ಲಿ ಮಂಡಲದ ಯುವ ಮೋರ್ಚಾದ ಅಧ್ಯಕ್ಷ ನೇಮಕ ಮಾಡಲಾಗಿದೆ. ಅವರು ಮಾತನಾಡಿ ಬಿಜೆಪಿ ಪಕ್ಷದ ಸಂಘಟನೆಯನ್ನು ಸದೃಢವಾಗಿ ಮತ್ತು ಅತ್ಯಂತ ಬಲಿಷ್ಠವಾಗಿ ಕಟ್ಟಲು ನಿಮ್ಮ ಪರಿಶ್ರಮ ಅತ್ಯವಶ್ಯವಾಗಿದೆ. ಸಂಪೂರ್ಣ ಪಕ್ಷದ ಹಿತದೃಷ್ಟಿಯಿಂದ ಪಕ್ಷದ ಶಿಸ್ತು ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಅವುಗಳನ್ನು ಅಳವಡಿಸಿಕೊಂಡು ಮುಂದಿನ ವರ್ಷದ ಅವಧಿಯಲ್ಲಿ ಪಕ್ಷದ ಸಂಘಟನೆಯತ್ತ ಹೆಚ್ಚಿನ ಗಮನಹರಿಸಿ ಕಾರ್ಯಕರ್ತರಿಗೆ, ಸ್ಫೂರ್ತಿಯಾಗಿ, ಶಕ್ತಿಯಾಗಿ, ರಾಜಕೀಯವಾಗಿ, ಪಕ್ಷದ ಹಿತದೃಷ್ಟಿಯಿಂದ ಪಕ್ಷದ ಒಳಿತಿಗಾಗಿ ಪಕ್ಷದ ಸರ್ವತೋಮುಖ ಅಭಿವೃದ್ಧಿ, ಪ್ರಮಾಣಿಕವಾಗಿ ನಿರ್ವಹಿಸುತ್ತೇನೆ ಎಂದರು.

ಇಂದು ಬೃಹತ್ ಉಚಿತ ಆರೋಗ್ಯ ಶಿಬಿರ

ಸಿರುಗುಪ್ಪ: ನಗರದ ಬಳ್ಳಾರಿ ರಸ್ತೆಯ ಹೀರಾ ಬೈಕ್ ಶೋರೂಂ ಹತ್ತಿರದ ಆದಿತ್ಯ ಹೃದಯಾಲಯ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಜೂ.14ರಂದು ಬೃಹತ್ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ಹೃದಯರೋಗ, ನರರೋಗ, ಕ್ಯಾನ್ಸರ್, ಮೂತ್ರಪಿಂಡದಲ್ಲಿ ಕಲ್ಲು ಹಾಗೂ ಸಾಮಾನ್ಯ ಕಾಯಿಲೆಗಳ ತಪಾಸಣೆ ನಡೆಸಲಾಗುತ್ತದೆ.

ಮೆಟ್ಟಿಲು ಹತ್ತುವಾಗ, ನಡೆಯುವಾಗ, ಆಟವಾಡುವಾಗ ಆಯಾಸವಾಗುವುದು, ಮೈ ಬೆವರುವುದು, ಉಸಿರಾಟದ ತೊಂದರೆ ಹಾಗೂ ಹೃದಯ ಸಂಬಂಧಿ ತೊಂದರೆಗಳಿಂದ ಬಳಲುತ್ತಿರುವವರು, ಹುಟ್ಟಿನಿಂದ ಹೃದಯ ಸಮಸ್ಯೆ, ಬೆಳವಣಿಗೆ ಕುಂಠಿತ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು, ಹೆಚ್ಚು ದೇಹ ತೂಕ ಉಳ್ಳವರು, ಮೂತ್ರ ವಿಸರ್ಜನೆಯಲ್ಲಿ ತೊಂದರೆ, ಮೂತ್ರಪಿಂಡದಲ್ಲಿ ಕಲ್ಲು, ಮೂತ್ರ ವಿಸರ್ಜನೆಯ ವೇಳೆ ಉರಿ, ರಕ್ತ ಬರುವುದು, ಬೆನ್ನು, ಕುತ್ತಿಗೆ ನೋವು, ಮೆದುಳಿನ ಗಡ್ಡೆ ಇವರು ಈ ಶಿಬಿರದಲ್ಲಿ ಭಾಗವಹಿಸಬಹುದು ಎಂದು ವೈದ್ಯರು ತಿಳಿಸಿದರು.

ಆರೋಗ್ಯ ತಪಾಸಣಾ ಉಚಿತ ಶಿಬಿರ



ಸಿರುಗುಪ್ಪ: ನಗರದ ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತಾಲೂಕು ಘಟಕದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಎನ್.ಸಿ.ಡಿ ಘಟಕ, ತಾಲೂಕು ಆರೋಗ್ಯ ಇಲಾಖೆ ಸಹಯೋಗದೊಂದಿಗೆ ವಿಶ್ವ ತಂಬಾಕು ರಹಿತ ದಿನಾಚರಣೆಯ ನಿಮಿತ್ತ ಘಟಕದಲ್ಲಿನ ನೌಕರರಿಗೆ ಶುಕ್ರವಾರ ಆಯೋಜಿಸಿದ್ದ ಅಸಾಂಕ್ರಾಮಿಕ ರೋಗಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ತಾಲೂಕು ಆರೋಗ್ಯ ಅಧಿಕಾರಿ ದಮ್ಮೂರು ಬಸವರಾಜ, ದಂತ ವೈದ್ಯ ಪವನ್ ವರ್ಮಾ, ನಮ್ಮ ಕ್ಲಿನಿಕಿನ ವೈದ್ಯರಾದ ವಿನಯಕುಮಾರ್, ಕುಮಾರಿ ನಾಗಪ್ರಿಯ ತಪಾಸಣೆ ನಡೆಸಿದರು. 45 ಜನರಿಗೆ ಇಸಿಜಿ, 25 ಜನರಿಗೆ ಕಣ್ಣಿನ ತಪಾಸಣೆ, 80 ಜನರಿಗೆ ದಂತ ತಪಾಸಣೆ, ಒಟ್ಟು 130 ಜನಕ್ಕೆ ತಪಾಸಣೆ ಕೈಗೊಳ್ಳಲಾಯಿತು.



ಬಳ್ಳಾರಿ: ನಗರದ 34ನೇ ವಾರ್ಡ್‌ನ ಭತ್ರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಸಾಮಗ್ರಿ ವಿತರಿಸಿದರು. ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯುಡು, ಸ್ಥಳೀಯ ಮುಖಂಡ ಯೋಗಾನಂದ ರೆಡ್ಡಿ, ಶಾಲೆಯ ಮುಖ್ಯಗುರು, ಶಿಕ್ಷಕರು ಹಾಗೂ ಸಿಬ್ಬಂದಿಗಳಿದ್ದರು.

ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಜಾಗೃತಿ ಜಾಥಾ

ವಿಜಯನಗರ: ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಿ ಹಾಗೂ ಕಾರ್ಮಿಕ ಇಲಾಖೆಗಳ ಸಹಯೋಗದಲ್ಲಿ ಹೊಸಪೇಟೆಯಲ್ಲಿ ಏರ್ಪಡಿಸಿದ್ದ ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಜಾಗೃತಿ ಜಾಥಾಕ್ಕೆ ಅಂಬೇಡ್ಕರ್ ವೃತ್ತದಲ್ಲಿ ಚಾಲನೆ ನೀಡಲಾಯಿತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ.ರಾಜಶೇಖರ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎನ್.ಸುಬ್ರಮಣ್ಯ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಶಾಂತ್ ನಾಗಲಾಪುರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್ ನಗರದ ಅಂಬೇಡ್ಕರ್ ವೃತ್ತದಲ್ಲಿ ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಜಾಗೃತಿ ಜಾಥಕ್ಕೆ ಚಾಲನೆ ನೀಡಿದರು.

ಈ ವೇಳೆ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ತ್ರಿವೇಣಿ ಪತ್ತರ್, ಕಾರ್ಮಿಕ ಅಧಿಕಾರಿ ಸೂರ್ಯಪ್ಪ ಐ. ಡೊಂಬರಮತ್ತೂರ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವೆಂಕಟೇಶ್ ರಾಮಚಂದ್ರಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಗಂಗಪ್ಪ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಕುಮಾರ್ ಉಂಕಿ ಇತರರಿದ್ದರು.



ವಿಜಯನಗರ: ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಿ ಹಾಗೂ ಕಾರ್ಮಿಕ ಇಲಾಖೆಗಳ ಸಹಯೋಗದಲ್ಲಿ ಹೊಸಪೇಟೆಯಲ್ಲಿ ಏರ್ಪಡಿಸಿದ್ದ ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಜಾಗೃತಿ ಜಾಥಕ್ಕೆ ಅಂಬೇಡ್ಕರ್ ವೃತ್ತದಲ್ಲಿ ಚಾಲನೆ ನೀಡಲಾಯಿತು.

ತಾಲೂಕಿನಾದ್ಯಂತ ಉತ್ತಮ ಮಳೆ | ರೈತರಿಗೆ ಸಂತಸ

ವೇದವತಿ ಹಗರಿ ನದಿಗೆ ಜೀವಕಳೆ

ಸಿರುಗುಪ್ಪ: ತಾಲೂಕಿನ ರಾರಾವಿ ಗ್ರಾಮದ ಹತ್ತಿರ ಹರಿಯುವ ವೇದವತಿ ಹಗರಿ ನದಿಯ ಮೇಲ್ಭಾಗದಲ್ಲಿ ಉತ್ತಮ ಮಳೆಯಿಂದಾಗಿ ಜೀವಕಳೆ ಬಂದಿದೆ.

ರಾಜ್ಯ ಹಾಗೂ ಸೀಮಾಂಧ್ರ ಪ್ರದೇಶದ ನದಿ ಪಾತ್ರದಲ್ಲಿ ಹಲವು ಕಡೆ ಕಳೆದ ಒಂದು ವಾರದಿಂದ ಭರ್ಜರಿ ಮಳೆಯಾಗಿರುವುದರಿಂದ ನದಿಯು ಉಕ್ಕಿ ಹರಿಯುತ್ತಿದೆ. ಫೆಬ್ರವರಿಯಿಂದ ಮೇ ವರೆಗೂ ನದಿಯ ಒಡಲು ಖಾಲಿಯಾಗಿದ್ದು, ನದಿ ಪಾತ್ರ, ಗ್ರಾಮದ ಜನ ಜಾನುವಾರುಗಳಿಗೆ ನೀರಿನ ಅಭಾವ ಹೆಚ್ಚಾಗಿತ್ತು. ಮುಂಗಾರು ಮಳೆಯ ಅಬ್ಬರ ಜೋರಾಗಿದ್ದು, ಇದರಿಂದಾಗಿ ಹಗರಿ ನದಿಯು ಉಕ್ಕಿ ಹರಿಯುತ್ತಿರುವದರಿಂದ ನದಿ ಪ್ರಾಂತದ ಜನ ಜಾನುವಾರು, ರೈತರಿಗೆ ಸಂತಸ ಉಂಟು ಮಾಡಿದೆ.

ರೈತರು ತಮ್ಮ ಕೃಷಿ ಚಟುವಟಿಕೆಗಳಲ್ಲಿ ಚುರುಕು ಹೆಚ್ಚಿಸಿಕೊಂಡಿದ್ದಾರೆ. ನದಿಯ ಮೇಲ್ಭಾಗದ ಪ್ರದೇಶದಲ್ಲಿ ಹೆಚ್ಚಿನ ಮಳೆಯಾಗುವ ಸಂಭವನೀಯವಾಗಿತಗ್ಗು ಪ್ರದೇಶಜಮೀನುಗಳಲ್ಲಿ ನೀರು ನಿಲ್ಲುವ ಸಾಧ್ಯತೆ ಇರುವುದರಿಂದ ರೈತರು ಮುನ್ನೆಚ್ಚರಿಕೆ ವಹಿಸುವುದು ಅವಶ್ಯಕವಾಗಿದೆ.

ಈ ವೇದವತಿ ಹಗರಿ ನದಿಯು ತಾಲೂಕಿನ ತಾಳೂರು, ಉಳ್ಳೂರು, ಉತ್ತನೂರು, ಮಾಟಸೂಗೂರು, ಕೂರಿಗನೂರು ಕೆ.ಬೆಳಗಲ್, ಮೈಲಾಪುರ, ಬಲಕುಂದಿ, ಮುದೇನೂರು, ಕೆ.ಸೂಗೂರು, ರಾರಾವಿ, ಕುಡುದರಹಾಳ, ಶ್ರೀಧರಗಡ್ಡೆ ಗ್ರಾಮದ ಮೂಲಕ ತುಂಗಭದ್ರಾ ನದಿಗೆ ಸೇರುತ್ತದೆ.

ಬಲಕುಂದಿ ಮತ್ತು ಮುದೇನೂರು ಗ್ರಾಮಗಳ ಮಧ್ಯದಲ್ಲಿ ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲಾಗಿದ್ದು ತುಂಬಿ ಹರಿಯುತ್ತಿದೆ.

ವೇದವತಿ ಹಗರಿ ನದಿಯು ಸುಮಾರು ಒಂದು ಲಕ್ಷ ಹೆಕ್ಟೇರ್ ಜಮೀನಿಗೆ ಕೃಷಿ ಚಟುವಟಿಕೆಗಳಿಗೆ ಹಾಗೂ ವನ್ಯಜೀವಿಗಳಿಗೆ, ಜನ ಜಾನುವಾರುಗಳಿಗೆ ಆಶ್ರಯವಾಗಿದೆ.



ವಿದ್ಯುತ್ ತಗುಲಿ: ಆಕಳು ಕರು ಸಾವು

ಬಳ್ಳಾರಿ: ಇತ್ತೀಚೆಗೆ ಸುರಿದ ಭಾರೀ, ಮಳೆ ಗಾಳಿಯಿಂದ ಕೊಳಗಲ್ ಗ್ರಾಮದಲ್ಲಿ ವಿದ್ಯುತ್ ಅವಘಡ ಸಂಭವಿಸಿದೆ. ಮುಖ್ಯ ರಸ್ತೆಯ ಬದಿಯಲ್ಲಿ ವಿದ್ಯುತ್ ತಂತಿಗಳು ತುಂಡರಿಸಿದ್ದು, ಆಕಳು ಕರುವೊಂದು ಅದನ್ನು ತುಳಿದು ಸ್ಥಳದಲ್ಲೇ ಅಸುನೀಗಿದೆ. ಇದನ್ನು ಕಂಡ ಎಲ್ಲರೂ ಮಮ್ಮಲ ಮರುಗಿದರು.

ಮಳೆ, ಗಾಳಿಗೆ ವಿದ್ಯುತ್ ತಂತಿಗಳು, ಕಂಬಗಳಿಗೆ ಧಕ್ಕೆಯಾಗುವುದು ಸಾಮಾನ್ಯ. ಆದರೆ, ಸ್ಥಳೀಯ ಜೆಸ್ಕಾಂ ಸಿಬ್ಬಂದಿ ಗಮನಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದಿತ್ತು. ಮಳೆ ನಿಂತ ಬಳಿಕ ವಿದ್ಯುತ್ ಸಂಪರ್ಕ ಕಲ್ಪಿಸುವುದು, ಸಮಸ್ಯೆ ಕಂಡು ಬಂದಲ್ಲಿ ಕಡಿತಗೊಳಿಸುವುದು ಇಲಾಖೆ ಸಿಬ್ಬಂದಿ, ಅಧಿಕಾರಿಗಳ ಕೆಲಸ. ಆದರೆ, ಕೊಳಗಲ್ ಗ್ರಾಮದಲ್ಲಿ ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಕಳು ಕಾರು ಅಸುನೀಗಿರುವುದು ದುರದೃಷ್ಟಕರ ಕೂಡಲೇ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದು ಕೆಆರ್‌ಎಸ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಯುಗಂಧರ್ ಆಗ್ರಹಿಸಿದ್ದಾರೆ.

ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ

ಯಾದಗಿರಿ: ಸಮಾಜದಲ್ಲಿ ಪಿಡುಗಾಗಿರುವ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲರೂ ಮುಂದಾಗುವಂತೆ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶ ಮರುಳಸಿದ್ಧಾರಾಧ್ಯ ಕರೆ ನೀಡಿದರು.

ನಗರದ ಪದವಿ ಕಾಲೇಜು ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಭಾರತದಲ್ಲಿ ಶಾಸನಾತ್ಮಕವಾಗಿ ಹಾಗೂ ಕಾನೂನಾತ್ಮಕವಾಗಿ ಬಾಲಕಾರ್ಮಿಕ ಪದ್ಧತಿಗೆ ಶಿಕ್ಷೆ ಸಹ ಇದೆ. ಈ ಹಿನ್ನೆಲೆಯಲ್ಲಿ ಬಾಲಕಾರ್ಮಿಕರನ್ನಾಗಿ ಮಕ್ಕಳ ನ್ನು ದುಡಿಸಿಕೊಳ್ಳುವ ಪಾಲಕರಲ್ಲಿ ಸೂಕ್ತ ಅರಿವು ಮೂಡಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಮಕ್ಕಳು ಮನೆಗಳಲ್ಲಿ ಕೆಲಸ ಮಾಡುವದು ಹಿರಿಯರಿಗೆ ಗೌರವ ನೀಡಿದಂತೆ. ಆದರೆ 14 ವರ್ಷದೊಳಗಿನ ಬಾಲಕಾರ್ಮಿಕರು ಹಾಗೂ 14 ರಿಂದ 18 ವರ್ಷ ರೊಳಗಿನ ಕಿಶೋರ್ ಮಕ್ಕಳನ್ನು ಬಾಲಕಾರ್ಮಿಕತೆಗೆ ಬಳಸುವುದು ಅಪರಾಧ ಹಾಗೂ ತಪ್ಪಿತಸ್ಥರಿಗೆ ಜೈಲು ಶಿಕ್ಷೆ ಸಹ ಇದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್, ಮಕ್ಕಳು ಜೀವನದಲ್ಲಿ ಆಕಾಶದೆತ್ತರದ ಗುರಿ ಹೊಂದಬೇಕು. ಸ್ವಾಮಿ ವಿವೇಕಾನಂದ, ಎಪಿಜೆ ಅಬ್ದುಲ್ ಕಲಾಂರಂತಹ ಗಣ್ಯರ ಜೀವನ ಸಾಧನೆ ತಿಳಿದು, ದೇಶದ ಅಭಿವೃದ್ಧಿಯಲ್ಲಿ ನೆರವಾಗಬೇಕು. ಮಕ್ಕಳು ದೇಶದ ಆಸ್ತಿ, ಮಾನವೀಯತೆ ದೃಷ್ಟಿಯಿಂದ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ದುಡಿಸಿಕೊಳ್ಳದಂತೆ ನೆರೆಹೊರೆಯವರು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಪ್ರಮಾಣ ವಚನ ಬೋಧಿಸಿದರು.

ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಧರಣೇಶ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಸಿರಸಗಿ, ಬಾಲಕಾರ್ಮಿಕ ಇಲಾಖೆ ಉಪನಿರ್ದೇಶಕ ಶ್ರೀಹರಿ ದೇಶಪಾಂಡೆ, ಮಕ್ಕಳ ರಕ್ಷಣಾಧಿಕಾರಿ ಸಾವಿತ್ರಿ, ಗುಗ್ಗರಿ, ಡಾನ್ ಬಾಸ್ಕೋ ಸಂಸ್ಥೆ ನಿರ್ದೇಶಕ ವಾಸು ಫ್ರಾನ್ಸಿಸ್, ವರ್ಲ್ಡ್ ವಿಜಿಯನ್ ಸಂಸ್ಥೆಯ ಅನಿಲ ಉಪಸ್ಥಿತರಿದ್ದರು.

ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ರಿಯಾಜ್ ಪಟೇಲ್ ಸ್ವಾಗತಿಸಿದರು. ಸಂತೋಷ್ ಕುಮಾರ್ ನಿರೂಪಿಸಿದರು. ಚರ್ಚಾಸ್ಪರ್ಧೆ, ಚಿತ್ರ ಕಲಾ ಸ್ಪರ್ಧೆ, ರಸಪ್ರಶ್ನೆ, ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.



ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು

ಹಗರಿಬೊಮ್ಮನಹಳ್ಳಿ: ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗಾಗಿದ್ದು ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಮಾರಕವಾಗಿದೆ. 14 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಕೆಲಸಕ್ಕೆ ನೇಮಿಸಿಕೊಳ್ಳಬಾರದು ಎಂದು ಹಗರಿಬೊಮ್ಮನಹಳ್ಳಿ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶ ಸೈಯ್ಯದ್ ಮೊಹಿದ್ದೀನ್ ತಿಳಿಸಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕು ಆಡಳಿತ, ತಾಪಂ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಆರೋಗ್ಯ ಇಲಾಖೆ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಂಗಡಿ ಹೋಟೆಲ್ ವಾಣಿಜ್ಯ ವಾಣಿಜ್ಯೇತರ ಸಂಸ್ಥೆಗಳಲ್ಲಿ 14 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ಅಂತವರ ವಿರುದ್ಧ ಕಾನೂನು ಅನ್ವಯ 20 ಸಾವಿರದಿಂದ 50 ಸಾವಿರ ರೂ. ವರೆಗೂ ದಂಡ ಅಥವಾ 6 ತಿಂಗಳಿನಿಂದ 3 ವರ್ಷದ ವರೆಗೆ ಜೈಲು ಶಿಕ್ಷೆ ಅಥವಾ ಈ ಎರಡನ್ನು ಸಹ ವಿಧಿಸಬಹುದಾಗಿದೆ ಎಂದರು.

ತಹಶೀಲ್ದಾರ್ ಕವಿತಾ ಆರ್. ತಹಶೀಲ್ದಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, 14 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಉದ್ಯೋಗದಲ್ಲಿ ತೊಡಗಿಸುವಂತಿಲ್ಲ ಆದರೆ ತಮ್ಮ ಶಾಲಾ ಸಮಯ ಹೊರತುಪಡಿಸಿ ತಮ್ಮ ಕೌಟುಂಬಿಕ ಕೆಲಸದಲ್ಲಿ ಪೋಷಕರಿಗೆ ಸಹಕರಿಸಲು ಅವಕಾಶವಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್, ಉಪಾಧ್ಯಕ್ಷ ಬಿ.ಎಂ.ಆಂಜನೇಯ, ಕಾರ್ಯದರ್ಶಿ ಡಿ.ಮಂಜಣ್ಣ, ಬಿಇಒ ಜಗದೀಶ್, ತಾಲೂಕ ವೈದ್ಯಾಧಿಕಾರಿ ಡಾ.ಪ್ರವೀಣ್‌ಕುಮಾರ್ ಎಚ್.ಎಂ., ಕಾರ್ಮಿಕ ಇಲಾಖೆ ನಿರೀಕ್ಷಕ ಪಾಂಡುರಂಗ ಕೆ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಿ.ರಾಮನಗೌಡ ಪೊಲೀಸ್ ಅಧಿಕಾರಿ ದುರುಗಪ್ಪ ಪುರಸಭೆಯ ಮಾರಪ್ಪ, ಜಯಲಕ್ಷ್ಮೀ ವಕೀಲರ ಸಂಘ ಮತ್ತು ವಿವಿಧ ಇಲಾಖೆಗಳ ಸಿಬ್ಬಂದಿ ಶಾಲಾ ಮಕ್ಕಳು ಭಾಗವಹಿಸಿದ್ದರು. ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಕೆ.ಪ್ರಹ್ಲಾದ್ ನಿರ್ವಹಿಸಿದರು.



ಎನ್.ವೈ.ಗೋಪಾಲಕೃಷ್ಣಗೆ ಸಚಿವ ಸ್ಥಾನ ನೀಡಲು ಒತ್ತಾಯ

ಕೂಡ್ಲಿಗಿ: ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಿರಿಯ ರಾಜಕಾರಣಿ ಎನ್.ವೈ.ಗೋಪಾಲಕೃಷ್ಣ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಕೂಡ್ಲಿಗಿ ಮತ್ತು ಮೊಳಕಾಲ್ಮುರು ಕ್ಷೇತ್ರದ ಅಭಿಮಾನಿಗಳು ಹಾಗೂ ಪಕ್ಷಾತೀತ ಬೆಂಬಲಿಗರು ಒಕ್ಕೊರಲಾಗಿ ಒತ್ತಾಯಿಸಿದ್ದಾರೆ.

ಕ್ಷೇತ್ರದ ಮಾಜಿ ಶಾಸಕರಾಗಿ ಎನ್.ವೈ.ಗೋಪಾಲಕೃಷ್ಣ ಅವರು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಅಭಿಮಾನಿಗಳು ಸ್ಮರಿಸಿದ್ದಾರೆ. ತಾಲೂಕು ಆಡಳಿತ ಸೌಧ, ನೂತನ ಪಪಂ ಕಚೇರಿ, ಶಾಲಾ ಕಟ್ಟಡಗಳು ಮತ್ತು ಸುಸಜ್ಜಿತ ರಸ್ತೆಗಳ ನಿರ್ಮಾಣದಲ್ಲಿ ಅವರ ಪಾತ್ರ ಹಿರಿದು. ಮುಖ್ಯವಾಗಿ, 'ಬರಡು ನಾಡಿನ ಭಗೀರಥ' ಎಂದೇ ಖ್ಯಾತರಾಗಿರುವ ಅವರು, 680 ಕೋಟಿ ರೂ. ವೆಚ್ಚದಲ್ಲಿ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಮೂಲಕ ರೈತರ ಬದುಕಿನಲ್ಲಿ ಹಸಿರು ಕ್ರಾಂತಿಯನ್ನು ಮೂಡಿಸಿದ್ದಾರೆ. 'ಮಾತು ಕಡಿಮೆ, ಕೆಲಸ ಜಾಸ್ತಿ' ಎಂಬುದು ಅವರ ವ್ಯಕ್ತಿತ್ವದ ವಿಶೇಷತೆಯಾಗಿದ್ದು, ಇಂತಹ ಅನುಭವಿ ನಾಯಕನಿಗೆ ಮಂತ್ರಿ ಸ್ಥಾನ ನೀಡುವ ಮೂಲಕ ಸರ್ಕಾರ ಗೌರವ ಸಲ್ಲಿಸಬೇಕು ಎಂದು ಅಭಿಮಾನಿಗಳು ಆಗ್ರಹಿಸಿದ್ದಾರೆ.

ಮೊಳಕಾಲ್ಮುರು ಪಟ್ಟಣ ಪಂಚಾಯಿತಿಯ ಮಾಜಿ ಅಧ್ಯಕ್ಷ ಪ್ರಕಾಶ್, ಬಳ್ಳಾರಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ, ಜೆಡಿಎಸ್ ಮುಖಂಡ ಕೊಟ್ಟೂರು ಎಂ.ಎಂ.ಜೆ ಹರ್ಷವರ್ಧನ್ ಮತ್ತಿತರರು ಮಾತನಾಡಿದರು.

ಈ ಕೂಡಲೇ ನಿಯೋಗವೊಂದನ್ನು ರಚಿಸಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿಯಾಗಿ ಮನವಿ ಸಲ್ಲಿಸಲು ಈ ಭಾಗದ ಅಭಿಮಾನಿ ಬಳಗ ನಿರ್ಧರಿಸಿದೆ. ಏಳು ಬಾರಿ ಜನಪ್ರತಿನಿಧಿಯಾಗಿ ಆಯ್ಕೆಯಾಗಿರುವ ಹಿರಿಯ ನಾಯಕನ ಅನುಭವವನ್ನು ಸರ್ಕಾರ ಸದುಪಯೋಗಪಡಿಸಿಕೊಳ್ಳಬೇಕೆಂಬುದು ಸಾರ್ವಜನಿಕರ ಆಶಯವಾಗಿದೆ.



ಬಾಲ ಕಾರ್ಮಿಕರನ್ನು ಮುಖ್ಯವಾಹಿನಿಗೆ ತನ್ನಿ: ಮಂಗಳಾ

ಹೂವಿನ ಹಡಗಲಿ: ಬಾಲ ಕಾರ್ಮಿಕರನ್ನು ಪತ್ತೆ ಮಾಡಿ ಅವರಿಗೆ ಶಿಕ್ಷಣ ನೀಡುವ ಕೆಲಸ ನಿರಂತರವಾಗಿ ಆಗಬೇಕು ಎಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಾ ಕೆ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ತಾಲೂಕು ಆಡಳಿತ, ತಾಪಂ ಪೊಲೀಸ್ ಇಲಾಖೆ ಕಾರ್ಮಿಕ ಇಲಾಖೆ ಶಾಲಾ ಶಿಕ್ಷಣ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಕೀಲರ ಸಂಘ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಬಾಲ ಕಾರ್ಮಿಕ ವಿರೋಧಿ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು.

ಬಾಲ ಕಾರ್ಮಿಕ ಇಲಾಖೆ ಪೋಲೀಸ್ ಇಲಾಖೆ ಅಧಿಕಾರಿಗಳು ಬಾಲ ಕಾರ್ಮಿಕ ಕಾಯ್ದೆ ಕಾನೂನು ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಾಲ ಕಾರ್ಮಿಕ ಕಾಯ್ದೆ ಉಲ್ಲಂಘಿಸುವವರು 20,000 ರೂ. ದಂಡ ಕನಿಷ್ಠ 2 ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಲಿದ್ದಾರೆ ಎಂದರು.

ಕಾರ್ಮಿಕ ನಿರೀಕ್ಷಕ ಪ್ರಕಾಶ್ ಗೌಡ ಬಾಲ ಕಾರ್ಮಿಕ ವಿರೋಧಿ ಕುರಿತು ಉಪಯುಕ್ತ ಮಾಹಿತಿ ನೀಡಿದರು. ನ್ಯಾಯವಾದಿ ಹನುಮಂತಪ್ಪ ಗದುಗಿನ ಬಾಲ ಕಾರ್ಮಿಕ ವಿರೋಧಿ ಕುರಿತು ಉಪನ್ಯಾಸ ನೀಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ, ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಪ್ರಶಾಂತ ಪಾಟೀಲ, ಹಿರಿಯ ವಕೀಲರಾದ ಆಟವಾಳಗಿ ಕೊಟ್ರೇಶ ಇತರರು ಉಪಸ್ಥಿತರಿದ್ದರು.

ಮುಖ್ಯ ಗುರು ಸುರೇಶ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಹತ್ತನೇ ತರಗತಿ ವಿದ್ಯಾರ್ಥಿನಿ ಇದ್ಲಿ ವಿಜಯಲಕ್ಷ್ಮಿ ಬಾಲ ಕಾರ್ಮಿಕ ವಿರೋಧಿ ಕುರಿತು ಪ್ರತಿಜ್ಞಾವಿಧಿ ಬೋಧಿಸಿದರು. ಶಿಕ್ಷಕರಾದ ದ್ವಾರಕೇಶ ರೆಡ್ಡಿ, ಆನಂದ ಐ, ಸ್ವಾಮಿನಾಥ ರಾಮಸ್ವಾಮಿ ನಿರ್ವಹಿಸಿದರು.



ಶ್ರದ್ಧೆಯಿಂದ ಕೆಲಸ ಮಾಡಿದಾಗ ಯಶಸ್ಸು ಸಾಧ್ಯ

ಸಂಡೂರು: ಕಷ್ಟ ಪಟ್ಟು ಓದುವುದಕ್ಕಿಂತ ವಿದ್ಯಾರ್ಥಿಗಳು ಇಷ್ಟ ಪಟ್ಟು ಓದಬೇಕು. ಯಾವುದೇ ಕೆಲಸವಿರಲಿ ಶ್ರದ್ಧೆಯಿಂದ ಮಾಡಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಹಿರಿಯ ಸಾಮಾಜಿಕ ಕಾರ್ಯಕರ್ತ ಪಂತರ ಜಯಂತ್ ಹೇಳಿದರು.



ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಸದ್ವಿದ್ಯಾ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಶನಿವಾರ ಬಿಎ, ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಕ್ಕಳಲ್ಲಿ ಆತ್ಮ ವಿಶ್ವಾಸ ಮುಖ್ಯ, ಅದು ಇದ್ದಾಗ ಮಾತ್ರ ಯಾವುದೇ ಕ್ಷೇತ್ರವಿರಲಿ ಯಶಸ್ಸು ಕಾಣಬಹುದು. ಯಾವುದೇ ಕೆಲಸ ಇರಲಿ ಶ್ರದ್ಧೆ ಮಾಡಬೇಕು, ಅಂದಾಗ ಮಾತ್ರ ಗೆಲುವು ನಮ್ಮದಾಗಲಿದೆ. ಮಂಗನ ಮರಿಗಳು ತಾಯಿಯನ್ನು ಅಪ್ಪಿಕೊಳ್ಳುವ ರೀತಿಯಲ್ಲಿ ವಿದ್ಯಾರ್ಥಿಗಳು ಕಲಿಸುವ ಗುರುಗಳನ್ನು ಅಪ್ಪಿಕೊಳ್ಳಲು ಮುಂದಾಗಬೇಕು. ಅಂದಾಗ ಮಾತ್ರ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಸಾಧನೆ ಮಾಡಬಹುದು, ಗುರಿ ಮುಟ್ಟಬಹುದು ಎಂದರು.

ಮುನಿರಾಬಾದ್ ಡಯಟ್ ಕಾಲೇಜು ಉಪ ಪ್ರಾಚಾರ್ಯ ಎಲ್.ಡಿ.ಜೋಶಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಅತಿ ಮುಖ್ಯವಾಗಿದೆ. ಶಿಕ್ಷಣ ಇಲ್ಲದಿದ್ದರೆ ಏನೂ ಸಾಧಿಸಲು ಸಾಧ್ಯವಾಗೊಲ್ಲ. ಕಲಿಕೆಗೆ ಪೂರಕವಾದ ವಾತಾವರಣ ಈ ಕಾಲೇಜಿನಲ್ಲಿದ್ದು, ಪ್ರತಿಯೊಬ್ಬ ಮಕ್ಕಳು ಉತ್ತಮ ಸಾಧನೆ ಮಾಡಿ, ನಾನಾ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಿ ಇತರರಿಗೆ ಮಾದರಿಯಾಗಬೇಕು ಎಂದರು.

ಉಪನ್ಯಾಸಕ ಗುರುರಾಜ್ ಕರಣಂ ಮಾತನಾಡಿ, ಡಿಗ್ರಿ ಮುಗಿದ ಬಳಿಕ ಮುಂದೇನು ಎನ್ನುವ ಚಿಂತೆ ಈ ಕಾಲೇಜಿನಲ್ಲಿಲ್ಲ, ಎಲ್ಲ ಮಕ್ಕಳಿಗೂ ಉದ್ಯೋಗ ಕಲ್ಪಿಸುವ ಸಂಕಲ್ಪ ಕಾಲೇಜು ಪ್ರಾಚಾರ್ಯ ರಾಘವೇಂದ್ರ, ಅವರು ಮಾಡಿದ್ದಾರೆ, ಇದು ನಿಮ್ಮೆಲ್ಲರ ಪುಣ್ಯ ಎಂದರು.

ಕಾಲೇಜು ಪ್ರಾಚಾರ್ಯ ರಾಘವೇಂದ್ರ, ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕರಾದ ವೀರೇಶ್, ಮಂಜುನಾಥ್ ಕೆ., ಬಳ್ಳಾರಿ ದುರ್ಗಪ್ಪ, ಉರುಕುಂದ, ಡಾ.ಮಹೇಶ್ ಎಂ., ಭಾರತಿ ಡಿ. ಸೇರಿದಂತೆ ವಿದ್ಯಾರ್ಥಿಗಳು ಇತರರಿ ದ್ದರು. ಪಾತಿಮಾ, ಮೊಹಮ್ಮದ್ ಅಪ್ಸಾನ್ ನಿರೂಪಿಸಿದರು. ನಂತರ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಡಿಸೆಂಬರ್‌ನಲ್ಲಿ ಆರ್ಯವೈಶ್ಯ ಜಾಗತಿಕ ಸಮಾವೇಶ: ರವಿಶಂಕರ್

ವಿಜಯನಗರ: ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ವತಿಯಿಂದ ಸಮುದಾಯದವರ ಜಾಗತಿಕ ಸಮಾವೇಶ ಡಿಸೆಂಬರ್ 25ರಿಂದ 27ರವರೆಗೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ, ಇದರಿಂದ ಬಹಳಷ್ಟು ಪ್ರಯೋಜನ ಆಗಲಿದೆ ಎಂದು ಮಹಾಸಭೆಯ ಅಧ್ಯಕ್ಷ ಆರ್.ಪಿ.ರವಿಶಂಕರ್ ಹೇಳಿದರು.

ಹೊಸಪೇಟೆಯಲ್ಲಿ ಗುರುವಾರ ಆಯೋಜಿಸಿದ್ದ ಆರ್ಯವೈಶ್ಯ ಮಹಾಸಭಾ ಜಿಲ್ಲಾ ಸಮಾವೇಶದಲ್ಲಿ ಮಾತನಾಡಿದ ಅವರು, ಜಾಗತಿಕ ಸಮಾವೇಶದಿಂದ ವ್ಯವಹಾರ ವೃದ್ಧಿ ಜತೆಗೆ ಜಗತ್ತಿನ ನಾನಾ ಭಾಗಗಳಲ್ಲಿ ನೆಲೆಸಿರುವ ಸಮುದಾಯದವರೊಂದಿಗೆಸಂಪರ್ಕ ಸಾಧಿಸಲು ಸಾಧ್ಯವಾಗಲಿದೆ. ಈ ಸಮಾವೇಶ ಯಶಸ್ಸಿಗೆ ಎಲ್ಲಾ ಜಿಲ್ಲಾ ಮಹಾಸಭಾದವರೂ ಸಹಕರಿಸಬೇಕು ಎಂದರು.

ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಹನುಮಂತಯ್ಯ, ವಿಭಾಗೀಯ ಉಪಾಧ್ಯಕ್ಷ ನಾಗರಾಜ್, ಜಾಗತಿಕ ಸಮಾವೇಶದ ಸಂಘಟಕ ತಲ್ಲಂ ಅನಿಲ್ ಪೂರಕ ಮಾಹಿತಿ ನೀಡಿದರು. ಸ್ಥಳೀಯ ಆರ್ಯವೈಶ್ಯ ಸಂಘದ ಅಧ್ಯಕ್ಷ ಕಾಕುಬಾಳ್ ರಾಜೇಂದ್ರ, ಕಾರ್ಯದರ್ಶಿ ಪ್ರಹ್ಲಾದ್ ಭೂಪಾಳ್, ಜಿಲ್ಲಾ ಸಮಿತಿಯ ಅಧ್ಯಕ್ಷ ಜಿ.ಸಂಜೀವ್ ಶೆಟ್ಟಿ, ಮಹಾಸಭೆಯ ನಿರ್ದೇಶಕ ವೈ. ಸೋಮಶೇಖರ್, ಪುಣ್ಯಮೂರ್ತಿ ಪಾಂಡುರಂಗ ಶೆಟ್ಟಿ, ಕೂಡ್ಲಿಗಿಯ ಆನಂದ ಬಾಬು ಇತರರು ಇದ್ದರು.



ಜೂ.16ರಿಂದ ಕೃತಕ ಕಾಲು ಜೋಡಣಾ ಶಿಬಿರ

ವಿಜಯನಗರ: ಬಲ್ಡೋಟ ಸಮೂಹದ ಎಂಎಸ್‌ಪಿಎಲ್ ಕಂಪನಿಯಿಂದ 13ನೇ ವರ್ಷದ ಉಚಿತ ಕೃತಕ ಕಾಲು ಜೋಡಣಾ ಶಿಬಿರವನ್ನು ಜೂ.16ರಿಂದ 18ರ ವರೆಗೆ ಕೊಪ್ಪಳದ ಶಾದಿಮಹಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಸಿಎಸ್‌ಆರ್ ವಿಭಾಗದ ಉಪಾಧ್ಯಕ್ಷ ಎಚ್. ಕೆ.ರಮೇಶ್ ಹೇಳಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯನಗರ, ಬಳ್ಳಾರಿ, ಕೊಪ್ಪಳ, ಗದಗ, ರಾಯಚೂರು ಹಾಗೂ ಇತರ ಜಿಲ್ಲೆಗಳಲ್ಲಿ ಅಗತ್ಯ ಇರುವವರು ಶಿಬಿರದ ಪ್ರಯೋಜನ ಪಡೆಯಬಹುದು. ಜೈಪುರ ಭಗವಾನ್ ಮಹಾವೀರ ಅಂಗವಿಕಲರ ಸಹಕಾರ ಸಮಿತಿಯ ಸಹಯೋಗದಲ್ಲಿ ಈ ಶಿಬಿರ ನಡೆಯಲಿದೆ ಎಂದರು.

ಕೊಪ್ಪಳದಲ್ಲಿ ಈ ಮೊದಲು ಎರಡು ಬಾರಿ ಇಂತಹ ಶಿಬಿರಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಹೊಸಪೇಟೆಯಲ್ಲಿ 10 ಬಾರಿ ನಡೆದಿದೆ. ಈವರೆಗೆ 2,836 ಜನರು ಇದರ ಪ್ರಯೋಜನ ಪಡೆದಿದ್ದಾರೆ. ಈ ಪೈಕಿ 1,455 ಮಂದಿಗೆ ಕೃತಕ ಕಾಲು, 820 ಮಂದಿಗೆ ಕ್ಯಾಲಿಪರ್ಸ್, 46 ಮಂದಿಗೆ ವಾಕರ್, 93 ಮಂದಿಗೆ ಕೈಗೋಲು, 288 ಮಂದಿಗೆ ಊರುಗೋಲು, 43 ಮಂದಿಗೆ ಗಾಲಿಕುರ್ಚಿ, 38 ಮಂದಿಗೆ ಕೈಚಾಲಿತ ಸೈಕಲ್ ವಿತರಿಸಲಾಗಿದೆ ಹಾಗೂ 53 ಮಂದಿಗೆ ಲಘು ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ ಎಂದು ವಿವರಿಸಿದರು.

ಸ್ವಂತ ಕ್ಲಿನಿಕ್‌ಗೆ ಚಿಂತನೆ: ಕೃತಕ ಕಾಲು ಜೋಡಣೆಗೂ ರಕ್ತ ಪರಿಚಲನೆ ತಿಳಿಯುವ ಪರೀಕ್ಷೆಗೂ ಸಂಬಂಧ ಇದೆ. ಈ ನಿಟ್ಟಿನಲ್ಲಿ ಸಂಸ್ಥೆಯ ವತಿಯಿಂದ ಒಂದು ಕ್ಲಿನಿಕ್ ಸ್ಥಾಪಿಸಲು ಉದ್ದೇಶಿಸಿದೆ. ಒಂದು ಕೃತಕ ಕಾಲಿಗೆ 10 ಸಾವಿರ ರೂ. ವೆಚ್ಚವಾಗಲಿದೆ. ಮಹಾವೀರ ಸಮಿತಿಗೆ ಕಂಪನಿ ಇದನ್ನು ಪಾವತಿಸುತ್ತದೆ ಎಂದರು.

ನೋಂದಣಿಗೆ 9902500250 (ಬಿ.ಎಂ.ನಾಗರಾಜ), 9972407157 (ಬಸವಪ್ರಭು) ಸಂಪರ್ಕಿಸಬಹುದು ಎಂದು ಹೇಳಿದರು.

ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಅಶ್ವಿನ್ ಕುಮಾರ್ ಡೇವಿಡ್, ವ್ಯವಸ್ಥಾಪಕ ಬಿ.ಎಂ.ನಾಗರಾಜ್ ಇದ್ದರು.

